UNIVERSAL LIBRARY
OU_200230
UNIVERSAL LIBRARY

Sanctioned as a text book—Bombay Educational Dept.

ಶ್ರೀ:

ಕರ್ನಾಟಕ-ಹಿತೈಷಿಣೀ ಗ್ರಂಥಮಾಲೆಯ

ದ್ವಿತೀಯಪುಷ್ಪ

ಸಚಿತ್ರ

# ಪದ್ಮಿನಿ

ಇದನ್ನು

ಕರ್ನಾಟಕ-ಹಿತೈಷಿಣೀ ಗ್ರಂಥಮಾಲೆಯ

ಸಂಪಾದಕರಾದ

**ನಾರಾಯಣ ವೆಂಕಟೇಶ ಕುರಡಿ**

ಇವರು ರಚಿಸಿದರು

ನಾಲ್ಕನೆಯ ಮುದ್ರಣ

( ಎಲ್ಲ ಹಕ್ಕುಗಳು ಗ್ರಂಥಕರ್ತರ ಸ್ವಾಧೀನದಲ್ಲಿವೆ )

**Price 0-12-0** **ಬೆಲೆ ೧೨ ಆಣೆಗಳು**

THIS LITTLE WORK

IS

VERY RESPECTFULLY DEDICATED

TO

RAO BAHADDOOR

**VINAYAKA BABAJI JOSHI,** B A.,

**Educational Inspector, S D.**

HIS MOST OBEDIENT STUDENT

The Author

## ಅನುಕ್ರಮಣಿಕೆ.


| | | |
|---|---|---|
| ಮೊದಲನೆಯ ಖಂಡ ... | ಮೇಘಸಂಚಾರ ... ... | ೧ |
| ಎರಡನೆಯ ಖಂಡ ... | ವಿದ್ಯುತ್ ದರ್ಶನ ... ... | ೨೩ |
| ಮೂರನೆಯ ಖಂಡ ... | ವರ್ಷಣಾರಂಭ ... ... | ೫೬ |
| ನಾಲ್ಕನೆಯ ಖಂಡ ... | ಮುಯ್ಯಿಗೆ ಮುಯ್ಯಿ ... ... | ೧೦೧ |
| ಐದನೆಯ ಖಂಡ ... | ಪುನರ್ಮೇಘ ಸಂಚಾರ ... ... | ೧೨೫ |
| ಆರನೆಯ ಖಂಡ ... | ಪರಿಸಮಾಪ್ತಿಯು ... ... | ೧೩೭ |

# ಪೀಠಿಕೆ.

ಸಮೃದ್ಧವಾದ ಸುಖಸುಶಾಂತಿಗಳಿಂದ ವಿರಾಜಿಸುತ್ತಿದ್ದ ಹಿಂದೂ ದೇಶದ ಮೇಲೆ ೧೨ನೆಯ ಶತಮಾನದ ಕೊನೆಯ ಭಾಗದಲ್ಲಿ ಉತ್ತರದ ಚಳಿನಾಡುಗಳಲ್ಲಿ ವಾಸಿಸುತ್ತಿದ್ದ ಗಟ್ಟಿಗರಾದ ಪಠಾಣರು ಆಗಿಂದಾಗ ದಂಡೆತ್ತಿ ಬಂದು ದಿಲ್ಲಿಯ ಸಾಮ್ರಾಜ್ಯವನ್ನು ವಶಮಾಡಿಕೊಂಡರು. ಮಹಮ್ಮದ ಘೋರಿಯು ಗೆದ್ದು ಕೊಂಡ ದಿಲ್ಲಿಯ ಸಾಮ್ರಾಜ್ಯವನ್ನು ಗುಲಾಮ ಅರಸರು ಕೆಲಕಾಲ ಆಳಿದ ಬಳಿಕ ಅದು ಜಲಾಲುದ್ದೀನ್ ಖಿಲ್‌ಜಿಯ ವಶವಾಯಿತು. ಜಲಾಲುದ್ದೀನನು ತನ್ನ ಅಣ್ಣನ ಮಗನೂ ಅಳಿಯನೂ ಆದ ಅಲ್ಲಾವುದ್ದೀನನಿಗೆ ಸಮಸ್ತ ಸೇನಾಧಿಪತ್ಯವನ್ನು ಒಪ್ಪಿಸಿ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗಿಂತಲೂ ಹೆಚ್ಚು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು. ಆದರೆ ಅತ್ಯಂತ ಕೃತಘ್ನನಾದ ಅಲ್ಲಾವುದ್ದೀನನು ಆ ಪೂಜ್ಯನಾದ ಚಿಕ್ಕಪ್ಪ ( ಕಕ್ಕ ) ನನ್ನು ಇರಿದು ಕೊಂದು ಅವನ ಇಬ್ಬರೂ ಮಕ್ಕಳನ್ನು ಕಡಿದು ಹಾಕಿ ದಿಲ್ಲಿಯ ಸಿಂಹಾಸನವನ್ನು ಹಿಡಿದುಕೊಂಡನು. ಅಲ್ಲಾವುದ್ದೀನನ ರಾಜ್ಯತೃಷ್ಣೆಗೆ ಮಿತಿಯೇ ಇರಲಿಲ್ಲ. ಅವನು ದೇವಗಿರಿ ಗುಜರಾತುಗಳ ರಾಜ್ಯಗಳನ್ನು ಜಯಿಸಿದನು. ಗುಜರಾತಿನ ಅರಸನಾದ ಕರಣರಾಯನ ರಾಜ್ಯಲಕ್ಷ್ಮಿಯೊಬ್ಬಳೇ ಅಲ್ಲದೆ ಆತನ ಗೃಹಲಕ್ಷ್ಮಿಯಾದ ಕಮಲಾದೇವಿಯನ್ನೂ ಅಲ್ಲಾವುದ್ದೀನನು ಅಪಹರಿಸಿದನೆಂಬ ಪ್ರವಾದವು ದೇಶದಲ್ಲೆಲ್ಲ ಹಬ್ಬಿತು. ಮುಂದೆ ತುಸು ದಿವಸಗಳಲ್ಲಿಯೇ ಅಲ್ಲಾವುದ್ದೀನನ ದೃಷ್ಟಿಯು ಚಿತ್ತೂರಿನ ಕಡೆಗೆ ತಿರುಗಲಾಗಿ ಮಹಾಸಂಗ್ರಾಮಕ್ಕೆ ಮೊದಲಾಯಿತು. ಈ ಅಲೌಕಿಕವಾದ ಸಮರವಾರ್ತೆಯ ವರ್ಣನೆಯೇ ಪ್ರಸ್ತುತಗ್ರಂಥದ ಮುಖ್ಯ ವಿಷಯವು.

ಚಿತ್ತೂರ ಮುತ್ತಿಗೆಯ ಐತಿಹಾಸಿಕ ಕಥೆಯು ಸರ್ವವಿಶ್ರುತವಾಗಿದ್ದರೂ ಸದ್ಯದ ಗ್ರಂಥದ ಸ್ವರೂಪವನ್ನು ಇಲ್ಲಿ ಸ್ವಲ್ಪಮಟ್ಟಿಗೆ ಹೇಳುವುದು ಅವಶ್ಯವು. ಈ ವೀರರಸಪ್ರಧಾನವಾದ ಕಥೆಯ ೧ನೆಯ ಖಂಡದೊಳಗಿನ ಕರಣರಾಯನ ಪತ್ರ, ಪದ್ಮಿನೀ ಭೀಮಸಿಂಹರ ಸಂಭಾಷಣೆ, ೨ನೆಯ ಖಂಡದೊಳಗಿನ ಪದ್ಮಿನಿಯ ಪತ್ರ, ೩ನೆಯ ಖಂಡದೊಳಗಿನ 'ಆಹೇರಿಯಾ'ದ ವರ್ಣನೆ, ೪ನೆಯ ಖಂಡದೊಳಗಿನ ಬಾದಲ ಗೋರಾಸಿಂಗರ ಸಂಗ್ರಾಮವರ್ಣನೆ, ೫, ೬ನೆಯ ಖಂಡಗಳೊಳಗಿನ ಪದ್ಮಿನೀ—ಅರುಣಸಿಂಹರ ಸ್ವದೇಶಪ್ರೇಮದ ಉಲ್ಲೇಖ ಇವು ಅತಿಶಯ ಮನೋಹರವಾಗಿರುವುವು. ಪತಿವ್ರತಾಧರ್ಮನಿಷ್ಠೆ, ಸ್ವಾಭಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನ, ಎಂಬ ಉತ್ಕೃಷ್ಟ ಗುಣಗಳ ಪ್ರತ್ಯಕ್ಷವರ್ಣನೆಯು ಗ್ರಂಥದ ಪ್ರತಿಯೊಂದು ಭಾಗದಲ್ಲಿಯೂ ಒಡೆದು ಕಾಣುವುದು. ಪ್ರಸಂಗಕ್ಕೆ ಅನುರೂಪವಾದ ಭಾಷೆಯಿಂದ ವಿಷಯವು ಹೃದಯಂಗಮವಾಗಿದೆ.

ಜಗತ್ತಿನಲ್ಲಿ ಆದರ್ಶವೂ ಆಶ್ಚರ್ಯವೂ ಆಗುವಂತೆ, ಹಿಂದೂಸಮಾಜದ ಎಲ್ಲ ವರ್ಗಗಳ ಕುಲಸ್ತ್ರೀಯರಲ್ಲಿ ನೆಲೆಗೊಂಡಿರುವ ಸದ್ಗುಣಗಳಿಗೆ ನಮ್ಮ ಪುರಾಣಗಳಲ್ಲಿ ಪ್ರಸಿದ್ಧವಾಗಿರುವ ಸೀತೇ,

ಸಾವಿತ್ರೀದೇವಿ ಮೊದಲಾದ ಸ್ತ್ರೀರತ್ನಗಳ ಚರಿತ್ರಮಹಿಮೆಯು ನಮ್ಮ ಸ್ತ್ರೀವರ್ಗದ ಜೀವಾಣುಗಳಲ್ಲಿ ಸಹ ನೆಲೆಗೊಂಡಿರುವುದೇ ಕಾರಣವು ಇದೇಪ್ರಕಾರ ನಮ್ಮ ಅರ್ವಾಚೀನಕಾಲದ ಇತಿಹಾಸದಲ್ಲಿ ಹೆಸರಾದ ಪದ್ಮಿನೀ ಅಹಲ್ಯಾಬಾಯಿ ಮೊದಲಾದ ನಾರೀಮಣಿಗಳ ಚರಿತ್ರವನ್ನು ಕೇಳಿ ಕೇಳಿ ಓದಿ ಓದಿ ತನ್ಮಯವಾದರೆ ಅವರ ಉಜ್ವಲಗುಣಗಳಿಂದ ತುಂಬಿ ನಮ್ಮ ಸದ್ಯದ ಸ್ತ್ರೀಸಮಾಜವು ಹೊಸಕಳೆ ಯಿಂದ ಕಂಗೊಳಿಸುವುದರಲ್ಲಿ ಸಂದೇಹವಿಲ್ಲ. ವೀರರೂ ಅಭಿಮಾನಿಗಳೂ ಕರ್ತವ್ಯತತ್ಪರರೂ ಆದ ಕಥಾನಾಯಕರ ಚರಿತ್ರವಾಚನದಿಂದ ಪುರುಷರಲ್ಲಿ ಹೊಸ ಹುರುಪು ಹುಟ್ಟದಿರದು. ಅತಏವ ಸಾಮಾನ್ಯ ಕಥೆಕಾದಂಬರಿಗಳಿಗಿಂತ ಇಂಥ ಗ್ರಂಥಗಳನ್ನು ರಚಿಸುವದರಲ್ಲಿ ಮನೋಧನಗಳನ್ನು ತೊಡ ಗಿಸಿರುವ ಲೇಖಕರ ಅನಂತ ಉಪಕಾರವನ್ನು ಪ್ರೋತ್ಸಾಹರೂಪದಿಂದ ಕೆಲಮಟ್ಟಿಗಾದರೂ ತಿರುಗಿ ಮುಟ್ಟಿಸುವದು **ಸಮಾಜದ ಕರ್ತವ್ಯವು**. ನನ್ನ ವಿದ್ಯಾರ್ಥಿಯೊಬ್ಬನು ರಚಿಸಿರುವ ಇಂಥದೊಂದು ಗ್ರಂಥವನ್ನು ಸಹೃದಯರಾದ ಕರ್ನಾಟಕಬಂಧುಗಳ ಮುಂದಿರಿಸುವುದು ನನಗೆ ವಿಶೇಷ ಆನಂದದ ಮತ್ತು ಅಭಿಮಾನದ ಸಂಗತಿಯಾಗಿದೆ ಗುಣಗ್ರಾಹಕರಾದ ಕನ್ನಡಿಗರಿಂದ ತಕ್ಕ ಪ್ರೋತ್ಸಾ ಹನವು ದೊರೆಯಲೆಂದು ಕೋರುವೆನು.

ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜ್
**ಧಾರವಾಡ** } **ವೆಂಕಟರಾವ ನ. ಮುಗದಲ.**

# ಹೃದಯ ನಿವೇದನೆ.

ಆರ್ಯರೇ, ದಯಾಘನನಾದ ಶ್ರೀಹರಿಯ ಕೃಪೆಯಿಂದ ಕರ್ಣಾಟಕ ಹಿತ್ತೈಷಿಣೀ ಗ್ರಂಥಮಾಲೆಯ ದ್ವಿತೀಯ ಪುಷ್ಪವನ್ನು ಸುಜ್ಞರಾದ ತಮ್ಮ ಮುಂದಿರಿಸುವ ಸುಯೋಗವು ಒದಗಿದ್ದು ಅತಿಶಯ ಆನಂದದ ಸಂಗತಿಯು. ಈ ಸತ್ಕಾರ್ಯಕ್ಕೆ ಬಹುರೂಪದಿಂದ ಗೋಚರಿಸಿ ಬಹು ವಿಧದಿಂದ ಸಹಾಯಮಾಡಿದ ಕರ್ಣಾಟಕ ಸಮಾಜರೂಪಿಯಾದ ಭಗವಂತನನ್ನು ಅನನ್ಯಭಾವದಿಂದ ಅಭಿವಂದಿಸುವೆನು.

ಈ ವೀರ ರಸಪ್ರಧಾನವಾದ ಐತಿಹಾಸಿಕ ಕಥೆಯು ಐತಿಹಾಸಿಕ ಸಂಗತಿಗಳಲ್ಲಿ ಎಷ್ಟು ಮಾತ್ರವೂ ವಿಪರ್ಯಾಸವನ್ನುಂಟುಮಾಡದೆ ಸುನೀತಿ ಪ್ರತಿಪಾದಕವಾದ ಮನೋಹರ ಕಾದಂಬರಿಯನ್ನು ರಚಿಸಿದ ವಂಗ ಕವಿಗಳ ಜಾಣ್ಮೆಯು ಅತ್ಯಂತ ಪ್ರಶಂಸನೀಯವೇ ಸರಿ. ನಾನು ಆ ಬಂಗಾಲೀಭಾಷೆಯ ಗ್ರಂಥವನ್ನು ಕೆಲವು ಸಾಮಾಜಿಕ ಆಚಾರವಿಚಾರಗಳಲ್ಲಿ ಮಾತ್ರ, ನಮ್ಮ ಜನರಿಗೆ ರುಚಿಸಬಹುದಾದ ರೀತಿಯಿಂದ ಹೆಚ್ಚು ಕಡಿಮೆಗಳನ್ನ ಮಾಡಿ ಕನ್ನಡಕ್ಕೆ ರೂಪಾಂತರಿ

ಸಿರುವೆನು. ಸ್ವಾಭಿಮಾನ, ಸ್ವಜನಾಭಿಮಾನ ಸ್ವದೇಶಾಭಿಮಾನಗಳೆಂಬ ಉಚ್ಚ, ಉಚ್ಚತರ, ಉಚ್ಚತಮವಾದ ಗುಣಗಳ ಮೂರ್ತಸ್ವರೂಪರಾಗಿದ್ದ ಅಪ್ರತಿಮ ಕ್ಷತ್ರಿಯ-ವೀರರ ಚರಿತ್ರವೇ ಈ ಕಥಾನಕದ ಮುಖ್ಯಾಂಗವಾಗಿರುವುದರಿಂದ ವಾಚಕರ ಮನಸ್ಸಿನಲ್ಲಿ ಈ ಗುಣಗಳು ಸ್ಪಷ್ಟವಾಗಿ ಪ್ರತಿಬಿಂಬಿಸಬಹುದೆಂದು ನಂಬಿರುವೆನು. ಅದರಂತೆಯೇ ಕಥಾನಾಯಿಕೆಯಾದ ಪದ್ಮಿನೀ ದೇವಿಯಲ್ಲಿ ಮೂರ್ತಿಮಂತವಾಗಿ ವಾಸಿಸಿದ್ದ ಅತುಲವಾದ ಪತಿವ್ರತಾ ಧರ್ಮನಿಷ್ಠೆ, ಕಷ್ಟಕಾಲದಲ್ಲಿ ಎಷ್ಟು ಮಾತ್ರವೂ ಹಿಂಜರಿಯದೆ ಕರ್ತವ್ಯವನ್ನು ಕೊನೆಗಾಣಿಸಲು ಯತ್ನಿಸುವಂಥ ಅನುಪಮ ಧೈರ್ಯ, ವಿವೇಕ, ಕರ್ತವ್ಯನಿಷ್ಠೆ, ಇವೆಲ್ಲಕ್ಕೂ ಆಶ್ರಯವಾಗಿದ್ದ ಉದಾತ್ತವಾದ ಪಾರಮಾರ್ಥಿಕ ವಿಚಾರ ಇವು ನಮ್ಮ ಭಗಿನಿಯರಿಗೆ ಅನುಕರಣೀಯವಾಗಿರುವವು. ಅತಏವ ಈ ನನ್ನ ಕೃತಿಯು ಕರ್ನಾಟಕದೊಳಗಿನ ಬಂಧು ಭಗಿನಿಯರಿಬ್ಬರಿಗೂ ತುಂಬಾ ಗ್ರಾಹ್ಯವಾಗುವುದೆಂದು ನಂಬಿರುವೆನು. ಮೊತ್ತ ಮೊದಲು ಹಸ್ತಲಿಖಿತ ಪ್ರತಿಯನ್ನು ಸಂಪೂರ್ಣವಾಗಿ ಓದಿನೋಡಿ ತಪ್ಪುತಡೆಗಳನ್ನು ತಿದ್ದಿ ಅನೇಕ ಸೂಚನೆಗಳನ್ನು ಮಾಡಿ ಕೊನೆಗೆ ಕಥಾಮಂದಿರದ ಪ್ರವೇಶಕ್ಕೆ ಅನುಕೂಲವಾದ ನಾಲ್ಕು ಪೀಠಿಕಾ ವಚನಗಳೊಂದಿಗೆ ಗ್ರಂಥವನ್ನು ಕರ್ಣಾಟಕ ಸಮಾಜ ಬಂಧುಗಳ ಮುಂದಿರಿಸುವ ಕಾರ್ಯವನ್ನು ವಾತ್ಸಲ್ಯಪೂರ್ವಕವಾಗಿ ಒಪ್ಪಿಕೊಂಡು ನನ್ನ ಪರಮಪೂಜ್ಯ ಗುರುಗಳಾದ **ಶ್ರೀ. ವೆಂಕಟರಾವ ಮುಗದಲ** ಬಿ. ಎ. ಇವರ ಉಪಕಾರವು ಚಿರಸ್ಮರಣೀಯವಾಗಿರುವುದು. ಗುರುಭಕ್ತಿ ಪ್ರೇರಿತನಾದ ನಾನು ಪರಮಾದರದಿಂದ ಪದತಲದಲ್ಲಿ ಅರ್ಪಿಸಿದ ಕುಸುಮವನ್ನು ಪ್ರೇಮದಿಂದ ಸ್ವೀಕರಿಸಿದ ನನ್ನ ಗುರುಪುಂಗವರಾದ **ರಾವ ಬಹಾದ್ದೂರ ವಿನಾಯಕರಾವ ಜೋಶಿ** ಬಿ. ಎ. ಇವರಿಗೆ ನಾನು ಸದಾ ಋಣಿಯಾಗಿರುವೆನು. ಉಚ್ಚತರದ ಬಹುಮಾನವನ್ನಿತ್ತು ನನ್ನನ್ನು ಪ್ರೋತ್ಸಾಹಗೊಳಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧಿಕಾರಿಗಳಿಂದಲೂ ಶ್ರೀ ಸರಸ್ವತೀಮಂದಿರ ಸಂಸ್ಥೆಯ ಹಿತಚಿಂತಕ ಮಹಾಶಯರಿಂದಲೂ ನಾನು ತುಂಬಾ ಉಪಕೃತನಾಗಿರುವೆನು. ಅದರಂತೆ ನನ್ನ ಸಹವ್ಯವಸಾಯಿಗಳೂ ಸಹಾಧ್ಯಾಯಿಗಳೂ ಆದ ಶ್ರೀ. ಆರ್. ಎನ್. ಜಾತಿಗೇರ ಇವರು ಈ ವಿಷಯದಲ್ಲಿ ನನಗೆ ಮಾಡಿದ ಉಪಕಾರವು ಇಷ್ಟೇ ಎಂದು ಹೇಳಲಾರೆನು.

**ಶ್ರೀ ಸರಸ್ವತೀ ಮಂದಿರಮ್** | ಧಾರವಾಡ. ತಾ|| ೧-೪-೧೯೧೫ |

ಸಜ್ಜನವಿಧೇಯ,
**ನಾರಾಯಣ.**

# ಪುನರ್ನಿವೇದನೆ.

ಸಹೃದಯರೂ ವಿದ್ಯಾಭಿಮಾನಿಗಳೂ ಆದ ಕರ್ಣಾಟಕ ಬಂಧುಗಳ ಉದಾರಾಶ್ರಯದಿಂದ ನಮ್ಮ ಗ್ರಂಥಮಾಲೆಯ ಸ್ಥಿತಿಯು ದಿನದಿನಕ್ಕೆ ಸುಧಾರಿಸುತ್ತ ನಡೆದಿರುವುದೆಂದು ಬರೆಯಲು ತುಂಬಾ ಆನಂದವಾಗುತ್ತದೆ ಕನ್ನಡ ನಾಡಿನೊಳಗಿನ ಗ್ರಂಥಕಾರರಿಗೆ ಮಹದಾಶ್ರಯ ಸ್ಥಾನವಾದ ಮೈಸೂರ ಸರಕಾರದವರು ಅಲ್ಪಜ್ಞನಾದ ನನ್ನ ಈ ಕೃತಿಯನ್ನು ತಮ್ಮಲ್ಲಿ ಪಾಠ್ಯವನ್ನಾಗಿ ಆರಿಸಿದ್ದರಿಂದ ನಾನು ಈ ದ್ವಿತೀಯ ಮುದ್ರಣಕಾರ್ಯವನ್ನು ಕೈಕೊಳ್ಳಬೇಕಾಯಿತು. ಇದೇ ಸಮಯದಲ್ಲಿ ಮೈಸೂರು ಸಂಸ್ಥಾನದೊಳಗಿನ ಸುಪ್ರಸಿದ್ಧ ವಿದ್ವಾಂಸರಲ್ಲಿ ಗಣ್ಯರಾದ **ಶ್ರೀ. ಬಿ. ಕೃಷ್ಣಪ್ಪನವರು,** ಮತ್ತು **ಶ್ರೀ. ಬಿ. ವೆಂಕಟನಾರಾಯಣಪ್ಪನವರು**, ಈ ಮಹನೀಯರಿಬ್ಬರು ನನ್ನ ಗ್ರಂಥವನ್ನು ಕೇವಲ ಸದಿಚ್ಛೆಯಿಂದ ಸಾದ್ಯಂತವಾಗಿ ಓದಿನೋಡಿ ಅದರಲ್ಲಿ ಮೈಸೂರ ಕನ್ನಡಿಗರಿಗೆ ಸುಗಮವೂ ಸುಶ್ರಾವ್ಯವೂ ಸಮ್ಮತವೂ ಆಗುವಂಥ ಕೆಲವು ಮಾರ್ಪಾಡುಗಳನ್ನು ಮಾಡಿಕೊಟ್ಟರು. ಇದರಿಂದ ಮೈಸೂರು ಧಾರವಾಡಗಳ ಕನ್ನಡದ ಐಕ್ಯತೆಗೆ ತುಂಬಾ ಸಹಾಯವಾಗುವುದೆಂದು ನಂಬಿರುವೆನು ಆದ್ದರಿಂದ ನಾನು ಆ ಮಹನೀಯರಿಂದ ತುಂಬಾ ಉಪಕೃತನಾಗಿದ್ದೇನೆ. ಕೊನೆಗೆ ಅನಂತನೂ ಅಪಾರಮಹಿಮನೂ ಆದ ಶ್ರೀಹರಿಯನ್ನು

**"ಹರಿಯ ಚರಣದೊಳರ್ಪಿಸಿದೆನಾ ।**
**ವರ ಕುಸುಮವನು ಪರಮ ಭಕ್ತಿಯೊ ।**
**ಳೆರಗಿ ಗುರುವರ ನಂಘ್ರಿಗರ್ಪಿಪೆನೀ ಸುಪುಷ್ಪವನು ॥**
**ಹರಿಯೆ! ಗುರುವಿನ ರೂಪದಲಿ ಗೋ ।**
**ಚರಿಸಿ ವಿದ್ಯೆಯನೆನಗೆ ನೀಡಿದೆ ।**
**ಪರಿಹರಿಸೊ ನರಜನ್ಮವನು ಕೊಂಡೀಸುವಾಂಜಲಿಯ" ॥**

ಹೀಗೆಂದು ಬೇಡಿಕೊಂಡು ಕರ್ನಾಟಕ ಕವಿಗಳಿಗೂ ಗ್ರಂಥಕಾರರಿಗೂ ಮುಖ್ಯ ಆಶ್ರಯಸ್ಥಾನವಾದ ಮಹಾ ಮಹಿಷೂರು ಸಂಸ್ಥಾನದ ಒಡೆಯರೂ ಪರಮಪೂಜ್ಯರೂ ಸಕಲಕಲಾವಿದರೂ ಸರ್ವಸದ್ಗುಣೋಪೇತರೂ ಆದ ಮಹಾರಾಜರವರಿಗೆ ಜಗದೀಶನು ಆಯುರಾರೋಗ್ಯ ಭಾಗ್ಯಾದಿ ಸಕಲಸಂಪದಗಳನ್ನು ದಯಪಾಲಿಸಲೆಂದು ಪ್ರಾರ್ಥಿಸಿ ಈ ನನ್ನ ನಿವೇದನಾ ಲೇಖವನ್ನು ಮುಗಿಸುವೆನು.

ಶ್ರೀಸರಸ್ವತೀಮಂದಿರ
ಧಾರವಾಡ ೧-೪-೧೯೧೯.

ಸಜ್ಜನವಿಧೇಯ,
**ನಾರಾಯಣ.**

# ಮೂರನೆಯ ಮುದ್ರಣ

**No. 1225/Le**

**Office of the Commissioner for Government Examinations.**
*Madras, 8th June 1922*

*From*,

D. A. Hobday, Esquire, **B. A.**
*Secretary to the S L C Board, MADRAS.*

*To*,

*M. R Ry.* N. V Kurdi,
*Assistant teacher, . .....Training College for men*,
*DHARWAR.*

Sir,

With reference to your letter dated 25 th May, 1922, I have the honour, by direction, to inform you that "Padmini" has been prescribed as a text book in Kanarese for the S. L. C Examination of 1923, and that 700 ( seven hunered) copies may be required although it must be stated that the sale of all the copies cannot be granted if some of the copies are not sold, the Director of Public Instruction, Madras, will not be responsible.

I have the honour ete.
*Sd/. D. A. Hobday.*
*Secretary.*

ಉಪರ್ಯುಕ್ತರೀತಿಯಾಗಿ ಮದ್ರಾಸದ ಸರಕಾರದವರೂ ಬೇರೆ ಕೆಲವು ಹಾಯಸ್ಕೂಲುಗಳ ಅಧಿಕಾರಿಗಳೂ ಪ್ರಸ್ತುತ ಪುಸ್ತಕವನ್ನು ಪಾಠಪುಸ್ತಕವನ್ನಾಗಿ ಆರಿಸಿದ್ದರಿಂದ ಈ ಮೂರನೆಯ ಮುದ್ರಣದ ಕಾರ್ಯವನ್ನು ಕೈಕೊಳ್ಳಬೇಕಾಯಿತು. ನಮ್ಮ ಅಲ್ಪಶಕ್ತಿಯ ಭಾಷಾಸೇವೆಯ ಕಾರ್ಯಕ್ಕೆ ಬೇರೆ ಬೇರೆ ರೀತಿಯಿಂದ ಸಹಾಯ ಮಾಡಿದ ಎಲ್ಲ ಮಹನೀಯರ ಉಪಕಾರಗಳನ್ನು ಮನಃಪೂರ್ವಕವಾಗಿ ಸ್ಮರಿಸುವೆವು.

**ಶ್ರೀ ಸರಸ್ವತೀ ಮಂದಿರಮ್**
**ಧಾರವಾಡ ೨೫-೬-೧೯೨೨**

ಸುಜನ ವಿಧೇಯ,
**ನಾರಾಯಣ.**

# ನಾಲ್ಕನೆಯ ಮುದ್ರಣ

ಇದು ಬಹುಶಃ ಮೂರನೆಯ ಮುದ್ರಣದ ಪ್ರತಿಮುದ್ರಣವಾಗಿರುವದರಿಂದ ಹೆಚ್ಚಿಗಿನ್ನೇನು ಹೇಳುವುದಿದೆ? ಸದಯಹೃದಯರಾದ ವಿದ್ಯಾಧಿಕಾರಿಗಳ ಹಾಗು ಅಭಿಮಾನಿಗಳಾದ ಕನ್ನಡಿಗರ ಉದಾರ ಆಶ್ರಯದಿಂದ ನಮ್ಮ ಗ್ರಂಥಮಾಲೆಯೊಳಗಿನ ಗ್ರಂಥಗಳು ದಿನದಿನಕ್ಕೆ ಹೆಚ್ಚು ಹೆಚ್ಚು ಜನಪ್ರಿಯವಾಗ ಹತ್ತಿರುವುದು ತುಂಬಾ ಆನಂದದ ವಿಷಯವು.

ಮುಂಬಯಿ ಮದ್ರಾಸ ಮೈಸೂರು ಮೊಗಲಾಯಿಗಳಲ್ಲಿ ಸೇರಿ ಬಹುಭಾಗವಾಗಿ ಬಹುರೂಪವನ್ನು ತಳೆದ ಕನ್ನಡ ತಾಯ್ನುಡಿಯು ಏಕರೂಪತೆಯನ್ನು ಗುರಿಯಾಗಿಟ್ಟುಕೊಂಡು ಪ್ರಯತ್ನಪಡುತ್ತಿರುವ ಮುಂದಾಳುಗಳ ಮುಂದಿರುವ ಕೋರಿಕೆಗೆ ಅಳಿಲೆಯ ಭಕ್ತಿಯಿಂದ ಸಹಾಯಮಾಡುವುದು ನಮ್ಮ ಬಹುದಿನದ ಧ್ಯೇಯವಾಗಿದೆ. ಹಿಂದೆ ಹೇಳಿದಂತೆ ನಮ್ಮ ಗ್ರಂಥಮಾಲೆಯೊಳಗಿನ ಪುಸ್ತಕಗಳನ್ನು ಈ ಎಲ್ಲ ಭಾಗಗಳ ಸರಕಾರದವರು ತಮ್ಮ ಹಾಯಸ್ಕೂಲುಗಳ ಮತ್ತು ವಿಶ್ವವಿದ್ಯಾಲಯಗಳ ಅಭ್ಯಾಸಕ್ರಮದಲ್ಲಿ ಆಗಾಗ ಪಠ್ಯಪುಸ್ತಕವಾಗಿ ಆರಿಸಿಕೊಳ್ಳುತ್ತ ಬಂದಿರುವುದರಿಂದ ಈ ನಮ್ಮ ಧ್ಯೇಯದ ಸಾಧನೆಗೆ ತುಂಬಾ ಸಹಾಯವಾಗಿರುವದು. ಮುಂಬಯಿ ಮದ್ರಾಸ ಮೈಸೂರ ಸರಕಾರಗಳಿಗೆ ಒಳಪಟ್ಟ ಹಾಯಸ್ಕೂಲುಗಳಲ್ಲಿ ಪಠ್ಯವಾಗಿ ಆರಿಸಿಕೊಂಡಂತೆ ಮುಂಬಯಿಯ ವಿಶ್ವವಿದ್ಯಾಲಯದವರು ೧೯೩೬ನೆಯ ಇಸ್ವಿಯ ಬಿ. ಎ. ಪರೀಕ್ಷೆಗೂ ಮದ್ರಾಸದ ವಿಶ್ವ ವಿದ್ಯಾಲಯದವರು ಇದೇ ವರ್ಷ ಇಂಟರ ಮಿಜಿಯೇಟ ಪರೀಕ್ಷೆಗೂ ಇವನ್ನು ಓದಬೇಕೆಂದು ಗೊತ್ತುಪಡಿಸಿರುವರೆಂದು ಬರೆಯಲು ಆನಂದವೆನಿಸುವುದು.

ಈ ರೀತಿಯಾಗಿ ಮಂದವಾಗಿಯೇ ಆದರೂ ಮುಂದಡಿಯಿಡುತ್ತಿರುವ ನಮ್ಮ ಗ್ರಂಥಮಾಲೆಯ ಕಾರ್ಯಕ್ಕೆ ಹಿಂದಿನಂತೆ ಸಹಾಯಮಾಡಲೆಳಸಿ ಅಲ್ಪಾವಧಿಯಲ್ಲಿ ಅಂದರೆ ಎರಡೇ ವಾರಗಳಲ್ಲಿ ಈ ನೂರಾಅರುವತ್ತು ಪುಟಗಳ ಪುಸ್ತಕದ ಮುದ್ರಣ ಕಾರ್ಯವನ್ನು ನೆರವೇರಿಸಿ ಕೊಟ್ಟಿದ್ದಕ್ಕಾಗಿ ಕರ್ನಾಟಕ ಮುದ್ರಣಾಲಯದ ಸರ್ವಾಧಿಕಾರಿಗಳಾದ ಶ್ರೀ. **ಯಶವಂತರಾಯ**ರಿಗೂ ವ್ಯವಸ್ಥಾಪಕರಾದ ಶ್ರೀ. **ಮಾಧವರಾಯ**ರಿಗೂ ವಂದನೆಗಳನ್ನು ಅರ್ಪಿಸಿ ಅಖಿಲ ಕರ್ನಾಟಕ ವ್ಯಾಪಿಯಾದ ಭಗವಂತನ ಕರುಣೆಯನ್ನು, ಕೋರಿ ಇಲ್ಲಿಗೆ ವಿರಮಿಸುವೆವು.

**ಶ್ರೀ. ಸರಸ್ವತೀ ಮಂದಿರಮ್** } ಸಾಧು ವಿಧೇಯ,
ಧಾರವಾಡ, ಜನವರಿ ೧೯೩೭. } **ನಾರಾಯಣ.**

*Sanctioned as a text book—Bombay Educational Dept.*

ಶ್ರೀ:

ಕರ್ನಾಟಕ-ಹಿತೈಷಿಣೀ ಗ್ರಂಥಮಾಲೆಯ

ದ್ವಿತೀಯ ಪುಷ್ಪ

ಸಚಿತ್ರ

# ಪದ್ಮಿನಿ

ಇದನ್ನು

ಕರ್ನಾಟಕ-ಹಿತೈಷಿಣೀ ಗ್ರಂಥಮಾಲೆಯ

ಸಂಪಾದಕರಾದ

**ನಾರಾಯಣ ವೆಂಕಟೇಶ ಕುರಡಿ**

ಇವರು ರಚಿಸಿದರು

ನಾಲ್ಕನೆಯ ಮುದ್ರಣ

( ಎಲ್ಲ ಹಕ್ಕುಗಳು ಗ್ರಂಥಕರ್ತರ ಸ್ವಾಧೀನದಲ್ಲಿವೆ )

**Price 0-12-0** ಬೆಲೆ ೧೨ ಆಣೆಗಳು

THIS LITTLE WORK

IS

VERY RESPECTFULLY DEDICATED

To

RAO BAHADDOOR

**VINAYAKA BABAJI JOSHI,** B A.,

**Educational Inspector, S D.**

BY

HIS MOST OBEDIENT STUDENT

The Author

# ಅನುಕ್ರಮಣಿಕೆ.


| | | | | |
|---|---|---|---|---|
| ಮೊದಲನೆಯ ಖಂಡ ... | ಮೇಘಸಂಚಾರ | ... | ... | ೧ |
| ಎರಡನೆಯ ಖಂಡ ... | ವಿದ್ಯುತ್ ದರ್ಶನ | ... | ... | ೨೫ |
| ಮೂರನೆಯ ಖಂಡ ... | ವರ್ಷಣಾರಂಭ | ... | ... | ೪೬ |
| ನಾಲ್ಕನೆಯ ಖಂಡ ... | ಮುಯ್ಯಿಗೆ ಮುಯ್ಯಿ | ... | ... | ೧೦೧ |
| ಐದನೆಯ ಖಂಡ ... | ಪುನರ್ಮೇಘ ಸಂಚಾರ | ... | ... | ೧೨೪ |
| ಆರನೆಯ ಖಂಡ ... | ಪರಿಸಮಾಪ್ತಿಯು | ... | ... | ೧೫೭ |

# ಪೀಠಿಕೆ.

ಸಮೃದ್ಧವಾದ ಸುಖಸುಶಾಂತಿಗಳಿಂದ ವಿರಾಜಿಸುತ್ತಿದ್ದ ಹಿಂದೂ ದೇಶದ ಮೇಲೆ ೧೨ನೆಯ ಶತಮಾನದ ಕೊನೆಯ ಭಾಗದಲ್ಲಿ ಉತ್ತರದ ಚಳಿನಾಡುಗಳಲ್ಲಿ ವಾಸಿಸುತ್ತಿದ್ದ ಗಟ್ಟಿಗರಾದ ಪಠಾಣರು ಆಗಿಂದಾಗ ದಂಡೆತ್ತಿ ಬಂದು ದಿಲ್ಲಿಯ ಸಾಮ್ರಾಜ್ಯವನ್ನು ವಶಮಾಡಿಕೊಂಡರು. ಮಹಮ್ಮದ ಘೋರಿಯು ಗೆದ್ದು ಕೊಂಡ ದಿಲ್ಲಿಯ ಸಾಮ್ರಾಜ್ಯವನ್ನು ಗುಲಾಮ ಅರಸರು ಕೆಲಕಾಲ ಆಳಿದ ಬಳಿಕ ಅದು ಜಲಾಲುದ್ದೀನ್ ಖಿಲ್ಜಿಯ ವಶವಾಯಿತು. ಜಲಾಲುದ್ದೀನನು ತನ್ನ ಅಣ್ಣನ ಮಗನೂ ಅಳಿಯನೂ ಆದ ಅಲ್ಲಾವುದ್ದೀನನಿಗೆ ಸಮಸ್ತ ಸೇನಾಧಿಪತ್ಯವನ್ನು ಒಪ್ಪಿಸಿ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗಿಂತಲೂ ಹೆಚ್ಚು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು. ಆದರೆ ಅತ್ಯಂತ ಕೃತಘ್ನನಾದ ಅಲ್ಲಾವುದ್ದೀನನು ಆ ಪೂಜ್ಯನಾದ ಚಿಕ್ಕಪ್ಪ (ಕಕ್ಕ) ನನ್ನು ಇರಿದು ಕೊಂದು ಅವನ ಇಬ್ಬರೂ ಮಕ್ಕಳನ್ನು ಕಡಿದು ಹಾಕಿ ದಿಲ್ಲಿಯ ಸಿಂಹಾಸನವನ್ನು ಹಿಡಿದುಕೊಂಡನು ಅಲ್ಲಾವುದ್ದೀನನ ರಾಜ್ಯತೃಷ್ಣೆಗೆ ಮಿತಿಯೇ ಇರಲಿಲ್ಲ ಅವನು ದೇವಗಿರಿ ಗುಜರಾತುಗಳ ರಾಜ್ಯಗಳನ್ನು ಜಯಿಸಿದನು. ಗುಜರಾತಿನ ಅರಸನಾದ ಕರಣರಾಯನ ರಾಜ್ಯಲಕ್ಷ್ಮಿಯೊಂದನ್ನೇ ಅಲ್ಲದೆ ಆತನ ಗೃಹಲಕ್ಷ್ಮಿಯಾದ ಕಮಲಾದೇವಿಯನ್ನೂ ಅಲ್ಲಾವುದ್ದೀನನು ಅಪಹರಿಸಿದನೆಂಬ ಪ್ರವಾದವು ದೇಶದಲ್ಲೆಲ್ಲ ಹಬ್ಬಿತು ಮುಂದೆ ತುಸು ದಿವಸಗಳಲ್ಲಿಯೇ ಅಲ್ಲಾವುದ್ದೀನನ ದೃಷ್ಟಿಯು ಚಿತ್ತೂರಿನ ಕಡೆಗೆ ತಿರುಗಲಾಗಿ ಮಹಾಸಂಗ್ರಾಮಕ್ಕೆ ಮೊದಲಾಯಿತು. ಈ ಅಲೌಕಿಕವಾದ ಸಮರವಾರ್ತೆಯ ವರ್ಣನೆಯೇ ಪ್ರಸ್ತುತಗ್ರಂಥದ ಮುಖ್ಯ ವಿಷಯವು.

ಚಿತ್ತೂರ ಮುತ್ತಿಗೆಯ ಐತಿಹಾಸಿಕ ಕಥೆಯು ಸರ್ವವಿಶ್ರುತವಾಗಿದ್ದರೂ ಸದ್ಯದ ಗ್ರಂಥದ ಸ್ವರೂಪವನ್ನು ಇಲ್ಲಿ ಸ್ವಲ್ಪಮಟ್ಟಿಗೆ ಹೇಳುವುದು ಅವಶ್ಯವು. ಈ ವೀರರಸಪ್ರಧಾನವಾದ ಕಥೆಯ ೧ನೆಯ ಖಂಡದೊಳಗಿನ ಕರಣರಾಯನ ಪತ್ರ, ಪದ್ಮಿನೀ ಭೀಮಸಿಂಹರ ಸಂಭಾಷಣೆ, ೨ನೆಯ ಖಂಡದೊಳಗಿನ ಪದ್ಮಿನಿಯ ಪತ್ರ, ೩ನೆಯ ಖಂಡದೊಳಗಿನ 'ಆಹೇರಿಯಾ'ದ ವರ್ಣನೆ, ೪ನೆಯ ಖಂಡದೊಳಗಿನ ಬಾದಲ ಗೋರಾಸಿಂಗರ ಸಂಗ್ರಾಮವರ್ಣನೆ, ೫, ೬ನೆಯ ಖಂಡಗಳೊಳಗಿನ ಪದ್ಮಿನೀ—ಅರುಣಸಿಂಹರ ಸ್ವದೇಶಪ್ರೇಮದ ಉಲ್ಲೇಖ ಇವು ಅತಿಶಯ ಮನೋಹರವಾಗಿರುವುವು. ಪತಿವ್ರತಾಧರ್ಮನಿಷ್ಠೆ, ಸ್ವಾಭಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನ, ಎಂಬ ಉತ್ಕೃಷ್ಟ ಗುಣಗಳ ಪ್ರತ್ಯಕ್ಷವರ್ಣನೆಯು ಗ್ರಂಥದ ಪ್ರತಿಯೊಂದು ಭಾಗದಲ್ಲಿಯೂ ಒಡೆದು ಕಾಣುವುದು. ಪ್ರಸಂಗಕ್ಕೆ ಅನುರೂಪವಾದ ಭಾಷೆಯಿಂದ ವಿಷಯವು ಹೃದಯಂಗಮವಾಗಿದೆ.

ಜಗತ್ತಿನಲ್ಲಿ ಆದರ್ಶವೂ ಆಶ್ಚರ್ಯವೂ ಆಗುವಂತೆ, ಹಿಂದೂಸಮಾಜದ ಎಲ್ಲ ವರ್ಗಗಳ ಕುಲಸ್ತ್ರೀಯರಲ್ಲಿ ನೆಲೆಗೊಂಡಿರುವ ಸದ್ಗುಣಗಳಿಗೆ ನಮ್ಮ ಪುರಾಣಗಳಲ್ಲಿ ಪ್ರಸಿದ್ಧವಾಗಿರುವ ಸೀತೇ,

ಸಾವಿತ್ರೀದೇವಿ ಮೊದಲಾದ ಸ್ತ್ರೀರತ್ನಗಳ ಚರಿತ್ರಮಹಿಮೆಯು ನಮ್ಮ ಸ್ತ್ರೀವರ್ಗದ ಜೀವಾಣುಗಳಲ್ಲಿ ಸಹ ನೆಲೆಗೊಂಡಿರುವುದೇ ಕಾರಣವು ಇದೇಪ್ರಕಾರ ನಮ್ಮ ಅರ್ವಾಚೀನಕಾಲದ ಇತಿಹಾಸದಲ್ಲಿ ಹೆಸರಾದ ಪದ್ಮಿನೀ ಅಹಲ್ಯಾಬಾಯಿ ಮೊದಲಾದ ನಾರೀಮಣಿಗಳ ಚರಿತ್ರವನ್ನು ಕೇಳಿ ಕೇಳಿ ಓದಿ ಓದಿ ತನ್ಮಯವಾದರೆ ಅವರ ಉಜ್ವಲಗುಣಗಳಿಂದ ತುಂಬಿ ನಮ್ಮ ಸದ್ಯದ ಸ್ತ್ರೀಸಮಾಜವು ಹೊಸಕಳೆ ಯಿಂದ ಕಂಗೊಳಿಸುವುದರಲ್ಲಿ ಸಂದೇಹವಿಲ್ಲ. ವೀರರೂ ಅಭಿಮಾನಿಗಳೂ ಕರ್ತವ್ಯತತ್ಪರರೂ ಆದ ಕಥಾನಾಯಕರ ಚರಿತ್ರವಾಚನದಿಂದ ಪುರುಷರಲ್ಲಿ ಹೊಸ ಹುರುಪು ಹುಟ್ಟದಿರದು. ಅತಏವ ಸಾಮಾನ್ಯ ಕಥೆಕಾದಂಬರಿಗಳಿಗಿಂತ ಇಂಥ ಗ್ರಂಥಗಳನ್ನು ರಚಿಸುವವರಲ್ಲಿ ಮನೋಧರ್ಮಗಳನ್ನು ತೊಡ ಗಿಸಿರುವ ಲೇಖಕರು ಅನಂತ ಉಪಕಾರವನ್ನು ಪ್ರೋತ್ಸಾಹರೂಪದಿಂದ ಕೆಲಮಟ್ಟಿಗಾದರೂ ತಿರುಗಿ ಮುಟ್ಟಿಸುವದು **ಸಮಾಜದ ಕರ್ತವ್ಯವು** ನನ್ನ ವಿದ್ಯಾರ್ಥಿಯೊಬ್ಬನು ರಚಿಸಿರುವ ಇಂಥದೊಂದು ಗ್ರಂಥವನ್ನು ಸಹೃದಯರಾದ ಕರ್ನಾಟಕಬಂಧುಗಳ ಮುಂದರಿಸುವುದು ನನಗೆ ವಿಶೇಷ ಆನಂದದ ಮತ್ತು ಅಭಿಮಾನದ ಸಂಗತಿಯಾಗಿದೆ ಗುಣಗ್ರಾಹಕರಾದ ಕನ್ನಡಿಗರಿಂದ ತಕ್ಕ ಪ್ರೋತ್ಸಾ ಹನವು ದೊರೆಯಲೆಂದು ಕೋರುವೆನು.

ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜ್ **ಧಾರವಾಡ** } **ವೆಂಕಟರಾವ ನ. ಮುಗದಲ.**

# ಹೃದಯ ನಿವೇದನೆ.

ಆರ್ಯರೇ, ದಯಾಘನನಾದ ಶ್ರೀಹರಿಯ ಕೃಪೆಯಿಂದ ಕರ್ಣಾಟಕ ಹಿತೈ ಷಿಣೀ ಗ್ರಂಥಮಾಲೆಯ ದ್ವಿತೀಯ ಪುಷ್ಪವನ್ನು ಸುಜ್ಞರಾದ ತಮ್ಮ ಮುಂದಿರಿ ಸುವ ಸುಯೋಗವು ಒದಗಿದ್ದು ಅತಿಶಯ ಆನಂದದ ಸಂಗತಿಯು. ಈ ಸತ್ಕಾ ರ್ಯಕ್ಕೆ ಬಹುರೂಪದಿಂದ ಗೋಚರಿಸಿ ಬಹು ವಿಧದಿಂದ ಸಹಾಯಮಾಡಿದ ಕರ್ಣಾಟಕ ಸಮಾಜರೂಪಿಯಾದ ಭಗವಂತನನ್ನು ಅನನ್ಯಭಾವದಿಂದ ಅಭಿವಂ ದಿಸುವೆನು.

ಈ ವೀರ ರಸಪ್ರಧಾನವಾದ ಐತಿಹಾಸಿಕ ಕಥೆಯ ಐತಿಹಾಸಿಕ ಸಂಗತಿ ಗಳಲ್ಲಿ ಎಷ್ಟು ಮಾತ್ರವೂ ವಿಪರ್ಯಾಸವನ್ನುಂಟುಮಾಡದೆ ಸುನೀತಿ ಪ್ರತಿಪಾದ ಕವಾದ ಮನೋಹರ ಕಾದಂಬರಿಯನ್ನು ರಚಿಸಿದ ವಂಗ ಕವಿಗಳ ಜಾಣ್ಮೆಯು ಅತ್ಯಂತ ಪ್ರಶಂಸನೀಯವೇ ಸರಿ. ನಾನು ಆ ಬಂಗಾಲೀಭಾಷೆಯ ಗ್ರಂಥವನ್ನು ಕೆಲವು ಸಾಮಾಜಿಕ ಆಚಾರವಿಚಾರಗಳಲ್ಲಿ ಮಾತ್ರ, ನಮ್ಮ ಜನರಿಗೆ ರುಚಿಸಬ ಹುದಾದ ರೀತಿಯಿಂದ ಹೆಚ್ಚು ಕಡಿಮೆಗಳನ್ನು ಮಾಡಿ ಕನ್ನಡಕ್ಕೆ ರೂಪಾಂತರಿ

ಸಿರುವೆನು. ಸ್ವಾಭಿಮಾನ, ಸ್ವಜನಾಭಿಮಾನ ಸ್ವದೇಶಾಭಿಮಾನಗಳೆಂಬ ಉಚ್ಚ, ಉಚ್ಚತರ, ಉಚ್ಚತಮವಾದ ಗುಣಗಳ ಮೂರ್ತಸ್ವರೂಪರಾಗಿದ್ದ ಅಪ್ರತಿಮ ಕ್ಷತ್ರಿಯ ವೀರರ ಚರಿತ್ರವೇ ಈ ಕಥಾನಕದ ಮುಖ್ಯಾಂಗವಾಗಿರುವುದರಿಂದ ವಾಚಕರ ಮನಸ್ಸಿನಲ್ಲಿ ಈ ಗುಣಗಳು ಸ್ಪಷ್ಟವಾಗಿ ಪ್ರತಿಬಿಂಬಿಸಬಹುದೆಂದು ನಂಬಿರುವೆನು. ಅದರಂತೆಯೇ ಕಥಾನಾಯಿಕೆಯಾದ ಪದ್ಮಿನೀ ದೇವಿಯಲ್ಲಿ ಮೂರ್ತಿಮಂತವಾಗಿ ವಾಸಿಸಿದ್ದ ಅತುಲವಾದ ಪತಿವ್ರತಾ ಧರ್ಮನಿಷ್ಠೆ, ಕಷ್ಟಕಾಲದಲ್ಲಿ ಎಷ್ಟು ಮಾತ್ರವೂ ಹಿಂಜರಿಯದೆ ಕರ್ತವ್ಯವನ್ನು ಕೊನೆಗಾಣಿಸಲು ಯತ್ನಿಸುವಂಥ ಅನುಪಮ ಧೈರ್ಯ, ವಿವೇಕ, ಕರ್ತವ್ಯನಿಷ್ಠೆ, ಇವೆಲ್ಲಕ್ಕೂ ಆಶ್ರಯವಾಗಿದ್ದ ಉದಾತ್ತವಾದ ಪಾರಮಾರ್ಥಿಕ ವಿಚಾರ ಇವು ನಮ್ಮ ಭಗಿನಿಯರಿಗೆ ಅನುಕರಣೀಯವಾಗಿರುವವು. ಅತಏವ ಈ ನನ್ನ ಕೃತಿಯು ಕರ್ನಾಟಕದೊಳಗಿನ ಬಂಧು ಭಗಿನಿಯರಿಬ್ಬರಿಗೂ ತುಂಬಾ ಗ್ರಾಹ್ಯವಾಗುವುದೆಂದು ನಂಬಿರುವೆನು. ಮೊತ್ತ ಮೊದಲು ಹಸ್ತಲಿಖಿತ ಪ್ರತಿಯನ್ನು ಸಂಪೂರ್ಣವಾಗಿ ಓದಿನೋಡಿ ತಪ್ಪುತಡೆಗಳನ್ನು ತಿದ್ದಿ ಅನೇಕ ಸೂಚನೆಗಳನ್ನು ಮಾಡಿ ಕೊನೆಗೆ ಕಥಾಮಂದಿರದ ಪ್ರವೇಶಕ್ಕೆ ಅನುಕೂಲವಾದ ನಾಲ್ಕು ಪೀಠಿಕಾ-ವಚನಗಳೊಂದಿಗೆ ಗ್ರಂಥವನ್ನು ಕರ್ಣಾಟಕ ಸಮಾಜ ಬಂಧುಗಳ ಮುಂದಿರಿಸುವ ಕಾರ್ಯವನ್ನು ವಾತ್ಸಲ್ಯಪೂರ್ವಕವಾಗಿ ಒಪ್ಪಿಕೊಂಡು ನನ್ನ ಪರಮಪೂಜ್ಯ ಗುರುಗಳಾದ **ಶ್ರೀ. ವೆಂಕಟರಾವ ಮುಗದಲ** ಬಿ. ಎ. ಇವರ ಉಪಕಾರವು ಚಿರಸ್ಮರಣೀಯವಾಗಿರುವುದು. ಗುರುಭಕ್ತಿ ಪ್ರೇರಿತನಾದ ನಾನು ಪರಮಾದರದಿಂದ ಪದತಲದಲ್ಲಿ ಅರ್ಪಿಸಿದ ಕುಸುಮವನ್ನು ಪ್ರೇಮದಿಂದ ಸ್ವೀಕರಿಸಿದ ನನ್ನ ಗುರುಪುಂಗವರಾದ **ರಾವಬಹಾದ್ದೂರ ವಿನಾಯಕರಾವ ಜೋಶಿ** ಬಿ ಎ ಇವರಿಗೆ ನಾನು ಸದಾ ಋಣಿಯಾಗಿರುವೆನು. ಉಚ್ಚತರದ ಬಹುಮಾನವನ್ನಿತ್ತು ನನ್ನನ್ನು ಪ್ರೋತ್ಸಾಹಗೊಳಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧಿಕಾರಿಗಳಿಂದಲೂ ಶ್ರೀ ಸರಸ್ವತೀಮಂದಿರ ಸಂಸ್ಥೆಯ ಹಿತಚಿಂತಕ ಮಹಾಶಯರಿಂದಲೂ ನಾನು ತುಂಬಾ ಉಪಕೃತನಾಗಿರುವೆನು. ಅದರಂತೆ ನನ್ನ ಸಹವ್ಯವಸಾಯಿಗಳೂ ಸಹಾಧ್ಯಾಯಿಗಳೂ ಆದ ಶ್ರೀ. ಆರ್. ಎನ್. ಜಾತಿಗೇರ ಇವರು ಈ ವಿಷಯದಲ್ಲಿ ನನಗೆ ಮಾಡಿದ ಉಪಕಾರವು ಇಷ್ಟೇ ಎಂದು ಹೇಳಲಾರೆನು.

| | |
|---|---|
| **ಶ್ರೀ ಸರಸ್ವತೀ ಮಂದಿರಮ್** | ಸಜ್ಜನವಿಧೇಯ, |
| ಧಾರವಾಡ. ತಾ॥ ೧-೪-೧೯೧೫ | **ನಾರಾಯಣ.** |

# ಪುನರ್ನಿವೇದನೆ.

ಸಹೃದಯರೂ ವಿದ್ಯಾಭಿಮಾನಿಗಳೂ ಆದ ಕರ್ಣಾಟಕಬಂಧುಗಳ ಉದಾರಾಶ್ರಯದಿಂದ ನಮ್ಮ ಗ್ರಂಥಮಾಲೆಯು ಸ್ಥಿತಿಯು ದಿನದಿನಕ್ಕೆ ಸುಧಾರಿಸುತ್ತ ನಡೆದಿರುವುದೆಂದು ಬರೆಯಲು ತುಂಬಾ ಆನಂದವಾಗುತ್ತದೆ. ಕನ್ನಡ ನಾಡಿನೊಳಗಿನ ಗ್ರಂಥಕಾರರಿಗೆ ಮಹದಾಶ್ರಯ ಸ್ಥಾನವಾದ ಮೈಸೂರ ಸರಕಾರದವರು ಅಲ್ಪಜ್ಞನಾದ ನನ್ನ ಈ ಕೃತಿಯನ್ನು ತಮ್ಮಲ್ಲಿ ಪಾಠ್ಯವನ್ನಾಗಿ ಆರಿಸಿದ್ದರಿಂದ ನಾನು ಈ ದ್ವಿತೀಯ ಮುದ್ರಣಕಾರ್ಯವನ್ನು ಕೈಕೊಳ್ಳಬೇಕಾಯಿತು. ಇದೇ ಸಮಯದಲ್ಲಿ ಮೈಸೂರು ಸಂಸ್ಥಾನದೊಳಗಿನ ಸುಪ್ರಸಿದ್ಧ ವಿದ್ವಾಂಸರಲ್ಲಿ ಗಣ್ಯರಾದ **ಶ್ರೀ. ಬಿ. ಕೃಷ್ಣಪ್ಪನವರು,** ಮತ್ತು **ಶ್ರೀ. ಬಿ. ವೆಂಕಟನಾರಾಯಣಪ್ಪನವರು,** ಈ ಮಹನೀಯರಿಬ್ಬರು ನನ್ನ ಗ್ರಂಥವನ್ನು ಕೇವಲ ಸದಿಚ್ಛೆಯಿಂದ ಸಾದ್ಯಂತವಾಗಿ ಓದಿನೋಡಿ ಅದರಲ್ಲಿ ಮೈಸೂರ ಕನ್ನಡಿಗರಿಗೆ ಸುಗಮವೂ ಸುಶ್ರಾವ್ಯವೂ ಸಮ್ಮತವೂ ಆಗುವಂಥ ಕೆಲವು ಮಾರ್ಪಾಡುಗಳನ್ನು ಮಾಡಿಕೊಟ್ಟರು. ಇದರಿಂದ ಮೈಸೂರು ಧಾರವಾಡಗಳ ಕನ್ನಡದ ಐಕ್ಯತೆಗೆ ತುಂಬಾ ಸಹಾಯವಾಗುವುದೆಂದು ನಂಬಿರುವೆನು ಆದ್ದರಿಂದ ನಾನು ಆ ಮಹನೀಯರಿಂದ ತುಂಬಾ ಉಪಕೃತನಾಗಿದ್ದೇನೆ. ಕೊನೆಗೆ ಅನಂತನೂ ಅಪಾರಮಹಿಮನೂ ಆದ ಶ್ರೀಹರಿಯನ್ನು

**"ಹರಿಯ ಚರಣದೊಳರ್ಪಿಸಿದೆನಾ।**
**ವರ ಕುಸುಮವನು ಪರಮ ಭಕ್ತಿಯೊ।**
**ಳೆರಗಿ ಗುರುವರ ಸಂಘ್ರಿಗರ್ಪಿಪೆನೀ ಸುಪುಷ್ಪವನು ॥**
**ಹರಿಯೆ! ಗುರುವಿನ ರೂಪದಲಿ ಗೋ।**
**ಚರಿಸಿ ವಿದ್ಯೆಯನೆನಗೆ ನೀಡಿದೆ।**
**ಪರಿಹರಿಸೊ ನರಜನ್ಮವನು ಕೊಂಡೀಸುಮಾಂಜಲಿಯ" ॥**

ಹೀಗೆಂದು ಬೇಡಿಕೊಂಡು ಕರ್ನಾಟಕ ಕವಿಗಳಿಗೂ ಗ್ರಂಥಕಾರರಿಗೂ ಮುಖ್ಯ ಆಶ್ರಯಸ್ಥಾನವಾದ ಮಹಾ ಮಹಿಷೂರು ಸಂಸ್ಥಾನದ ಒಡೆಯರೂ ಪರಮಪೂಜ್ಯರೂ ಸಕಲಕಲಾವಿದರೂ ಸರ್ವಸದ್ಗುಣೋಪೇತರೂ ಆದ ಮಹಾರಾಜರವರಿಗೆ ಜಗದೀಶನು ಆಯುರಾರೋಗ್ಯ ಭಾಗ್ಯಾದಿ ಸಕಲಸಂಪದಗಳನ್ನು ದಯಪಾಲಿಸಲೆಂದು ಪ್ರಾರ್ಥಿಸಿ ಈ ನನ್ನ ನಿವೇದನಾ ಲೇಖವನ್ನು ಮುಗಿಸುವೆನು.

ಶ್ರೀಸರಸ್ವತೀಮಂದಿರ
ಧಾರವಾಡ ೧-೪-೧೯೧೯.

ಸಜ್ಜನವಿಧೇಯ,
**ನಾರಾಯಣ.**

# ಮೂರನೆಯ ಮುದ್ರಣ

**No 1225/Le**

**Office of the Commissioner for Government Examinations.**
*Madras, 8th June 1922*

*From*,

D. A. Hobday, Esquire, **B. A.**
*Secretary to the S L C Board, MADRAS.*

*To*,

*M. R Ry.* **N. V Kurdi,**
*Assistant teacher,. . .....Training College for men,*
*DHARWAR.*

Sir,

With reference to your letter dated 25 th May, 1922, I have the honour, by direction, to inform you that "Padmini" has been prescribed as a text book in Kanarese for the S. L. C· Examination of 1923, and that 700 ( seven hunered) copies may be required although it must be stated that the sale of all the copies cannot be granted if some of the copies are not sold, the Director of Public Instruction, Madras, will not be responsible.

I have the honour ete.
*Sd/.* ***D. A. Hobday.***
*Secretary.*

ಉಪಯುರ್ಕ್ತರೀತಿಯಾಗಿ ಮದ್ರಾಸದ ಸರಕಾರದವರೂ ಬೇರೆ ಕೆಲವು ಹಾಯಸ್ಕೂಲುಗಳ ಅಧಿಕಾರಿಗಳೂ ಪ್ರಸ್ತುತ ಪುಸ್ತಕವನ್ನು ಪಾಠಪುಸ್ತಕವನ್ನಾಗಿ ಆರಿಸಿದ್ದರಿಂದ ಈ ಮೂರನೆಯ ಮುದ್ರಣದ ಕಾರ್ಯವನ್ನು ಕೈಕೊಳ್ಳಬೇಕಾಯಿತು. ನಮ್ಮ ಅಲ್ಪಶಕ್ತಿಯ ಭಾಷಾಸೇವೆಯ ಕಾರ್ಯಕ್ಕೆ ಬೇರೆ ಬೇರೆ ರೀತಿಯಿಂದ ಸಹಾಯ ಮಾಡಿದ ಎಲ್ಲ ಮಹನೀಯರ ಉಪಕಾರಗಳನ್ನು ಮನಃಪೂರ್ವಕವಾಗಿ ಸ್ಮರಿಸುವೆವು.

**ಶ್ರೀ ಸರಸ್ವತೀ ಮಂದಿರಮ್**
**ಧಾರವಾಡ ೨೫-೬-೧೯೨೨**

ಸುಜನ ವಿಧೇಯ,
**ನಾರಾಯಣ.**

# ನಾಲ್ಕನೆಯ ಮುದ್ರಣ

ಇದು ಬಹುಶಃ ಮೂರನೆಯ ಮುದ್ರಣದ ಪ್ರತಿಮುದ್ರಣವಾಗಿರುವದರಿಂದ ಹೆಚ್ಚಿಗಿನ್ನೇನು ಹೇಳುವುದಿದೆ? ಸದಯಹೃದಯರಾದ ವಿದ್ಯಾಧಿಕಾರಿಗಳ ಹಾಗು ಅಭಿಮಾನಿಗಳಾದ ಕನ್ನಡಿಗರ ಉದಾರ ಆಶ್ರಯದಿಂದ ನಮ್ಮ ಗ್ರಂಥಮಾಲೆಯೊಳಗಿನ ಗ್ರಂಥಗಳು ದಿನದಿನಕ್ಕೆ ಹೆಚ್ಚು ಹೆಚ್ಚು ಜನಪ್ರಿಯವಾಗ ಹತ್ತಿರುವುದು ತುಂಬಾ ಆನಂದದ ವಿಷಯವು.

ಮುಂಬಯಿ ಮದ್ರಾಸ ಮೈಸೂರು ಮೊಗಲಾಯಿಗಳಲ್ಲಿ ಸೇರಿ ಬಹುಭಾಗವಾಗಿ ಬಹುರೂಪವನ್ನು ತಳೆದ ಕನ್ನಡ ತಾಯ್ನುಡಿಯ ಏಕರೂಪತೆಯನ್ನು ಗುರಿಯಾಗಿಟ್ಟುಕೊಂಡು ಪ್ರಯತ್ನಪಡುತ್ತಿರುವ ಮುಂದಾಳುಗಳ ಮುಂದಿರುವ ಕೋರಿಕೆಗೆ ಅಳಿಲೆಯ ಭಕ್ತಿಯಿಂದ ಸಹಾಯಮಾಡುವುದು ನಮ್ಮ ಬಹುದಿನದ ಧ್ಯೇಯವಾಗಿದೆ. ಹಿಂದೆ ಹೇಳಿದಂತೆ ನಮ್ಮ ಗ್ರಂಥಮಾಲೆಯೊಳಗಿನ ಪುಸ್ತಕಗಳನ್ನು ಈ ಎಲ್ಲ ಭಾಗಗಳ ಸರಕಾರದವರು ತಮ್ಮ ಹಾಯಸ್ಕೂಲುಗಳ ಮತ್ತು ವಿಶ್ವವಿದ್ಯಾಲಯಗಳ ಅಭ್ಯಾಸಕ್ರಮದಲ್ಲಿ ಆಗಾಗ ಪಠ್ಯಪುಸ್ತಕವಾಗಿ ಆರಿಸಿಕೊಳ್ಳುತ್ತ ಬಂದಿರುವುದರಿಂದ ಈ ನಮ್ಮ ಧ್ಯೇಯದ ಸಾಧನೆಗೆ ತುಂಬಾ ಸಹಾಯವಾಗಿರುವದು. ಮುಂಬಯಿ ಮದ್ರಾಸ ಮೈಸೂರ ಸರಕಾರಗಳಿಗೆ ಒಳಪಟ್ಟ ಹಾಯಸ್ಕೂಲುಗಳಲ್ಲಿ ಪಠ್ಯವಾಗಿ ಆರಿಸಿಕೊಂಡಂತೆ ಮುಂಬಯಿಯ ವಿಶ್ವವಿದ್ಯಾಲಯದವರು ೧೯೩೬ನೆಯ ಇಸ್ವಿಯ ಬಿ. ಎ. ಪರೀಕ್ಷೆಗೂ ಮದ್ರಾಸದ ವಿಶ್ವ ವಿದ್ಯಾಲಯದವರು ಇದೇ ವರ್ಷ ಇಂಟರಮಿಜಿಯೇಟ ಪರೀಕ್ಷೆಗೂ ಇದನ್ನು ಓದಬೇಕೆಂದು ಗೊತ್ತುಪಡಿಸಿರುವರೆಂದು ಬರೆಯಲು ಆನಂದವೆನಿಸುವುದು.

ಈ ರೀತಿಯಾಗಿ ಮಂದವಾಗಿಯೇ ಆದರೂ ಮುಂದಡಿಯಿಡುತ್ತಿರುವ ನಮ್ಮ ಗ್ರಂಥಮಾಲೆಯ ಕಾರ್ಯಕ್ಕೆ ಹಿಂದಿನಂತೆ ಸಹಾಯಮಾಡಲೆಳಸಿ ಅಲ್ಪಾವಧಿಯಲ್ಲಿ ಅಂದರೆ ಎರಡೇ ವಾರಗಳಲ್ಲಿ ಈ ನೂರಾಅರುವತ್ತು ಪುಟಗಳ ಪುಸ್ತಕದ ಮುದ್ರಣ ಕಾರ್ಯವನ್ನು ನೆರವೇರಿಸಿ ಕೊಟ್ಟಿದ್ದಕ್ಕಾಗಿ ಕರ್ನಾಟಕ ಮುದ್ರಣಾಲಯದ ಸರ್ವಾಧಿಕಾರಿಗಳಾದ ಶ್ರೀ. **ಯಶವಂತರಾಯ**ರಿಗೂ ವ್ಯವಸ್ಥಾಪಕರಾದ ಶ್ರೀ. **ಮಾಧವರಾಯ**ರಿಗೂ ವಂದನೆಗಳನ್ನು ಅರ್ಪಿಸಿ ಅಖಿಲ ಕರ್ನಾಟಕ ವ್ಯಾಪಿಯಾದ ಭಗವಂತನ ಕರುಣೆಯನ್ನು, ಕೋರಿ ಇಲ್ಲಿಗೆ ವಿರಮಿಸುವೆವು.

**ಶ್ರೀ. ಸರಸ್ವತೀ ಮಂದಿರಮ್**
ಧಾರವಾಡ, ಜನವರಿ ೧೯೩೭.

ಸಾಧು ವಿಧೇಯ,
**ನಾರಾಯಣ.**



ಪದ್ಮಿನಿಯು ದೇವಿಯ ಮಂದಿರದ ಬಾಗಿಲಲ್ಲಿ ಮುಖವನ್ನು
ಮುಚ್ಚಿಕೊಂಡು ಅಳುತ್ತ ನಿಂತಿದ್ದಳು.

# ಪದ್ಮಿನಿ

## ಮೊದಲನೆಯ ಖಂಡ

### ಮೇಘಸಂಚಾರ

### ಮೊದಲನೆಯ ಪರಿಚ್ಛೇದ

ಐನೂರಡಿ ಉನ್ನತವಾದ ದಿಣ್ಣೆಯ ಮೇಲೆ ಇತಿಹಾಸ ಪ್ರಸಿದ್ಧವಾದ ಚಿತ್ತೂರು ದುರ್ಗವು ಪಸರಿಸಿರುವುದು. ಆ ಭವ್ಯವಾದ ದುರ್ಗದ ಹಳಿದಾದ ಕುರುಹುಗಳು ದೂರದವರೆಗೆ ಹರಡಿಕೊಂಡು, ಅದೊಂದು ಭೀಷಣವಾದ ಶ್ಮಶಾನವೋ ಎಂಬಂತೆ ಇಂದಿಗೂ ತೋರುತ್ತಿರುವುದು. ಅನೇಕಾನೇಕ ಗುಡ್ಡದ ಝರಿಗಳೂ ಆರಾವಲೀ ಪರ್ವತದ ಕಡೆಯಿಂದ ಬೀಸುವ ವಾಯುಪ್ರವಾಹವೂ ಆ ನಿರ್ಜನವಾದ ಪ್ರದೇಶದಲ್ಲಿ " ಹಾಯ್! ಹಾಯ್! " ಎಂದು ಧ್ವನಿಗೈಯುತ್ತ ಪ್ರವಹಿಸುತ್ತಿರುವುವು. ಮನುಷ್ಯರಾಗಲಿ ಇತರ ಪ್ರಾಣಿಗಳಾಗಲಿ ವಾಸಿಸದೆ ಇರುವುದರಿಂದ ಆ ಸ್ಥಳವು ಬಲು ಭೀಷಣವಾಗಿ ತೋರುವುದು.

ಒಂದಾನೊಂದು ಕಾಲದಲ್ಲಿ ಇದೇ ಸ್ಥಳದಲ್ಲಿ ಬಾಪ್ಪಾರಾವ್ ಖೋಮಾನ್, ಸಮರಸಿಂಹ ಮತ್ತು ಸಂಗ್ರಾಮಸಿಂಹರ ರಾಜಧಾನಿಯು ವಿರಾಜಿಸುತ್ತಿತ್ತು. ಇದೇ ಸ್ಥಳದಲ್ಲಿಯೇ ಜಯಮಲ್ಲ, ಪುತ್ತ, ಹಾಮಿರ ಮತ್ತು ಪ್ರತಾಪಸಿಂಹರು ಮಾತೃಭೂಮಿಯ ಉದ್ಧಾರಾರ್ಥವಾಗಿ ತಮ್ಮ ಸರ್ವಸ್ವವನ್ನೂ ಧಾರೆಯೆರೆದರು. ಈ ಚಿತ್ತೂರು ದುರ್ಗದ ಬಾಗಿಲಿನಲ್ಲಿಯೇ ಒಂದಾನೊಂದು ಕಾಲದಲ್ಲಿ ಹಲವು

ಹಿಂದೂ ರಾಜರು ತಲೆಬಾಗಿಸಿ ನಡೆಯುತ್ತಿದ್ದರು. ಈಗ ಆ ದುರ್ಗಕ್ಕೆ ಎಂತಹ ಸಮಯವೊದಗಿದೆ ! ಅವರೆಲ್ಲ ಏನಾಗಿ ಹೋದರು ! ಇಲ್ಲ, ಯಾವುದೂ ಉಳಿದಿಲ್ಲ; ಕಾಲಪುರುಷನ ತುಳಿದಾಟದಿಂದ ಸಕಲವೂ ವಿಧ್ವಂಸವಾಗಿ ಹೋಗಿವೆ !

ಆದರೆ, ಆ ದುರ್ಗವಿರುವ ಸ್ಥಳದಲ್ಲಿ ಕಾಲಿಟ್ಟ ಮಾತ್ರಕ್ಕೆ, ಆ ಪುರಾತನ ದುರ್ಗದ ಹಳೆಯ ಕುರುಹುಗಳನ್ನು ನೋಡಿದ ಮಾತ್ರಕ್ಕೆ, ಹಿಂದೂಗಳ ಅಂತಃಕರಣದಲ್ಲಿ ಏನೋ ಒಂದು ಪವಿತ್ರವಾದ ಭಾವನೆಯು ಉದಯವಾಗುವುದು. ಮೈಯೊಳಗಿನ ರಕ್ತಪ್ರವಾಹವು ಬಿಸಿಯೇರುವುದು; ಮನಸ್ಸು ಮಂಕಾಗುವುದು. ದುಃಖಮಯವೋ ಸುಖಮಯವೋ, ಸಹಾನುಭೂತಿಪೂರ್ಣವೋ ರೋಷಪೂರ್ಣವೋ, ಆದ ಮನೋಭಾವನೆಯಿಂದ ಮನುಷ್ಯನು ತಟಸ್ಥನಾಗುವನು. ಆ ಸ್ಥಳದಲ್ಲಿ ನಡೆದುಹೋದ ಸಕಲ ಸಂಗತಿಗಳೂ ಒಂದೊಂದಾಗಿ, ಎರಡೆರಡಾಗಿ, ಹತ್ತಾಗಿ, ಹಲವಾಗಿ ಮನಸ್ಸಿನ ಮುಂದೆ ಬಂದು ನಿಲ್ಲುವುವು. ಕೊನೆಗೆ ಆ ವ್ಯಕ್ತಿಯು ಕೋಮಲಾಂತಃಕರಣಿಯಾಗಿದ್ದರೆ ' ಗೋಳೋ ' ಎಂದು ಅತ್ತು ಬಿಡುವನು. ತುಸು ಕಠಿನ ಮನಸ್ಸಿನವನೂ ಧೀರನೂ ಆಗಿದ್ದರೆ ಅಂತರಂಗದಲ್ಲಿ ವೀರರಸವು ಪ್ರವಹಿಸತೊಡಗಿ ಸ್ವಾಭಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನಗಳೆಂಬ ಉಚ್ಚ, ಉಚ್ಚತರ, ಉಚ್ಚತಮವಾದ ಮನೋಭಾವನೆಗಳು ಜಾಗ್ರತಹೊಂದಿ, ತನ್ನ ಕರ್ತವ್ಯವನ್ನು ಸ್ಮರಿಸಿಕೊಂಡು, ದೃಢವಾದ ಪ್ರತಿಜ್ಞೆಗೈದು, ಆ ಮಹಸೀಯರಾದ ರಾಜಪುತ್ರವೀರರನ್ನು ಅನುಕರಿಸಿ ನಡೆದು, ಆ ತನ್ನ ಪ್ರತಿಜ್ಞೆಯನ್ನು ಕೊನೆಗಾಣಿಸಿಕೊಂಡು, ಇಹಲೋಕದಲ್ಲಿ ಸ್ಥಿರವಾದ ಕೀರ್ತಿಯನ್ನೂ ಪರಲೋಕದಲ್ಲಿ ನಿಶ್ಚಿತವಾದ ಸುಖವನ್ನೂ ಪಡೆಯುವನು.

ಆರುನೂರಕ್ಕಿಂತ ತುಸು ಹೆಚ್ಚು ವರುಷಗಳ ಹಿಂದೆ ಒಂದುದಿನ ಅಕಸ್ಮಾತ್ತಾಗಿ ಅಶ್ವಾರೋಹಿಯಾದ ಅತಿಥಿಯೊಬ್ಬನು ಚಿತ್ತೂರು ದುರ್ಗವನ್ನು ಪ್ರವೇಶಿಸಿದನು. ಆ ಕಾಲದಲ್ಲಿ ಚಿತ್ತೂರು ಸಕಲ ಸಮೃದ್ಧಿಗಳಿಂದ ವಿರಾಜಮಾನವಾಗಿತ್ತು. ನೆರೆಯಲ್ಲಿದ್ದ ಗುಜರಾಥದ ಅರಸನ ಸಂಗಡ ಕಲಹವುಂಟಾಗಿ ಅದೇ ತಾನೇ ಚಿತ್ತೂರಿನ ರಾಣನು ಆ ರಾಜ್ಯವನ್ನು ಜಯಿಸಿದ್ದನು. ನಾಲ್ಕೂಕಡೆಗೆ ವಿಜಯೋತ್ಸವಗಳು ಒಳ್ಳೇ ವೈಭವದಿಂದ ಜರುಗುತ್ತಿದ್ದುವು. ಚಿತ್ತೂರಿನೊಳಗಿನ ಪ್ರತಿಯೊಂದು ಮನೆಯಲ್ಲಿಯೂ ಆನಂದೋತ್ಸವಗಳು ನಡೆಯುತ್ತಿದ್ದುವು.

ಅಶ್ವಾರೋಹಿಯು ದುರ್ಗದ ಆರು ಬಾಗಿಲುಗಳನ್ನು ದಾಟಿ ಏಳನೆಯ 'ರಾಮಪೋಲ' ಮಹಾದ್ವಾರವನ್ನು ಮುಟ್ಟಿದನು. ಹಠಾತ್ತಾಗಿ ಬಾಗಿಲಕಾಯು ವವನು ಬಂದು ಅವನನ್ನು ತಡೆದು "ನೀನು ಯಾರು? " ಎಂದು ಕೇಳಿದನು.

ಅಶ್ವಾರೋಹಿಯು ಏನೊಂದೂ ಉತ್ತರವನ್ನು ಹೇಳಲಿಲ್ಲ. ಒಂದು ಸುವ ರ್ಣದ ಮುದ್ರಿಕೆಯನ್ನು ತೋರಿಸಿದನು. ಸಂಗಡ ಮೋಹರುಮಾಡಿದ ಒಂದು ಪತ್ರವೂ ಇದ್ದಿತು. ಅದರ ಮೇಲೆ ರಾಣನ ಹೆಸರು ಬರೆದಿತ್ತು.

ಪ್ರಹರಿಯು ಸುಮ್ಮನಾಗಿ ದಾರಿಯನ್ನು ಬಿಟ್ಟುಬಿಟ್ಟನು ಅಶ್ವಾರೋಹಿಯು ಅರಮನೆಯ ಕಡೆಗೆ ಗಂಭೀರವಾದ ನಡಿಗೆಯಿಂದ ಹೊರಟನು.

ಚಿತ್ತೂರಿನ ಅಧಿಪತಿಯು ಆ ದಿನ ಊಟವಾದ ಬಳಿಕ ತನ್ನ ವಿಶ್ರಾಂತಿ ಮಂದಿರಕ್ಕೆ ಬಂದು ಮನೋಹರವಾದ ಒಂದು ಆಸನದ ಮೇಲೆ ಕುಳಿತುಕೊಂಡು ಮೃದುವಾಗಿ ತೊನೆಯುತ್ತಿದ್ದ ತಂಗಾಳಿಯನ್ನು ಸೇವಿಸುತ್ತಿದ್ದನು. ಮುಂಭಾಗ ದಲ್ಲಿ ದುರ್ಗದ ಶಿಖರದ ಮೇಲಿನ ರಕ್ತವರ್ಣದ ನಿಶಾನೆಯು ಗಾಳಿಯಿಂದ ಅಲ್ಲಾಡಿ ಪ್ರಖರವಾದ ಬಿಸಿಲಿನಲ್ಲಿ ಥಳಥಳನೆ ಹೊಳೆಯುತ್ತಿತ್ತು. ರಾಣನು ಅದನ್ನು ನೋಡಿ ನೋಡಿ ಆನಂದಪಡುತ್ತ ಮನಸ್ಸಿನಲ್ಲಿ ಏನೋ ಒಂದು ಸುಖ ಮಯವಾದ ಸ್ವಪ್ನವನ್ನು ಭಾವಿಸುತ್ತಿದ್ದನು. ಅಷ್ಟರಲ್ಲಿ ಅರಮನೆಯ ದ್ವಾರಪಾಲ ಕನು ಒಳಗೆ ಬಂದು ರಾಣನನ್ನು ಅಭಿವಂದಿಸಿ ಹಿಂದೆ ಹೇಳಿದ ದೂತನ ಆಗಮನ ವನ್ನು ವಿಜ್ಞಾಪಿಸಿದನು. ಮತ್ತು ಮೋಹರು ಮಾಡಿದ ಒಂದು ಪತ್ರವನ್ನು ರಾಣನ ಮುಂದಿನ ಅಮೃತಶಿಲೆಯ ಮೇಜಿನ ಮೇಲೆ ಇರಿಸಿದನು. ರಾಣನು ಗುಜರಾಥದಲ್ಲಿ ತನಗೊದಗಿದ ವಿಜಯದ ಕುರುಹಿಗಾಗಿ ಚಿತ್ತೂರಿನಲ್ಲಿ ಒಂದು ವಿಜಯಸ್ತಂಭ ವನ್ನು ಸ್ಥಾಪಿಸಬೇಕೆಂದು ಯೋಚಿಸಿದ್ದನು. ಆ ವಿಜಯಸ್ತಂಭದ ನಕಾಶೆಯು ಎದುರಿಗಿದ್ದ ಗೋಡೆಯ ಮೇಲೆ ತೂಗಾಡುತ್ತಿತ್ತು. ರಾಣನು ಆ ನಕಾಶೆಯ ಕಡೆಗೆ ಒಮ್ಮೆ ತಿರುಗಿ ನೋಡಿ ದೂತನು ಇಟ್ಟಿದ್ದ ಪತ್ರವನ್ನು ಕೈಯೊಳಗೆ ತೆಗೆದು ಕೊಂಡನು. ಆಶ್ಚರ್ಯದಿಂದ ರಾಣನ ಮುಖಚರ್ಯೆಯು ಒಮ್ಮಿಂದೊಮ್ಮೆ ಬದ ಲಾಯಿತು. "ಇದಾರ ಪತ್ರ? ಎಲ್ಲಿಂದ ಬಂದಿತು? ಮೇಲೆ ಗುರ್ಜರಾಧಿಪತಿಯ ಮೋಹರು ! ನಮ್ಮ ಚಿರಶತ್ರುವಾದ ಗುರ್ಜರೇಶ್ವರನು ಇದೇನು ಬರೆದು ಕಳುಹಿ ಸಿರುವನು?" ಎಂದು ಹೇಳಿಕೊಳ್ಳುತ್ತ ರಾಣನು ಚಟ್ಟನೆ ಮೊಹರನ್ನು ಒಡೆದು

ಕಾಗದವನ್ನು ತೆಗೆದು ಓದಲಾರಂಭಿಸಿದನು. ನಿಜವಾಗಿಯೂ ಪತ್ರದ ಕೊನೆಯಲ್ಲಿ ದೊಡ್ಡ ದೊಡ್ಡ ಅಕ್ಷರಗಳಿಂದ "**ಕರಣರಾಯ**" ಎಂದು ಬರೆದಿತ್ತು. ರಾಣನು ಪತ್ರವನ್ನು ಓದತೊಡಗಿದನು.

" **ಮಹಾರಾಣಾ,**

ಕೇಳಿದೆನು. ನಮ್ಮನ್ನು ಜಯಿಸಿದ ನೀನು ಉಲ್ಲಾಸದಿಂದ ಉಬ್ಬಿ ಮೆರೆಯು ತೊಡಗಿರುವೆಯಂತೆ; ಗುರ್ಜರವಿಜಯದ ಕುರುಹಿಗಾಗಿ ವಿಜಯಸ್ತಂಭವನ್ನು ಸ್ಥಾಪಿಸುವ ಸಂಭ್ರಮದಲ್ಲಿ ನಿದ್ರಾಹಾರಗಳನ್ನು ತೊರೆದಿರುವೆಯಂತೆ. ಆದರೆ ನೀನು ಚಿರಂಜೀವಿಯಲ್ಲವೆಂಬದನ್ನು ಮರೆಯಬೇಡ. ಈ ನಿನ್ನ ಐಶ್ವರ್ಯ ಪ್ರತಾಪಗಳೂ ಸ್ಥಿರವಾದುವಲ್ಲ. ನಿನಗೆ ಒದಗಬಹುದಾದ ಕಷ್ಟವನ್ನು ಯೋಚಿಸಿರುವೆಯಾ? ತುಸು ದಿವಸಗಳಲ್ಲಿಯೇ ಅದನ್ನು ಕಣ್ಣಾರೆ ಕಾಣುವೆ, ಅನುಭವಿಸುವೆ. ನೀನು ಗುರ್ಜರ ಜಯದ ಜಯಸ್ತಂಭವನ್ನು ಸ್ಥಾಪಿಸುವದಕ್ಕೆ ಮುಂಚಿತವಾಗಿಯೆ ಇನ್ನೊಬ್ಬನು ಚಿತ್ತೂರುವಿಜಯದ ವಿಜಯಚಿಹ್ನವನ್ನು ಸ್ಥಾಪಿಸಿಬಿಡುವನು! ರಾಣಾ, ಆಗ ಈ ನಿನ್ನ ಆನಂದೋತ್ಸವಗಳೂ ಮನಸ್ಸಿನ ಸ್ಥಿತಿಯೂ ಎಂತಾಗಬಹುದು ?

ಅಲ್ಲಾವುದ್ದೀನನು ಗುಜರಾಥವನ್ನು ಜಯಿಸಿರುವನು; ಅಲ್ಪಕಾಲದಲ್ಲಿಯೇ ಉಳಿದ ಹಿಂದೂ ರಾಜ್ಯಗಳನ್ನೂ ಜಯಿಸುವನು. ಚಿತ್ತೂರು ಅವನ ಕೈಯೊಳಗಿಂದ ಪಾರಾಗಲಾರದು. ನೀನು ವಿರೋಧಿಯಾದ ಗುರ್ಜರ ರಾಜನ ಸಮಾಧಿಯ ಮೇಲೆ ನಿಶ್ಚಿಂತನಾಗಿ ಕುಣಿದಾಡತೊಡಗಿರುವೆ; ಕುಣಿ. ಗುರ್ಜರೇಶ್ವರನನ್ನು ಪುನಃ ತಲೆಯೆತ್ತದಂತೆ ಮಾಡಿಬಿಟ್ಟಿರುವೆನೆಂಬ ಆನಂದದಿಂದ ಉತ್ಸವಗಳನ್ನು ಮಾಡತೊಡಗಿರುವೆ; ಮಾಡು. ಆದರೆ ಈ ಆನಂದವು ಸ್ಥಿರವಾಗಿ ಉಳಿಯಲಾರದೆಂಬುದನ್ನು ಮಾತ್ರ ಮರೆಯದಿರು.

ಗುಜರಾಥವು ಇಷ್ಟು ಸುಲಭವಾಗಿ ಅಲ್ಲಾವುದ್ದೀನನ ಸ್ವಾಧೀನವಾಗಬಹುದೆಂದು ಯಾರು ತಿಳಿದಿದ್ದರು? ಇದಕ್ಕೆ ಕೇವಲ ನಿನ್ನ ಕೃಪೆಯೇ ಕಾರಣವು! ನೀನು ಆ ರೀತಿಯಾಗಿ ಗುರ್ಜರರಾಜನ ದೇಹದ ಎಲಬುಗಳನ್ನು ಮುರಿದು ನುಗ್ಗು ಮಾಡಿರದಿದ್ದರೆ ಅವನು ಈ ಯಃಕಶ್ಚಿತ್ ಪಠಾಣನಿಗೆ ಮಣಿಯುತ್ತಿದ್ದನೇ ? ಇದೇ ನಮ್ಮ ವಿರೋಧದಿಂದಲೇ ಚಿತ್ತೂರು ಸ್ವಲ್ಪ ದಿವಸಗಳಲ್ಲಿ

ಧ್ವಂಸವಾಗಿ ಹೋಗುವುದು; ಇದಕ್ಕೆ ಸಂದೇಹಬೇಡ. " ಚಿತ್ತೂರು ಹಾಳಾಗಿ ಹೋಗಲಿ!" ಎಂದು ಮನಃಪೂರ್ವಕವಾಗಿ ಶಪಿಸುತ್ತೇನೆ. ಶಾಪವು ಫಲಿಸುವುದು.

**ರಾಣಾ** ! ನಾನು ರಾಜ್ಯವನ್ನು ಕಳೆದುಕೊಂಡು ಭ್ರಾಂತನಾಗಿ ಬಾಯಿಗೆ ಬಂದಂತೆ ಪ್ರಲಪಿಸುತ್ತೇನೆಂದು ತಿಳಿಯಬೇಡ. ಈ ರಾಜ್ಯವೈಭವಗಳು ಕ್ಷಣ ಭಂಗುರವಾದುವು; ಎಷ್ಟೋ ಬರುತ್ತವೆ; ಎಷ್ಟೋ ಹೋಗುತ್ತವೆ. ಆದರೆ ಈ ಸಾರೆ ಗುರ್ಜರೇಶ್ವರನ ಒಂದು ಅಮೌಲ್ಯವಾದ ರತ್ನವನ್ನು ಪಠಾಣರು ಅಪಹರಿಸಿರುವರು. ಆ ರತ್ನವು ತಿರುಗಿ ನನ್ನ ನಿನ್ನ ಭಾಂಡಾರಕ್ಕೆ ಬರಲಾರದು. ಇಂದು ಹಿಂದೂ ರಮಣಿಯರ ಕೀರ್ತಿಮುಕುಟದೊಳಗಿನ ಒಂದು ರತ್ನವು ಉದುರಿ ಹೋಯಿತು. ಗುಜರಾಥದ ರಾಜನ ಗೃಹಲಕ್ಷ್ಮಿಯನ್ನು ಪಠಾಣನು ಅಪಹರಿಸಿಕೊಂಡು ಹೋಗಿ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡನು ! ರಾಜ್ಯಲಕ್ಷ್ಮಿಯೊಂದೇ ಹೋಗಿದ್ದರೆ ನನಗೆ ವ್ಯಸನವಾಗುತ್ತಿರಲಿಲ್ಲ, ಆದರೆ ಪಠಾಣನು ಹಿಂದೂ ರಮಣಿಯರ ಮೂಗನ್ನು ಕೊಯ್ದು ಅವರ ಕೈಗೆ ಕನ್ನಡಿಯನ್ನು ಕೊಟ್ಟನಲ್ಲಾ ! ಎಂದು ಕಳವಳಪಡುವೆನು.

**ರಾಣಾ!** ನಿನ್ನನ್ನು ನಿಂದಿಸುವುದಾಗಲಿ ನಿನ್ನ ಮೇಲೆ ದೋಷವನ್ನು ಆರೋಪಿಸುವುದಾಗಲಿ ಸದ್ಯದಲ್ಲಿ ನನಗೆ ಉದ್ದೇಶವಾಗಿಲ್ಲ. ಗಿಡವ ನೆರಳಿನಲ್ಲಿ ಬಿದ್ದು ಕಾಲಕಳೆಯಬೇಕಾಗಿರುವ ನಾನು ನಿನ್ನಂಥ ಮಹಾರಾಣನ ಮೇಲೆ ದೋಷವನ್ನು ಆರೋಪಿಸಲು ಎಷ್ಟರವನು ? ನನ್ನ ಉದ್ದೇಶವು ಬೇರೆಯೇ ಇರುವುದು. ಒಡೆದು ಹೇಳುತ್ತೇನೆ; ಕೇಳು.

ನನಗೆ ನೀನು ಹೇಗೆ ಶತ್ರುವೋ ಹಾಗೆ ಅಲ್ಲಾವುದ್ದೀನನೂ ವೈರಿಯು. ನಾನು ಈ ಉಭಯ ವಿರೋಧಿಗಳನ್ನು ಒಂದೇ ಆಘಾತದಿಂದ ನಾಶಗೊಳಿಸಲು ಯೋಚಿಸಿ ಈಗ ಆ ಕಾರ್ಯವನ್ನು ಆರಂಭಿಸಿರುವೆನು. ನಾನು ನಿಮಗೂ ಪಠಾಣರಿಗೂ ದ್ವೇಷವನ್ನುಂಟು ಮಾಡುವೆನು. ಪಠಾಣರ ಹೊಡೆತದಿಂದ ರಜಪೂತರು ನಾಶವಾಗುವರು; ಅದರಂತೆ ರಜಪೂತರಿಂದ ಪಠಾಣರು ಒಂದುವೇಳೆ ಸಂಪೂರ್ಣವಾಗಿ ನಾಶವಾಗದೆ ಇದ್ದರೂ ಹತವೀರ್ಯರಾಗುವರು; ಸರಿ. ಆ ಬಳಿಕ ನಿಸ್ತೇಜರಾದ ಶತ್ರುಗಳನ್ನು ನಾನು ಅನ್ಯೋಪಾಯದಿಂದ ಮುರಿಬಡಿಯುವೆನು. ಅಲ್ಲಾವುದ್ದೀನನು ಚಿತ್ತೂರಿನಿಂದ ಸುರಕ್ಷಿತವಾಗಿ ತಿರುಗಿ ಬರಬಾರದೆಂಬ ಉದ್ದೇಶದಿಂದಲೇ ಇಂದು ಮುಂದಾಗಿ ಈ ವಿಚಾರವನ್ನು ನಿನಗೆ ತಿಳಿಸಿ

ರುವೆನು. ಅಲ್ಲಾವುದ್ದೀನನು ತುಂಬಾ ಶೂರನಾಗಿಯೇ ಇರಬಹುದು. ಆದರೆ ನೀವು ಮೈಮರೆತು ಕುಳಿತಿರದಿದ್ದರೆ ಅವನು ನಿಮ್ಮನ್ನು ಸುಲಭವಾಗಿ ಜಯಿಸಲಾರನು; ಈ ಸಂಗತಿಯನ್ನು ನಾನು ಬಲ್ಲೆನು. ಈ ಎಲ್ಲ ಸಂಗತಿಗಳನ್ನೂ ತಿಳಿದುಕೊಂಡೇ ನಾನು ಅಲ್ಲಾವುದ್ದೀನನನ್ನು ಕರೆಯಲು ದಿಲ್ಲಿಗೆ ಹೊರಟಿರುವೆನು.

ಅಲ್ಲಾವುದ್ದೀನನು ಚಿತ್ತೂರಿನ ಮೇಲೆ ದಂಡೆತ್ತಿ ಬರುವನು; ನಿಶ್ಚಯವಾಗಿಯೂ ಚಿತ್ತೂರು ಹಾಳಾಗಿ ಹೋಗುವುದು. ಆದರೆ ರಾಣಾ, ಇನ್ನೊಂದು ಮಾತು ಹೇಳುತ್ತೇನೆ:—ಸಾಧ್ಯವಿದ್ದರೆ ಈ ಸುಸಮಯದಲ್ಲಿ ಹಿಂದೂ ಲಲನೆಯರ ಗೌರವಧ್ವಜವನ್ನು ಪುನಃ ಸ್ಥಾಪಿಸಲು ಯತ್ನಿಸು. ನೀನು ನನ್ನ ದ್ವೇಷಿಯಾದರೂ ಹಿಂದೂ ಅಬಲೆಯರು ನನ್ನ ವೈರಿಗಳಲ್ಲ; ಅವರು ನನ್ನ ಭಗಿನಿಯರು. ಆ ನನ್ನ ಭಗಿನಿಯರ ಮಾನರಕ್ಷಣೆಗಾಗಿ ನಾನು ನಿನ್ನನ್ನು ಯಾಚಿಸುವೆನು. ನಿನ್ನ ಅರಮನೆಯಲ್ಲಿಯೂ ಕಮಲೆಯಂಥ ಅಮೌಲ್ಯವಾದೊಂದು ಸ್ತ್ರೀರತ್ನವಿದೆಯೆಂದು ಕೇಳಿರುವೆನು. ಅವಳು ಮಾತ್ರ ದಿಲ್ಲಿಯ ಪಠಾಣನ ಬೇಗಮಳಾಗದಂತೆ ನೋಡಿಕೊ!

ನನ್ನ ಯಾವತ್ತು ಹಗೆ ತೀರಿಸಿಕೊಳ್ಳುವ ಇಚ್ಛೆಗಳ ಮಧ್ಯದಲ್ಲಿಯೂ ನಿನ್ನ ವಿಷಯವಾಗಿ ಒಂದು ಸದಿಚ್ಛೆಯು ಇರುವುದು. ಅಲ್ಲಾವುದ್ದೀನನು ಚಿತ್ತೂರನ್ನು ಸುಟ್ಟು ಸೂರೆಮಾಡಲಿ! ಅದರೊಡನೆ ಹಿಂದೂ ರಮಣಿಯರ ಮೇಲೆ ಬಂದ ಕಲಂಕವೂ ಬೆಂದುಹೋಗಲಿ!

ನೀನು ಆರುತಿಂಗಳು ಅಲ್ಲಾವುದ್ದೀನನನ್ನು ಚಿತ್ತೂರಿನಲ್ಲಿ ತಡೆದಿಡಬಲ್ಲೆಯಾದರೆ ನಾನು ದಿಲ್ಲಿಯ ಕಿಲ್ಲೆಯ ಕಲ್ಲುಗಳನ್ನು ಒಂದುಳಿಯದಂತೆ ಕಿತ್ತು ಬಿಸುಡಬಲ್ಲೆನು! ಇವೆಲ್ಲಾ ನಿಜವೆಂದು ನಂಬು. ತಿಲಮಾತ್ರವೂ ಸಂಶಯ ಪಡಬೇಡ. ಒಂದು ವೇಳೆ ಸಂಶಯಪಟ್ಟರೆ ಚಿತ್ತೂರು ನಾಶವಾಗುವುದು. ಪಠಾಣನು ಮಾತ್ರ ಸುರಕ್ಷಿತವಾಗಿ ತಿರುಗಿ ಹೋಗುವನು.

ಒಳ್ಳೇದು, ನಮಸ್ಕಾರ. ಒಂದುವೇಳೆ ಈ ನನ್ನ ಉದ್ದೇಶಗಳೆಲ್ಲಾ ಸಾಧಿಸಿದರೆ ಒಂದಿಲ್ಲೊಂದು ದಿನ ನಿನ್ನನ್ನು ನೋಡಲು ಬರುವೆನು. ಆಗ ನೀನು ಗುರ್ಜರೇಶ್ವರನನ್ನು ಮತ್ತೊಮ್ಮೆ ಸೋಲಿಸಿ ಪುನಃ ವಿಜಯಶಾಲಿಯಾಗಬಹುದು! ಅದು ಏನೇ ಇದ್ದರೂ ಇರಲಿ, ನೀನು ಮಾತ್ರ ಅಲ್ಲಾವುದ್ದೀನನ ವಿಷಯವಾಗಿ

ಎಚ್ಚರದಿಂದಿರು. ಅಲ್ಲಾವುದ್ದೀನನ ನಾಶಕಾರ್ಯದಲ್ಲಿ ನಾನು ನಿನಗೆ ಸಂಪೂರ್ಣ ಸಹಾಯ ಮಾಡುವೆನು."

ಕರಣರಾಯ.

ಪತ್ರವನ್ನು ಓದಿನೋಡಿ ರಾಣಾ ಲಕ್ಷ್ಮಣಸಿಂಗನು ಕೆಲವು ಹೊತ್ತಿನ ವರೆಗೆ ಸ್ತಬ್ಧನಾಗಿ ಕುಳಿತುಬಿಟ್ಟನು. ಇದೆಲ್ಲಿಯ ಅಕಲ್ಪಿತವಾದ ವಾರ್ತೆಯು! ರಾಣನ ಮುಖವು ಸಪ್ಪಗಾಯಿತು. ಕಣ್ಣುಗಳಲ್ಲಿ ನೀರು ತುಂಬಿತು. ಅವನು ನಿಟ್ಟುಸುರುಬಿಟ್ಟನು. ಅವನ ಮುಖದಿಂದ "ನಿಜವಾಗಿಯೂ ಹಿಂದೂಗಳ ಗೌರವಕ್ಕೆ ಇಂತಹ ಅವಸ್ಥೆಯೊದಗಿತೇ! ಗುಜರಾಥದ ಗತಿಯು ಹೀಗಾಗಿ ಹೋಯಿತೇ" ಎಂಬ ಉದ್ಗಾರಗಳು ಹೊರಟುವು. ರಾಣನು ಪತ್ರವನ್ನು ಮತ್ತೊಮ್ಮೆ ಓದಿ ನೋಡಿದನು. ಅವನ ಮೈಯೆಲ್ಲ ಬೆವೆತಿತು. ಗಂಡಸ್ಥಲದ ಮೇಲೆ ಬೆವರಹನಿಗಳು ಮೂಡಿದುವು. ಅವನ ಅಂತರಂಗವು ದುಃಖಸಂತಾಪಗಳಿಂದ ಕುದಿಯತೊಡಗಿತು. ಗುರ್ಜರೇಶ್ವರನು ತನಗೆ ಕಡುಹಗೆಯಾಗಿದ್ದರೂ ಅವನ ಈ ತರದ ಸಂಕಟವನ್ನು ಕೇಳಿ ರಾಣನ ಮನಸ್ಸು ಮರುಗಿತು. ನೀಚ ಪರಾಣನ ದುಷ್ಕೃತಿಯನ್ನು ಕೇಳಿ ಆ ದುಃಖವು ಸಂತಾಪವಾಗಿ ಪರಿಣಮಿಸಿತು. ಅವನಿಗೆ ಮುಂದಿನ ಕರ್ತವ್ಯವೇ ತಿಳಿಯದಾಯಿತು.

ಆಗ ರಾಣನು ತಟ್ಟನೆ ಎದ್ದು ನಿಂತು ಮನೆಯಿಂದ ಹೊರಗೆ ಬಂದನು. ಬಾಗಿಲಲ್ಲಿ ದ್ವಾರಪಾಲಕನು ಕೈಜೋಡಿಸಿಕೊಂಡು ನಿಂತಿದ್ದನು. ರಾಣನು, "ಮಂಗಲಸಿಂಹ, ಆ ದೂತನಿಗೆ ಯಥಾರೀತಿಯಾಗಿ ಆದರ ಸತ್ಕಾರಗಳನ್ನು ನಡೆಯಿಸುವಂತೆ ಅರಮನೆಯ ಅಥಿತಿಶಾಲೆಯ ಅಧಿಕಾರಿಗೆ ತಿಳಿಸು" ಎಂದು ಹೇಳುತ್ತ ನಡೆದನು. ಸ್ವಲ್ಪ ಮುಂದಕ್ಕೆ ಹೋದವನು ಪುನಃ ತಿರುಗಿ ನಿಂತು— "ಮಂಗಲಸಿಂಹ, ಈಗಲೇ ಹೋಗಿ ಈ ಹೊತ್ತಿನಿಂದ ಚಿತ್ತೂರಿನಲ್ಲಿ ಯಾರೂ ಯಾವತರದ ಆನಂದೋತ್ಸವಗಳನ್ನೂ ನಡೆಯಿಸಕೂಡದೆಂದು ಡಂಗುರ ಸಾರುವಂತೆ ನಗರ ಪಾಲಕರಿಗೆ ತಿಳಿಸು," ಎಂದು ಆಜ್ಞಾಪಿಸಿ ತನ್ನ ಕಕ್ಕ (ಚಿಕ್ಕಪ್ಪ) ನಾದ ಭೀಮಸಿಂಹನ ಮಂದಿರದ ಕಡೆಗೆ ತೀವ್ರವಾಗಿ ನಡೆದನು.

---

# ಎರಡನೆಯ ಪರಿಚ್ಛೇದ.

ರಾಣಾ ಸಮರಸಿಂಹನು ಮರಣಹೊಂದಿದಾಗ ಅವನ ಮಗನಾದ ಲಕ್ಷ್ಮಣಸಿಂಹನು. ಇನ್ನೂ ತೀರ ಚಿಕ್ಕವನಾಗಿದ್ದನು. ಸಮರಸಿಂಹನು ಮರಣೋನ್ಮುಖನಾದಾಗ ಆ ಚಿಕ್ಕ ಮಗುವನ್ನು ತನ್ನ ತಮ್ಮನಾದ ಭೀಮಸಿಂಹನ ಮಡಿಲಲ್ಲಿಟ್ಟು:- "ತಮ್ಮಾ, ಇವನು ನನ್ನ ಮಗನಲ್ಲ, ನಿನ್ನ ಮಗನು; ಇವನ ಲಾಲನಪಾಲನಗಳೂ ರಾಜ್ಯದ ಸುಖಶಾಂತಿಗಳೂ ನಿನ್ನನ್ನೇ ಕೂಡಿರುವುವು" ಎಂದು ಹೇಳಿ ಮರಣಹೊಂದಿದನು. ಅಂದಿನಿಂದ ಭೀಮಸಿಂಹನು ಮಗುವಾದ ಲಕ್ಷ್ಮಣಸಿಂಹನ ಹೆಸರಿನಿಂದ ತಾನೇ ಯಾವತ್ತು ರಾಜ್ಯಕಾರಭಾರಗಳನ್ನು ನಡೆಯಿಸುತ್ತಿದ್ದನು. ಇವನಂಥ ಜಾಣನೂ ಪ್ರತಾಪಶಾಲಿಯೂ ಬೇರೊಬ್ಬನಿರಲಿಲ್ಲ. ಮೇವಾಡದ ರಾಜ್ಯವನ್ನು ಇವನಷ್ಟು ಚೆನ್ನಾಗಿ ಬೇರೆ ಯಾರೂ ಆಳಲಿಲ್ಲ. ಪ್ರಜೆಗಳೆಲ್ಲರೂ ಭೀಮಸಿಂಹನನ್ನು ತಂದೆಯಂತೆ ಪ್ರೀತಿಸುತ್ತಿದ್ದರು; ಅರಸನಂತೆ ಕೊಂಡಾಡುತ್ತಿದ್ದರು, ದೇವರಂತೆ ಪೂಜಿಸುತ್ತಿದ್ದರು.

ಮುಂದೆ ಕೆಲಕಾಲದ ಮೇಲೆ ಪ್ರಾಯಕ್ಕೆ ಬಂದಬಳಿಕ ಲಕ್ಷ್ಮಣಸಿಂಹನು ಸಿಂಹಾಸನದ ಮೇಲೆ ಕುಳಿತನು. ಆದರೆ ಆಗಲೂ ಭೀಮಸಿಂಹನ ಅಧಿಕಾರವು ಮಾತ್ರ ಮೊದಲಿನಂತೆಯೇ ನಡೆಯುತ್ತಿತ್ತು. ಅವನ ಮಾನ-ಮರ್ಯಾದೆಗಳಿಗೂ ಯಾವ ರೀತಿಯಿಂದಲೂ ಕೊರತೆಯಾಗಲಿಲ್ಲ. ಲಕ್ಷ್ಮಣಸಿಂಹನು ಕಕ್ಕನ ಅಭಿಪ್ರಾಯವನ್ನು ಕೇಳದೆ ಯಾವ ಕಾರ್ಯವನ್ನೂ ಮಾಡುತ್ತಿರಲಿಲ್ಲ. ಯುದ್ಧಕಾಲದಲ್ಲಿ ಭೀಮಸಿಂಹನೇ ಸೇನಾಪತಿ; ರಾಜಸಭೆಯಲ್ಲಿ ಅವನೇ ಮಂತ್ರಿ; ಸಂಧಿವಿಗ್ರಹಗಳ ಯೋಜನೆಗೆ ಅವನೇ ಮುಂದಾಳು.

ಹೀಗಿದ್ದುದರಿಂದ ರಾಣನು ಇಂದು ಕರಣರಾಯನ ಪತ್ರವನ್ನು ನೋಡಿ ಮುಂದೇನು ಮಾಡಬೇಕೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಆ ಪತ್ರವನ್ನು ಕೈಯಲ್ಲಿ ಹಿಡಿದುಕೊಂಡು ಕಕ್ಕನ ಮನೆಗೆ ಬಂದನು. ಭೀಮಸಿಂಹನು ಮಗನನ್ನು ಪ್ರೀತಿಯಿಂದ ಕರೆದೊಯ್ದು ಕುಳ್ಳಿರಿಸಿಕೊಂಡನು.

ರಾಣನು ಅಕಾಲದಲ್ಲಿ ತನ್ನ ಮನೆಗೆ ಬಂದುದನ್ನು ನೋಡಿ ಭೀಮ ಸಿಂಹನು ಅವನನ್ನು ಕುರಿತು:—"ರಾಣಾಜೀ, ಏನಾದರೂ ವಿಶೇಷ ವರ್ತಮಾನ ವಿದೆಯೇ? " ಎಂದು ಕೇಳಿದನು.

**ರಾಣ:—** ಕಾಕಾಜಿಯವರೇ, ವರ್ತಮಾನವೇನೋ ಸಾಮಾನ್ಯವಾದು ದಲ್ಲ; ವಿಶೇಷ ಗದ್ದಲವುಂಟಾಗುವಂತೆ ತೋರುತ್ತದೆ. ಪುನಃ ಯುದ್ಧವು ಸಂಘಟಿ ಸುವುದು !

**ಭೀಮಸಿಂಹ:—** ಯುದ್ಧವು ಸಂಘಟಿಸುವುದೋ ? ಇದಕ್ಕೇಕೆ ಇಷ್ಟೊಂದು ಯೋಚನೆ ? ಅಂಥ ಪ್ರಸಂಗವೇ ಇದ್ದರೆ ಯುದ್ಧವನ್ನು ಮಾಡೇ ಮಾಡೋಣವಂತೆ ! ಕ್ಷತ್ರಿಯರಾಗಿ ಯುದ್ಧಕ್ಕೆ ಅಂಜಿದರೆ ಹೇಗೆ? ಆದರೆ ನಡೆದು ದಾದರೂ ಏನು ? ಹೇಳಿರಿ; ನೋಡೋಣ.

ಆಗ ರಾಣನು ಗುರ್ಜರೇಶ್ವರನ ಪತ್ರವನ್ನು ಕೈಗೆ ಕೊಟ್ಟನು. ಅದನ್ನು ಓದಿದೊಡನೆಯೇ ಭೀಮಸಿಂಹನ ಮುಖವು ಕಪ್ಪಾಯಿತು. ರಣಭೂಮಿಯಲ್ಲಿ ಎದೆಯೊಳಗೆ ವೈರಿಗಳ ಖಡ್ಗವು ನೆಟ್ಟರೂ ಹಿಂತೆಗೆಯದ ಭೀಮಸಿಂಹನ ಹೃದ ಯವು ಗುರ್ಜರೇಶ್ವರನ ಪತ್ರದೊಳಗಿನ ಒಂದೇ ಒಂದು ದೈನ್ಯವಾಣಿಯಿಂದ ಸೀಳಿ ಹೋಯಿತು ! ಅವನು:—"ಈ ಪತ್ರವನ್ನು ಯಾರು ತೆಗೆದುಕೊಂಡು ಬಂದರು!" ಎಂದು ಕೇಳಿದನು.

**ರಾಣ:—** ಒಬ್ಬ ರಾಜದೂತನು ತೆಗೆದುಕೊಂಡು ಬಂದಿರುವನು; ಅಪ್ಪಣೆ ಯಾದರೆ ಅವನನ್ನು ಇಲ್ಲಿಗೆ ಕರೆಯಿಸುವೆನು. ನಾನೂ ಅವನನ್ನು ಇನ್ನೂ ನೋಡಿಲ್ಲ.

**ಭೀಮಸಿಂಹ:—** ಒಳ್ಳೆಯದೇ ಆಯಿತು, ನಾವು ಏನು ಮಾಡಬೇಕೆಂಬು ದನ್ನು ಮೊದಲು ವಿಚಾರಮಾಡಿ ಆ ಮೇಲೆ ದೂತನನ್ನು ಕರೆಯಿಸೋಣ. ಕಮ ಲಾದೇವಿಯು ಈ ರೀತಿಯಾಗಿ ತನ್ನ ಸರ್ವಸ್ವವನ್ನೂ ನಾಶಮಾಡಿಕೊಂಡಳೇ !

**ರಾಣ:—** ಅವಳೇನು ಮಾಡುವಳು? ಪಠಾಣರು ಅವಳನ್ನು ಬಲಾತ್ಕಾರ ದಿಂದ ಅಪಹರಿಸಿಕೊಂಡು ಹೋದರು. ಈ ಸಾರೆ ಯುದ್ಧವಾದರೆ ಪಠಾಣರು ಚಿತ್ತೂರಿಗೆ ಬರುವರು; ಬರಲಿ, ನಾವೂ ಒಂದುಬಾರಿ ಅಲ್ಲಾವುದ್ದೀನನು ಎಂತಹ ನೀಚನೆಂಬುದನ್ನು ನೋಡೋಣ.

ಭೀಮಸಿಂಹನು ಸ್ವಲ್ಪ ಚಿಂತೆಗೊಳಗಾದನು. ಅವನು ಏನೋ ವಿಚಾರದಲ್ಲಿದ್ದನು. ಆ ಮೇಲೆ ಅವನು:—"ರಾಣಾಜೀ, ನನಗೆ ಕೇವಲ ಅಲ್ಲಾವುದ್ದೀನನೊಬ್ಬನೇ ಇದರಲ್ಲಿ ಅಪರಾಧಿಯಲ್ಲವೆಂದು ತೋರುತ್ತಿದೆ. ಇದರಲ್ಲಿ ಏನೋ ಒಂದು ಕುಹಕ ವ್ಯಾಪಾರವು ನಡೆದಿರಬೇಕು. ಅಲ್ಲಾವುದ್ದೀನನು ಏನುಮಾಡುತ್ತಿದ್ದನು ? ಅವನು ಗುಜರಾಥವನ್ನು ಜಯಿಸಿದನು, ಜಯಿಸಲಿ; ರಾಜ್ಯವನ್ನು ಸುಟ್ಟು ಸೂರೆ ಮಾಡಲಿ. ಆದರೆ ತನ್ನ ಸತೀಧರ್ಮವನ್ನು ಕಾಯ್ದುಕೊಳ್ಳುವುದು ಕಮಲಾದೇವಿಯ ಕೈಯಲ್ಲಿಯೇ ಇತ್ತಷ್ಟೇ ? " ಎಂದನು.

**ರಾಣ:**— ಕಾಕಾಜೀ, ನೀಚ ಪಠಾಣನ ಕೈಯಲ್ಲಿ ಸೆರೆಸಿಕ್ಕ ಬಳಿಕ ಅಬಲೆ ಕಮಲಾದೇವಿಯು ಏನು ತಾನೇ ಮಾಡಬಲ್ಲಳು ? ಹೆಚ್ಚೆಂದರೆ ಆತ್ಮಹತ್ಯೆ—ಪಾಪ ! ಯಾರು ಏನು ಹೇಳಿದರೂ ಕಮಲಾದೇವಿಯು ಆ ನೀಚ ಪಠಾಣನ ರೌದ್ರಸೌಂದರ್ಯಕ್ಕೆ ಮೋಹಿತಳಾಗಿರಬಹುದೆಂದು ನಾನು ಒಮ್ಮೆಲೆ ನಂಬಲಾರೆನು.

**ಭೀಮಸಿಂಹ**—ಇಲ್ಲ; ನಾನೂ ಆ ಮಾತನ್ನು ನಂಬುವುದಿಲ್ಲ. ಹಿಂದೂಗಳ ಪೂರ್ವಸಂಸ್ಕಾರ, ಧರ್ಮ, ಕರ್ಮ ಇವೆಲ್ಲಾ ಒಂದೆರಡು ದಿನಗಳಲ್ಲಿಯೇ ಎಂದೂ ಲೋಪವಾಗಿ ಹೋಗಲಾರವು. ಕಮಲಾದೇವಿಯು ಪಾಪಿಷ್ಠಳೆಂಬಂತೆ ತೋರಿದರೂ ಈಪಾಪವು ಬಹುದಿನಗಳಿಂದಲೂ ಸಂಚಿತವಾಗಿರಬೇಕೆಂದು ನನಗೆ ತೋರುತ್ತದೆ. ಆನೀಚ **ಮತಿಯಾ** ದಾಸಿಯು ಬಹುದಿನಗಳಿಂದಲೂ ಪ್ರಯತ್ನಮಾಡಿ ಅವಳ ಅಂತರಂಗವನ್ನು ಕೆಡಿಸಿರಬೇಕು

ರಾಣನ ಮುಖದ ಮೇಲಿನ ವ್ಯಸನದ ಮತ್ತು ಉದ್ವೇಗದ ಛಾಯೆಯು ಅಡಗಿತು; ಕೂಡಲೆ ಅದರ ಸ್ಥಳವನ್ನು ಆಶ್ಚರ್ಯಭಾವನೆಯು ವ್ಯಾಪಿಸಿಕೊಂಡಿತು. ಆಗ ರಾಣನುಃ— "ಆದದ್ದಂತೂ ಆಯಿತು, ಆದರೆ ಮುಂದಿನ ವಿಚಾರವೇನು" ಎಂದು ಕೇಳಿದನು

ಭೀಮಸಿಂಹನು ಎದ್ದುನಿಂತು, 'ಒಳಕ್ಕೆ ನಡೆಯಿರಿ, ಹೇಳುತ್ತೇನೆ. ಬಹುದಿನಗಳಿಂದಲೂ ನನ್ನ ಮನಸ್ಸಿನಲ್ಲಿ ಕೆಲವು ವಿಚಾರಗಳು ಇದ್ದೇ ಇದ್ದುವು. ಇಂದು ಅವನ್ನೆಲ್ಲ ಹೇಳಿಬಿಡುವೆನು.' ಎಂದು ಹೇಳುತ್ತ ರಾಣನನ್ನು ಕರೆದುಕೊಂಡು ಮತ್ತೊಂದು ಕೊಠಡಿಯನ್ನು ಪ್ರವೇಶಿಸಿದನು.

# ಮೂರನೆಯ ಪರಿಚ್ಛೇದ.

ಅದೇ ದಿನ ರಾತ್ರಿಯಲ್ಲಿ ಚಿತ್ತೂರು ದುರ್ಗದೊಳಗಿನ ಅಮೃತಶಿಲೆಯಿಂದ ಕಟ್ಟಿದ ಸುಂದರವಾದೊಂದು ಮಂದಿರದ ಮಾಳಿಗೆಯ ಮೇಲೆ ಅತ್ಯಂತ ಲಾವಣ್ಯವತಿಯಾದ ರಮಣಿಯೊಬ್ಬಳು ನಿಂತುಕೊಂಡು ಆಕಾಶದ ಕಡೆಗೆ ನೋಡುತ್ತಲಿದ್ದಳು.

ಅಂದಿನ ಮನೋಹರವಾದ ಬೆಳದಿಂಗಳಿನಲ್ಲಿ ಸೃಷ್ಟಿಯೇ ನಗುತ್ತಿದ್ದಂತೆ ಭಾಸವಾಗುತ್ತಿತ್ತು. ರಾತ್ರಿಯು ಬಹಳ ಹೊತ್ತಾಗಿತ್ತು; ಬಹಳ ಗಾಂಭೀರ್ಯವನ್ನುವಹಿಸಿತ್ತು. ಊರೊಳಗಿನ ಮನೆಗಳಲ್ಲಿ ಒಂದೂ ದೀಪವಿರಲಿಲ್ಲ. ಜನರೆಲ್ಲರೂ ನಿದ್ರೆಗೈದಿದ್ದರು. ದೂರದಲ್ಲಿ ದುರ್ಗದ ಶಿಖರದ ಬಳಿಯಲ್ಲಿದ್ದ ದೀಪವೊಂದು ಆಕಾಶದೊಳಗಿನ ಅನೇಕ ತಾರೆಗಳೊಂದಿಗೆ ಕೂಡಿಕೊಂಡು “ಮಿಣಿಮಿಣಿ” ಮಿಣಿಗುಟ್ಟುತ್ತಿತ್ತು, ರಾಜಮಾರ್ಗಗಳಲ್ಲಿ ಅಲ್ಲೊಂದು ಇಲ್ಲೊಂದು ದೀಪಗಳು ಬೆಳದಿಂಗಳಿನಿಂದ ಮಲಿನವಾಗಿ ಹೋಗಿ ಕಂಡೂ ಕಾಣಿಸದಂತಿದ್ದುವು.

ಇಂಥ ಸಮಯದಲ್ಲಿ ಭವ್ಯಾಕಾರದ ಪುರುಷನೊಬ್ಬನು ಮೆಲ್ಲಮೆಲ್ಲನೆ ಬಂದು ಆ ರಮಣಿಯ ಹಿಂಭಾಗದಲ್ಲಿ ನಿಂತುಕೊಂಡನು. ಅವನು ಬೆಳದಿಂಗಳಿನೊಡನೆ ಸಮ್ಮಿಶ್ರವಾಗಿ ಹೋಗಿದ್ದ ಆ ರಮಣಿಯ ಮೈಕಾಂತಿಯನ್ನೂ ರೂಪರಾಶಿಯನ್ನೂ ಎಷ್ಟೋ ಹೊತ್ತಿನವರೆಗೆ ನಿರೀಕ್ಷಿಸುತ್ತಲಿದ್ದನು. ಅವಳು ಆ ಕಾಲದ ಮನೋಹರವಾದ ಸೃಷ್ಟಿಯ ಸೌಂದರ್ಯವನ್ನು ನಿರೀಕ್ಷಿಸುವುದರಲ್ಲಿ ಮಗ್ನಳಾಗಿ ಹೋಗಿದ್ದುದರಿಂದ ಆಕೆಗೆ ಅವನು ಕಾಣಿಸಲಿಲ್ಲ ದೂರದಲ್ಲಿದ್ದ ಆರಾವಲೀ ಪರ್ವತದ ಭವ್ಯವಾದ ಕಮ್ಮೈಯ ಮೇಲ್ಗಡೆಯಲ್ಲಿ ಅದಕ್ಕಿಂತಲೂ ಅಂಧಕಾರಮಯವಾದ ಮಹಾ ಮೇಘವೊಂದು ತೇಲಿ ಬರುತ್ತಲಿತ್ತು. ರಮಣಿಯು ಅದನ್ನು ನಿರೀಕ್ಷಿಸುತ್ತಲಿದ್ದಳು.

ಪೂರ್ವೋಕ್ತಪುರುಷನು ಬಹಳ ಹೊತ್ತಿನವರೆಗೆ ಹಾಗೆಯೇ ನಿಂತಿದ್ದನು; ಆದರೂ ಆ ರಮಣಿಯು ಅವನ ಕಡೆಗೆ ತಿರುಗಿ ನೋಡುವ ಲಕ್ಷಣ ತೋರಲಿಲ್ಲ. ಅದರಿಂದ ಅವನು ಬೇಸತ್ತು, ಒಮ್ಮಿಂದೊಮ್ಮೆ ಮುಂಬರಿದು ಹೋಗಿ ಅವಳ

ಕೈಗಳನ್ನು ಹಿಡಿದುಕೊಂಡು,—"ಪದ್ಮಿನೀ, ಏನು ನೋಡುತ್ತೀಯೆ ?" ಎಂದು ಕೇಳಿದನು.

ಆಗ ರಮಣಿಯು ತಿರುಗಿ ನೋಡಿದಳು. ತನ್ನ ಸುಂದರವಾದ, ಆಕರ್ಣಾಂತವಿಸ್ತೃತವಾದ ಕಣ್ಣುಗಳ ದೃಷ್ಟಿಯನ್ನು ಸ್ವಲ್ಪ ಮೇಲಕ್ಕೇರಿಸಿ ಅನಿಮಿಷನೇತ್ರೆಯಾಗಿ ಕ್ಷಣಕಾಲದವರೆಗೆ ಅವನ ಮುಖವನ್ನು ನೋಡುತ್ತ ನಿಂತುಕೊಂಡಳು. ತರುವಾಯ ಮುಖವನ್ನು ತಿರುಗಿಸಿ ಆರಾವಲೀ ಪರ್ವತದ ಮೇಲ್ಭಾಗದಲ್ಲಿ ಏರಿಬರುತ್ತಲಿರುವ ಮೇಘರಾಶಿಯನ್ನು ನೋಡುತ್ತ—ಅಹಹ! ಎಂಥ ಕಾರ್ಮುಗಿಲು!" ಎಂದಳು.

ಇದನ್ನು ಕೇಳಿ ಆ ಪುರುಷನು ದೀರ್ಘವಾದೊಂದು ನಿಟ್ಟುಸುರು ಬಿಟ್ಟು 'ಪದ್ಮಿನೀ' ಭರತಖಂಡದ ಆನಂದಾಕಾಶದಲ್ಲಿಯೂ ಇಂಥದೇ ಒಂದು ಕಾರ್ಮೋಡವು ಎದ್ದಿರುವುದು; ಅದೂ ಹೀಗೆಯೇ ದಿನದಿನಕ್ಕೆ ಬೆಳೆಯುತ್ತ ನಡೆದಿರುವುದು!" ಎಂದನು.

ರಮಣಿಯು ವಿಸ್ಮಯಂಗೊಂಡು ಪುರುಷನ ಮುಖವನ್ನು ನೋಡತೊಡಗಿದಳು. ಕ್ಷಣಕಾಲದ ಮೇಲೆ ಅವಳು:—"ಹೀಗೇಕೆ ಅವಲಕ್ಷಣದ ಮಾತಾಡುವಿರಿ?" ಎಂದಳು.

ಪುರುಷನು ಪುನಃ ನಿಟ್ಟುಸುರುಬಿಟ್ಟು:—"ಅವಲಕ್ಷಣವಾಗಿದ್ದರೂ ಸತ್ಯವಾದ ಮಾತನ್ನೇ ಹೇಳಿದೆನು, ಪದ್ಮಿನೀ! ಅಲ್ಲಾವುದ್ದೀನನು ದಿನದಿನಕ್ಕೆ ಪ್ರಬಲನಾಗುತ್ತ ನಡೆದಿರುವನು ಅವನು ಗುಜರಾಥವನ್ನು ಜಯಿಸಿದನು'" ಎಂದನು.

"ಹಾ! ಗುರ್ಜರೇಶ್ವರನು ನಿಜವಾಗಿಯೂ ದೈವಗೇಡಿಯು! ಚಿತ್ತೂರಿನವರ ಕೈಯಲ್ಲಿ ಸಿಲುಕಿ ಅಂದು ಆ ರೀತಿಯಾಗಿ ನುಗ್ಗಾಗಿದ್ದನು. ಇಂದು ಪುನಃ ಪರಾಣರ ಕೈಗೆ ಸಿಲುಕಿದನೇ!" ಎಂದು ಹೇಳುತ್ತ ಪದ್ಮಿನಿಯೂ ನಿಟ್ಟುಸುರುಗರೆದಳು

**ಭೀಮಸಿಂಹ**:—ನಿಜವಾಗಿ ನೋಡಿದರೆ ಇದರಲ್ಲಿ ನಾವೇ ಅಪರಾಧಿಗಳು. ಗುರ್ಜರೇಶ್ವರನನ್ನು ಯಾರು ಇಷ್ಟೊಂದು ಶಕ್ತಿಹೀನನನ್ನಾಗಿ ಮಾಡಿದರು? ಚಿತ್ತೂರು ಈ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಹೊಂದಲೇಬೇಕಾಗುವುದು. ಕರಣರಾಯನೂ ಇಂದು ಅದನ್ನೇ ತಿಳಿಸಿರುವನು.

"ಕರಣರಾಯ! ಗುರ್ಜರಾಧಿಪತಿಯಾದ ಕರಣರಾಯನ ವಿಚಾರವೇನು? ಅವನು ಈಗೆಲ್ಲಿರುವನು?" ಎಂದು ಪದ್ಮಿನಿಯು ಹುಬ್ಬುಗಳನ್ನೇರಿಸಿ ಕೇಳಿದಳು.

**ಭೀಮಸಿಂಹ:** —ಅವನು ಇಷ್ಟುಹೊತ್ತಿಗೆ ದಿಲ್ಲಿಗೆ ಹೋಗಿ ಮುಟ್ಟಿರ ಬಹುದು. ಈ ಹೊತ್ತು ಮುಂಜಾವದಲ್ಲಿ ಒಬ್ಬ ದೂತನು ಪತ್ರವನ್ನು ತೆಗೆದು ಕೊಂಡು ಇಲ್ಲಿಗೆ ಬಂದಿರುವನು. ಆ ಪತ್ರದಲ್ಲಿ ಕರಣರಾಯನು ಎಲ್ಲವನ್ನೂ ಬರೆ ದಿರುವನು. ಅದರಲ್ಲಿ ಇನ್ನೂ ಅನೇಕ ಭಯಂಕರವಾದ ಸಂಗತಿಗಳಿರುವವು. ಪದ್ಮಿನೀ, ನೀನು ಅವನ್ನೆಲ್ಲ ಕೇಳಬಾರದು. ಕೇಳಿದರೆ ನಿನಗೂ ನಾಚಿಕೆ ಬಂದೀ ತು. ಹಿಂದೂ ರಮಣಿಯರ ಮುಖಕ್ಕೆ ಮಸಿಯು ಹತ್ತಿರುವುದು.

ಪದ್ಮಿನಿಯು ದಂಗುಬಡಿದು ನಿಂತಳು. ಮತ್ತು “ ನಿಮ್ಮ ಮಾತುಗಳನ್ನು ಕೇಳಿದರೆ ಮನಸ್ಸಿನಲ್ಲಿ ಅನೇಕ ಸಂಶಯಗಳು ಉಂಟಾಗುವವು ಗುರ್ಜರೇಶ್ವರನು ಅಲ್ಲಾವುದ್ದೀನನ ದಾಸ್ಯವನ್ನು ಒಪ್ಪಿಕೊಂಡನೇನು ? ಅವನ ಕಾಲೊತ್ತುವುದ ಕ್ಕೆಂದು ದಿಲ್ಲಿಗೆ ಹೋದನೇನು? ಅಥವಾ ಅವನು ಸೆರೆಯಾಳಾದನೇ? ಅಲ್ಲಾವುದ್ದೀ ನನು ಅವನನ್ನು ಪಂಜರದಲ್ಲಿ ಹಾಕಿಕೊಂಡು ದಿಲ್ಲಿಗೆ ಒಯ್ದಂತೆ ಕಾಣುತ್ತದೆ. ಏನಾಯಿತು ? ಬೇಗನೆ ಹೇಳಿರಿ, ನನ್ನ ಮನಸ್ಸು ಆತುರಪಡುತ್ತಿರುವುದು. ” ಎಂದಳು.

**ಭೀಮಸಿಂಹನು** ಮುಗುಳ್ನಗೆ ನಕ್ಕು —“ ಪದ್ಮಿನೀ, ಸಮಾಧಾನ ತಾಳು. ಹೀಗೆ ಅವಸರ ಮಾಡಬೇಡ. ಕರಣರಾಯನು ದಿಲ್ಲೀಶ್ವರನ ದಾಸ್ಯವನ್ನು ಸ್ವೀಕರಿಸಿಲ್ಲ. ಆದರೆ ಅವನ ಪತ್ನಿ ಕಮಲಾದೇವಿಯು ಆ ಕಾರ್ಯವನ್ನು ಆನಂದದಿಂದ ಒಪ್ಪಿಕೊಂಡಳು ! ದಿಲ್ಲೀಶ್ವರನು ಅವಳನ್ನು ತನ್ನ ಮೋಹಪಾಶ ದಿಂದ ಬಂಧಿಸಿಕೊಂಡು ಒಯ್ದುಬಿಟ್ಟನು. ” ಎಂದನು.

ಪದ್ಮಿನಿಯ ಎದೆಯು “ಧಕ್‌ಧಕ್” ಎಂದು ಹಾರಲಾರಂಭಿಸಿತು. ಕೈಕಾ ಲುಗಳು ಥರಥರನೆ ನಡುಗಹತ್ತಿದುವು. ಎಂಥ ಅಘಟಿತವಾದ ಘಟನೆಯಿದು ! ಪದ್ಮಿನಿಯು ಇಂತಹ ವಿಚಾರವನ್ನು ಕನಸಿನಲ್ಲಿಯೂ ಭಾವಿಸಿರಲಿಲ್ಲ ಈ ಮಾತು ಸಂಭವನೀಯವೇ ? ಪದ್ಮಿನಿಗೆ ಜಗತ್ತಿನ ಪ್ರಳಯವೇ ಸಂಭವಿಸಿದಂತೆ ಭಾಸವಾ ಯಿತು ! ಅವಳ ಚಿತ್ತಕ್ಕೆ ಭ್ರಮೆಬಂದಂತಾಗಿ, ತಾನು ನಿಂತಿದ್ದ ಮಂದಿರವು ಆಂ ದೋಲನ ಮಾಡುತ್ತಿದ್ದಂತೆ ತೋರಿತು ಅವಳಿಗೆ ಅದೇನು ಸ್ವಪ್ನವೋ ಅಥವಾ ಭ್ರಮೆಯೋ ಯಾವುದೂ ತಿಳಿಯಲಿಲ್ಲ ! ಅವಳ ದೇಹವು ಅವಸನ್ನವಾಗುತ್ತ ಬಂದಿತು! ಶ್ವಾಸೋಛ್ವಾಸಗಳು ಕುಂದುತ್ತ ಬಂದುವು. ಅವಳು ಬೀಳುವಂತಾ ದಳು. ಭೀಮಸಿಂಹನು ಅವಳನ್ನು ಹಿಡಿದುಕುಳ್ಳಿರಿಸಿದನು. “ ಹಿಂದೂ ರಮ

ಣಿಯ ಅಂತರಂಗವು ಹೀಗಾಯಿತೇ ! ಕಮಲಾದೇವಿಯ ಹೃದಯದಲ್ಲಿ ಇಂಥ ವಿಷವು ವಾಸವಾಗಿದ್ದಿತೇ? ಹೀಗಾದ ಮೇಲೆ ಜಗತ್ತಿನಲ್ಲಿ ಏನು ತಾನೇ ಅಸಂಭವ?" ಎಂದು ಪದ್ಮಿನಿಯು ಕನವರಿಸಿದಳು.

ಭೀಮಸಿಂಹನು ಪದ್ಮಿನಿಯ ಮನಸ್ಸಿನ ಸ್ಥಿತಿಯನ್ನು ತಿಳಿದುಕೊಂಡು:— "ಪದ್ಮಿನೀ, ನಡೆ. ಕೆಳಗೆ ಹೋಗೋಣ. ಮಳೆ ಬರುವಂತೆ ತೋರುತ್ತದೆ. ಈಗ ಈ ರೀತಿಯಾಗಿ ಇಲ್ಲಿ ಕುಳಿತುಕೊಂಡರೆ ಏನು ಮಾಡಿದ ಹಾಗಾಯಿತು ? ಅಂತ ರಂಗದಲ್ಲಿ ಧೈರ್ಯವನ್ನು ಹಿಡಿ. ಇನ್ನೂ ಅನೇಕ ಸಂಗತಿಗಳಿರುವುವು ಏಳು. ನನ್ನ ಕೈಹಿಡಿದುಕೋ" ಎಂದು ಹೇಳುತ್ತ ಪದ್ಮಿನಿಯನ್ನು ಎಬ್ಬಿಸಹೋದನು.

ಪದ್ಮಿನಿಯೂ ಪತಿಯ ಕೈಯನ್ನು ಹಿಡಿದುಕೊಂಡು ಎದ್ದುನಿಂತಳು. ಅಷ್ಟ ರಲ್ಲಿ ಹಿಂದೆ ಹೇಳಿದ ಕಾರ್ಮೋಡವು ಕ್ರಮವಾಗಿ ಬೆಳೆಬೆಳೆದು ಆಕಾಶಮಂಡಲ ವನ್ನೆಲ್ಲ ವ್ಯಾಪಿಸಿಕೊಂಡು ಸಕಲ ತಾರಕಾಪುಂಜಗಳನ್ನೂ ಜಗದಾನಂದಜನಕ ನಾದ ಚಂದ್ರನನ್ನೂ ಮುಚ್ಚಿಬಿಟ್ಟಿತ್ತು. ಘೋರವಾದ ಅಂಧಕಾರವು ನಾಲ್ಕೂ ದಿಕ್ಕುಗಳಿಂದ ಮುಸುಕಿ ಜಗತ್ತನ್ನೇ ಅಡಿಗಿಸಿಬಿಟ್ಟಿತ್ತು ! ಪದ್ಮಿನಿಯು ಇದನ್ನೆಲ್ಲ ನೋಡಿ "ಈಗ ಒಂದೇ ಒಂದು ಗಳಿಗೆಯ ಮೊದಲಿದ್ದ ಆ ಬೆಳದಿಂಗಳು, ಆ ತಾರಕಾವಳಿ, ಆ ಮನೋಹರವಾದ ಸೃಷ್ಟಿಸೌಂದರ್ಯ ಇವೆಲ್ಲ ಏನಾಗಿ ಹೋ ದುವು? ಚಂಚಲವಾದ ಈಜಗತ್ತಿನಸ್ಥಿತಿಯೇ ಹೀಗೆಂದು ತೋರುತ್ತದೆ!" ಎಂದಳು.

ಆ ಬಳಿಕ ಪದ್ಮಿನಿಯೂ ಭೀಮಸಿಂಹನೂ ಸಾವಕಾಶವಾಗಿ ಕೆಳಗಿಳಿದು ಹೋದರು. ಭಯಂಕರವಾದೊಂದು ಗಾಳಿಯು ಭರ್ರನೆ ಬೀಸಿ ಅವರು ಪ್ರವೇಶಿ ಸುತ್ತಲಿದ್ದ ಮಂದಿರದ ಬಾಗಿಲು ಕಿಟಕಿಗಳ ಕದಗಳನ್ನು ದಡಬಡನೆ ಬಡಿದು ನಡುಗಿಸಿಬಿಟ್ಟಿತು.

ಭೀಮಸಿಂಹನೂ ಪದ್ಮಿನಿಯೂ ಏನೋ ಒಂದು ಬಗೆಯ ಭೀತಿಗೆ ಒಳ ಗಾಗಿ ಕ್ಷಣಹೊತ್ತು ಬೆಪ್ಪಾಗಿ ನಿಂತುಬಿಟ್ಟರು.

# ನಾಲ್ಕನೆಯ ಪರಿಚ್ಛೇದ.

ಕೊಳಗಡೆಗೆ ಮನೋಹರವಾದೊಂದು ಚಿಕ್ಕಮನೆಯಿತ್ತು; ಅದರೊಳಗೆ ಹಸ್ತಿದಂತದಿಂದಲೂ ಬೆಳ್ಳಿ ಬಂಗಾರಗಳಿಂದಲೂ ಮಾಡಿದ ಅನೇಕ ಪೀಠಗಳನ್ನು ಅಲ್ಲಲ್ಲಿಗೆ ವ್ಯವಸ್ಥಿತವಾಗಿ ಇಟ್ಟಿದ್ದರು. ಮೇಜಿನ ಮೇಲೆ ಪುಷ್ಪ ಪಾತ್ರೆಯಲ್ಲಿ ನಾನಾತರದ ಹೂಗಳು ಗಮಗಮಿಸುತ್ತಿದ್ದುವು. ಹತ್ತರದಲ್ಲಿಯೇ ಸುಂದರವಾದೊಂದು ಬಂಗಾರದ ದೀಪಸ್ತಂಭದಲ್ಲಿ ದೀಪವು ಸುಗಂಧದ ತೈಲದಿಂದ ಜ್ವಲಿಸುತ್ತಲಿತ್ತು. ಭೀಮಸಿಂಹನು ಒಳಗೆ ಬಂದಕೂಡಲೆ ಆ ದೀಪದ ಬತ್ತಿಯನ್ನು ಮುಂದಕ್ಕೆ ಚಾಚಿ, ಮತ್ತಿಷ್ಟು ಬೆಳಕು ಮಾಡಿದನು. ಆದರೆ ಆ ದೀಪದ ಕಾಂತಿಯಿಂದಲೂ ಪದ್ಮಿನಿಯ ಮುಖಕಾಂತಿಯು ಬೆಳಗಲಿಲ್ಲ.

ಭೀಮಸಿಂಹನು ಒಂದು ಕಿಟಕಿಯ ಬಳಿಗೆ ಹೋಗಿ ಅಲ್ಲಿದ್ದ ಆಸನವನ್ನು ಎಳೆದುಕೊಂಡು ಅದರ ಮೇಲೆ ಕುಳಿತುಕೊಂಡನು. ಪದ್ಮಿನಿಯೂ ಅವನ ಬಳಿಯಲ್ಲಿಯೇ ಕುಳಿತಳು. ಬಳಿಕ ಭೀಮಸಿಂಹನು ಗುರ್ಜರೇಶ್ವರನ ದೂತನು ಹೇಳಿದ ಎಲ್ಲ ವಿಚಾರಗಳನ್ನೂ ಆತನು ತಂದಿದ್ದ ಪತ್ರದೊಳಗಿನ ಸಂಗತಿಗಳನ್ನೂ ಒಂದೂ ಉಳಿಯದಂತೆ ಪದ್ಮಿನಿಗೆ ಹೇಳತೊಡಗಿದನು. ಅದನ್ನು ಹೇಳಹೇಳುತ್ತ ಅವನು:—"ಪದ್ಮಿನೀ, ನೀನೂ ಒಂದು ದಿನ ಅಲ್ಲಾವುದ್ದೀನನ ಬೇಗಮಳಾಗಬೇಕಾಗುವುದು ! ಅವನು ನಿನ್ನ ಸಲುವಾಗಿಯೇ ಇಷ್ಟೆಲ್ಲ ಸಿದ್ಧತೆಯನ್ನು ನಡೆಯಿಸಿರುವನಂತೆ, ಕಮಲಾದೇವಿಯಂತೆ ನೀನೂ ಪಠಾಣರಾಜನ ಬಲಭಾಗದಲ್ಲಿ ಕುಳಿತು ರಾಜರಾಜೇಶ್ವರಿಯಾಗಿ ವಿರಾಜಿಸಬಹುದು !..."

ಎಂಥ ಕ್ರೂರವಾದ ರೂಪವದು ! ಪದ್ಮಿನಿಯ ಮುಖವು ಕೆಂಪಡರಿತು. ಅವಳು:—"ಚಿತ್ತೂರಿಗೆ ಬಂದರೆ ಅಲ್ಲಾವುದ್ದೀನನು ಈ ಸಾರೆ ಅಸಾಧಾರಣವಾದೊಂದು ನೀತಿಯನ್ನು ಕಲಿತುಕೊಂಡು ಹೋಗುವನು. ಭರತಖಂಡದಲ್ಲಿ ಎಲ್ಲರೂ ಕರಣರಾಯ ಕಮಲಾದೇವಿಯರೇ ಅಲ್ಲವೆಂಬುದನ್ನು ನಾವು ಅವನಿಗೆ ಮನಗಾಣಿಸಿಕೊಡುವೆವು. ಈಸಲ ನಾವು ಕಮಲೆಯ ಅಪಮಾನದ ಮುಯ್ಯಿ ತೀರಿಸಿಕೊಳ್ಳದೆ ಎಂದೂ ಬಿಡಲಿಕ್ಕಿಲ್ಲ ! " ಎಂದಳು.

ಭೀಮಸಿಂಹನು ಈ ಮಾತಿಗೆ ಏನೂ ಉತ್ತರ ಹೇಳಲಿಲ್ಲ. ಅವನು ಬೇರೊಂದು ವಿಚಾರವನ್ನು ಮಾಡುತ್ತಿದ್ದನು. ಅವನ ಮನಸ್ಸಿನಲ್ಲಿ ಒಂದೊಂದೇ ಹೊಸ ಯೋಚನೆಗಳು ಜಾಗ್ರತೆಹೊಂದುತ್ತಲಿದ್ದುವು. ಅವನ ಅಂತರಂಗದಲ್ಲಿಯೂ ಒಮ್ಮೆ ಈ ವಿಚಾರವು ಬಂದಿತ್ತು. ಅವನು:-"ಪದ್ಮಿನೀ, ನಿನಗೆ ಕಮಲಾದೇವಿಯ ದಾಸಿಯಾದ ಆ **ಮತಿಯಾಳ** ನೆನಪಿದೆಯೇ? ಇಂದಿಗೆ ಆರು ವರುಷಗಳ ಮೊದಲು ನಾವು ಕಮಲಾದೇವಿಯನ್ನು ನೋಡಿಕೊಂಡುಬರಲು ಹೋದಾಗ ಅವಳ ಸಂಗಡ ಇದ್ದಳಲ್ಲವೇ ? ಆಗ ನೀನು ಕಮಲೆಯ ಬಳಿಯಲ್ಲಿ ಮುಸಲ್ಮಾನ ದಾಸಿಯು ಇರುವುದನ್ನು ನೋಡಿ ಆಶ್ಚರ್ಯಚಕಿತಳಾಗಿದ್ದೆ. ಅದೇ **ಮತಿಯಾಳೇ** ಇಷ್ಟೆಲ್ಲ ಅನರ್ಥಕ್ಕೆ ಕಾರಣಳಾದವಳಂತೆ ತೋರುವುದು !" ಎಂದನು.

ಪದ್ಮಿನಿಯು ಆಶ್ಚರ್ಯವಿಸ್ಮಯಗಳಿಂದ:—ಆ ದಾಸಿಯನ್ನು ನೋಡಿಯೇ ನಾನು ಕಮಲೆಗೆ "ಕಮಲೇ, ಈ ವ್ಲೇಂಛಳ ಸಹವಾಸದಿಂದ ನೀನು ಹಾಳಾಗಿ ಹೋಗುವೆ." ಎಂದು ಹೇಳಿದ್ದೆನು. ಆ ನನ್ನ ಭವಿಷ್ಯದ್ವಾಣಿಯೇ ಫಲಿಸಿತೆಂದು ತೋರುತ್ತದೆ " ಎಂದಳು.

**ಭೀಮಸಿಂಹ:**-ಆಶ್ಚರ್ಯವೇನು? ಆ ದಾಸಿಯ ರೂಪಲಾವಣ್ಯಗಳನ್ನೂ, ಒನಪುವೈಯಾರಗಳನ್ನೂ ಅರಮನೆಯೊಳಗಿನ ಅವಳ ಅಧಿಕಾರ ವೈಭವಗಳನ್ನೂ, ನೋಡಿ, ಇವಳಿಂದಲೇ ಗುರ್ಜರೇಶ್ವರನು ಒಂದಿಲ್ಲೊಂದು ದಿನ ಅಧಃಪತಿತನಾಗಬಹುದೆಂದು ನಾನೂ ಯೋಚಿಸಿದ್ದೆನು. ಆದರೆ ವ್ಯಾಪಾರವು ಈ ರೀತಿಯಾಗಿ ಘಟಿಸಬಹುದೆಂದು ಮಾತ್ರ ಯಾರೂ ಯೋಚಿಸಿರಲಿಲ್ಲ.

**ಪದ್ಮಿನಿ:**—ನಾನೂ ತಿಳಿದಿರಲಿಲ್ಲ. ತಾವು ಮನಸ್ಸಿನಲ್ಲಿ ಗುರ್ಜರೇಶ್ವರನು ಅವಳ ಆ ಸೌಂದರ್ಯದಿಂದ ಪತಿತನಾಗಿ ಹೋಗಬಹುದೆಂದು ಯೋಚಿಸಿದಂತೆ ನಾನೂ ತಿಳಿದಿದ್ದೆನು. ಆದರೆ ಈಗ ಏನೇನು ನಡೆದುವಂತೆ ?

**ಭೀಮಸಿಂಹ:**-ಇನ್ನೇನು ಆಗುವುದು?-ಕಮಲೆಯು ಪತಿಯನ್ನು ಪತಿತನಾಗಗೊಡಲಿಲ್ಲ; ತಾನೇ ಆ ಪಾಪಪಂಕದಲ್ಲಿ ಧುಮ್ಮಿಕ್ಕಿದಳು. ಆ ಮತಿಯಾಳೇ ಕಮಲೆಯ ಕೈಯನ್ನು ಹಿಡಿದುಕೊಂಡು ನರಕದ ಮಾರ್ಗದಲ್ಲಿ ಮುಂಬರಿದಳು !

ಪದ್ಮಿನಿಯ ಮುಖದಿಂದ ಮಾತುಗಳು ಸರಿಯಾಗಿ ಹೊರಡಲಿಲ್ಲ. ಅವಳು ಅಸ್ಫುಟವಾದ ಸ್ವರದಿಂದ ಹೇಗೆಹೇಗೋ ಮಾತಾಡತೊಡಗಿದಳು:—" ಸರಳೆ

ಹೃದಯದವಳೂ ಸುಶೀಲಳೂ ಕುಸುಮಕೋಮಲೆಯೂ ಆದ ಆ ನನ್ನ ಕಮಲೆಯಿಂದ ಇಂಥ ಅಪರಾಧವು ಘಟಿಸಿತೇ ? ಯಾಕೋ ನನ್ನ ಮನಸ್ಸಿಗೆ ಈ ಮಾತು ಸರಿಯೆನಿಸುವದಿಲ್ಲ. ”

ಭೀಮಸಿಂಹನು ಪದ್ಮಿನಿಯ ಕೈಯನ್ನು ಹಿಡಿದೆಳೆದು, ಕೋಮಲವಾದ ಸ್ವರದಿಂದ—“ಪದ್ಮಿನೀ ! ನಿನಗೆ ಇನ್ನೂ ಗೊತ್ತಿಲ್ಲ. ಸರಳಸ್ವಭಾವದ ಅಬಲೆಯರು ಕುಹಕರ ಕುಹಕ ತಂತ್ರಗಳಿಗೆ ಒಮ್ಮೆ ವಶವಾದರೆ ಅವರಿಗೆ ಈ ಜನ್ಮದಲ್ಲಿ ಬಿಡುಗಡೆಯೇ ಇರಲಾರದು. ಇರಲಿ. ಈಗ ಆ ವಿಚಾರವನ್ನು ಏಕೆ ಮಾಡಬೇಕು? ಮಲಗೋಣ. ರಾತ್ರಿಯು ಬಹಳ ಹೊತ್ತಾಯಿತು. ಆ ! ಕೇಳಿದೆಯಾ, ಚಿತ್ತೂರಿನ ದೇವಿಯ ಮಂದಿರದಲ್ಲಿ ಮೂರನೆಯ ಜಾವದ ನೌಬತ್ತಿನ ಶಬ್ದವಾಗತೊಡಗಿದೆ. ಇಂತಹ ಅಪರಾತ್ರಿಯಲ್ಲಿ ನೀನು ಇಲ್ಲಿ ಬಂದು ನಿಂತು ಏನು ನೋಡುತ್ತಲಿದ್ದೆ ? ” ಎಂದನು.

**ಪದ್ಮಿನಿ :**—ಇಂದು ಬೆಳಗಿನಿಂದಲೂ ತಮ್ಮ ದರ್ಶನವೇ ಇಲ್ಲ. ಆದುದರಿಂದ ಬೇಸರವಾಗಿದ್ದಿತು.

ಬಳಿಕ ಆ ದಂಪತಿಗಳು ಶಯ್ಯಾಗೃಹವನ್ನು ಸೇರಿ ಮಲಗಿದರು. ಗುರ್ಜರೇಶ್ವರನ ದೂತನ ಆಗಮನ, ಕರಣರಾಯನ ಪತ್ರ, ರಾಣಾನು ತನ್ನ ಬಳಿಗೆ ಬಂದುದು, ರಾಣನೂ ತಾನೂ ಗುಪ್ತ ಆಲೋಚನೆ ಮಾಡಿದುದು, ಭವಿಷ್ಯದ ಯುದ್ಧದ ಯೋಚನೆ ಇವನ್ನೆಲ್ಲಾ ಭೀಮಸಿಂಹನು ಪದ್ಮಿನಿಗೆ ಅರುಹಿದನು. ಆ ಹೊತ್ತು ಭೀಮಸಿಂಹನ ಅರಮನೆಯಲ್ಲಿ ಮಾಡಿದ ಅಡಿಗೆಯು ಹಾಗೆಯೇ ಉಳಿದಿತ್ತು. ಎಷ್ಟೋ ಹೊತ್ತಿನ ಮೇಲೆ ಗಾಳಿಯಿಂದ ದೀಪವು ತಾನಾಗಿಯೇ ಆರಿ ಹೋಯಿತು. ಅದು ಭೀಮಸಿಂಹನಿಗೂ ಪದ್ಮಿನಿಗೂ ಗೊತ್ತೇ ಆಗಲಿಲ್ಲ.

---

# ಐದನೆಯ ಪರಿಚ್ಛೇದ

ಮಾರನೆಯ ದಿನ ಭೀಮಸಿಂಹನು ಮುಂಜಾವದ ರಾಜಸಭೆಗೆ ಹೋದವನು ತಿರುಗಿಬಂದು ತನ್ನ ಮಂದಿರವನ್ನು ಸೇರಿದನು. ಬಾಗಿಲಬಳಿಗೆ ಬಂದವನೇ ಆಶ್ಚರ್ಯಗೊಂಡು ನಿಂತುಬಿಟ್ಟನು. ಬಾಗಿಲವನ್ನು ಒಳಗಿನಿಂದ ಮುಚ್ಚಿದ್ದರು.

ಬಾಗಿಲ ಬಳಿಯಲ್ಲಿಯೇ ಅಮೃತಶಿಲೆಯ ಗೋಡೆಯಲ್ಲಿ ನುಣುಪಾದ ಕೆಂಪು ಕಲ್ಲಿನ ಜಾಳಿಗೆಯುಳ್ಳ ಎರಡು ಕಿಟಕಿಗಳು ಎಡಕ್ಕೊಂದು ಬಲಕ್ಕೊಂದು ಇದ್ದುವು. ಭೀಮಸಿಂಹನು ಆ ಕಿಟಕಿಗಳಲ್ಲಿ ಒಂದರ ಬಳಿಗೆ ಹೋಗಿ ಜಾಳಿಗೆಗೆ ಹಣೆಯನ್ನು ಸೋಂಕಿಸಿ ಎರಡೂ ಕೈಗಳನ್ನು ಹುಬ್ಬಿಗೂ ಜಾಳಿಗೆಗೂ ಹೊಂದಿಸಿ ಒಳಗೆ ನೋಡಿದನು. ಪದ್ಮಿನಿಯು ಮಂಡಿಗಾಲುಹಾಕಿ ಬರೆಯಲಿಕ್ಕೆ ಕುಳಿತಿದ್ದಳು !

ಅವನು ಪದ್ಮಿನಿಯನ್ನು ಈ ಸ್ಥಿತಿಯಲ್ಲಿ ಎಂದೂ ನೋಡಿರಲಿಲ್ಲ. ಪದ್ಮಿನಿಯು ತನ್ನ ಹೆಸರನ್ನು ಸಾರ್ಥಕಗೊಳಿಸಿ ಅವನ ಮನೆಯಲ್ಲಿ ಪ್ರತ್ಯಕ್ಷ ಲಕ್ಷ್ಮೀದೇವಿಯಂತೆಯೇ ವಾಸವಾಗಿದ್ದಳು! ಇಂದು ಅವಳನ್ನು ಈ ಸ್ಥಿತಿಯಲ್ಲಿ ನೋಡಿ ಭೀಮಸಿಂಹನಿಗೆ ಇನ್ನಿಲ್ಲದಷ್ಟು ಆನಂದವಾಯಿತು.

ಭೀಮಸಿಂಹನು " ಪದ್ಮಿನೀ ! " ಎಂದು ಕರೆದನು.

ಪದ್ಮಿನಿಯು ತಟ್ಟನೆ ಎದ್ದುಬಂದು ಕದವನ್ನು ತೆರೆದಳು. ಭೀಮಸಿಂಹನು ನೋಡುವಷ್ಟರಲ್ಲಿ ಅವಳ ಕೈಯಲ್ಲಿ ಕಾಗದವಿರಲಿಲ್ಲ. ಅವಳು ಬರೆಯಲು ಕುಳಿತ ಸ್ಥಳಕ್ಕೆ ಹೋಗಿ ಹುಡುಕಿ ನೋಡಿದನು; ಅಲ್ಲಿಯೂ ಅವಳು ಬರೆಯುತ್ತಿದ್ದ ಕಾಗದವು ಸಿಗಲಿಲ್ಲ. ಆಗ ಅವನು ವಿಸ್ಮಿತಸ್ವರದಿಂದ " ಪದ್ಮಿನೀ, ಇದೇನು ! ಇಂದೇನೋ ನೂತನಸ್ಥಿತಿಯು ತೋರುತ್ತಲಿದೆ ? ಕಮಲೆಯು ಸವತಿ ಮತ್ಸರವನ್ನು ಮರೆತುಬಿಟ್ಟಳೇ ? " ಎಂದನು.

**ಪದ್ಮಿನಿ**—ಹೊರಗಿನ ಕಲಹದ ಪ್ರಸಂಗವನ್ನು ನೋಡಿ ಅಂತಃಕಲಹವು ತಾನಾಗಿಯೇ ಶಾಂತವಾಗುವುದು ಸಹಜವಲ್ಲವೇ ?

ಭೀಮಸಿಂಹನು ನಕ್ಕನು; ಮತ್ತು "ಅದೇನೋ ಸತ್ಯವಾದ ಮಾತೇ ಸರಿ. ಅದರಿಂದ ನನಗಾಗುವ ಹಾನಿಯಾದರೂ ಏನು? ಲಕ್ಷ್ಮೀ-ಸರಸ್ವತಿಯರು ಕೂಡಿ ವಾಸಿಸುವುದು ಜಗತ್ತಿನಲ್ಲಿ ತೀರ ವಿರಳ. ಹೀಗಿದ್ದು ನಮ್ಮ ಮನೆಯಲ್ಲಿ ಅವರಿಬ್ಬರೂ ಐಕ್ಯದಿಂದಿದ್ದರೆ ನನಗೆ ಇನ್ನಷ್ಟು ಹಿತವೇ ಸರಿ. ಇರಲಿ, ಆ ಹಾಳು ಹರಟೆ. ಈಗ ಬರೆಯುತ್ತಿದ್ದ ಕಾಗದವನ್ನೇನು ಮಾಡಿದೆ?" ಎಂದು ಕೇಳಿದನು.

ನಾಚಿಕೆಯಿಂದ ಪದ್ಮಿನಿಯ ಮುಖವು ಸ್ವಲ್ಪ ಬಿಳುಪಾಯಿತು. ಅವಳು ನೆಲವನ್ನು ನೋಡತೊಡಗಿದಳು. ಪುನಃ ತಲೆಯೆತ್ತಿ ಕರಿಯವೂ ಪಿರಿಯವೂ ಆದ ಕಣ್ಣುಗಳನ್ನು ಕುಣಿಸುತ್ತ ಪತಿಯ ಮುಖವನ್ನು ನೋಡಿದಳು. ಅವಳ ಮುಖದಲ್ಲಿ ಆನಂದರಸವು ಉಕ್ಕಿ ಬರುತ್ತಿತ್ತು. ಅವಳು ಮುಗುಳ್ನಗೆ ನಗುತ್ತ "ಆಗದು, ನಾನು ಅದನ್ನು ಮಾತ್ರ ತೋರಿಸುವುದಿಲ್ಲ. ಹಾಗಾದರೆ ನನ್ನ ಹಂಚಿಕೆಗಳೆಲ್ಲಾ ಭಂಗವಾಗಿ ಹೋಗುವುವು" ಎಂದು ಹೇಳುತ್ತ ಉಡಿಯೊಳಗಿಟ್ಟುಕೊಂಡಿದ್ದ ಕಾಗದವನ್ನು ಹೊರಗೆ ತೆಗೆದು ಕೈಮುಷ್ಟಿಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡಳು.

ಪದ್ಮಿನಿಯ ಈ ಸ್ಥಿತಿಯನ್ನು ನೋಡಿ ಭೀಮಸಿಂಹನಿಗೆ ವಿಚಿತ್ರವೆನಿಸಿತು. ಪದ್ಮಿನಿಯು ಹಿಂದೆ ಎಂದೂ ಈ ರೀತಿಯಾಗಿ ಮಾಡಿರಲಿಲ್ಲ. ಅವಳು ಯಾವ ಸಂಗತಿಯನ್ನೂ ಪತಿಯ ಮುಂದೆ ಹೇಳಲು ಹಿಂದೆ ಮುಂದೆ ನೋಡಿರಲಿಲ್ಲ. ಇಂದು ಅವಳು ಏನೋ ಗುಪ್ತಕಾರ್ಯವನ್ನು ನಡೆಯಿಸಲು ತೊಡಗಿರುವಳೇಕೆ? ಅವನು,—'ಪದ್ಮಿನೀ, ಇದೇನು ರಹಸ್ಯವಾದ ವ್ಯಾಪಾರವನ್ನು ಆರಂಭಿಸಿರುವೆ? ನನಗದನ್ನು ತೋರಿಸಲಾಗದೇ? ಹಾಗಿದ್ದರೆ ನಾನಾದರೂ ಬಿಡುವೆನೇ? ಯಾರು ಕೃತಕಾರ್ಯರಾಗುವರೋ ನೋಡೋಣ.' ಎಂದು ಹೇಳುತ್ತ ಪದ್ಮಿನಿಯನ್ನು ತೆಕ್ಕೆಹಾಕಿ ಹಿಡಿದು ಎಡಗೈಯಿಂದ ಅವಳ ಎಡಗೈಯನ್ನು ಹಿಡಿದುಕೊಂಡು ಬಲಗೈಯಿಂದ ಅವಳು ಪತ್ರವನ್ನು ಹಿಡಿದುಕೊಂಡಿದ್ದ ಕೈಮುಷ್ಟಿಯನ್ನು ಹಿಡಿದು ಒತ್ತಿದನು.

**ಪದ್ಮಿನಿ:**—ಬಿಡಿರಿ! ಬಿಡಿರಿ! ಇದೆಂಥ ಬಲಾತ್ಕಾರ? ಹೀಗಾದರೆ ತಾವು ಬಾದಷಹರ ಕೋಪಕ್ಕೆ ಒಳಗಾಗುವಿರಿ. ನಾನು ಗುಪ್ತರೀತಿಯಿಂದ ಅಲ್ಲಾವುದ್ದೀನ ಬಾದಷಹರಿಗೆ ಪತ್ರವನ್ನು ಬರೆಯಲು ಕುಳಿತಿದ್ದೆನು. ಆ ಸಮಯದಲ್ಲಿ ತಾವು

ಹೀಗೆ ಬಲಾತ್ಕಾರ ನಡಿಸಿದ ಸಂಗತಿಯು ಅವರಿಗೆ ಗೊತ್ತಾದರೆ ತಮ್ಮ ಅವಸ್ಥೆಯು ಏನಾಗಬಹುದು, ಗೊತ್ತಿರುವುದೋ ? ನಾನಾದರೂ ಆ ಪತ್ರವನ್ನು ತಮಗೆ ಹೇಗೆ ತೋರಿಸಲಿ ? ಇಂಥ ಪತ್ರವನ್ನು ನೋಡಲು ತಾವು ಕುತೂಹಲ ಪಡುವುದು ಕೂಡ ಯಾಕೆ ?

ಭೀಮಸಿಂಹನು ತಟ್ಟನೆ ಪದ್ಮಿನಿಯ ಕೈಗಳನ್ನು ಬಿಟ್ಟು ದೂರ ಸಿಡಿದು ನಿಂತು, ಅವಳ ಮುಖವನ್ನು ದುರದುರನೆ ನೋಡತೊಡಗಿದನು ಆ ದೃಷ್ಟಿಯಲ್ಲಿ ಆಶ್ಚರ್ಯವೂ ವಿಸ್ಮಯವೂ ಕೋಪವೂ ಸಮ್ಮಿಶ್ರವಾಗಿದ್ದುವು. ಒಮ್ಮೆ ಆಶ್ಚರ್ಯವು ಹೆಚ್ಚಾಗಿಯೂ ಇನ್ನೊಮ್ಮೆ ವಿಸ್ಮಯವು ಅಧಿಕವಾಗಿಯೂ ಮತ್ತೊಮ್ಮೆ ಸರ್ವವೂ ಕೋಪರೂಪವಾಗಿಯೂ ತೋರುತ್ತಿದ್ದುವು. ಭೀಮಸಿಂಹನ ಅಂತರಂಗದ ಸ್ಥಿತಿಯು ಬಿರುಗಾಳಿಯಿಂದ ದೀಪವು ಆರಿಹೋದೊಡನೆಯೇ ಕೋಣೆಯಲ್ಲೆಲ್ಲ ಗಾಢಾಂಧಕಾರವು ಮುಸುಕಿಕೊಳ್ಳುವಂತೆ ಆಗಿತ್ತು. ಈಸ್ಥಿತಿಯು ಹೆಚ್ಚು ಹೊತ್ತಿನವರೆಗೆ ಇರಲಿಲ್ಲ. ಅವನ ಮುಖವು ಪುನಃ ಪ್ರಕಾಶಿತವಾಯಿತು. ಅವನಿಗೆ ತನ್ನ ಅನುಚಿತವೂ ಅಸಂಭಾವ್ಯವೂ ಆದ ಕಲ್ಪನೆಗಾಗಿ ತಡೆಯಲಾರದಷ್ಟು ನಗೆ ಬಂದಿತು.

**ಭೀಮಸಿಂಹನು** :–ನಕ್ಕು "ಪದ್ಮಿನೀ, ಒಂದೇ ದಿವಸದಲ್ಲಿ ಇಷ್ಟೊಂದು ವಿದ್ಯೆಯನ್ನು ಓದಿದರೆ ಹೇಗಾದೀತು? ಅಲ್ಲಾವುದ್ದೀನನು ಯಾವುದೋ ಒಂದು ಮಾಟದ ಮಂತ್ರವನ್ನು ಬಲ್ಲನೆಂದು ತೋರುತ್ತದೆ ! ಆದರೆ ನೆನಪಿರಲಿ ! ಅವನು ಚಿತ್ತೂರಿನ ಮೇಲೆ ದಂಡೆತ್ತಿ ಬಂದಾಗ ಒಪ್ಪಂದವನ್ನು ಮಾಡಿಕೊಳ್ಳುವ ಸಮಯ ಬಂದರೆ, ಆ ಒಪ್ಪಂದದ ಮೊದಲನೆಯ ಷರತ್ತಿನಲ್ಲಿಯೇ ಪದ್ಮಿನಿಯ ಹೆಸರು ಬರಬೇಕಾಗುವುದು ! ರಜಪೂತರು ಅಲ್ಲಾವುದ್ದೀನನಿಗೆ ಕೊಡುವ ಕಾಣಿಕೆಗಳಲ್ಲಿ ಈ ಸ್ತ್ರೀರತ್ನವು ಮೊದಲನೆಯದಾಗುವುದು!

ಪದ್ಮಿನಿಯು ನಕ್ಕಳು. ಅವಳು ತಲೆಯನ್ನು ಬಾಗಿಸಿ ಕೈಜೋಡಿಸಿಕೊಂಡು, "ತಥಾಸ್ತು ! ನಾನು ಚಿತ್ತೂರಿನ ರಾಣನ ರಾಜನಿಷ್ಠರಾದ ಪ್ರಜೆಗಳಲ್ಲಿ ಒಬ್ಬಳು. ರಾಣನ ಅಪ್ಪಣೆಯನ್ನು ಎಂದೂ ಅಲ್ಲಗಳೆಯಲಾರೆನು ಚಿತ್ತೂರಿನ ರಜಪೂತರೆಲ್ಲರೂ ಹೇಡಿಗಳಾಗಿ ಪರರಾಣನ ಮುಂದೆ ಮೊಣಕಾಲೂರಿ ಸಲಾಮು ಮಾಡಲು ಸಿದ್ಧರಾದರೆ ಅದಕ್ಕೆ ನಾನು ಯಾಕೆ ವಿಘ್ನವನ್ನುಂಟುಮಾಡಲಿ ?

ಆಗ ನಾನೂ ಅಪಶ್ಯವಾಗಿ ಪಠಾಣನ ಶಿಬಿರಕ್ಕೆ ಹೋಗುವೆನು ! ಆದರೆ ಇನ್ನೊಂದು ವಿಚಾರವಿದೆ. ಚಿತ್ತೂರಿನ ರಜಪೂತರು ಇನ್ನೂ ಅಂಥ ಸಿ ತಿಯನ್ನು ಹೊಂದಿಲ್ಲ. ಅವರ ಕ್ಷತ್ರಿಯ ರಕ್ತವು ಕಾಲಪುರುಷನ ಆಘಾತ ಪ್ರತ್ಯಾಘಾತ ಗಳಿಂದ ಇನ್ನೂ ಬಿಸಿಗುಂದಿಲ್ಲ. ಐನೂರಡಿ ಉನ್ನತವಾದ ಚಿತ್ತೂರಿನ ದುರ್ಗದ ಶಿಖರವು ಇನ್ನೂ ಸ್ವಾಭಿಮಾನದಿಂದ ತಲೆಯೆತ್ತಿ ನಿಂತಿರುವುದು. ಆ ಶಿಖರದಲ್ಲಿ ವಿರಾಜಿಸುವ ರಾಣನ ಧ್ವಜಪಟವು ಅಭಿಮಾನಶೂನ್ಯವಾಗಿ ಸ್ವಕುಲೋತ್ಪನ್ನೆಯಾದ ಅಬಲೆಯನ್ನು ಪಠಾಣನಿಗೆ ಒಪ್ಪಿಸಿ ಆತ್ಮರಕ್ಷಣೆಯನ್ನು ಮಾಡಿಕೊಂಡು, ಬೀದಿಯ ಭಿಕಾರಿಯ ಕಾವಿಯು ಅರಿವೆಗಿಂತಲೂ ಕೀಳಾಗಿ ಹೋಗುವ ಪ್ರಸಂಗವು ಸದ್ಯಕ್ಕಂತೂ ಬಂದಂತೆ ತೋರುವುದಿಲ್ಲ. ಸಮಸ್ತ ರಾಜಸ್ಥಾನಕ್ಕೂ ಅಭಯದಾನವನ್ನು ನೀಡಿ, ಕ್ಷತ್ರಿಯ ಕುಲಜರಿಗೆ ಮಾರ್ಗ ದರ್ಶಕರಾಗಿ ಹೋದ ಪುಣ್ಯಾತ್ಮರು ವಿರಾಜಿಸುತ್ತಲಿದ್ದ ಚಿತ್ತೂರು ದುರ್ಗದಲ್ಲಿ ಇಂಥ ಹೇಡಿಹೆಣಗಳು ಇನ್ನೂ ಹುಟ್ಟಿರಲಿಕ್ಕಿಲ್ಲ. ಚಿತ್ತೂರು ಅನ್ಯರನ್ನು ಆಶ್ರ ಯಿಸಿ ಜೀವಿಸಲು ಎಂದೆಂದೂ ಆಶಿಸಲಿಕ್ಕಿಲ್ಲ. ಅಂಥ ಪ್ರಸಂಗವೇ ಬಂದರೆ ಆ ರಜಪೂತವೀರರ ಶವಗಳು ಕೂಡ ಪಠಾಣರಿಗೆ ದೊರೆಯವು. ಅಭಿಮಾನಿಗಳಾದ ಹಿಂದೂಗಳಿಗೆ ಅವರು ಅಜ್ಞಾತವಾದ ಸ್ವರ್ಗದ ಮಾರ್ಗದಲ್ಲಿ ತಮ್ಮ ಕೀರ್ತಿಜ್ಯೋ ತಿಯನ್ನು ಹಿಡಿದು ನಿಂತುಕೊಂಡು ಮಾರ್ಗದರ್ಶಕರಾಗುವರು. ಅಂತೂ ಯವ ನರಿಗೆ ತಲೆಬಾಗಿ ನಡೆದು ಮುಸುಡಿಗೆ ಮಸಿಯನ್ನು ಬಳಿದುಕೊಳ್ಳಲಾರರು; ತಮ್ಮ ಮನುಷ್ಯತ್ವವನ್ನು ಕಳೆದುಕೊಳ್ಳಲಾರರು. ”

ಹೇಳಹೇಳುತ್ತ ಪದ್ಮಿನಿಯ ಮುಖವು ಕೆಂಡದಂತೆ ಕೆಂಪಗಾಯಿತು. ಅವಳ ಕಣ್ಣುಗಳು ಉದ್ದೀಪ್ತವಾದುವು. ಭೀಮಸಿಂಹನ ಮುಖದೊಳಗಿನ ನಗೆಯ ಲಕ್ಷ ಣವು ಅಡಗಿತು. ಅವನ ಅಂತರಂಗವು ಒಲೆಯಮೇಲಿಟ್ಟ ಎಸರಿನಂತೆ ‘ಸಳಮಳ’ ಕುದಿಯತೊಡಗಿತು. ಅವನು ತಾನು ಆಡಿದ ಹಾಸ್ಯದ ಮಾತು ಪದ್ಮಿನಿಯ ಮನಸ್ಸಿಗೆ ಹತ್ತಿ, ಇಂಥ ರೋಷಾಗ್ನಿಯನ್ನು ಹುಟ್ಟಿಸಬಹುದೆಂದು ಮೊದಲು ತಿಳಿ ದಿರಲಿಲ್ಲ. ಅವನಿಗೆ ಪದ್ಮಿನಿಯು ಉಚ್ಚರಿಸುತ್ತಿದ್ದ ಶಬ್ದಗಳೊಂದಿಗೆ ಯಾವುದೋ ಒಂದು ಅಜ್ಞಾತವಾದ ವಿದ್ಯುತ್‌ಶಕ್ತಿಯು ತನ್ನ ಕಿವಿಯಲ್ಲಿ ಸೇರಿ ಶರೀರದ ರಕ್ತ ಪ್ರವಾಹದಲ್ಲಿ ವಿಲಕ್ಷಣವಾದ ವೇಗವನ್ನುಂಟುಮಾಡುತ್ತಿದ್ದಂತೆ ಭಾಸವಾಯಿತು.

ಪದ್ಮಿನಿಯು ಕ್ಷಣಕಾಲ ನಿಂತು ತನ್ನ ವಾಚಾಶಕ್ತಿಯನ್ನು ಸರಿಮಾಡಿಕೊಂಡು ಪುನಃ ಹೇಳತೊಡಗಿದಳು:—"ನಾನು ಈ ಪತ್ರವನ್ನು ಅಲ್ಲಾವುದ್ದೀನನಿಗೆ ಬರೆದಿಲ್ಲ; ಆ ದುಷ್ಟೆ ಕಮಲೆಗೆ ಬರೆದಿರುವೆನು. ಗುರ್ಜರೇಶ್ವರನ ದೂತನು ಈಹೊತ್ತು ತಿರುಗಿ ಹೋಗುವನೆಂಬುದನ್ನು ಕೇಳಿ ಅವನ ಸಂಗಡ ಆ ಕುಲಗೇಡಿ ಕಮಲೆಗೆ ಒಂದು ಆಶೀರ್ವಾದವನ್ನು ಕಳುಹಿಸಬೇಕೆಂದು ತೋರಿತು. ಅದರಿಂದ ಈ ಪತ್ರವನ್ನು ಬರೆಯಲು ಕುಳಿತಿದ್ದೆನು. ನಿಮಗೆ ಇದನ್ನು ನೋಡುವ ಇಚ್ಛೆಯಿದ್ದರೆ ಅವಶ್ಯವಾಗಿ ನೋಡಿರಿ. ನಿಮಗೆ ಗೊತ್ತಾಗದಂತೆ ನಾನು ಯಾವ ಕಾರ್ಯವನ್ನೂ ಮಾಡಿಯೂ ಇಲ್ಲ; ಮಾಡಲು ಬಯಸುವುದೂ ಇಲ್ಲ. ಆದರೆ ದೂತನಿಗೆ ಹೇಳಿ ಆದಷ್ಟು ಬೇಗನೆ ಈ ಪತ್ರವನ್ನು ಕಮಲೆಗೆ ಮುಟ್ಟಿಸುವಂತೆ ಮಾಡಬೇಕು. ಇಷ್ಟೇ ನನ್ನ ವಿಜ್ಞಾಪನೆ."

ಭೀಮಸಿಂಹನು ಪತ್ರವನ್ನು ನೋಡಿ ಸ್ವಲ್ಪ ವ್ಯಾಕುಲನಾದನು. ಅವನು 'ದಿಲ್ಲಿಯ ಯವನರ ಸಂಗಡ ವಿರೋಧವೇನೋ ಉಪಸ್ಥಿತವಾದ ಹಾಗಾಯಿತು. ಆದರೆ ಈಗ ಈತರದ ಪತ್ರವನ್ನು ಯಾವನೋ ಅಜ್ಞಾತಕುಲಶೀಲನಾದ ದೂತನ ಸಂಗಡ ಕಳುಹಿಸುವುದು ಹೇಗೆ?' ಎಂದು ಯೋಚಿಸತೊಡಗಿದನು.

ಪದ್ಮಿನಿಯು ಪತಿಯ ಮನಸ್ಸಿನ ಅಭಿಪ್ರಾಯವನ್ನು ತಿಳಿದುಕೊಂಡಳು. ಅವಳು "ಆರ್ಯರೇ, ಇದಕ್ಕೇಕೆ ಇಷ್ಟು ವಿಚಾರ ? ರಾಜ್ಯದ ಹಿತಾಹಿತವನ್ನು ಯೋಚಿಸುವಿರೇನು? ಅಲ್ಲಾವುದ್ದೀನನಿಗೆ ಈ ಮೊದಲೇ ಆಮಂತ್ರಣವು ಹೋಗಿಬಿಟ್ಟಿದೆ. ಅಲ್ಲಾವುದ್ದೀನನು ಹ್ಯಾಗಾದರೂ ಬಂದೇ ಬರುವನು. ಆದುದರಿಂದ ನಾವಾಗಿಯೇ ಅವನನ್ನು ಕರೆಯುವುದು ಸರಿಯಲ್ಲವೇ ? ಕುಸ್ತಿಯನ್ನಾಡುವುದು ಗೊತ್ತಾದ ಮೇಲೆ ಮುಂದಾಗಿಯೇ ಕಣಕ್ಕೆ ಹೋಗಿ ಸಡ್ಡುಹೊಡೆದು ಸಿದ್ಧರಾಗಿ ನಿಲ್ಲಲು ಭಯವೇತರದು? ವಿರೋಧಿಯು ಯುದ್ಧಕ್ಕೆ ಸಿದ್ಧನಾಗಿ ಬಂದು ನಮ್ಮನ್ನು ಕರೆಯುವವರೆಗೂ ನಾವು ಹಾದಿಯನ್ನು ನೋಡುತ್ತ ಕುಳಿತಿರುವುದರಲ್ಲಿ ಅರ್ಥವೇನಿದೆ? ಈ ಪತ್ರದಲ್ಲಿ ಬರೆದದ್ದನ್ನೆಲ್ಲ ನೋಡಿದರೆ, ಗೊತ್ತಾಗಬಹುದು:— "ಚಿತ್ತೂರು ಅಲ್ಲಾವುದ್ದೀನನಿಗಾಗಲೀ ಕರಣರಾಯನಿಗಾಗಲೀ ಅಂಜಿ ಹಿಂಜರಿಯಲಾರದು. ಚಿತ್ತೂರಿಗೆ ಭಯ ತೋರಿಸುವುದರಲ್ಲಿ ಏನೂ ಅರ್ಥವಿಲ್ಲ. ಆಪ

ತ್ತಿನ ಸಂಗಡ ಆಟವಾಡುವದರಲ್ಲಿಯೇ ಚಿತ್ತೂರಿನ ರಜಪೂತರಿಗೆ ಪರಮಾನಂದ ವಾಗುವುದು. ಅದರಿಂದಲೇ ಅವರು ಪಠಾಣರು ದಂಡೆತ್ತಿಬರುವ ಹಾದಿಯನ್ನು ಹುಬ್ಬುಗೈಯಿಕ್ಕಿ ನೋಡುತ್ತಿರುವರು."

ಕುಸುಮಕೋಮಲೆಯಾದ ಪದ್ಮಿನಿಯ ಅಂತರಂಗದಲ್ಲಿ ವಾಸವಾಗಿದ್ದ ಉಜ್ವಲವಾದ ವೀರರಸವನ್ನು ಭೀಮಸಿಂಹನು ಇಂದೇ ನೋಡಿದನು. ಪದ್ಮಿನಿಗೆ ಏನು ಉತ್ತರವನ್ನು ಹೇಳಬೇಕೆಂಬುದು ಅವನಿಗೆ ತಿಳಿಯಲಿಲ್ಲ. ಅವನು ಒಮ್ಮೆ ಪದ್ಮಿನಿಯ ಮುಖವನ್ನೂ ಮತ್ತೊಮ್ಮೆ ಅವಳು ಕೊಟ್ಟಿದ್ದ ಕಾಗದವನ್ನೂ ನೋಡಿದನು. ಬಳಿಕ ಆ ಪತ್ರವನ್ನು ಜಿಡಿಸಿ ಸಾವಕಾಶವಾಗಿ ಓದತೊಡಗಿದನು. ಓದುತ್ತೋದುತ್ತ ಅವನ ಅಂತರಂಗದೊಳಗಿನ ಅಭಿಮಾನವೂ ಸ್ಫೂರ್ತಿಯೂ ಜಗ್ಗನೆ ಸ್ಫೋಟನವಾಗಿ ಹೊರಬಿದ್ದು ಅವುಗಳ ಪ್ರಕಾಶವು ಮುಖಮಂಡಲವಲ್ಲಿ ಪರಾವರ್ತಿತವಾಯಿತು. ಅವನು—'ಪದ್ಮಿನೀ, ನೀನು ನಿಜವಾಗಿಯೂ ಪದ್ಮಿನಿಯೇ ಸರಿ. ಪದ್ಮದ ಸೌರಭದಂತಿರುವ ನಿನ್ನ ಗುಣಗಳು ಜಗತ್ತಿನಲ್ಲಿ ಚಿರಸ್ಥಾಯಿಯಾಗಿರಲಿ! ನಿನ್ನ ಉಂಗುಟವನ್ನು ಕಾಣುವುದು ಕೂಡ ಅಲ್ಲಾವುದೀನನಿಗೆ ಸಾಧ್ಯವಿಲ್ಲ. ನಿಶ್ಚಯವಾಗಿಯೂ ನಿನ್ನ ಪತ್ರವನ್ನು ಕಳುಹಿಸುವೆನು. ನಿಶ್ಚಿಂತಳಾಗಿರು.' ಎಂದನು.

ಭೀಮಸಿಂಹನು ಹೀಗೆಂದು ಪದ್ಮಿನಿಯನ್ನು ಸಮಾಧಾನಗೊಳಿಸಿದನಂತರ ಪತ್ರವನ್ನು ತೆಗೆದುಕೊಂಡು ಅಲ್ಲಿಂದ ಹೊರಟನು. ಪದ್ಮಿನಿಯು ಅಲ್ಲಿಯೇ ಕೆಲ ಹೊತ್ತಿನವರೆಗೆ ತಟಸ್ಥಳಾಗಿ ನಿಂತುಕೊಂಡಳು; ತರುವಾಯ ಅಲ್ಲಿಯೇ ಇದ ಕಿಟಕಿಯ ಕಡೆಗೆ ಸರಿದು ಹೋಗಿ ಹೊರಗೆ ನೋಡತೊಡಗಿದಳು.

ಆಕಾಶದಲ್ಲಿ ಮೇಘಗಳ ಗರ್ಜನೆಯು ಭಯಂಕರವಾಗಿ ಕೇಳಬರುತ್ತಿತ್ತು. ದೂರದಲ್ಲಿ ದುರ್ಗದ ಶಿಖರದ ಮೇಲಿನ ರಕ್ತವರ್ಣದ ಧ್ವಜಪಟವು "ಫಡ, ಫಡ" ಹಾರಾಡುತ್ತಿತ್ತು. ಆದರೆ ಕೆಳಭಾಗದಲ್ಲಿ ಗಾಳಿಯ ಸುಳಿವು ಕೂಡ ಇರಲಿಲ್ಲ. ಗಿಡಗಳ ಎಲೆಗಳು ಕೂಡ ಅಲ್ಲಾಡುತ್ತಿರಲಿಲ್ಲ. ಸೃಷ್ಟಿಯ ಮೇಲ್ಭಾಗದಲ್ಲಿ ಮಹಾ ಅಲ್ಲೋಲಕಲ್ಲೋಲವುಂಟಾಗಿತ್ತು. ಆದರೆ ಒಳಗೆ ಎಲ್ಲವೂ ಶಾಂತವಾಗಿದ್ದುವು. ಇದೇನು! ಪದ್ಮಿನಿಯು 'ಇದೇ ಪ್ರಳಯದ ಪೂರ್ವಲಕ್ಷಣವೆಂದು ತೋರುತ್ತದೆ' ಎಂದು ಭಾವಿಸಿಕೊಂಡಳು.

# ಎರಡನೆಯ ಖಂಡ

## ವಿದ್ಯುತ್-ದರ್ಶನ

### ಮೊದಲನೆಯ ಪರಿಚ್ಛೇದ

ಯಮುನಾ ನದಿಯ ಕಡೆಯಿಂದ ನೋಡಿದರೆ, ದಿಲ್ಲೀನಗರದ ನೋಟವು ಬಹು ರಮ್ಯವಾಗಿ ತೋರುವುದು. ಮೇಲ್ಭಾಗದಲ್ಲಿ ನೀಲವರ್ಣದ ಆಕಾಶವೂ, ಮುಂಗಡೆಯಲ್ಲಿ ಕಾಳಿಂದಿಯ ನೀಲಜಲವೂ, ಅದರ ಮುಂದೆ ಹಸುರು ಮುರಿಯುವ ಹಲವು ವೃಕ್ಷರಾಶಿಗಳೂ, ನಡುನಡುವೆ ಎದ್ದು ಕಾಣಿಸುವ ಪುರಾತನಬಾದಷಹರ ಅರಮನೆಗಳೂ, ಆರಾಮುಗಳೂ, ಅವುಗಳನ್ನಾವರಿಸಿರುವ ಅನೇಕ ಸಣ್ಣ ದೊಡ್ಡ ಮಂದಿರಗಳೂ ನೋಡುವವರ ಕಣ್ಣಿಗೆ ಸೊಬಗನ್ನು ಬೀರುವುವು; ಮನಸ್ಸಿಗೆ ಆನಂದವನ್ನುಂಟುಮಾಡುವುವು.

ಪೂರ್ವದಲ್ಲಿ ಕ್ಷತ್ರಿಯರಾಜನಾದ ಪೃಥ್ವೀರಾಜನ ಕಾಲದ ಸ್ಥಿತಿಯು ಈಗ ದಿಲ್ಲಿಯಲ್ಲಿ ಉಳಿದಿಲ್ಲ. ಈಗ ಆ ನಗರವು ಪಠಾಣರ ರಾಜಧಾನಿಯಾಗಿರುವುದು. ಹಿಂದೂಗಳ ಶಿಲ್ಪಕಲೆಯ ಪ್ರದರ್ಶನದ ಮಂದಿರಗಳಂತಿದ್ದ ಮನೋಹರವಾದ ದೇವಮಂದಿರಗಳು ಪಠಾಣರ ಪಾದಾಘಾತದಿಂದ ಗಡಗಡನೆ ನಡುಗಿ ಕೆಡೆದು ಕೊಂಡು ಬಿದ್ದುವೋ ಎಂಬಂತೆ ನೆಲಸಮವಾಗಿ ಹೋದುವು. ಪೃಥ್ವೀರಾಜನ ಅರಮನೆಯ ಅವಶೇಷವನ್ನು ಅಲ್ಲಾವುದ್ದೀನನು ಪುನಃ ಜೀರ್ಣೋದ್ಧಾರಮಾಡಿಸಿಕೊಂಡು ಅಲ್ಲಿಯೇ ಇರುತ್ತಿದ್ದನು ದಿಲ್ಲೀನಗರದಲ್ಲಿ ಮೊದಲು ಹಿಂದೂಗಳ ದೇವಮಂದಿರವಿದ್ದಲ್ಲಿ ಈಗ ಪಠಾಣರು ಮಸೀದಿಯನ್ನು ಕಟ್ಟಿಸಿದ್ದರು. ಮೊದಲು ಜಯಸ್ತಂಭಗಳಿದ್ದಲ್ಲಿ, ಈಗ ಮಿನಾರಗಳಾದುವು; ಮೊದಲು ಗೋಶಾಲೆಗಳಿದ್ದಲ್ಲಿ

ಈಗ ಕಟುಕರ ಅಂಗಡಿಗಳಾದುವು, ಮೊದಲು ಅತಿಥಿಶಾಲೆಗಳಿದ್ದಲ್ಲಿ, ಈಗ 'ಸರಾಯಿ'ಗಳಾದುವು. ( ಸರಾಯಿ=ಫಕೀರರು ಇಳಿದುಕೊಳ್ಳುವ ಸ್ಥಳ. )

ಪಠಾಣ ಬಾದಷಹನ ಪ್ರಾಸಾದದ ಒಂದು ಭಾಗದಲ್ಲಿ ಯಮುನಾನದಿಯ ದಂಡೆಯ ಮೇಲೆ ಅವನ ಜನಾನಖಾನೆಯಿತ್ತು. ಫಾರಸೀ ದೇಶದ ಹೂವಿನ ಬಳ್ಳಿಗಳಿಂದಲೂ ಫಲವೃಕ್ಷಗಳಿಂದಲೂ ಇಸ್ಪಾಹಾನದಿಂದ ತರಿಸಿದ ತರತರದ ಪಶುಪಕ್ಷಿಗಳಿಂದಲೂ ಅಂತಃಪುರದ ಮುಂಗಡೆಯಲ್ಲಿದ್ದ ಹೂದೋಟವು ಕಂಗೊಳಿಸುತ್ತಲಿತ್ತು. ಆ ಮಂದಿರದ ಒಳಗಡೆ ಒಂದು ಮೇಜಿನ ಮೇಲೆ ಬಸರಾದಿಂದ ಬಂದ ಗುಲಾಬಿಯ ನೀರಿನ ಬಟ್ಟಲುಗಳೂ, ಕಂದಹಾರದ ಕಸ್ತೂರಿಯ ಡಬ್ಬಿಗಳೂ, ಕಾಶ್ಮೀರದ ನೀಲೋತ್ಪಗಳ ಸುವಾಸನಾದ್ರವ್ಯದ ಪಾತ್ರೆಗಳೂ, ಶಿರಾಜದ ಮದಿರಾಭಾಂಡಗಳೂ ಒಪ್ಪುತ್ತಿದ್ದುವು.

ಆ ಜನಾಖಾನೆಯ ಒಂದು ಮಗ್ಗುಲಲ್ಲಿ, ಹಸ್ತಿದಂತದಿಂದ ಮಾಡಿದ ಪರ್ಯಂಕದ ಮೇಲೆ ಅಲಾವುದ್ದೀನನ ಪಟ್ಟದರಸಿಯು ಮಲಗಿಕೊಂಡು ನಿದ್ರಿಸುತ್ತಲಿದ್ದಳು. ಆ ಪರ್ಯಂಕದ ಮೇಲೆ ಕುಳಿತರೆ ಎದುರಿಗಿದ್ದ ಕಿಟಕಿಯಿಂದ ಯಮುನಾನದಿಯ ನೋಟವು ಬಲು ಮನೋಹರವಾಗಿ ತೋರುವುದು. ಆ ಕಿಟಕಿಯು ತೆರೆದಿತ್ತಾದುದರಿಂದ ಅತ್ತಕಡೆಯಿಂದ ಬೀಸುವ ತಂಗಾಳಿಯಿಂದ ಪರ್ಯಂಕವನ್ನು ಸುತ್ತುಗಟ್ಟಿದ ರೇಶಿಮೆಯ ಪರದೆಯೂ ರಾಣಿಯ ಮುಂಗುರುಳೂ ಮೆಲ್ಲಮೆಲ್ಲನೆ ತೊನೆಯುತ್ತಿದ್ದುವು. ಅದೇ ಕಿಟಕಿಯ ಮಾರ್ಗದಿಂದಲೇ ಒಂದು ಸ್ಫಟಿಕ ಶಿಲೆಯಿಂದ ಮಾಡಿದ ನಳಿಕೆಯು ಒಳಗೆ ಬಂದಿತ್ತು. ಆ ನಳಿಕೆಯು ಹಾಗೆಯೇ ಮುಂದೆ ಬಂದು ಕೋಣೆಯ ಮಧ್ಯಭಾಗದಲ್ಲಿದ್ದ ಮನೋಹರವಾದ ಶಿಲೆಯ ಸ್ತ್ರೀಪ್ರತಿಮೆಯ ಕೆಳಭಾಗದಲ್ಲಿದ್ದ ಪೀಠವನ್ನು ಸೇರಿ ಅದೃಶ್ಯವಾಗಿತ್ತು. ಆ ಶಿಲಾಪ್ರತಿಮೆಯ ಕೈಯಲ್ಲಿದ್ದ ತಿಳಿಹಳದಿಯಿಂದ ಕೂಡಿದ ಗುಲಾಬೀಬಣ್ಣದ ಕಮಲದ ಎಸಳುಗಳಿಂದ ನೀರಿನ ಧಾರೆಗಳು ಕಮಲಾಕಾರವಾಗಿಯೇ ಚಿಮ್ಮಿ ಕೆಳಗೆ ಬೀಳುತ್ತಿದ್ದುವು. ಆ ಕಾರಂಜಿಯ ತುಷಾರಗಳು ಎದುರಿಗಿದ್ದ ನಿಲುವುಗನ್ನಡಿಯ ಮೇಲೆ ಮಂಜುಗಟ್ಟಿ ಕುಳಿತಿದ್ದುವು. ಆ ಕಣಗಳ ಮಿಶ್ರಣದಿಂದ ಕೋಣೆಯೊಳಗಿನ ಹವೆಯು ಸಾರ್ದ್ರವಾಗಿ ಮನಸ್ಸಿಗೆ ಆಮೋದವನ್ನುಂಟುಮಾಡುತ್ತಲಿತ್ತು.

ಬೇಗಮಳು ಇನ್ನೂ ನಿದ್ದೆಯಲ್ಲಿಯೇ ಇದ್ದಳು. ಆಗ ಅಕಸ್ಮಾತ್ತಾಗಿ ಪರಿಚಾರಿಕೆಯೊಬ್ಬಳು ತುದಿಗಾಲಿನಿಂದ ನಡೆಯುತ್ತ ಬೇಗಮಳ ಹತ್ತಿರಕ್ಕೆ ಬಂದಳು. ಅವಳ ಕೈಯಲ್ಲಿ ಒಂದು ಪತ್ರವಿತ್ತು. ಅವಳು, ಬೇಗಮಳು ಮಲಗಿದ ಗಾದಿಯ ಮೇಲೆ ಹಾಸಿದ ರೇಶಿಮೆಯ ಬಟ್ಟೆಯನ್ನು ಮೆಲ್ಲನೆ ಓರೆಮಾಡಿ ಅವರ ಕೆಳಗೆ ಆ ಪತ್ರವನ್ನು ಇಟ್ಟಳು. ಆ ಮೇಲೆ ಒಮ್ಮೆ ಆ ಪತ್ರವನ್ನು ಇಟ್ಟ ಸ್ಥಳವನ್ನೂ ಒಮ್ಮೆ ಬೇಗಮಳ ಮುಖವನ್ನೂ ನೋಡುತ್ತ ಮೊದಲಿನಂತೆಯೇ ತುದಿಗಾಲಿನಿಂದ ನಡೆಯುತ್ತ ಹೊರಟು ಹೋದಳು

ಒಂದೇ ಒಂದು ನಿಮಿಷದಲ್ಲಿ ಇಷ್ಟೆಲ್ಲ ವ್ಯಾಪಾರಗಳು ನಡೆದುವು. ಬೇಗಮಳು ಮೊದಲಿನಂತೆಯೇ ನಿದ್ರಿಸುತ್ತಿದ್ದಳು. ಮಂದಾನಿಲವು ಮೊದಲಿನಂತೆಯೇ ಸುಳಿದಾಡುತ್ತಿತ್ತು ಕಾರಂಜಿಯ ನೀರು ಮೊದಲಿನಂತೆಯೇ ಚಿಮ್ಮುತ್ತಿತ್ತು. ಕ್ರಮವಾಗಿ ಸಾಯಂಕಾಲವಾಗುತ್ತ ಬಂದಿತು.

ಬಾದಷಹನ ಅರಮನೆಯಲ್ಲಿ ಸಂಧ್ಯಾಕಾಲದ ನೌಬತ್ತು ಬಾರಿಸತೊಡಗಿತು. ಜನಾನಖಾನೆಯಲ್ಲಿ ಮಲಗಿದ್ದ ಬೇಗಮಳು ಆ ನೌಬತ್ತಿನ ಧ್ವನಿಯನ್ನು ಕೇಳಿ ಎಚ್ಚತ್ತಳು. ಅವಳು ಮೆಲ್ಲನೆ ಕಣ್ಣೊರಿಸಿಕೊಳ್ಳುತ್ತ ಏಳಹೋದಳು. ಆಗ ಅವಳ ಕಾಲಿಗೆ ಏನೋ ಒಂದು ಬಿರುಸಾದ ಪದಾರ್ಥವು ತಗಲಿದಂತೆ ತೋರಿತು. ಬೇಗಮಳು ಅದೇನೆಂದು ನೋಡಿದಳು. ಒಂದು ಮೊಹರುಮಾಡಿದ ಪತ್ರ! ಅವಳು ಎಡಗೆಯಿಂದ ಕಣ್ಣೊರಿಸಿಕೊಳ್ಳುತ್ತ ಬಲಗೈಯಿಂದ ಪತ್ರವನ್ನು ತೆಗೆದುಕೊಂಡು ನೋಡಿದಳು. ಪತ್ರವನ್ನು ನೋಡಿದ ಕೂಡಲೆ ಸ್ವಲ್ಪ ಆಶ್ಚರ್ಯಭಾವದಿಂದ ಅದನ್ನು ತಿರುವಿ ನೋಡಿದಳು, ಪುನಃ ತಿರುವಿದಳು, ಪುನಃ ತಿರುವಿದಳು. ಇಷ್ಟು ಹೊತ್ತಿನವರೆಗೆ ಸರಳವಾಗಿದ್ದ ಅವಳ ಕಣ್ಣುಗಳು ಆಕುಂಚಿತವಾಗಹತ್ತಿದುವು. ಅವಳ ಮುಖದಲ್ಲಿ ಆಶ್ಚರ್ಯ-ವಿಸ್ಮಯಗಳ ಲಕ್ಷಣಗಳು ಕಾಣಲಾರಂಭಿಸಿದುವು.

ಬೇಗಮಳು ಆ ಪತ್ರವನ್ನು ಒಡೆದು ಓದಲು ತೊಡಗಿದಳು. ಓದುತ್ತಾಳೇನು? ಯಾವ ಭಾಷೆಯದು ? ಫಾರಸಿಯಲ್ಲ. ಅರಬ್ಬಿಯೂ ಅಲ್ಲ. ಬೇಗಮಳಿಗೆ ಓದಲು ಬರಲಿಲ್ಲ. ಅದು ಅಚ್ಚ ಹಿಂದುಸ್ಥಾನೀ ಭಾಷೆಯಲ್ಲಿ ಬರೆದಿತ್ತು. ಉದ್ದಗೆರೆ ಅಡ್ಡಗೆರೆಗಳಿಂದಾದ ದೇವನಾಗರೀ ಲಿಪಿಯನ್ನೂ ಸೊಟ್ಟ ಡೊಂಕ ಖಡ್ಗಧಾರೆ

ಗಳಂತಿದ್ದ ಫಾರಸೀ ಲಿಪಿಯನ್ನೂ ಹೋಲಿಸಿ ನೋಡಹೋದಳು. ಅವಳಿಗೆ ಏನು ತಿಳಿಯಿತು ? ಕೊನೆಗೆ ಬೇಸರಗೊಂಡು ಪತ್ರವನ್ನು ಕೆಳಗೊಗೆದು ಪುನಃ ಹಾಸಿಗೆಯ ಮೇಲೆ ಮಲಗಿಕೊಂಡಳು. ಪುನಃ ಕೆಲವು ಕ್ಷಣಗಳ ಮೇಲೆ 'ಧಾಲೀ, ಧಾಲೀ' ಎಂದು ಕರೆದಳು.

ಯಾರೂ ಉತ್ತರ ಕೊಡಲಿಲ್ಲ. ಬೇಗಮಳು ಬೇಸರಗೊಂಡು, ಹುಬ್ಬು ಗಂಟಿಕ್ಕಿ "**ಯಾರಲ್ಲಿ!** " ಎಂದು ಪುನಃ ಗಟ್ಟಿಯಾಗಿ ಕೂಗಿದಳು.

ಅದನ್ನು ಕೇಳಿ ಮಧ್ಯಮ ವಯಸ್ಸಿನ ದಾಸಿಯೊಬ್ಬಳು ಕಣ್ಣೊರಿಸಿಕೊಳ್ಳುತ್ತ ಒಳಗೆ ಬಂದಳು. ಅವಳ ಅಸ್ತವ್ಯಸ್ತವಾಗಿದ್ದ ತಲೆಯ ಕೂದಲುಗಳೂ ಮೇಲ್ಸೆರಗೂ ಅವಳು ಬಹಳ ಹೊತ್ತಿನಿಂದ ನಿದ್ದೆಮಾಡುತ್ತಿದ್ದಳೆಂಬುದನ್ನು ಚಾಡಿ ಹೇಳುತ್ತಿದ್ದುವು. ಅವಳು ಬೇಗಮಳ ಎದುರಿಗೆ ಬಂದು ನಿಂತು:— "ಏನಪ್ಪಣೆ, ಬೇಗಮುಸಾಹೇಬ ? " ಎಂದಳು.

ಬೇಗಮಳು ಮೊಳಕೈಯೂರಿ ತಲೆಯನ್ನು ಮೇಲಕ್ಕೆತ್ತಿ ಕೆಳಗೆ ಬಿದ್ದಿರುವ ಪತ್ರವನ್ನು ತೋರಿಸಿ,—"ಈ ಪತ್ರವನ್ನು ಯಾರು ತಂದು ಕೊಟ್ಟರು? " ಎಂದಳು.

ದಾಸಿಯು ಆ ಪತ್ರವನ್ನು ತೆಗೆದುಕೊಂಡು ತಿರುಗಿ ತಿರುಗಿ ನೋಡಿದಳು. ಪಾಪ, ಅವಳಿಗೇನು ಗೊತ್ತು ? ಮಧ್ಯಾಹ್ನದಲ್ಲಿ ಮಲಗಿದವಳು ಈಗ ಎದ್ದು ಬಂದಿರುವಳು. ಅವಳು ವಿಸ್ಮಿತಳಾಗಿ, "ನನಗೆ ಏನೂ ಗೊತ್ತಿಲ್ಲ, ಬೇಗಮುಸಾಹೇಬ " ಎಂದಳು.

ದಾಸಿಯ ಕಣ್ಣುಗಳನ್ನು ನೋಡಿದರೆ ಆಕೆಯು ಇನ್ನೂ ಸರಿಯಾಗಿ ಎಚ್ಚತ್ತಿರಲಿಲ್ಲವೆಂಬುದು ಕಂಡುಬರುವಂತಿತ್ತು. ಅವಳು ಏನಾದರೊಂದು ಅಮಲಿನ ಪದಾರ್ಥವನ್ನು ಸೇವಿಸಿದ್ದಳೋ ಏನೋ ಯಾರಿಗೆ ಗೊತ್ತು ? ದಾಸಿಯ ಈ ಲಕ್ಷಣಗಳನ್ನೂ ಮೇಲೆ ಅವಳು ಹೇಳಿದ ಉತ್ತರವನ್ನೂ ಕೇಳಿ, ಬೇಗಮಳ ಹುಬ್ಬು ಗಂಟಿಕ್ಕಿತು. ಅವಳು ದರ್ಪಿತ ಸ್ವರದಿಂದ:— "ನಿನಗೆ ಗೊತ್ತಿಲ್ಲವೇ ? ಸರಿ, ಇದು ಪತ್ರವಲ್ಲ; ಬಾದಶಹರ ಹುಕುಂ. ನಿದ್ದೆಮಾಡುತ್ತ ಪಹರೆಯನ್ನು ಮಾಡುವ ದಾಸಿಯರನ್ನು ಶೂಲಕ್ಕೇರಿಸಬೇಕೆಂದು ಬಾದಷಹರು ಹುಕುಂ ಕಳುಹಿಸಿರುವರು " ಎಂದು ಗರ್ಜಿಸಿದಳು.

ದಾಸಿಯು ನಡುಗತೊಡಗಿದಳು. ಅವಳು ಕಂಪಿತ ಸ್ವರದಿಂದ:— "ಇಲ್ಲ, ಬೇಗಮುಸಾಹೇಬ, ನಿದ್ದೆಯ ಮಾತಲ್ಲ. ಸಾರಾಯಿಯಲ್ಲಿ ಏನೋ ವಿಶೇಷ ಮಾದಕ ಪದಾರ್ಥವು ಕೂಡಿತ್ತೆಂದು ತೋರುತ್ತದೆ. ಈಗಲೂ ನನ್ನ ತಲೆಯಲ್ಲಿ ಒಂದು ತರದ ಮಬ್ಬು ಬಂದಂತಾಗಿರುತ್ತದೆ. ಹಗಲು ಹೊತ್ತಿನಲ್ಲಿ ನಾನು ಎಂದೂ ನಿದ್ದೆಮಾಡಿದವಳಲ್ಲ. ಇದೊಂದು ಬಾರಿ ನನ್ನ ಅಪರಾಧವನ್ನು ಕ್ಷಮಿಸಿರಿ" ಎಂದು ಬೇಡಿಕೊಂಡಳು. ಬೇಗಮಳು ಎದ್ದು ಕುಳಿತು-- "ಸಾರಾಯಿಯನ್ನು ಕುಡಿದೆಯಾ? ನಿನಗೆ ಯಾರು ಸಾರಾಯಿಯನ್ನು ಕೊಟ್ಟರು ? ಆ ಸಾರಾಯಿ ಕುಡಿದುದಕ್ಕಾಗಿಯೇ ಇಂದು ಶೂಲಕ್ಕೆ ಏರಬೇಕು" ಎಂದಳು.

**ದಾಸಿ** — ನಾನೇ ಅಂಗಡಿಗೆ ಹೋಗಿ ಕೊಂಡುಕೊಂಡು ಬಂದೆನು; ತಾಯೀ, ಯಾರೂ ತಂದು ಕೊಟ್ಟಿಲ್ಲ. ಆದರೆ ಯಾರೋ ಅದರಲ್ಲಿ ವಿಶೇಷ ಅಮಲಿನ ಪದಾರ್ಥವನ್ನು ಕೂಡಿಸಿರಬೇಕು. ಇಲ್ಲದಿದ್ದರೆ ಹೀಗೆ ಎಂದೂ ಆಗುತ್ತಿದ್ದಿಲ್ಲ. ನಾನು ಎಷ್ಟೋ ಸಾರೆ ಸಾರಾಯಿ ಕುಡಿದಿದ್ದೇನೆ. ಆದರೆ ಎಂದೂ ಹೀಗಾಗಿರಲಿಲ್ಲ.

ಬೇಗಮಳ ಮನಸ್ಸಿನ ಧೈರ್ಯವು ಕುಸಿಯಿತು. ಅವಳು ಕೋಪದಿಂದ ಕೆಳಗಿಳಿದು ಬಂದು "ಗಪ್ ! ಮಾತಾಡಬೇಡ, ಬಜಾರಿ ! ನೆರೆಕುಡಿದು ಓಣಿ ಓಣಿ ಅಲೆಯುವ ಭಿಕ್ಷೆಗಾರತಿಯು ಇಲ್ಲಿ ಬಂದು ದಾಸಿಯಾಗಿರುವೆ; ಮರಣಕ್ಕೆ ಬೇರೆ ದಾರಿಯನ್ನು ಕಾಣದೆ ಹುಡುಕಿಕೊಂಡು ಬಂದೆಯಾ?" ಎಂದು ಹೇಳಿ ಅವಳ ಬೆನ್ನಮೇಲೆ ಚೆನ್ನಾಗಿ ಗುದ್ದಿ ಚಂಡಿಕೆಯನ್ನು ಹಿಡಿದು ನೂಕಿಬಿಟ್ಟಳು.

ಕ್ರಮವಾಗಿ ಸಾಯಂಕಾಲವಾಯಿತು, ಸೂರ್ಯಾಸ್ತವಾಯಿತು; ಕತ್ತಲೆಗವಿಯಿತು. ಬೇಗಮಳ 'ರಂಗಮಹಾಲು' ಅನೇಕ ಸುವರ್ಣದ ದೀವಿಗೆಗಳಿಂದ ಬೆಳಗಿತು.

ರಾತ್ರಿಯು ಹತ್ತುಗಂಟೆಯ ಸುಮಾರಕ್ಕೆ ಅಲ್ಲಾವುದ್ದೀನ ಬಾದಷಹನು ಬೇಗಮಳ ಅಂತಃಪುರಕ್ಕೆ ಬಂದನು. ಆಗಲೂ ಬೇಗಮಳು ಮಲಗಿಯೇ ಇದ್ದಳು. ಬಾದಷಹನು ಒಳಗೆ ಬಂದುದನ್ನು ನೋಡಿ ಅವಳು ಎದ್ದು ಹೋಗಿ ಎದುರುಗೊಂಡು ಕರೆತಂದು ಪರ್ಯಂಕದ ಮೇಲೆ ಕುಳ್ಳಿರಿಸಿದಳು. ಬಾದಷಹನು

“ ಪ್ರಿಯೇ, ಇಂದೇಕೆ ಇಷ್ಟೊಂದು ಉಪಚಾರ? ಹಿಂದೂ ದೇಶದ ಸಕಲ ಅರಸರೂ ನನ್ನ ದಾಸಾನುದಾಸರು. ಅಂಥ ನಾನು ನಿನ್ನ ದಾಸನು. ನಿನ್ನ ಮುಂದೆ ನಾನು ಬಾದಷಹನಲ್ಲ. ಬಾ, ಕುಳ್ಳಿರು.” ಎಂದು ಹೇಳಿ ಅವಳ ಕೈಹಿಡಿದೆಳೆದು ಬಳಿಯಲ್ಲಿ ಕುಳ್ಳಿರಿಸಿಕೊಂಡನು. ಬೇಗಮಳು ನಾಚಿಕೆಯಿಂದ ತಲೆಬಾಗಿಸಿದಳು.

ಕೆಲಹೊತ್ತಿನ ಮೇಲೆ ಬೇಗಮಳು ಮಡಲಿನಲ್ಲಿಟ್ಟುಕೊಂಡಿದ್ದ ಒಂದು ಪತ್ರವನ್ನು ಹೊರಗೆ ತೆಗೆದು ಬಾದಷಹನ ಮುಂದೆ ಹಿಡಿದು ‘ ಇದನ್ನಷ್ಟು ಓದಬಾರದೆ? ದೇವನಾಗರೀ ಬರಹವನ್ನು ನೋಡಿದರೆ, ಇದು ಸಾಮಾನ್ಯ ವ್ಯಾಪಾರವೆಂದು ತೋರುವುದಿಲ್ಲ.” ಎಂದು ಹೇಳುತ್ತ ಮೆಲ್ಲನೆ ನಕ್ಕಳು.

**ಬಾದಷಹನು**—“ ಕಮಲೇ, ನೀನು ಹಿಂದೂ ರಮಣಿ ಹಿಂದೂ ಮಹಿಳೆಯಾಗಿ ದೇವನಾಗರೀ ಲಿಪಿಯು ನಿನಗೆ ತಿಳಿಯದೇ? ನಿಮ್ಮ ಭಾಷೆಯು ನಿನಗೇ ತಿಳಿಯದಿದ್ದ ಮೇಲೆ ನಮಗೇನು ತಿಳಿಯಬೇಕು! ಮಣ್ಣು!” ಎಂದು ಕಿಲಕಿಲನೆ ನಕ್ಕನು.

ಬೇಗಮಳೂ ನಕ್ಕಳು. ಅವಳು ಬಾದಷಹನ ಭುಜದ ಮೇಲೆ ತನ್ನ ಕೈಯನ್ನಿಟ್ಟು ಕೋಮಲವಾದ ಕಂಠದಿಂದ—“ ನಾನು ಓದುಬರಹಗಳನ್ನು ಕಲಿತಿಲ್ಲ, ಹಿಂದೂಗಳ ಧರ್ಮಶಾಸ್ತ್ರ ಪುರಾಣಗಳನ್ನು ತಿಳಿದ ತಮಗೆ ಕಮಲೆ (ಲಕ್ಷ್ಮಿ)ಗೂ, ಸರಸ್ವತಿಗೂ ಯಾವ ಸಂಬಂಧವಿರುವುದೆಂಬುದು ಗೊತ್ತಿದೆ.

ಅಲ್ಲಾವುದ್ದೀನನು ನಗುತ್ತ ಆ ಪತ್ರವನ್ನು ತನ್ನ ಜೇಬಿನಲ್ಲಿಟ್ಟುಕೊಂಡು, “ ಪ್ರಿಯೇ, ನೀನೆಷ್ಟು ಸುಂದರಿಯೋ ಅಷ್ಟೇ ಕುಶಲಳೂ ಆಗಿರುವೆ. ಒಳ್ಳೆಯದು ನಿನ್ನ ಸವತಿ ಸರಸ್ವತಿಯು ಎಲ್ಲಿಯಾದರೂ ಹಿಂದೂಗಳಲ್ಲಿ ಹೋಗಿ ತಿರಿದುಕೊಳ್ಳಲಿ. ನೀನು ರಾಜರಾಜೇಶ್ವರಿಯಾಗಿ ಇಲ್ಲಿಯೇ ಇರು. ಆ ಕಮಲೆಯ ಬಲದಿಂದಲೇ ನಾನು ದಿಗ್ವಿಜಯಿಯಾಗುವೆನು. ನಾಳೆ ನಿನ್ನ ಪತ್ರದ ಪರಿವರ್ತನ ಮಾಡಿಸಿ ತಂದುಕೊಡುವೆನು; ನಾಳೆ ಬೆಳಗಾಗುತ್ತಲೇ ನಗರದಲ್ಲೆಲ್ಲ ಸಾರಿಸುವೆನು. ಈ ಪತ್ರವನ್ನು ಭಾಷಾಂತರ ಮಾಡಿ ತಂದುಕೊಟ್ಟವರಿಗೆ ನೂರು ಮೊಹರುಗಳನ್ನು ಇನಾಮಾಗಿ ಕೊಡುವೆನು. ಯಾರಿಗೂ ತಿಳಿಯದಿದ್ದರೆ ಅರಮನೆಯ ಪಂಡಿತರನ್ನೆಲ್ಲ ಶೂಲಕ್ಕೇರಿಸಿ ಬಿಡುವೆನು” ಎಂದನು. ಮೊದಲೇ ಮೂಢ, ಮೇಲೆ ಹೆಂಡತಿಯ ಮುಂದೆ ಕುಳಿತಿರುವನು, ಅಂದಬಳಿಕ ಹೇಳುವುದೇನು?

# ಎರಡನೆಯ ಪರಿಚ್ಛೇದ.

ಅದೇ ದಿನ ರಾತ್ರಿಯಲ್ಲಿ ಯಮುನಾನದಿಯ ಘಟ್ಟದ ಪಾವಟಿಗೆಯ ಮೇಲೆ ಒಬ್ಬ ಜೋಯಿಸನು ಕುಳಿತುಕೊಂಡು ಆಕಾಶದ ಕಡೆಗೆ ನೋಡುತ್ತಲಿದ್ದನು. ಘಟ್ಟವು ಬಹುಶಃ ನಿರ್ಜನವಾಗುತ್ತ ಬಂದಿತ್ತು. ಆದರೂ ಆ ಜ್ಯೋತಿಷಿಯು ಮಾತ್ರ ಕೂತಲ್ಲಿಂದ ಅಲುಗಾಡ (ಕದಲ) ಲಿಲ್ಲ; ಬೇಗನೆ ಅಲುಗಾಡುವ ಲಕ್ಷಣವೂ ತೋರಲಿಲ್ಲ ಅವನು ಒಂದೇ ದೃಷ್ಟಿಯಿಂದ ಆಕಾಶದ ಕಡೆಗೆ ನೋಡುತ್ತ ಕುಳಿತಿದ್ದನು. ಕೆಳಗಡೆಗೆ ಯಮುನಾನದಿಯ ನೀಲಜಲತರಂಗಗಳು ಮಧುರವಾದ ಸಂಗೀತವನ್ನು ಹಾಡುತ್ತ ಬಂದು ಆ ಜ್ಯೋತಿಷಿಯ ಕಾಲುಗಳನ್ನು ತೊಳೆಯುತ್ತಲಿದ್ದುವು. ಕ್ರಮವಾಗಿ ರಾತ್ರಿಯು ಹೆಚ್ಚುತ್ತ ಬಂದಿತು. ಮಂದ ಮಂದವಾಗಿ ಅಲೆಯುತ್ತಿದ್ದ ಮಂದಮಾರುತನ ಅಲೆಗಳು ಹೆಚ್ಚು ಹೆಚ್ಚು ತಂಪಾಗುತ್ತ ಬಂದುವು. ಘಟ್ಟದ ಮೇಲಿನ ಸಾಲುದೀಪಗಳು ಯಮುನೆಯ ಜಲದಲ್ಲಿ ಪ್ರತಿಬಿಂಬಿತವಾಗಿ ಆ ಜಲತರಂಗಗಳೊಡನೆ ಕ್ರೀಡಿಸತೊಡಗಿದುವು. ನೋಡುವವರಿಗೆ ಆ ಜೋಯಿಸನು ಏನೋ ಒಂದು ಗೂಢವಾದ ವಿಚಾರದಲ್ಲಿ ಮಗ್ನನಾಗಿದ್ದನೆಂಬುದು ಸಹಜವಾಗಿ ಕಾಣಿಸುವಂತಿತ್ತು.

ಆ ಬಳಿಕ ಕೆಲವುಹೊತ್ತಿನ ಮೇಲೆ ಒಬ್ಬ ರಜಪೂತನು ಬಂದು ಆ ಜ್ಯೋತಿಷಿಗೆ ನಮಸ್ಕಾರ ಮಾಡಿ ನಿಂತುಕೊಂಡನು. ಆಗ ಜ್ಯೋತಿಷಿಯು ಅವನನ್ನು ನೋಡಿ—“ಬಂದೆಯಾ ! ಬಾ. ಇಷ್ಟೊಂದು ತಡವಾಗಲು ಕಾರಣವೇನು? ” ಎಂದು ಮನಸ್ಸಿನ ಆನಂದವನ್ನು ವ್ಯಕ್ತಪಡಿಸುತ್ತ ನುಡಿದನು.

**ರಜಪೂತ**: —ನಾನು ನಿನ್ನೆಯೇ ಈ ಊರಿಗೆ ಬಂದು ಮುಟ್ಟಿದೆನು. ಆದರೆ ಒಂದು ಕಾರ್ಯದ ನಿಮಿತ್ತ ತಮ್ಮನ್ನು ಕಾಣಲು ಸ್ವಲ್ಪ ಸಾವಕಾಶವಾಯಿತು.

**ಜ್ಯೋತಿಷಿ:**—ನೀನು ಈ ಊರಿಗೆ ಬಂದುದು ಇದೇ ಮೊದಲನೆಯ ಸಾರೆ. ಹೀಗಿದ್ದು ಇಂಥ ಅಪರಿಚಿತವಾದ ಸ್ಥಳದಲ್ಲಿ ನಿನ್ನ ಕೆಲಸವೇನಿತ್ತು ? ಎಲ್ಲಿ ಯಾರ ಕೆಲಸವನ್ನು ಹಚ್ಚಿಕೊಂಡು ಕುಳಿತಿದ್ದೆ ?

**ರಜಪೂತ:**—ಪದ್ಮಿನೀರಾಣಿಯು ನಮ್ಮ ರಾಣೀಸಾಹೇಬರ ಕಡೆಗೆ ಒಂದು ಪತ್ರವನ್ನು ಕಳುಹಿಸಿದ್ದಳು ಬರುವ ಸಮಯದಲ್ಲಿ ಪ್ರತಿಜ್ಞೆಯನ್ನು ಮಾಡಿ ಬಂದಿದ್ದೆನಾದ್ದರಿಂದ ಅದನ್ನು ಯೋಗ್ಯರೀತಿಯಿಂದ ರಾಣೀಸಾಹೇಬರಿಗೆ ಮುಟ್ಟಿಸುವ ವ್ಯವಸ್ಥೆಯನ್ನು ಮಾಡಿದಹೊರತು ಉಪಾಯವಿರಲಿಲ್ಲ. ಅದರಿಂದ ತುಸು ತಡವಾಯಿತು.

ಜ್ಯೋತಿಷಿಯ ಕಣ್ಣುಗಳು ಅರಳಿ ಕೆಂಪಗಾದುವು. ಅವನು ಕೆಲಕಾಲದ ವರೆಗೆ ರಜಪೂತನನ್ನು ದುರದುರನೆ ನೋಡುತ್ತ ಕುಳಿತನು. ಬಳಿಕ—"ರಾಣೀ ಸಾಹೇಬರೆಂದು ಯಾರನ್ನು ಕರೆಯುವೆ ? ಕಮಲೆಯನ್ನೇನು ? ಹಾಗಿದ್ದರೆ ಬೇಗ ಮಸಾಹೇಬರೆನ್ನು ! ಕಮಲೆಯು ಈಗ ದಿಲ್ಲಿಯ ಬಾದಷಹನ ಬೇಗಮಳು ! ಗುರ್ಜರೇಶ್ವರನ ಕಮಲೆಯು ಈಗ ನಿರಾಂತಕವಾಗಿ ಪರಾಣನ ಜನಾನಖಾನೆ ಯನ್ನು ಅಲಂಕರಿಸಿರುವಳು. ದೇವಲೋಕದ ಅಪ್ಸರೆಯು ದೈತ್ಯರಾಜನ ಅಂತಃ ಪುರದಲ್ಲಿ ದೈತ್ಯೇಂದ್ರನೊಡನೆ ಕ್ರೀಡಿಸುತ್ತಿರುವಳು ! ಗುರ್ಜರೇಶ್ವರನಿಗೂ ಅವ ಳಿಗೂ ಇನ್ನೆಲ್ಲಿಯ ಸಂಬಂಧ ? ಬಿಡು, ಆ ಮಾತು ಕಟ್ಟಿಕೊಂಡು ಮಾಡುವು ದೇನು ? ಪದ್ಮಿನೀ ರಾಣಿಯು ಪತ್ರದ ವಿಚಾರವನ್ನು ಹೇಳು. ಅವಳು ಏನು ಬರೆ ದಿರುವಳು? " ಎಂದು ಕೇಳಿದನು. ಅವನ ಪ್ರತಿಯೊಂದು ಮಾತಿನಲ್ಲಿಯೂ ಮನ ಸ್ಸಿನೊಳಗಿನ ರೋಷವು ಹೊರಸೂಸುವಂತಿತ್ತು.

ರಜಪೂತನು ತಲೆಯನ್ನು ಬಾಗಿಸಿ ಸುಮ್ಮನೆ ನಿಂತುಕೊಂಡನು. ಜ್ಯೋತಿ ಷಿಯು ಮತ್ತೊಮ್ಮೆ ಕೇಳಿದ ಮೇಲೆ—"ನಾನು ಪತ್ರವನ್ನು ಓದಿಲ್ಲ. ಅದನ್ನು ಒಬ್ಬ ದಾಸಿಯ ಸಂಗಡ ಒಳಸಂಚು ನಡೆಯಿಸಿ ರಾಣಿ—ಅಲ್ಲ, ಬೇಗಮರಿಗೆ ಮುಟ್ಟಿಸುವಂತೆ ವ್ಯವಸ್ಥೆಯನ್ನು ಮಾಡಿ ಬಂದಿರುವೆನು."

"ಮೂರ್ಖ! ಏನು ಮಾಡಿಬಿಟ್ಟೆ! " ಎನ್ನುತ್ತ ಜ್ಯೋತಿಷಿಯು ಮನಸ್ಸಿನ ಉದ್ವೇಗದಿಂದ ಪೀಡಿತನಾಗಿ ಕೆಲಹೊತ್ತು ಸುಮ್ಮನೆ ಕುಳಿತನು. ಆ ಬಳಿಕ ತಿರ

ಸ್ವರಧ್ವನಿಯಿಂದ—“ ಭಗವಂತನು ಮಾರ್ಗವನ್ನು ಯೋಜಿಸಿಕೊಟ್ಟಿದ್ದನು ! ಆದರೆ ನಿನ್ನಂಥ ಮೂರ್ಖನು ಗಂಟುಬಿದ್ದು ಎಲ್ಲವನ್ನೂ ಹಾಳುಮಾಡಿಬಿಟ್ಟೆ ! ಹೋಗಲಿ, ನನ್ನ ಪತ್ರವನ್ನಾದರೂ ರಾಣಾನಿಗೆ ಮುಟ್ಟಿಸಿದೆಯೋ ಇಲ್ಲವೋ? ”

ರಜಪೂತನು ಸಂಕುಚಿತ ಸ್ವರದಿಂದ—“ ಮುಟ್ಟಿಸಿದೆನು ಮಹಾರಾಜ! ಚಿತ್ತೂರಿನ ರಜಪೂತರು ಸಮರಸನ್ನಾಹವನ್ನು ನಡೆಯಿಸಿರುವರು! ” ಎಂದನು.

ಜ್ಯೋತಿಷಿಯ ಮುಖವು ಗಾಂಭೀರ್ಯವನ್ನು ವಹಿಸಿತು. ಅವನು ಔಡು ಗಚ್ಚಿ—“ ಮಾಡಲಿ ! ಮಾಡಲಿ ! ಚೆನ್ನಾಗಿ ಮಾಡಲಿ ! ಇದೇ ಕೊನೆಯ ಪ್ರಸಂಗ ! ಅವರಿಗೆ ಇಂಥ ಸಮಯವು ಮುಂದೆ ದೊರೆಯಲಾರದು ! ಈಗಲೇ ಎಲ್ಲವನ್ನೂ ತೀರಿಸಿಕೊಳ್ಳಲಿ ” ಎಂದನು.

ಪೈಶಾಚಿಕವಾದೊಂದು ಆನಂದಭಾವನೆಯು ನಗೆಯು ಜ್ಯೋತಿಷಿಯ ಮುಖದಲ್ಲಿ ಪ್ರಕಾಶಿತವಾಯಿತು. ಅವನು ಎದ್ದುನಿಂತು ರಜಪೂತನನ್ನು ಕುರಿತು, “ನಡೆ, ಮನೆಗೆ ಹೋಗೋಣ. ಇಂಥ ಸ್ಥಳದಲ್ಲಿ ಹೆಚ್ಚು ಮಾತಾಡುವುದು ಸರಿಯಲ್ಲ. ಮನೆಗೆ ಹೋಗಿ ಎಲ್ಲವನ್ನೂ ವಿಚಾರಮಾಡೋಣ. ಕಾರ್ಯವೇನೋ ತಕ್ಕಷ್ಟು ನಡೆದ ಹಾಗಾಯಿತು. ಅಗ್ನಿಸ್ಥಾಪನೆಯಾದಂತಾಯಿತು ಇನ್ನು ಹೋಮಸಾಮಗ್ರಿಗಳನ್ನು ಯೋಜಿಸುವ! ” ಎಂದನು. ಬಳಿಕ ಇಬ್ಬರೂ ಮೆಲ್ಲನೆ ನಗರಾಭಿಮುಖವಾಗಿ ಹೊರಟಿರುವಾಗ ಜ್ಯೋತಿಷಿಯು—“ಧರ್ಮಸಿಂಹ, ಚಿತ್ತೂರಿನಲ್ಲಿ ಇನ್ನೇನು ವಿಶೇಷ ನಡೆದಿದೆ ? ” ಎಂದನು.

**ಧರ್ಮಸಿಂಹ :—** ರಾಣಾ ಲಕ್ಷ್ಮಣಸಿಂಹನೂ ಭೀಮಸಿಂಹನೂ ಗುರ್ಜರ ವಿಜಯದಿಂದ ಆನಂದಪರವಶರಾಗಿರುವಾಗ ತಮ್ಮ ಪತ್ರವು ಕಡಲೆಯೊಳಗಿನ ಕಲ್ಲಿನಂತ ಅನಪೇಕ್ಷಿತವಾಗಿ ನಡುವೆ ಬಂದು ಅವರ ಆನಂದಕ್ಕೆ ಬಲವಾದ ವಿಘ್ನವನ್ನುಂಟು ಮಾಡಿತು. ಇಂದಿನಿಂದ ಯಾವ ತರದ ಆನಂದೋತ್ಸವಗಳನ್ನೂ ನಡೆಯಿಸಕೂಡದೆಂದು ನಗರದಲ್ಲೆಲ್ಲ ಡಂಗುರ ಸಾರಿರುವರು.

**ಜ್ಯೋತಿಷಿ :—** ಪದ್ಮಿನೀ ರಾಣಿಯು ಯಾವ ಸ್ಥಿತಿಯಲ್ಲಿರುವಳು.

**ಧರ್ಮಸಿಂಹ:—** ಅವಳು ತುಂಬಾ ದುಃಖದಲ್ಲಿರುವಳಂತೆ. ಜ್ಯೋತಿಷಿಯೂ ಧರ್ಮಸಿಂಹನೂ ರಾಜಮಾರ್ಗವನ್ನುಬಿಟ್ಟು ಕಾಲುದಾರಿಯಿಂದ ಹತ್ತು ಹದಿನೈದು ಮಾರುದೂರ ಹೋಗಿ ಒಂದು ಗುಡಿಸಲವನ್ನು ಹೊಕ್ಕರು.

# ಮೂರನೆಯ ಪರಿಚ್ಛೇದ

ಮೂರನೆಯ ದಿನ ಮುಂಜಾನೆ ಆ ಜೋಯಿಸನು ಒಳ್ಳೇ ಆಡಂಬರದಿಂದ ತನ್ನ ವೇಷಭೂಷಣಗಳನ್ನು ಧರಿಸಿಕೊಂಡು ಕೈಯಲ್ಲಿ ಪಂಚಾಂಗವನ್ನೂ ಚಿಂತಾಮಣಿಯ ಪುಸ್ತಕವನ್ನೂ ಹಿಡಿದುಕೊಂಡು ಪಠಾಣ ಬಾದಷಹನ ಅರಮನೆಯ ಕಡೆಗೆ ನಡೆದನು. ದ್ವಾರಪಾಲಕರು ಇವನನ್ನು ಒಳಗೆ ಬಿಡುವರೆಲ್ಲಿ? ಆದರಿಂದ ಇವನು ಕೋಟೆಯ ಮಹಾದ್ವಾರಕ್ಕೆ ಸ್ವಲ್ಪ ದೂರದಲ್ಲಿ ಅತ್ತಿತ್ತ ಸುಳಿದಾಡತೊಡಗಿದನು. ಅಷ್ಟರಲ್ಲಿ ಒಬ್ಬ ಪರಿಚಾರಿಕೆಯು ಬಂದು ಅವನ ಕಿವಿಯಲ್ಲಿ ಏನೇನೋ ಹೇಳಿ ಹೋದಳು. ಆಗ ಜೋಯಿಸನು ವಿಷಣ್ಣವದನದಿಂದ ಸಾವಕಾಶವಾಗಿ ದುರ್ಗದ ಮಹಾದ್ವಾರದ ಬಳಿಗೆ ಬಂದನು. ಖಡ್ಗಪಾಣಿಗಳಾದ ಇಬ್ಬರು ದ್ವಾರಪಾಲಕರು ಬಂದು 'ಖಬರ್‌ದಾರ್!' ಎಂದು ಗದ್ದರಿಸಿ ಅವನನ್ನು ತಡೆದರು. ಜ್ಯೋತಿಷಿಯು ನಡುಗಿದನು. ಬಾಹ್ಯಾಂಗವು ಅಸ್ವಾಭಾವಿಕವಾಗಿ ಕಂಪಿಸುತ್ತಿರುವುದನ್ನು ನೋಡಿದರೆ ಅವನ ಅಂತರಂಗದ ಸ್ಥಿತಿಯು ಮಾತ್ರ ಅದೇ ರೀತಿಯಾಗಿದ್ದಿಲ್ಲವೆಂಬುದನ್ನು ಆಗಲೇ ಕಂಡುಹಿಡಿಯಬಹುದಾಗಿದ್ದಿತು. ಆದರೆ ದ್ವಾರಪಾಲಕರಿಗೆ ಅವಕಾಶವೆಲ್ಲಿ? ಅವರಿಗೆ ಅಷ್ಟೊಂದು ಕುಶಲತೆಯು ಎಲ್ಲಿಂದ ಬರಬೇಕು? ತಮ್ಮ ಆ ಅಂಗುಲ ದಪ್ಪವಾದ ಅಂಗಿ, ಅರ್ಧಗೇಣು ಎತ್ತರವಾದ 'ಜರ್‌ಜರ್' ಸಪ್ಪಳಮಾಡುವ ಚಡಾವು (ಜೋಡು), 'ಥಳಥಳನೆ' ಹೊಳೆಯುವ ಹಿತ್ತಾಳಿಯ ಬಿಲ್ಲೆ, ಇವುಗಳ ಕಡೆಗೇ ಅವರ ದೃಷ್ಟಿ. ಜನರು ತಮ್ಮನ್ನು ನೋಡಿ ಅಂಜಿದರಂತೂ ತೀರೇ ಹೋಯಿತು. ಅವರಿಗೆ ಬಾದಷಹನ ದರ್ಪಕ್ಕಿಂತಲೂ ಹೆಚ್ಚಾದ ಅಹಂಕಾರವು ಬಂದುಬಿಡುವುದು. ಪ್ರಹರಿಗಳಲ್ಲಿ ಒಬ್ಬನು ಜ್ಯೋತಿಷಿಯನ್ನು ನೋಡಿ:—"ಎಲೈ ಮೂಢನೇ, ಇದು ಅರಮನೆಯ ಮಹಾದ್ವಾರವೆಂಬುದು ಗೊತ್ತಿಲ್ಲವೇ? ಅತ್ತಿತ್ತ ನೋಡುತ್ತ ಒಳಗೇ ಹೊರಟಿರುವೆ? ಒಳಗೆ ಹೋಗಲು ಅಪ್ಪಣೆಯಿಲ್ಲ" ಎಂದು ಅವನನ್ನು ಹೊರತಳ್ಳಹೋದನು. ಈಗಂತೂ ಜ್ಯೋತಿಷಿಯು ನೆಲವನ್ನೇ ಹಿಡಿದುಬಿಟ್ಟನು. ಅವನ ಬಾಯಿಂದ ಮಾತುಗಳೇ ಹೊರಡಲಿಲ್ಲ. ತೇಲಗಣ್ಣು ಮೇಲಗಣ್ಣು ಹಾಕತೊಡಗಿದನು! ಅಷ್ಟರಲ್ಲಿ ದೂರ

ದಿಂದ ಕುದುರೆಯ ಖುರಗಳ ಸಪ್ಪಳವು ಕೇಳಬರತೊಡಗಿತು. ಒಬ್ಬ ಸವಾರನು ಅರಮನೆಯ ಕಡೆಯಿಂದ ಬಂದನು. ಅವನು ಮಹಾದ್ವಾರಗಲ್ಲಿ ನಡೆದಿರುವ ಈ ಸ್ಥಿತಿಯನ್ನೆಲ್ಲ ನೋಡಿ ಕುದುರೆಯಿಂದಿಳಿದು ಪ್ರಹರಿಗಳನ್ನು ಕುರಿತು:—"ಇವನಾರು? ಇಲ್ಲೇಕೆ ಇಷ್ಟು ಗದ್ದಲ ನಡೆಯಿಸಿರುವನು?" ಎಂದು ಕೇಳಿದನು.

ದ್ವಾರಪಾಲಕರು ಏನೂ ಅರಿಯದವರಂತೆ ಸುಮ್ಮನೆ ನಿಂತರು. ಅದನ್ನು ನೋಡಿ ಜ್ಯೋತಿಷಿಯು –"ನಾನೊಬ್ಬ ಹಿಂದೂ. ಜ್ಯೋತಿಷಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸಿಸಿರುವೆನು; ಫಾರಸೀ ಅರಬ್ಬೀ ಭಾಷೆಗಳನ್ನೂ ಅರಿತಿರುವೆನು; ನಿಮ್ಮ 'ರಮಲ'ವನ್ನೂ ಓದಿರುವೆನು." ಎಂದನು.

**ಸವಾರ:**—ನಿನಗೆ ಹಿಂದುಸ್ತಾನೀ ಭಾಷೆಯು ಬರುವುದೇ ?

**ಜ್ಯೋತಿಷಿ:**—ಅದು ನನ್ನ ಜನ್ಮ ಭಾಷೆ.

**ಸವಾರ:**— ಹಾಗಿದ್ದರೆ ನನ್ನ ಸಂಗಡ ರಾಜಸಭೆಗೆ ನಡೆ.

ಪ್ರಹರಿಗಳು ಸುಮ್ಮನೆ ಸರಿದುಹೋಗಿ ತಮ್ಮ ತಮ್ಮ ಸ್ಥಳಗಳಲ್ಲಿ ನಿಂತರು. ಜ್ಯೋತಿಷಿಯು ಮೆಲ್ಲಗೆ ಹೊರಟು—" ಅಚ್ಛಾ ! ಕೊತವಾಲಜೀ ! ನನ್ನನ್ನು ಯಾರು ಕರೆದರು? " ಎಂದು ಕೇಳಿದನು.

ಬೇರೆ ಸಮಯವಾಗಿದ್ದರೆ ಸವಾರನ ಕೈಯೊಳಗಿನ ಬೆತ್ತದಿಂದ ಜ್ಯೋತಿಷಿಗೆ ಒಂದೆರಡು ಹೊಡತಗಳಾದರೂ ಬೀಳುತ್ತಿದ್ದುವು. ಆದರೆ ಅವನಿಗೆ ಅವಕಾಶವಿರಲಿಲ್ಲ. ಇದೂ ಅಲ್ಲದೆ ಜ್ಯೋತಿಷಿಯು ಅವನನ್ನು "ಕೊತವಾಲಜೀ" ಎಂದು ಕರೆದಿದ್ದನು. ನಿಜವಾಗಿ ಸವಾರನು ಕೊತವಾಲನಲ್ಲ; ಫೌಜದಾರನೂ ಅಲ್ಲ. ಅದರಿಂದ ಸವಾರನಿಗೆ ತನ್ನನ್ನು "ಕೊತವಾಲಜೀ" ಎಂದು ಕರೆದ ಜ್ಯೋತಿಷಿಯ ಮೇಲೆ ಸಿಟ್ಟಿಗೇಳಲು ಮನಸ್ಸು ಒಪ್ಪಲಿಲ್ಲ. ಅವನು ನಕ್ಕು–" ಸ್ವತಃ ಬಾದಷಹರೇ ಕರೆಯಿಸಿರುವರು. ಹೆಚ್ಚಿಗೆ ಮಾತಾಡಬೇಡ. ಈಗ ಅವಕಾಶವಿಲ್ಲ"ಎಂದನು.

**ಜ್ಯೋತಿಷಿಯು:**—"ಒಳ್ಳೇದು, ಹಜರತ್!" ಎಂದು ನುಡಿದು ಸವಾರನ ಸಂಗಡ ಮಹಾದ್ವಾರವನ್ನು ದಾಟಿ ದರ್ಬಾರಿನ ಕಡೆಗೆ ನಡೆದನು.

---

# ನಾಲ್ಕನೆಯ ಪರಿಚ್ಛೇದ

ಜ್ಯೋತಿಷಿಯು ಸವಾರನೊಂದಿಗೆ ಬಾದಷಹನ ಸಭೆಗೆ ಹೊರಟನು. ಸಭಾಗೃಹದ ಸಮೀಪಕ್ಕೆ ಬಂದ ಕೂಡಲೆ ಸವಾರನು ಮುಂದೆ ಕೈಮಾಡಿ :— "ಅಲ್ಲಿ ಹೋಗಿ ಬಾದಷಹರ ದರ್ಶನಮಾಡು. ಅವರ ಅಪ್ಪಣೆಯಂತೆ ನಡೆದು ಕೋ." ಎಂದು ಹೇಳಿ, ತಿರುಗಿ ಹೋದನು. ಜ್ಯೋತಿಷಿಯು ಹಾಗೆಯೇ ಮುಂದಕ್ಕೆ ಹೋಗಿ ಬಾದಷಹನ ಮುಂದೆ ನೆಲಮುಟ್ಟಿ ಸಲಾಮು ಮಾಡಿ ನಿಂತು ಕೊಂಡನು. ಮತ್ತು "ಜಹಾಪನಾ! ಅಪ್ಪಣೆಯಾದರೆ ತಮ್ಮ ಪತ್ರವನ್ನು ನಾನು ಭಾಷಾಂತರಿಸಿ ಕೊಡುವೆನು. ನಾನು ಹಿಂದೂ. ಹಿಂದುಸ್ಥಾನೀ ಭಾಷೆ ಯನ್ನೂ ಫಾರಸೀ ಭಾಷೆಯನ್ನೂ ಚೆನ್ನಾಗಿ ಬಲ್ಲೆನು" ಎಂದು ಹೇಳಿದನು.

ಬಾದಷಹನು ವಿಸ್ಮಿತಸ್ವರದಿಂದ "ಪತ್ರದ ಭಾಷಾಂತರವನ್ನು ಮಾಡ ಬೇಕಾಗಿರುವುದೆಂದು ನಿನಗೆ ಯಾರು ಹೇಳಿದರು?" ಎಂದು ಕೇಳಿದನು.

ಜ್ಯೋತಿಷಿಯು ತನ್ನ ಬಗಲಿನಲ್ಲಿದ್ದ ಚೀಲದೊಳಗಿಂದ ಒಂದು ಕಾಳಿಯ ಪ್ರತಿಮೆಯನ್ನು ತೆಗೆದು ತೋರಿಸಿ, "ಈ ಮಹಾಮಾಯೆಯು ಹೇಳಿದಳು. ಈ ಜಗದಂಬೆಯು ಯಾವುದನ್ನು ತಾನೇ ಅರಿಯಳು? ಈ ಮಹಾಮಾಯೆಯ ಕರು ಣೆಯಿರುವವರೆಗೆ ನಾನು ತಮ್ಮ ಅಂತರಂಗದಲ್ಲಿರುವ ಸಕಲ ವಿಚಾರಗಳನ್ನೂ ತಿಳಿಯಬಲ್ಲೆನು. ಇಚ್ಛೆಯಿದ್ದರೆ ನನ್ನನ್ನು ಪರೀಕ್ಷಿಸಬಹುದು." ಎಂದನು.

**ಬಾದಷಹ**:— ಇರಲಿ, ನೀನು ಒಳ್ಳೇ ಜೋಯಿಸನಾಗಿ ತೋರುವೆ. ಆದರೆ ಎಚ್ಚರವಿರಲಿ! ದಿಲ್ಲೀಶ್ವರನ ಸಂಗಡ ಬಹು ಎಚ್ಚರದಿಂದ ವ್ಯವಹಾರ ಮಾಡಬೇಕು: ಸ್ವಲ್ಪ ಹೆಚ್ಚುಕಡಿಮೆಯಾದರೆ ಜೀವಕ್ಕೆ ಎರವಾಗಬೇಕಾದೀತು. ಈ ಪತ್ರವನ್ನು ನೀನು ಅಕ್ಷರಶಃ ಭಾಷಾಂತರಿಸಿ ಕೊಡಬಲ್ಲೆಯಾ? ಭಾಷಾಂತ ರವು ಸರಿಯಾಗಿದ್ದು ನನ್ನ ಮನಸ್ಸಿಗೆ ಬಂದರೆ, ೧೦೦ ಮೊಹರುಗಳು ಇನಾಮಾಗಿ ದೊರೆಯುವುವು. ಇಲ್ಲವಾದರೆ, ಜೀವವನ್ನು ಕಳೆದುಕೊಳ್ಳುವ ಪ್ರಸಂಗವು ಬಂದರೂ ಬರಬಹುದು. ಏನನ್ನುತ್ತೀ?

ಹೀಗೆನ್ನುತ್ತ ಬಾದಷಹನು ಪತ್ರವನ್ನು ಜ್ಯೋತಿಷಿಗೆ ಕೊಡಹೋದನು. ಜ್ಯೋತಿಷಿಯು ಅದನ್ನು ತೆಗೆದುಕೊಂಡು ಪುನಃ ಸಲಾಮು ಮಾಡಿದನು. ಜ್ಯೋತಿಷಿಗೆ ಮನಸ್ಸಿನಲ್ಲಿ ಹಿಡಿಸಲಾರದಷ್ಟು ಆನಂದವಾಯಿತು. ಔಷಧಕ್ಕಾಗಿ ಬೇಕಾಗಿದ್ದ ವನಸ್ಪತಿಯನ್ನು ದೊರಕಿಸಲು ಅಡವಡವಿ ಅಲೆದು ದೊರಕಿಸಲಾರದೆ ಮರಳಿ ಬರುವಾಗ ಅದು ತಲೆಬಾಗಿಲಿನಲ್ಲಿಯೇ ದೊರೆತರೆ ಆಗುವ ಆನಂದಕ್ಕಿಂತಲೂ ಹೆಚ್ಚಿನ ಆನಂದವು ಆ ಪತ್ರದ ದರ್ಶನಮಾತ್ರದಿಂದ ಅವನಿಗಾಯಿತು. ಅವನು ಅದನ್ನು ತನ್ನ ಬಗಲೊಳಗಿನ ಸಂಗ್ರಹದ ಚೀಲದಲ್ಲಿ ಇಟ್ಟುಕೊಂಡನು

ಆಗ **ಬಾದಷಹನು** — "ನಿನ್ನ ಸಂಗಡ ಇಬ್ಬರು ದೂತರು ಬರುವರು. ಅವರಿಗೆ ನಿನ್ನ ಗುಡಿಸಲನ್ನು ತೋರಿಸು. ಪತ್ರವನ್ನು ನಿನ್ನ ಸಂಗಡಲೇ ತೆಗೆದುಕೊಂಡು ಹೋಗು. ನಾಳೆ ಇಷ್ಟೇ ಹೊತ್ತಿಗೆ ಸರಿಯಾಗಿ, ಅದನ್ನೂ ಅದರ ಭಾಷಾಂತರವನ್ನೂ ತಿರುಗಿ ತೆಗೆದುಕೊಂಡು ಬಾ. ಇದಕ್ಕೆ ಒಂದು ವೇಳೆ ತಪ್ಪಿದರೆ ನಿನ್ನ ಜೀವನವು ಕೊನೆಗಂಡಿತೆಂದು ತಿಳಿ" ಎಂದನು.

**ಜೋತಿಷಿಃ**— ಜಹಾಪನಾ! ನಾಳೆ ಮುಂಜಾನೆಯೇ ಅವಶ್ಯವಾಗಿ ತಂದುಕೊಡುವೆನು. ಇದು ಎಷ್ಟು ಹೊತ್ತಿನ ಕೆಲಸ! ಎರಡುಗಳಿಗೆ ಪಟ್ಟಾಗಿ ಕುಳಿತರೆ ಕೆಲಸವು ಮುಗಿದು ಹೋಗುವುದು.

ಬಾದಷಹನು ಜ್ಯೋತಿಷಿಯ ಮಾತುಗಳನ್ನು ಕೇಳಿ ಸಂತೋಷಪಟ್ಟು— ನೀನು ನಿಜವಾಗಿಯೂ ಕುಶಲನಾಗಿಯೇ ತೋರುವೆ. ಆದರೆ ನಿನ್ನನ್ನು ಇನ್ನೊಂದು ಮಾತು ಕೇಳಬೇಕಾಗಿದೆ. ಹೇಗಿದ್ದರೂ ನೀನು ಜೋಯಿಸನು. ಗುಣಿಸಿ ಹೇಳು ನೋಡೋಣ. ಈ ಪತ್ರವು ಎಲ್ಲಿಂದ ಬಂದಿರುವುದು?

ಜ್ಯೋತಿಷಿಯು ಕ್ಷಣಕಾಲ ಏಕಾಗ್ರಚಿತ್ತ ಮಾಡಿಕೊಳ್ಳುವವನಂತೆ ನಟಿಸಿ, ನೆಲವನ್ನು ನೋಡುತ್ತ ನಿಂತುಕೊಂಡು, ತನ್ನ ಬಗಲೊಳಗಿನ ಗೊಂಬೆಯನ್ನು ಹೊರಗೆ ತೆಗೆದು ಕಿವಿಯ ಹತ್ತರವಿಟ್ಟುಕೊಂಡು, ಒಂದೆರಡು ನಿಮಿಷಗಳವರೆಗೆ ನಿಂತುಕೊಂಡನು. ಆ ಮೇಲೆ ಬಾದಷಹನನ್ನು ನೋಡಿ,— "ಜಹಾಪನಾ! ಇದು ಒಬ್ಬ ರಮಣಿಯ ಪತ್ರವು. ಚಿತ್ತೂರಿನ ರಾಣಿಯಾದ ಪದ್ಮಿನೀ ದೇವಿಯು ಗುರ್ಜರೇಶ್ವರಿ ಕಮಲಾದೇವಿಗೆ ಬರೆದಿರುವಳು."

ಬಾದಷಹನು ಆಶ್ಚರ್ಯಾತಿಶಯವನ್ನು ವ್ಯಕ್ತಪಡಿಸುತ್ತ– "ಚಿತ್ತೂರಿನ ರಾಣಿಯಾದ ಪದ್ಮಿನಿಯು ಬರೆದಿರುವಳೇ? ಭೀಮಸಿಂಹನ ಪತ್ನಿ? ಭುವನಸುಂದರಿಯೆಂದು ಹೆಸರು ಪಡೆದ ಪದ್ಮಿನಿ?" ಎಂದು ಕೇಳಿದನು.

**ಜ್ಯೋತಿಷಿಃ**— "ಕೇವಲ ರೂಪದಲ್ಲಿಯೇ ಅಲ್ಲ. ಜಹಾಪನಾ! ಗುಣದಲ್ಲಿಯೂ ಅವಳಿಗೆ ಸರಿಯಾದ ಸ್ತ್ರೀರತ್ನವನ್ನು ಸೃಷ್ಟಿಕರ್ತನು ಇನ್ನೆಲ್ಲಿಯೂ ಸೃಷ್ಟಿಸಿಲ್ಲ." ಎಂದನು.

ಬಾದಷಹನು ಗಾಂಭೀರ್ಯದಿಂದ ಪುನಃ ಮಾತಾಡಿದನುಃ— ಈ ಮಾತು ನಿಜವೆಂದು ನಂಬಲಾರೆನು. ನನ್ನ ಗುರ್ಜರೇಶ್ವರೀ ಬೇಗಮ್ಮಳಿಗೆ ಸರಿಯಾದ ಸುಂದರಿಯು ಜಗತ್ತಿನಲ್ಲಿ ಬೇರೆಯೊಬ್ಬಳಿರುವಳೆಂಬುದನ್ನು ನಾನು ಸರ್ವಥಾ ನಂಬಲಾರೆನು.

ಜ್ಯೋತಿಷಿಯ ಮುಖವು ಕಪ್ಪಾಯಿತು. ಎದೆಯು 'ಧಕ್, ಧಕ್' ಹಾರಲಾರಂಭಿಸಿತು ಆದರೆ ಏನು ಮಾಡುತ್ತಾನೆ? ಅವನು ಪುನಃ ಕೃತಕ ವಿನಯದಿಂದ ಹೇಳಿದನು—ಜಹಾಪನಾ! ಅಪರಾಧವನ್ನು ಕ್ಷಮಿಸಬೇಕು. ಸತ್ಯವಾದ ಸಂಗತಿಯನ್ನು ಮರೆಮಾಜಲಾರದೆ ಮಾತಾಡುವೆನು ತಮ್ಮ ಗುಜರಾಥೀ ಬೇಗಮ್ಮಳು ಚಿತ್ತೂರಿನ ಪದ್ಮಿನಿಯ ಮುಂದೆ ಹೆಂಗಸಲ್ಲ! ಸೂರ್ಯನ ಮುಂದಿನ ದೀಪದಂತೆ, ಅತುಲವಾದ ರೂಪಲಾವಣ್ಯಗಳಿಂದೊಪ್ಪುವ ಪದ್ಮಿನಿಯ ಮುಂದೆ, ತಮ್ಮ ಕಮಲೆಯು ಕೇವಲ ಕುರೂಪಿಯೇ ಸರಿ; ನಾನು ಇಬ್ಬರನ್ನೂ ಕಣ್ಣಾರೆ ಕಂಡಿರುವೆನು.

ಎಂಥ ಉದ್ಧಾಮತನವಿದು! ಅಲ್ಲಾವುದ್ದೀನನು ರೇಗಿಹೋದನು. ಅವನು— "ಮೂರ್ಖನೇ, ಬುದ್ಧಿಯನ್ನು ಎಲ್ಲಿಟ್ಟಿರುವೆ? ಪ್ರತ್ಯಕ್ಷ ನನ್ನ ಮುಂದೆಯೇ ನನ್ನ ಬೇಗಮಳನ್ನು ಈ ಪರಿಯಾಗಿ ನಿಂದಿಸುವ ನಿನ್ನ ಧೈರ್ಯವೆಂಥದದು! ನೀನೆಂದು ಕ್ಷಮಿಸುವೆನು. ಬೇರೊಬ್ಬನಾಗಿದ್ದರೆ ಇಷ್ಟು ಹೊತ್ತಿಗೆ ಅವನ ನಾಲಿಗೆಯು ಹೋಳಾಗಿ ಬೀಳುತ್ತಿತ್ತು! ಇಂಥ ಉದ್ಧಾಮತನವನ್ನು ಇನ್ನೊಮ್ಮೆ ತೋರಿಸಿದೆಯಾದರೆ ನನಗೆ ಎಂದೂ ಸಹನವಾಗದು. ಎಚ್ಚರದಿಂದಿರು. ನೀನು ಜೋಯಿಸನು, ನಿನ್ನಿಂದ ನನ್ನ ಕೆಲಸವಾಗತಕ್ಕದ್ದಿರುವುದು. ಆದುದರಿಂದ ಸುಮ್ಮನೆ ಬಿಟ್ಟೆನು. ಇನ್ನೊಂದು ಮಾತು ಕೇಳುತ್ತೇನೆ. ವಿಚಾರ

ಮಾಡಿ ಹೇಳು. ಈ ಪತ್ರವು ಬೇಗಮ್ಮಳ ಬಳಿಗೆ ಹೇಗೆ ಬಂದಿತು?" ಎಂದನು.

ಜ್ಯೋತಿಷಿಯು ಪುನಃ ತನ್ನ ದೃಷ್ಟಿಯನ್ನು ಕೆಳಗೆ ತಗ್ಗಿಸಿ ತನ್ನ ಮಹಾ ಮಾಯೆಯನ್ನು ಹೊರಗೆ ತೆಗೆದು ಕಿವಿಯಹತ್ತರವಿಟ್ಟುಕೊಂಡು ಬಾದಷಹನ ಮುಖವನ್ನು ನೋಡಿ ತಲೆದೂಗುತ್ತ—"ಸರಿ, ಸರಿ." ಎಂದನು.

ಬಾದಷಹನು ಏನೆಂದು ಕೇಳಿದನು.

**ಜ್ಯೋತಿಷಿ** —ಜಹಾಪನಾ ! ಕೆಲವು ದಿನಗಳಿಂದಲೂ ತಮ್ಮ ಅಂತಃಪುರ ದಲ್ಲಿ ಅತಿ ರಹಸ್ಯವಾದ ಸಂಗತಿಗಳು ನಡೆಯಹತ್ತಿರುವವು. ಯಾವನೋ ಒಬ್ಬ ರಜಪೂತನು ಚಿತ್ತೂರಿನಿಂದ ಈ ಪತ್ರವನ್ನು ತೆಗೆದುಕೊಂಡು ಬಂದನು. ಆ ಮೇಲೆ ತಮ್ಮ ಅಂತಃಪುರದ ದಾಸಿಯೊಬ್ಬಳನ್ನು ಕೈಯಲ್ಲ ಹಾಕಿಕೊಂಡನು. ಅವಳು ಬೇಗಮ್ಮಳ ಜನಾನಖಾನೆಯ ಕಾವಲುಗಾರಳಿಗೆ ಸಾರಾಯಿಯಲ್ಲಿ ವಿಷ ಕೂಡಿಸಿ ಕುಡಿಸಿ ಅವಳು ಎಚ್ಚರದಪ್ಪಿ ಮಲಗಿಕೊಂಡಿರಲು ಒಳಗೆ ಹೋಗಿ ಅವಳ ಹಾಸಿಗೆಯ ಮೇಲೆ ಪತ್ರವನ್ನು ಮುಚ್ಚಿಟ್ಟು ಬಂದಿರುವಳು.

ಬಾದಷಹನಿಗೆ ಇನ್ನಿಲ್ಲದಷ್ಟು ಆಶ್ಚರ್ಯವೂ ವಿಸ್ಮಯವೂ ಉಂಟಾದುವು. ಸಂಗಡಲೇ ತುಸು ಕೋಪವೂ ಬಂದಿತು. ಅವನು;—"ಆ! ಅಂತಃಪುರದ ದಾಸಿ ಯರಲ್ಲಿ ಇಂಥ ಸಂಚುಗಾರಳೇ? ಆರವಳು? ಅವಳ ಹೆಸರನ್ನಷ್ಟು ಹೇಳಿದರೆ ನಿನ್ನ ಮುಂದೆಯೇ ತಲೆಗಡಿಸಿ ಅವಳ ಆಯುಷ್ಯವನ್ನು ಪೂರೈಸುವೆನು. ಅವಳ ಹೆಸರೇನು?" ಎಂದು ಕೇಳಿದನು.

**ಜ್ಯೋತಿಷಿ**—ಜಹಾಪನಾ! ಕ್ಷಮಿಸಬೇಕು. ಆ ಮಾತನ್ನಷ್ಟು ತಾವು ದಯವಿಟ್ಟು ಕೇಳಬಾರದು. ಹೀಗಾದರೆ ಜಗತ್ತು ನಡೆಯುವುದು ಕಠಿನವಾದೀತು. ಆ ದಾಸಿಯನ್ನು ಗೊತ್ತು ಹಚ್ಚುವುದು ತಮ್ಮ ದರಬಾರದೊಳಗಿನ ಕೊತ್ತವಾಲ ಸಾಹೇಬರ ಕೆಲಸವು. ನನ್ನನ್ನು ತಾವು ಈ ಮಾತಿಗಾಗಿ ನಿರ್ಬಂಧಿಸಕೂಡದು.

ಅಲ್ಲಾವುದ್ದೀನನಿಗೆ ಆ ಮಾತೂ ಸರಿಯಾಗಿ ತೋರಿತು. ಮತ್ತು ಮೊದಲು ಬೇಗಮ್ಮಳಿಂದ ತನಗೆ ಗೊತ್ತಾಗಿದ್ದ ಎಲ್ಲ ಸಂಗತಿಗಳನ್ನು ಜ್ಯೋತಿ ಷಿಯು ಅಕ್ಷರಶಃ ಹೇಳಿದುದರಿಂದ ಅವನ ವಿಷಯವಾಗಿ ಒಂದು ತರದ ಪೂಜ್ಯ ಭಾವನೆಯು ತಾನಾಗಿಯೇ ಉದಯವಾಗಿತ್ತು, ಅದರಿಂದ ಅವನು ಜ್ಯೋತಿಷಿ ಯನ್ನು ಹೆಚ್ಚಾಗಿ ಬಲಾತ್ಕರಿಸಲಿಲ್ಲ. ಅವನು:—' ಒಳ್ಳೆಯದು, ಈಗ ಹೋಗು.

ನಾಳೆ ಮುಂಜಾನೆ ಮಾತ್ರ ತಪ್ಪದೆ ಆ ಪತ್ರದ ಭಾಷಾಂತರವನ್ನು ತೆಗೆದುಕೊಂಡು ಬಾ' ಎಂದನು. ಅಷ್ಟರಲ್ಲಿ ಅವನಿಗೆ ಮತ್ತೊಂದು ಮಾತು ನೆನಪಾಯಿತು. ಅವನು ಜ್ಯೋತಿಷಿಯನ್ನು ಕುರಿತು—" ಈ ತರದ ಸಾಹಸವನ್ನು ಮಾಡಿ ಬೇಗ ನಮ್ಮಳಿಗೆ ಪತ್ರವನ್ನು ಬರೆದು ಇಷ್ಟೊಂದು ಗುಪ್ತ ಕಾರ್ಯಭಾರಗಳನ್ನು ನಡೆಯಿಸುವುದರಲ್ಲಿ ಪದ್ಮಿನೀ ರಾಣಿಯ ಉದ್ದೇಶವೇನಿರುವುದು? ಅವಳು ನಮ್ಮ ಜನಾನಖಾನೆಗೆ ಬರಲು ನಮ್ಮತಿಸಬಹುದೇ? ಹೇಳು ನೋಡೋಣ" ಎಂದನು. ಪರಾಣನ ಅಂತರಂಗದಲ್ಲಿ ಒಂದು ಆಶಾಂಕುರವು ಹುಟ್ಟಿತು. ಅವನು ಕುತೂಹಲ ಪೂರ್ಣ ದೃಷ್ಟಿಯಿಂದ ಜ್ಯೋತಿಷಿಯ ಮುಖವನ್ನು ನೋಡುತ್ತ ಕುಳಿತನು.

ಜ್ಯೋತಿಷಿಯು ಎಡಗೈಯಿಂದ ನೊಸಲನ್ನು ಹಿಡಿದು ಹಿಸುಕಿಕೊಳ್ಳುತ್ತ— "ಜಹಾಪನಾ! ಈ ಪ್ರಶ್ನೆಯ ಉತ್ತರವನ್ನು ನಾಳೆ ಹೇಳುವೆನು. ಅವಳ ಪತ್ರವನ್ನು ನೋಡಿದರೆ ಎಲ್ಲವೂ ತಾನಾಗಿಯೇ ತಿಳಿದುಬರುವುದು. ಈಗೇಕೆ ನಾನು ತಮ್ಮ ಮನಸ್ಸನ್ನು ನೋಯಿಸಲಿ? ಪದ್ಮಿನಿಯು ಸಾಮಾನ್ಯಳಲ್ಲ. ಕ್ಷತ್ರಿಯ ಪುತ್ರಿಯು. ವೀರಪತ್ನಿಯೂ ವೀರಪರಿವೃತಳೂ ಆಗಿರುವಳು. ಅವಳ ವಿಚಾರವನ್ನು ನಾನು ಏನೆಂದು ಹೇಳಲಿ? ಅವಳನ್ನು ಸಂಪಾದಿಸುವುದು ತಮಗೆ ಸಾ... ಧ್ಯ...ವಿ..." ಕೊನೆಗೆ ತಲೆಯನ್ನು ತೂಗಿಬಿಟ್ಟನು. ಅಕ್ಷರವನ್ನು ಉಚ್ಚರಿಸಲಿಲ್ಲ.

ಜ್ಯೋತಿಷಿಯ ಉದ್ದೇಶವು ಸಾಧಿಸಿತು. ಅಲ್ಲಾವುದ್ದೀನನ ಸ್ವಾಭಿಮಾನಕ್ಕೆ ಆಘಾತವುಂಟಾಯಿತು. ಅವನು ತುಳಿದೆಬ್ಬಿಸಿದ ಭುಜಂಗನಂತೆ ಬುಸುಗುಟ್ಟುತ್ತ ಹೇಳಿದನು —" ಹಿಂದುಸ್ತಾನದ ಬಾದಷಹನಿಗೆ ಅಸಾಧ್ಯವಾದ ಕಾರ್ಯವು ಜಗತ್ತಿನಲ್ಲಿ ಇರುವುದೇ? ನೋಡೋಣ ! ಆ ಕ್ಷತ್ರಿಯರ ಕ್ಷತ್ರಿಯತ್ವವನ್ನಾದರೂ ಪರೀಕ್ಷಿಸೋಣ ಒಳ್ಳೆಯದು, ನೀನು ಮನೆಗೆ ಹೋಗು. ಇವರಿಬ್ಬರು ನಿನ್ನ ಸಂಗಡ ಬರುವರು. ಇವರಿಗೆ ನಿನ್ನ ಮನೆಯನ್ನು ತೋರಿಸು." ಎಂದು ಹೇಳುತ್ತ ಬಳಿಯಲ್ಲಿದ್ದ ಸೇವಕರಿಗೆ ಸನ್ನೆಯಿಂದ ಆಜ್ಞಾಪಿಸಿದನು.

ಜ್ಯೋತಿಷಿಯು ಬಾದಷಹನಿಗೆ ತಲೆವಾಗಿ ಸಲಾಮುಮಾಡಿ ಸಭಾಗೃಹದಿಂದ ಹೊರಟು ಹೋದನು. ಆಗ ಅವನ ಮನಸ್ಸಿನಲ್ಲಿ ಆನಂದ, ರೋಷ, ಕುನಸು ಮುಂತಾದ ಹಲವು ಭಾವನೆಗಳು ಏಕಕಾಲಕ್ಕೆ ಉದಯ ಹೊಂದಿದುವು. ಅವನು ಇಂದ್ರಿಯಪರವಶತೆಯಿಂದ ತತ್ತರಗೊಳ್ಳುತ್ತಿದ್ದನು.

# ಐದನೆಯ ಪರಿಚ್ಛೇದ

ಮನೆಗೆ ತಿರುಗಿ ಬಂದಬಳಿಕ ಜ್ಯೋತಿಷಿಯು ಒಳಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡು ಪದ್ಮಿನಿಯ ಪತ್ರವನ್ನು ಓದಿ ನೋಡಿದನು. ಅದರಿಂದ ಅವನಿಗೆ ಒಮ್ಮೆ ಅತ್ಯಂತ ಆನಂದವಾಯಿತು. ಪತ್ರದಲ್ಲಿ ಆರಂಭದಿಂದ ಕೊನೆಯವರೆಗೂ ಅವನಿಗೆ ಬೇಕಾಗಿದ್ದ ಸಂಗತಿಗಳೇ ಇದ್ದುವು. ಪದ್ಮಿನಿಯು ಆ ಪತ್ರದಲ್ಲಿ ಅಲ್ಲಾವುದ್ದೀನನಿಗೆ ತಾನಾಗಿಯೇ ಆಮಂತ್ರಣವನ್ನು ಕಳುಹಿಸಿದ್ದಳು.

ಅವನು ಆ ಪತ್ರವನ್ನು ಮತ್ತೊಮ್ಮೆ ಓದಿದನು. ಈ ಸಲ ಅವನ ಮನೋವೃತ್ತಿಯು ತೀರ ಬದಲಾಗಿದ್ದಿತು. ಪ್ರತಿವಾಕ್ಯಕ್ಕೊಮ್ಮೆ ಕಣ್ಣೊರಸಿಕೊಳ್ಳದೆ ಮುಂದೆ ಓದಲು ಬರುತ್ತಿರಲಿಲ್ಲ. ಒಮ್ಮೆ ರೋಷ ಇನ್ನೊಮ್ಮೆ ಇನ್ನಿಲ್ಲದಷ್ಟು ವ್ಯಾಕುಲ ಮತ್ತೊಮ್ಮೆ ಅತಿಶಯವಾದ ಆಶ್ಚರ್ಯ ಇವುಗಳಿಂದ ಅವನು ಅಧೀರನಾಗಿದ್ದನು.

ಮಹಾಶಯರೇ! ಪೂರ್ವೋಕ್ತ ಜೋಯಿಸನು ಗುರ್ಜರೇಶ್ವರನಾದ ಕರಣರಾಯನೇ ಎಂಬುದನ್ನು ತಾವು ಈಗಾಗಲೇ ತರ್ಕಿಸಿರಬಹುದು. ಕರಣರಾಯನು ಅಲ್ಲಾವುದ್ದೀನನನ್ನು ಚಿತ್ತೂರಿಗೆ ದಂಡೆತ್ತಿ ಕಳುಹಿಸುವ ಉದ್ದೇಶದಿಂದ ಇಲ್ಲಿಗೆ ಬಂದು ಇಷ್ಟೊಂದು ಕಾರ್ಯಭಾಗಗಳನ್ನು ನಡೆಯಿಸಿದ್ದನು. ಆದರೆ ಪದ್ಮಿನಿಯು ತಾನಾಗಿಯೇ ಅಲ್ಲಾವುದ್ದೀನನಿಗೆ ಆಮಂತ್ರಣವನ್ನು ಕಳುಹಿಸಬಹುದೆಂದು ಅವನು ಯೋಚಿಸಿರಲಿಲ್ಲ.

ನೀಚನೂ ವಿಶ್ವಾಸಘಾತಕಿಯೂ ಆದ ಮ್ಲೇಂಛನಿಗೆ ಆತ್ಮಸಮರ್ಪಣ ಮಾಡಿದೆಯೆಂದೂ ಹಿಂದೂ ಲಲನೆಯರ ಮುಖಕ್ಕೆ ಮಸಿಯನ್ನು ಬಳಿದೆಯೆಂದೂ ಸತೀಧರ್ಮವನ್ನೂ ಹಿಂದೂಧರ್ಮವನ್ನೂ ಕೂಡೇ ಪರಿತ್ಯಜಿಸಿ ನರಕದ ಮಾರ್ಗದಲ್ಲಿ ಕಾಲಿಟ್ಟಿರುವೆಯೆಂದೂ ಪದ್ಮಿನಿಯು ಕಮಲೆಯನ್ನು ತಿರಸ್ಕರಿಸಿರುವುದನ್ನು ನೋಡಿ, ಅಲ್ಲಾವುದ್ದೀನನು ಎಂದೂ ಸುಮ್ಮನಿರಲಾರನೆಂದೂ

ಅವನು ಅವಶ್ಯವಾಗಿಯೂ ಪದ್ಮಿನಿಯ ಗರ್ವವನ್ನು ಮುರಿಬಡಿಯುವ ಉದ್ಯೋಗ ವನ್ನು ಆರಂಭಿಸದೆ ಬಿಡನೆಂದೂ ಕರಣರಾಯನು ನಿಶ್ಚಯಿಸಿಕೊಂಡನು.

ಕರಣರಾಯನು ಸ್ವಲ್ಪ ಹೊತ್ತಿನಲ್ಲಿಯೇ ಪದ್ಮಿನಿಯ ಪತ್ರವನ್ನು ಅಕ್ಷರಶಃ ಫಾರ್ಶೀ ಭಾಷೆಯಲ್ಲಿ ಭಾಷಾಂತರಿಸಿದನು. ಅದರ ತಾತ್ಪರ್ಯವು ಈ ರೀತಿ ಯಾಗಿದ್ದಿತು:—

“ ಪ್ರಿಯಭಗಿನಿ,

ನೀನು ದಿಲ್ಲೀಶ್ವರಿಯಾಗಿರುವೆಯಂತೆ, ಪಠಾಣನ ಬೇಗಮಳಾಗಿರುವಿ ಯಂತೆ ! ಅತಿ ಚಮತ್ಕಾರವಾದ ಸಂಗತಿಯಿದು. ನಾನು ನಿನ್ನನ್ನು ಇನ್ನು ಭಗಿ ನಿಯೆಂದು ಕರೆಯಲಾರೆನು. ನನಗೆ ನಾಚಿಕೆಯಾಗುವುದು. ಹಿಂದೂವಾಗಿ ಹುಟ್ಟಿ ಹಿಂದೂವಾಗಿ ಬೆಳೆದು ಕಡೆಗೆ ಪಠಾಣನನ್ನು ಕೂಡಿದೆ. ಅದೂ ಅಪರವಯಸ್ಸಿ ನಲ್ಲಿ! ವಿಚಾರವೇನೋ ಅಬದ್ಧವಾಗಿಯೇ ತೋರುವುದು. ಆದರೆ ವಿಶ್ವಾಸ–ಅವಿಶ್ವಾಸಗಳಿಗೆ ಇನ್ನೆಲ್ಲಿ ಅವಕಾಶವಿದೆ ? ನೀನು ಬೇಗಮಳಾಗಿ ದಿಲ್ಲಿಗೆ ಹೋಗಿ ರುವೆಯೆಂದು ನಿನ್ನ ಪತಿಯೇ ಬರೆದಿರುವನು !

ಗುರ್ಜರೇಶ್ವರನ ಅರಮನೆಯಲ್ಲಿ ನಿನಗೆ ಯಾವ ಸುಖಸಾಮಗ್ರಿಗಳಿಗೆ ಕೊರತೆಯಾಗಿತ್ತೋ ತಿಳಿಯದು. ಆದರೆ, ಮುಸಲ್ಮಾನ ಧರ್ಮ ಮತ್ತು ಪಠಾ ಣನ–ಅದೂ ವಂಚಕ ಶಿರೋಮಣಿಯಾದ ನೀಚನ–ರೌದ್ರ ಸೌಂದರ್ಯ ಇವೇ ನಿನ್ನ ಅಪೇಕ್ಷಣೀಯ ವಸ್ತುಗಳಾಗಿದ್ದರೆ ಮಾತ್ರ ಉಪಾಯವಿಲ್ಲ. ಅವು ನಿನಗೆ ಗುರ್ಜರೇಶ್ವರನ ಅರಮನೆಯಲ್ಲಿ ದೊರೆಯುವಂತಿರಲಿಲ್ಲ. ಹೀಗಿದ್ದರೆ ಭಗ ವಂತನು ನಿನ್ನನ್ನು ಪಠಾಣರ ಹೊಟ್ಟೆಯಲ್ಲಿ ಹಾಕುವುದಕ್ಕೆ ತಪ್ಪಿ ಹಿಂದೂಗಳ ಗರ್ಭದಲ್ಲಿ ಜನ್ಮಕೊಟ್ಟನೆಂದು ಹೇಳಬೇಕಾಗುವುದು. ನೀನು ನಿಜವಾದ ಹಿಂದೂ ಅಬಲೆಯಾಗಿದ್ದರೆ ಯವನನ ಸಹವಾಸವನ್ನು ಎಂದೂ ಒಪ್ಪಿಕೊಳ್ಳುತ್ತಿರಲಿಲ್ಲ.

ಭಗಿನಿ, ನೀನು ಬಲ್ಲೆಯಷ್ಟೇ ?—ಹಿಂದೂ ರಮಣಿಯರಿಗೆ ಪತಿಯೇ ದೇವರು; ಪತಿಯೇ ಅವರ ಧರ್ಮ, ಸತೀಧರ್ಮಕ್ಕಿಂತಲೂ ಪರತರವಾದ ಧರ್ಮವು ಅವರಿಗೆ ಬೇರೊಂದಿಲ್ಲ. ಹೀಗಿದ್ದು ಇಂತಹ ದುಷ್ಕೃತ್ಯವು ನಿನ್ನಿಂದ

ಹೇಗೆ ಘಟಿಸಿತವ್ವಾ? ಆಶ್ಚರ್ಯ! ಆಶ್ಚರ್ಯ!! ಅದೂ ಹಾಗಿರಲಿ, ಧರ್ಮ ಕರ್ಮಗಳ ವಿಚಾರವು ಜ್ಞಾನಿಗಳಿಗೆ. ಆದರೆ ನಿನ್ನ ಮನಸ್ಸಾದರೂ ಯವನನ ಸಹವಾಸವನ್ನು ಹೇಗೆ ಒಪ್ಪಿಕೊಂಡಿತು? ಹಿಂದಿನ ಸಂಸಾರವನ್ನೆಲ್ಲಾ ಒಮ್ಮೆಲೇ ಹೇಗೆ ಮರೆತು ಬಿಟ್ಟೆ? ಲೋಭವು ವಿವೇಕವನ್ನು ಗೆಲ್ಲುವುದುಂಟು ಆದರೆ ನಿನ್ನ ಅಂತರಂಗದಲ್ಲಿ ಇಂತಹ ಅಕಲ್ಪಿತವಾದ ಲೋಭವು ಹೇಗೆ ಉಂಟಾಯಿತೋ ತಿಳಿಯಲಾರೆನು! ಇದೇ ಆಶ್ಚರ್ಯದ ಸಂಗತಿಯು! ಯಾವ ನಿರ್ಭಾಗ್ಯನು ನಿನ್ನನ್ನು ಹೃದಯೇಶ್ವರಿಯೆಂದು ಭಾವಿಸಿಕೊಂಡಿದ್ದನೋ, ಯಾವನು ನಿನಗೆ ತನ್ನ ಶರೀರದಲ್ಲಿ ಆತ್ಮನಿಗೆ ಸರಿಯಾದ ಸ್ಥಾನವನ್ನು ಕೊಟ್ಟು ನಿನ್ನನ್ನು ಮನ್ನಿಸುತ್ತಿದ್ದನೋ, ಯಾವನು ನೀನೇ ತನ್ನ ಸರ್ವಸ್ವವೆಂದು ತಿಳಿದುಕೊಂಡಿದ್ದನೋ, ಎಲ್ಲಕ್ಕೂ ಹೆಚ್ಚಿನದೆಂದರೆ, ಯಾವನಿಂದ ನೀನು ಸಂತಾನವನ್ನು ಕೂಡ ಪಡೆದಿದ್ದೆಯೋ ಅಂತಹ ನಿನ್ನ ಸ್ವಾಮಿಯನ್ನು ನೀನು ಮರೆತುಬಿಟ್ಟೆಯಲ್ಲವೇ? ಯಾವನ ಸೇವಾಶುಶ್ರೂಷೆಗಳನ್ನು ಮಾಡಿಕೊಂಡಿರುವುದು ನಿನ್ನ ಕರ್ತವ್ಯವಾಗಿತ್ತೋ, ಯಾವನು ನಿನಗೆ ಇಹಪರಗಳಲ್ಲಿ ಮಾರ್ಗದರ್ಶಕನಾಗಿದ್ದನೋ ಅವನು ನಿನ್ನ ಪ್ರೇಮಕ್ಕೆ ಪಾತ್ರನಾಗಿರದೆ, ಯಾವನೋ ಒಬ್ಬ ಪರಧರ್ಮದ ನೀಚನು ನಿನ್ನ ಅನುರಾಗಕ್ಕೆ ಒಳಗಾದನೆಂಬುದನ್ನು ಕೇಳಿ ಯಾರು ಆಶ್ಚರ್ಯ ಚಕಿತರಾಗಲಿಕ್ಕಿಲ್ಲ? ಯಾರು ನಿನ್ನ ಮೋರೆಯ ಮೇಲೆ ಉಗುಳಲಿಕ್ಕಿಲ್ಲ? ನೀನು ಮ್ಲೇಂಛರ ಸಹವಾಸದಿಂದ ಅಧಃಪತಿತಳಾಗಿ ಹೋಗುವೆಯೆಂದು ನಾನು ಮೊದಲೇ ತರ್ಕಿಸಿದ್ದೆನು. ಎಂದು ನಿನ್ನ ಸಂಗಡ ದುಷ್ಟಳಾದ **ಮತಿಯಾ** ದಾಸಿಯನ್ನು ನೋಡಿದೆನೋ ಅಂದೇ ನನ್ನ ಮನಸ್ಸಿನಲ್ಲಿ ಒಮ್ಮೆ ಈ ತರದ ಭಾವನೆಯೂ ಉಂಟಾಗಿದ್ದಿತು. ಅದೇ ಇಂದು ನಿಜವಾಗಿ ಹೋಯಿತು. ಅವಳೇ ನಿನ್ನನ್ನು ನರಕದ ಮಾರ್ಗದಲ್ಲಿ ಕೈಹಿಡಿದು ಕರೆದುಕೊಂಡು ಹೋದಳು.

ಭಗಿನಿ, ನಿನಗೊಬ್ಬಳು ಮಗಳಿರುವಳಂತೆ. ಅವಳ ಮುಖವನ್ನು ನೋಡಿ ಅದರಲ್ಲಿ ಯಾರ ಮುಖಲಕ್ಷಣವು ಬಿಂಬಿತವಾಗಿರುವುದೆಂಬುದನ್ನು ಆಲೋಚಿಸಿರುವೆಯಾ? ಅವನಿಗೂ ನಿನಗೂ ಎಂತಹ ಸಂಬಂಧವಿದ್ದಿತು? ಅವನಿಗೆ ನೀನು ಎಷ್ಟೊಂದು ಋಣಿಯಾಗಿರುವೆಯೆಂಬುದನ್ನು ಭಾವಿಸಿದೆಯಾ? ಸುಖೋಪ

ಭೋಗದ ಆಶೆಯಿಂದ ಪರಾಣನನ್ನು ಕೂಡಿದೆಯೆಂದು ಹೇಳಬೇಕೇ? ಅದನ್ನೂ ಹೇಳಲಾರೆನು. ಇರಲಿ, ಒಮ್ಮೆ ಹಾಗೆಯೇ ತಿಳಿದುಕೊಳ್ಳೋಣ, ಆದರೆ ಆ ನಿನ್ನ ಅಲ್ಪಕಾಲದ ಅಸ್ಥಿರವಾದ ಸುಖೋಪಭೋಗಗಳಿಗೆ ನೀನು ಎಷ್ಟು ಬೆಲೆ ಕೊಡ ಬೇಕಾಯಿತೆಂಬುದನ್ನು ಇನ್ನೊಮ್ಮೆ ಯೋಚಿಸಿ ನೋಡು. ಪ್ರಾಣಕ್ಕಿಂತಲೂ ಹೆಚ್ಚಿನದಾದ ಮಾನವನ್ನು ತೊರೆದೆ! ಜಾತಿಧರ್ಮವನ್ನೂ ಸತೀಧರ್ಮವನ್ನೂ ಕಾಲಿನಿಂದ ತುಳಿದು ಬಿಟ್ಟೆ! ಇಷ್ಟೆಲ್ಲ ಮಾಡಿ ಸಂಪಾದಿಸಿದೆಯಾದರೂ ಏನು? ಕೇವಲ ಅಪಕೀರ್ತಿ, ನೀಚಪರಾಣನ ಸಹವಾಸ! ನಾಲ್ಕು ದಿನ ನಿನ್ನನ್ನು ಯವ ನರು ರಾಜರಾಜೇಶ್ವರಿಯೆಂದು ಕರೆಯಬಹುದು! ನೀನು ಯವನನ ತೊಡೆಯ ಮೇಲೆ ಮೆರೆಯಬಹುದು! ಆದರೆ ಮುಂದೆ ನಿನ್ನ ಗತಿಯು ಏನಾಗಬಹುದೆಂದು ಒಮ್ಮೆಯಾದರೂ ಆಲೋಚಿಸಿರುವೆಯಾ?

ಭಗಿನಿ, ಇದಕ್ಕೂ ಹೆಚ್ಚಿಗೆ ಏನು ಬರೆಯಲಿ? ನೀನು ಭಾರತಮಾತೆಯ ಶ್ರೇಷ್ಠವಾದ ಕಿರೀಟದಲ್ಲಿ ಕೂಡ್ರಿಸಿದ ಕಳಂಕವು ಎಷ್ಟು ಕಾಲ ತಪನ್ನು ಮಾಡಿ ದರೆ ಆ ಪುಣ್ಯದಿಂದ ತೊಳೆದು ಹೋಗಬಹುದು? ನೀನು ಮಾಡಿದ ಪಾಪವು ನಿನ್ನೊಬ್ಬಳನ್ನೇ ಪೀಡಿಸದು. ನೀನು ಗರ್ಜರೇಶ್ವರನ ಅರ್ಧಾಂಗಿ, ಸಹಸ್ರ ಸಹಸ್ರ ನಾರಿಯರಿಗೆ ಮಾರ್ಗದರ್ಶಕಳು. ಆ ನಿನ್ನ ಪ್ರಜೆಗಳೆಲ್ಲರೂ ನಿನ್ನ ಸುನೀತಿ ಸುವಿಚಾರಗಳನ್ನು ಅನುಕರಿಸಿ ನಡೆಯಬೇಕು! ಕಮಲೆ! ನಿನ್ನಿಂದ ಎಂತಹ ಅಪರಾಧವು ಘಟಿಸಿತಮ್ಮಾ! ಆದ್ದುದ್ದು ಆಗಿ ಹೋಯಿತು. ಇನ್ನಾದರೂ ಅದಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಪಡೆ!

ಲಕ್ಷಾವಧಿಯಾಗಿ ಹಿಂದೂ ರಮಣಿಯರು ನಿನ್ನ ಪ್ರಾಯಶ್ಚಿತ್ತದ ವಾರ್ತೆ ಯನ್ನು ಕೇಳಲು ಕಿವಿಯೆತ್ತಿ ಕುಳಿತಿರುವರು. ಅವರ ಆಶೆಯನ್ನು ಭಂಗಮಾಡ ಬೇಡ. ಕರ್ತವ್ಯಪಾಲನೆಗೆ ಹಿಂದೆ ಮುಂದೆ ನೋಡಬೇಡ. ನಿಶ್ಚಯವಾಗಿ ತಿಳಿ ದಿರು:— "ಒಂದುವೇಳೆ ನೀನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿದ್ದರೆ ಅವರೇ ನಿನಗೆ ಪ್ರಾಯಶ್ಚಿತ್ತವನ್ನು ಮಾಡುವರು! ಆಗ ನೀನೇನು ಮಾಡುವೆ?"

ಭೀಮಸಿಂಹವನಿತಾ— "**ಪದ್ಮಿನಿ**"

ಮೂರನೆಯ ದಿನ ರಾತ್ರಿಯು ಬಹಳವಾಗಿ ಕಳೆದು ಹೋಗಿತ್ತು. ಕಮಲಾ ಬೇಗಮಳು ತನ್ನ ಶಯನಮಂದಿರದಲ್ಲಿ ಬಾದಷಹನ ಆಗಮನವನ್ನು ನಿರೀಕ್ಷಿಸುತ್ತ ಲಿದ್ದಳು. ಎಷ್ಟು ಹೊತ್ತಾದರೂ ಬಾದಷಹನು ಬರದೆ ಇದ್ದುದನ್ನು ನೋಡಿ ಬೇಸರಗೊಂಡು ಕಾಲಕೆಳಗಿದ್ದ ಕಾಶ್ಮೀರದ ಜರತಾರಿಯ ಶಾಲನ್ನು ಎಳೆದು ಕೊಂಡು ಮುಸುಕುಹಾಕಿ ಮಲಗಿಕೊಂಡಳು. ಸುಮಾರು ಮಧ್ಯರಾತ್ರಿಯ ಸಮಯಕ್ಕೆ ಅಲ್ಲಾವುದ್ದೀನನು ಮೆಲ್ಲಡಿಯಿಡುತ್ತ, ಮೆಲ್ಲಗೆ ನಗುತ್ತ, ಅಲ್ಲಿಗೆ ಬಂದನು. ಆದರೆ ಪ್ರಯೋಜನವೇನು ? ಅವನನ್ನು ಆದರಿಸಿ ಕರೆದೊಯ್ದು ಕುಳ್ಳಿರಿಸುವವರಾರು ? ಅವನ ಆನಂದಕ್ಕೆ ಸಹಾಯಕಾರಿಗಳಾರು ? ಅವನು ಒಳಗೆ ಬಂದವನೇಃ— 'ಕಮಲೇ, ಕಮಲೇ' ಎಂದು ಕೂಗಿದನು. ತಾನೇ ಪರ್ಯಂಕದ ಮೇಲೆ ಬಂದು ಕುಳಿತು, ಕಮಲೆಯನ್ನು ಎಬ್ಬಿಸಲು ಯತ್ನಿಸಿ ದನು. ಕರೆದನು, ಕೂಗಿದನು, ಮೈ ಹಿಡಿದು ಅಲುಗಿಸಿದನು, ಕಮಲೆಗೆ ಎಚ್ಚ ರವಾಗಲೊಲ್ಲದು. ನಿದ್ರೆ ಬಂದು ಮಲಗಿದವರನ್ನು ಹೇಗಾದರೂ ಎಬ್ಬಿಸಬಹುದು. ಆದರೆ, ನಿದ್ರೆಯನ್ನು ಕರೆತಂದುಕೊಂಡು ಮಲಗಿದವರನ್ನು ಎಬ್ಬಿಸುವುದು ಬಲು ಕಠಿನ. ಕಡೆಗೆ ಅಲ್ಲಾವುದ್ದೀನನು ಬಲಾತ್ಕಾರದಿಂದ ಕಮಲೆಯ ಮುಖದ ಮೇಲಿನ ಸೆರಗನ್ನು ಎಳೆದು ಬಿಸುಟನು ಕಮಲೆಯು ನಕ್ಕಳು. ಕೂಡಲೇ ಅವಳ ಮುಖವು ಗಾಂಭೀರ್ಯವನ್ನು ತಾಳಿತು. ಅವಳುಃ— "ಸಿಂಹವು ವನ ವನಾವಲಿಗಳಲ್ಲೆಲ್ಲ ಸಂಚರಿಸಿ ಬೇಟೆಯನ್ನು ಮುಗಿಸಿಕೊಂಡು ಈಗ ಗವಿಗೆ ಬಂದಿ ತೆಂದು ತೋರುತ್ತದೆ. ಇಲ್ಲಿ ಇನ್ನೇನು ಕೆಲಸ ? ಪರ್ಯಂಕವಿದೆ, ಹಾಸಿಗೆಯಿದೆ, ಹೊದೆದುಕೊಳ್ಳಲಿಕ್ಕೆ ಶಾಲಿದೆ. ಮುಸುಕು ಹಾಕಿ ಮಲಗಿ ನಸುಕಿನಲ್ಲಿ ಎದ್ದು ಹೋದರೆ ತೀರಿತು. ಮಲಗಿದವರನ್ನೆಲ್ಲ ಎಬ್ಬಿಸಿ ಬೇಸರಗೊಳಿಸುವ ಕಾರಣ ವೇನು? " ಎಂದಳು.

**ಬಾದಷಹ:**— ಇಲ್ಲ, ಕಮಲೆ; ಇಂದು ಸಿಂಹಕ್ಕೆ ಬೇಟೆಯಾಡಲು ಅವ ಕಾಶವಿಲ್ಲ. ಬೆಳಗಿನಿಂದಲೂ ಕೇಳಲಿಲ್ಲವೇ ಬೋರಿಡುವ ರಣವಾದ್ಯಗಳನ್ನು! ಮಂತ್ರಿಸೇನಾಪತಿಗಳಿಗೂ ಸರದಾರರಿಗೂ ಸೈನಿಕರಿಗೂ ತಕ್ಕ ಉಪದೇಶಮಾಡಿ

ಅವರನ್ನು ಹುರಿದುಂಬಿಸಿ, ಎಲ್ಲವನ್ನೂ ಅಣಿಮಾಡಿಟ್ಟು ಬರಲು ತಡವಾಯಿತು ನಿನ್ನ ನಿದ್ರಾಭಂಗ ಮಾಡಿದ ಅಪರಾಧವನ್ನು ಕ್ಷಮಿಸು.

**ಬೇಗಮ:—** "ಜಹಾಪನಾ! ಸರಿ. ತಾವು ಹೇಳಿದ ಮಾತು ನಿಜ. ನನಗೆ ತಪ್ಪು ತಿಳಿವಳಿಕೆಯಾಗಿತ್ತು. ಆದರೆ, ಅಂತಹ ಸಮರಸನ್ನಾಹವನ್ನು ನಡಿಸಿರುವು ದೇಕೆ? ಈಗ ಯಾರೊಡನೆ ಸಂಗ್ರಾಮ?" ಎಂದು ಮುಗುಳ್ನಗೆ ನಕ್ಕು ಕೇಳಿದಳು.

ಬಾದಷಹನು ಹೇಳಿದನು:—ಕಮಲೆ, ನಾನು ಚಿತ್ತೂರಿಗೆ ಹೋಗುವೆನು. ಎಂತಹ ದುರಭಿಮಾನಿಯವಳು! ನಾನೂ ಒಮ್ಮೆ ನೋಡಿಯೇ ಬಿಡುವೆನು!

ಹೀಗೆಂದು ಬಾದಷಹನು ಜ್ಯೋತಿಯು ಭಾಷಾಂತರಿಸಿ ತಂದುಕೊಟ್ಟಿದ್ದ ಪತ್ರವನ್ನು ಓದಿ ತೋರಿಸಿದನು. ಅದನ್ನು ಕೇಳಿ ಬೇಗಮಳ ಕಣ್ಣುಗಳು ಅರಳಿದುವು. ಒಂದೆರಡು ಹನಿ ನೀರು ಉದುರಿತು.

**ಅಲ್ಲಾವುದ್ದೀನ**–"ಕಮಲೆ, ಎಂದು ಆ ಪದ್ಮಿನಿಯನ್ನು ಹಿಡಿದುತಂದು ನಿನ್ನ ದಾಸಿಯನ್ನಾಗಿ ಮಾಡುವೆನೋ ಅಂದೇ ನನ್ನ ಹೆಸರು ಅಲ್ಲಾವುದ್ದೀನ! ನಾನು ನಾಳೆಯೇ ಹೊರಡುವೆನು. ಯಃಕಶ್ಚಿತಳಾದ ಆ ಸ್ತ್ರೀಯಳ ಗರ್ವವನ್ನು ನೋಡಿದೆಯಾ? ನಿನಗೆ ಧರ್ಮಮಾರ್ಗವನ್ನು ಉಪದೇಶಿಸಲು ಯತ್ನಿಸುವಳು. ನೀನು ಪ್ರಾಯಶ್ಚಿತ್ತವನ್ನು ಹೊಂದಬೇಕಂತೆ! ಕಮಲೆ, ಅವಳು ಇಲ್ಲಿಗೆ ಬಂದ ಬಳಿಕ ನೀನೇ ಪ್ರಾಯಶ್ಚಿತ್ತವನ್ನು ಕೊಡುವೆಯಂತೆ! ಅವಳು ಇದೇ ನಿನ್ನ ಶಯನ ಗೃಹದಲ್ಲಿ ಕುಳಿತು ಕುರಾನನ್ನು ಓದುವಂತೆ ಮಾಡುವೆನು!" ಎಂದು ಹೇಳುತ್ತ ಗಹಗಹಿಸಿ ನಕ್ಕನು.

**ಕಮಲೆ:—** ಜಹಾಪನಾ! ಎಂತಹದರ್ಪವವಳದು? ತಾನು ನೋಡಿದರೆ ಒಬ್ಬ ಸಾಮಾನ್ಯ ಸರದಾರನ ಹೆಂಡತಿ! ಬಾಯಿತುಂಬ ಮಾತಾಡುವಳಲ್ಲ! ಡಿಲ್ಲೀಶ್ವರರಿಗೆ ಈ ಮಾತು ಸಹನವಾಗುವುದೆ? ಇವರ ಫಲವು ಬೇಗನೆ ದೊರೆದೀತು. ಇರಲಿ, ರಾತ್ರಿಯು ಬಹಳ ಹೊತ್ತಾಯಿತು, ದಣಿದು ಬಂದಿರುವಿರಿ, ಮಲಗಿಕೊಳ್ಳಿರಿ.

ಅರಸಿಯ ಮಾತುಗಳಿಂದ ಅಲ್ಲಾವುದ್ದೀನನಿಗೆ ಸಮಾಧಾನವಾಯಿತು. ಅವನು ಮಲಗಿಕೊಂಡು ನಿದ್ದೆಹೋದನು.

ಮಾರನೆಯ ದಿನ ಮುಂಜಾನೆ ಜ್ಯೋತಿಷಿಯು ಹಾಸಿಗೆಯಿಂದ ಎದ್ದೊಡನೆಯೇ ನೋಡುವಲ್ಲಿ ಮಹಾಕೋಲಾಹಲ ! ಎಲ್ಲಿ ನೋಡಿದರೂ ಸೈನಿಕರು ತಂಡತಂಡವಾಗಿ, ಶಸ್ತ್ರಪಾಣಿಗಳಾಗಿ, ಕೆಲವರು ಅಶ್ವಾರೋಹಿಗಳಾಗಿ, ಕೆಲವರು ಕಾಲ್ನಡಿಗೆಯಿಂದ, ಕೆಲವರು ಒಂಟಗಳ ಮೇಲೆ, ಕಲವರು ಆನೆಗಳ ಮೇಲೆ ಹೊರಟದ್ದರು! ರಣೋತ್ಸಾಹದಿಂದ ಎಲ್ಲರೂ ಉಬ್ಬಿ ಕುಣಿಯುತ್ತಿದ್ದರು ! ಜ್ಯೋತಿಷಿಯು ನೆರೆಯಲ್ಲಿ ಹೋಗುತ್ತಿದ್ದ ಒಬ್ಬ ಅಶ್ವಾರೋಹಿಯ ಬಳಿಗೆ ಹೋಗಿ ನೆಲಮುಟ್ಟಿ ಸಲಾಮು ಮಾಡಿ "ಕೊತವಾಲ ಸಾಹೇಬರೇ, ತಾವು ಯುದ್ಧದಲ್ಲಿ ವಿಜಯಿಗಳಾಗುವಿರಿ." ತುನು ಆಲೋಚನೆ ಮಾಡುವವನಂತೆ ನಟಿಸಿ, "ಈ ಸಾರೆಯ ಯುದ್ಧದಲ್ಲಿ ತಾವು ತೋರಿಸುವ ಪರಾಕ್ರಮುವನ್ನು ನೋಡಿ ಬಾದಷಹರು ತಮ್ಮನ್ನು ಸಾವಿರ ಸವಾರರ ಅಧಿನಾಯಕರನ್ನಾಗಿ ಮಾಡುವರೆಂದು ನಮ್ಮ ಮಹಾಮಾಯೆಯು ಹೇಳುವಳು; ನಿಶ್ಚಯ! ನಿಶ್ಚಯ!! ಎಂದನು."

ಸವಾರನು ಆನಂದದಿಂದ ಉಬ್ಬಿದನು. ತಾನು ಯಾರೆಂಬುದನ್ನೇ ಮರೆತುಬಿಟ್ಟನು. ಅವನು:—"ಕುದುರೆಯಾಯಿತು, ಸವಾರರಾದರು, ಅಧಿಕಾರಿಯಾದೆನು. ಮುಂದೇನು? ಬಾದಷಹನು ದಿನಕ್ಕೊಂದು ಹೆಣ್ಣನ್ನು ಹಿಡಿದು ತಂದು ಮದುವೆ ಮಾಡಿಕೊಳ್ಳುವನು. ಅಂತಹ ಸುಂದರಿ, ಇಂತಹ ಸುಂದರಿ ತ್ರಿಭುವನ ಸುಂದರಿ, ಎಂದು ಎಲ್ಲರೂ ಹೊಗಳುವರು. ಮೊನ್ನೆ ಮೊನ್ನೆ ಗುಜರಾಥಕ್ಕೆ ಹೋಗಿ ಸತ್ತು ಕೆಟ್ಟು ಬಡಿದಾಡಿದೆವು. ಪ್ರಯೋಜನವೇನು? ಬಾದಷಹನಿಗೆ ಬೇಗಮಳು ಸಿಕ್ಕಿದಳು; ರಾಜ್ಯವು ಸಿಕ್ಕಿತು. ನಮಗೇನು ಸಿಕ್ಕಿತು? ನೀರಿಲ್ಲದೆ ಕುದುರೆಯ ಮೇಲೆ ಕೂತು ಒಕಬಕನೆ ಬುತ್ತಿಯನ್ನು ಉಣ್ಣುವಾಗ ತುತ್ತು ಮಾತ್ರ ಗಂಟಲಲ್ಲಿ ಸಿಕ್ಕಿತು! ಈಗ ಪುನ: ಚಿತ್ತೂರಿಗೆ ಹೋಗಬೇಕು! ಹಾಳಾಗಲಪ್ಪಾ, ಈ ಬಾದಷಹನ ಸೇವೆ !" ಎಂದು ಹರಟುತ್ತ ನಡೆದನು

ಇಷ್ಟು ಕೇಳಿದ್ದೇ ಸಾಕಾಯಿತು. ಜ್ಯೋತಿಷಿಯ ವೇಷಧಾರಿಯಾದ ಕರಣರಾಯನು ಆನಂದದಿಂದ ಕುಣಿಯತೊಡಗಿದನು! ಅವನು ಲಗುಬಗೆಯಿಂದ ತನ್ನ ಗುಡಿಸಲಿಗೆ ಬಂದು ' ಧರ್ಮಸಿಂಹ, ಧರ್ಮಸಿಂಹ, ನಡೆ; ಇನ್ನು ಇಲ್ಲಿ ನಮ್ಮ ಕೆಲಸವಿಲ್ಲ. ನಮ್ಮ ಅಭೀಷ್ಟವು ಕೈಗೂಡಿದಂತಾಯಿತು. ಇನ್ನು ತಡ

ಮಾಡುವಂತಿಲ್ಲ. ಅಲ್ಲಾವುದ್ದೀನನು ಚಿತ್ತೂರಿಗೆ ಮಹಾಸೈನ್ಯದೊಂದಿಗೆ ಹೊರಟನು. ನಾವೂ ಕಾಬೂಲಿನ ಹಾದಿಯನ್ನು ಹಿಡಿಯೋಣ !" ಎಂದು ಒದರಿದನು.

**ಧರ್ಮಸಿಂಹ:**—ಅದೇನು? ಕಾಬೂಲಿಗೆ ಯಾತಕ್ಕೆ? ಅಷ್ಟೊಂದು ದೂರ ಹೋಗುವ ಬಗೆ ಹೇಗೆ? ಅಂತಹ ಮಹಾ ಉದ್ದೇಶವು ತಾನೇ ಏನಿದೆ ?

**ಕರಣರಾಯ:**—ಕಾಬೂಲಿಗೆ ಅಲ್ಲ. ಮೊಗಲ ಸೇನಾಪತಿಯಾದ ತುರ್ಕೀಖಾನನು ಕಾಬೂಲದ ದಾರಿಯಲ್ಲಿ ಇರುವನು. ನಮಗೆ ತುರ್ಕೀ ಖಾನನ ಬಳಿಯಲ್ಲಿ ಕೆಲಸವಿದೆ. ಅವನೊಬ್ಬನಕೂಡ ಮಾತಾಡುವುದು ಮಾತ್ರ ಉಳಿಯಿತು. ಮಿಕ್ಕ ಎಲ್ಲ ವಿಚಾರಗಳೂ ಇಲ್ಲಿಯ ವರೆಗೆ ನಮ್ಮ ಮನಸ್ಸಿನಂತೆಯೇ ಆದಂತಾದವು !

ಮಾರನೆಯ ದಿನವೇ ಕರಣರಾಯನೂ ಧರ್ಮಸಿಂಹನೂ ಕಾಬೂಲಿನ ಹಾದಿಯನ್ನು ಹಿಡಿದರು.

---

# ಮೂರನೆಯ ಖಂಡ

## ವರ್ಷಾರಂಭ

### ಮೊದಲನೆಯ ಪರಿಚ್ಛೇದ

ಇರ ಇರುತ್ತ ಚಿತ್ತೂರಿನ ‘ ಆಹೇರಿಯಾ ’ ದ ದಿನವು ಒದಗಿ ಬಂದಿತು. ಇಂದು ಆಹೇರಿಯಾ; ಆಹೇರಿಯಾದ ಆನಂದದಿಂದ ಚಿತ್ತೂರಿನ ರಜಪೂತ ವೀರರೆಲ್ಲರೂ ಉನ್ಮತ್ತರಾಗಿ ಹೋಗಿದ್ದರು ! ಎಲ್ಲಿ ನೋಡಿದರೂ ಉತ್ಸವ! ಎಲ್ಲಿ ನೋಡಿದರೂ ಆನಂದ ! ಅರಮನೆ-ಆರಾಮುಗಳೂ ಗುಡಿ-ಗುಂಡಾರಗಳೂ ಹೂಮಾಲೆಗಳಿಂದ ಅಲಂಕೃತವಾಗಿವೆ!

ಬೇಟೆಯೇ ಆಹೇರಿಯಾದ ಮುಖ್ಯವಾದ ಅಂಗವು. ಇಂದಿನ ಬೇಟೆಯ ಫಲಾಫಲದ ಮೇಲಿಂದಲೇ ಚಿತ್ತೂರಿನ ರಜಪೂತರು ಹೊಸ ವರ್ಷದ ಸುಖದುಃಖಗಳನ್ನು ನಿರ್ಣಯಿಸುವರು. ಬೇಟೆಯು ನಿರ್ವಿಘ್ನದಿಂದ ಸಾಂಗವಾದರೆ ಮುಂದಿನ ವರುಷವು ಸುಖದಿಂದ ಕಳೆಯುವದೆಂತಲೂ ಹಾಗಲ್ಲದೆ ನಡುವೆ ಏನಾದರೂ ವಿಘ್ನವುಂಟಾದರೆ ಆ ವರ್ಷದಲ್ಲಿ ಯಾವುದಾದರೂ ಮಹಾಸಂಕಟವು ಚಿತ್ತೂರಿಗೆ ಬಂದೇಬರುವುದೆಂತಲೂ ಅವರು ನಂಬುತ್ತಿದ್ದರು. ಈ ಸಲ ಅವರಿಗೂ ಮುಸಲ್ಮಾನರಿಗೂ ವಿರೋಧವುಂಟಾಗಿತ್ತು. ಅಲ್ಲಾವುದ್ದೀನನು ಚಿತ್ತೂರಿನ ಮೇಲೆ ದಂಡೆತ್ತಿ ಬಂದೇ ಬರುವನೆಂದು ಅವರು ನಿಶ್ಚಯಿಸಿಕೊಂಡಿದ್ದರು. ಅದರಿಂದ ಅವರೆಲ್ಲರೂ ಆಹೇರಿಯಾದ ಬೇಟೆಯನ್ನು ನಿರ್ವಿಘ್ನದಿಂದ ಸಾಂಗಮಾಡಬೇಕೆಂದು ಮನಮುಟ್ಟಿ ಬಯಸುತ್ತಿದ್ದರು.

ಪ್ರಭಾತಸಮಯದ ಅರುಣರಾಗವು ಆರಾವಲೀ ಪರ್ವತದ ತುದಿಯಲ್ಲಿ ಕಾಣಿಸಿತೋ ಇಲ್ಲವೋ ಅಷ್ಟರಲ್ಲಿಯೇ ರಜಪೂತ ಸರದಾರರೆಲ್ಲರೂ ಕುದುರೆಗಳ

ನ್ನೇರಿ ತಂಡತಂಡವಾಗಿ ದುರ್ಗದ ಬಾಗಿಲಿಗೆ ಬಂದು ನಿಂತರು. ಅವರಲ್ಲಿ ಕೆಲವರ ಕೈಯೊಳಗೆ ಒರೆಗಳೆದ ಖಡ್ಗವೂ ಕೆಲವರ ಕೈಯೊಳಗೆ ಭಾಲೆಯೂ ಕೆಲವರ ಕೈಯೊಳಗೆ ಕಠಾರಿಯೂ ಒಪ್ಪುತ್ತಿದ್ದುವು. ಆ ಶಸ್ತ್ರ-ಸಮೂಹವು ಉಷಃಕಾಲದ ಸ್ನಿಗ್ಧವೂ ಮ್ಲಾನವೂ ಆದ ಪ್ರಕಾಶದಲ್ಲಿ ಮೃದುಮಧುರವಾಗಿ ನಗುವಂತೆ ತೋರುತ್ತಲಿತ್ತು!

ಅಷ್ಟರಲ್ಲಿ ಮಹಾರಾಣಾ ಲಕ್ಷ್ಮಣಸಿಂಗನೂ ಆತನ ಹಿಂದೆಯೇ ಭೀಮಸಿಂಹನೇ ಮೊದಲಾದ ನಾಯಕರೂ ಬಂದರು. ಹತ್ತಿರಕ್ಕೆ ಬಂದೊಡನೆಯೇ ಲಕ್ಷ್ಮಣಸಿಂಗನು—"ಬಂಧುಗಳೇ, ಇಂದು ಆಹೇರಿಯಾ, ಚಿತ್ತೂರಿನ ರಜಪೂತರ ಅದೃಷ್ಟದ ಪರೀಕ್ಷೆಯ ದಿವಸವಿದು! ದಿಲ್ಲಿಯ ಪಠಾಣರೊಡನೆ ವಿರೋಧವುಂಟಾಗಿರುವ ಸಂಗತಿಯಂತೂ ನಿಮಗೆ ಗೊತ್ತೇ ಇದೆ. ಆದುದರಿಂದ ಈ ಸಲ ವಿಶ್ವಪ್ರಯತ್ನ ಮಾಡಿ ಆಹೇರಿಯಾದ ಬೇಟೆಯನ್ನು ನಿರ್ವಿಘ್ನದಿಂದ ಸಾಂಗ ಮಾಡಲೇಬೇಕು. ಆಹೇರಿಯಾ ಎಂದರೆ ಮೇವಾಡದ ಅದೃಷ್ಟಲಿಪಿಯು. ಆ ಲಿಪಿಯನ್ನು ಸಾಧ್ಯವಾದಮಟ್ಟಿಗೂ ಉಜ್ವಲವಾದ ವರ್ಣದಿಂದ ಚಿತ್ರಿಸಬೇಕು. ಒಂದು ಪ್ರಾಣಿಯು ಕೂಡ ಕೈತಪ್ಪಿಸಿಕೊಂಡು ಹೋಗದಂತೆ ನೋಡಿಕೊಳ್ಳಬೇಕು!" ಎಂದು ಉದ್ವೇಗಜನಕವಾದ ಸ್ವರದಿಂದ ಮಾತಾಡಿದನು.

ಸೈನಿಕರೆಲ್ಲರೂ ಉಲ್ಲಾಸದಿಂದ ಜಯಧ್ವನಿಗೈದರು :— "ಮಹಾರಾಣಾ ಕೀ ಜಯ್ !" ಎಂಬ ಗಂಭೀರವಾದ ಸ್ವರವು ದಿಕ್ಕು ದಿಕ್ಕುಗಳಲ್ಲಿ ಹರಡಿಕೊಂಡಿತು. ಆ ಮೇಲೆ ಎಲ್ಲರೂ ಸಾಲುಗೊಂಡು ನಡೆದರು. ಅವರು ಏರಿದ ಅಶ್ವಗಳ ಪಾದಾಘಾತದಿಂದ ಆರಾವಲೀ ಪರ್ವತವು ಕಂಪಿಸತೊಡಗಿತು.

ಎಲ್ಲರಿಗಿಂತಲೂ ಮುಂದೆ ರಾಣಾಭೀಮಸಿಂಹನೂ ಅವನ ಹಿಂದೆ ರಾಜಕುಮಾರರೂ ಅವರ ಹಿಂದೆ ಮೇವಾಡದ ಸರದಾರರೂ ಹೊರಟಿದ್ದರು. ಕಟ್ಟಕಡೆಗೆ ರಾಣಾ ಲಕ್ಷ್ಮಣಸಿಂಗನು ಕುದುರೆಯ ಮೇಲೆ ಕುಳಿತುಕೊಂಡು ಮೆಲ್ಲನೆ ನಡೆದು ಹೋಗುತ್ತಿದ್ದನು. ಅಕಸ್ಮಾತ್ ಒಬ್ಬ ಬಾಲಕನು ರಾಣಾಲಕ್ಷ್ಮಣಸಿಂಗನ ಎದುರಿಗೆ ಬಂದು ತಲೆವಾಗಿ ನಿಂತನು. ಅವನ ಪುಟ್ಟ ಕುದುರೆಯು ಮೇಲೆ ಕುಳಿತಿದ್ದ ಒಡೆಯನ ಅಭಿಪ್ರಾಯವನ್ನು ಸಮ್ಮತಿಸುವುದಿಲ್ಲವೋ ಏನೋ

ಎಂಬಂತೆ ಮುಂದೆ ಹೋಗಲು ಯತ್ನಿಸಿ ಕಾಲುಗಳನ್ನು ಎತ್ತಿ ಎತ್ತಿ ಇಡುತ್ತಿತ್ತು. ಬಾಲಕನು ಅದರ ಕಡಿವಾಣವನ್ನು ಎಳೆದು ಹಿಡಿದಿದ್ದನು. ಅದು ತಲೆಯನ್ನು ಒಮ್ಮೆ ಮೇಲೆ ಒಮ್ಮೆ ಕೆಳಗೆ ಮಾಡುತ್ತಲಿತ್ತು.

ಬಾಲಕನ ವಿಸ್ತಾರವಾದ ಹಣೆಯನ್ನೂ ಉನ್ನತವಾದ ನಿಲುವಿಕೆಯನ್ನೂ ಆನಂದದಿಂದ ಅರಳಿದ ಮುಖಮಂಡಲವನ್ನೂ ನೋಡಿ ರಾಣನ ಅಂತರಂಗದ ವಾತ್ಸಲ್ಯಭಾವನೆಯು ಉಕ್ಕಿಬರತೊಡಗಿತು ಅವನ ತೇಜೋದೀಪ್ತವಾದ ಮುಖದಲ್ಲಿಯೂ ಇನ್ನೊಂದು ಉಜ್ವಲವಾದ ಪ್ರಭೆಯು ಪ್ರತಿಬಿಂಬಿತವಾದಂತೆ ಕಂಡು ಬಂದಿತು. ಅವರಿಬ್ಬರೂ ಒಂದರಮುಂದೊಂದು ಇಟ್ಟ ವಿದ್ಯುತ್ತಿನ ದೀಪಗಳಂತೆ ಕಂಗೊಳಿಸುತ್ತಿದ್ದರು. ರಾಣನು ಪ್ರೇಮಪೂರ್ಣವಾದ ಮುಖಲಕ್ಷಣವನ್ನು ತಳೆದು ಮುಗುಳ್ನಗೆ ನಗುತ್ತ,—“ ಬಾದಲ ! ಇದೇನು, ಇಲ್ಲಿಗೆ ಬಂದೆ ? ನಿನ್ನ ಹೇಳಿಕೆಯೇನು ? ” ಎಂದನು.

ಬಾದಲನು ಪದ್ಮಿನೀ ರಾಣಿಯ ಅಣ್ಣನ ಮಗನು. ಅವನು “ರಾಣಾಜೀ, ಈ ಸಾರೆ ನನಗೆ ಹನ್ನೆರಡು ವರುಷಗಳು ತುಂಬಿದುವು. ನಾನೂ ಆಹೇರಿಯಾದ ಬೇಟೆಗೆ ಬರಬೇಕನ್ನುತ್ತೇನೆ” ಎಂದು ವಿಜ್ಞಾಪಿಸಿಕೊಂಡನು.

ರಾಣನು ನಕ್ಕು—“ ಅಭಿಮನ್ಯು ! ಇಷ್ಟೇಕೆ ಹಾತೊರೆಯುವೆ ? ಕುರುಕ್ಷೇತ್ರದ ಸಮರದ ಸನ್ನಾಹವು ನಡೆದಿರುವುದು ! ಸ್ವಲ್ಪ ಸಮಾಧಾನ ತಾಳು. ನಿನ್ನ ಬಯಕೆಯು ಪೂರ್ಣವಾಗುವ ಸಮಯವು ಒದಗಿ ಬಂದಿರುವುದು! ಆಹೇರಿಯಾವು ಸಿಂಹಳೀಯರ ಉತ್ಸವವಲ್ಲ; ಮೇವಾಡದವರದು. ನೀನು ಆಹೇರಿಯಾಕ್ಕೆ ನಮ್ಮೊಡನೆ ಬರಲು ಅಡ್ಡಿಯಿಲ್ಲ; ಆದರೆ ಇಂದಿನ ಮಟ್ಟಿಗೆ ನೀನು ಚಿತ್ತೂರಿನ ಸರ್ವಾಧಿಕಾರಿಯು ! ಇಂದು ನೀನೇ ರಾಣನು ! ನಾವು ತಿರುಗಿ ಬರುವವರೆಗೂ ಚಿತ್ತೂರನ್ನು ರಕ್ಷಿಸುವ ಕಾರ್ಯವು ನಿನ್ನದು ! ಇದಕ್ಕೇನೆನ್ನುವೆ ? ” ಎಂದು ಕೇಳಿದನು.

ಬಾಲಕನ ಉಜ್ವಲವಾದ ಮುಖಮಂಡಲವು ಇನ್ನಷ್ಟು ಉದ್ದೀಪ್ತವಾಯಿತು. ರಾಣನು ಕ್ಷಣಕಾಲದ ವರೆಗೆ ಆ ವದನಮಂಡಲವನ್ನು ನಿರೀಕ್ಷಿಸುತ್ತ

ಸುಮ್ಮನೆ ಇದ್ದನು ನೋಡ ನೋಡುತ್ತ ಅವನ ಅಂತರಂಗವು ಪ್ರೇಮ ವಾತ್ಸಲ್ಯಗಳಿಂದ ತುಂಬಿಕೊಂಡಿತು. ರಾಣನ ಕಣ್ಣುಗಳಲ್ಲಿ ಆನಂದಾಶ್ರುಗಳು ಉಕ್ಕಿ ಸುರಿದುವು. ಬಾಲಕನನ್ನು ಬಿಗಿಯಾಗಿ ಅಪ್ಪಿಕೊಳ್ಳಬೇಕೆಂದು ಅವನ ಬಾಹುಗಳು ಹಾರೈಸತೊಡಗಿದುವು. ಆದರೆ ಇಬ್ಬರೂ ಕುದುರೆಯ ಮೇಲೆ ಕುಳಿತಿದ್ದರಾದುದರಿಂದ ರಾಣನು ಕೃತಕಾರ್ಯನಾಗಲಿಲ್ಲ.

ಬಾದಲನು ಮುಗುಳ್ನಗೆ ನಕ್ಕು — ' ರಾಣಾಜೀ, ತಮ್ಮ ಅಪ್ಪಣೆಯಂತೆ ನಡೆದುಕೊಳ್ಳುವೆನು ಏನಾದರೂ ಮಹಾ ಉತ್ಪಾತವು ಒದಗುವ ಪ್ರಸಂಗವು ಬಂದರೆ ಮಾತ್ರ ಸನ್ನಿಧಿಗೆ ಅರಿಕೆ ಮಾಡಿಕೊಳ್ಳಲು ನಾನೇ ಬರುವೆನು. "ಎಂದು ಹೇಳಿ ತನ್ನ ಕುದುರೆಯ ಮುಖವನ್ನು ಮಾರ್ಗದ ಕಡೆಗೆ ತಿರುಗಿಸಿ ಹೊರಟನು. ರಾಣನೂ ' ಉತ್ಪಾತವು ಒದಗುವ ಪ್ರಸಂಗವೇ ? ' ಎನ್ನುತ್ತ ತನ್ನ ಕುದುರೆಯನ್ನು ನಾಲ್ಕು ಹೆಜ್ಜೆ ವೇಗವಾಗಿ ನಡೆಯಿಸಿ ಉಳಿದವರನ್ನು ಕೂಡಿಕೊಂಡನು.

ಅದೇ ಉದಯಹೊಂದಿದ ಬಾಲರವಿಯ ಹೊಂಬಣ್ಣದ ಹೊಸ ಕಿರಣಗಳು ಆರಾವಲೀ ಪರ್ವತದ ಶಿಖರಗಳನ್ನು ಭೇದಿಸಿಕೊಂಡು ಬಂದು ಜಗತ್ತನ್ನು ಬೆಳಗಹತ್ತಿದುವು. ರಜಪೂತ ಸೇನೆಯು ಮುಂದೆ ಸಾಗಿತು.

ವಸಂತ ಋತುವಿನ ಆರಂಭದಲ್ಲಿ ಮೇವಾಡ ಪ್ರಾಂತದ ಪ್ರಾತಃಕಾಲದ ಸೃಷ್ಟಿಸೌಂದರ್ಯವನ್ನು ವರ್ಣಿಸಲಳವಲ್ಲ. ನಾಲ್ಕು ದಿಕ್ಕುಗಳಲ್ಲಿ ತರು-ಲತೆಗಳು ಹೊಸ ಚಿಗುರುಗಳನ್ನು ಧರಿಸಿ, ಉಜ್ವಲವಾದ ಹಸರು ಬಣ್ಣದಿಂದ ಕಂಗೊಳಿಸುವುವು. ಇಂತಹ ಸ್ಥಿತಿಯಲ್ಲಿ ಪ್ರಾತಃಕಾಲದ ಸೂರ್ಯನ ಹೊಂಬಣ್ಣದ ಕಿರಣಗಳು ಆ ತರುಲತೆಗಳ ಹಸುರೆಲೆಗಳ ಮೇಲೆಯೂ, ಆಗಲೇ ಅರಳಿ ನಿಂತಿರುವ ತರತರದ ಬಣ್ಣದ ಕಾಡುಹೂಗಳ ಮೇಲೆಯೂ, ಜುಳುಜುಳು ನಿನಾದದೊಡನೆ ಹರಿಯುತ್ತಿರುವ ಝರಿಗಳ ನೀಲಜಲದ ತರಂಗಗಳ ಮೇಲೆಯೂ ಬೀಳಲು ಅವಕ್ಕೆ ವಿಚಿತ್ರವಾದೊಂದು ಕಾಂತಿಯು ಬರುವುದು. ಪ್ರೇಕ್ಷಕರು ಅವುಗಳನ್ನು ನೋಡಿ ಸೃಷ್ಟಿದೇವತೆ ' ಮಾಟವ ಮಾಡಿದಳೋ ' ಎಂಬಂತೆ ಆನಂದಪರವಶತೆಯಿಂದ ತಟಸ್ಥರಾಗಿ ನಿಂತುಬಿಡುವರು.

ಇಂತಹ ಮನೋಹರವಾದ ಸೃಷ್ಟಿಸೌಂದರ್ಯವನ್ನು ನಿರೀಕ್ಷಿಸುತ್ತ ಸಾವಿರಾರು ವೀರಭಟರು ಭೂಮಿಯನ್ನು ನಡುಗಿಸುತ್ತ ನಡೆಯುತ್ತಿದ್ದರು ; ಅವರ ಅಂತರಂಗದ ಅತುಲವಾದ ಉತ್ಸಾಹವೂ ಮೇರೆಯಿಲ್ಲದ ಸ್ಫೂರ್ತಿಯೂ ಸೃಷ್ಟಿ ದೇವತೆಯ ಮೋಹಮಂತ್ರದಿಂದ ಇನ್ನಷ್ಟು ಉತ್ತೇಜಿತವಾಗಿದ್ದುವು. ಅವರು ಆನಂದೋನ್ಮತ್ತರಾಗಿ ಹಾಡತೊಡಗಿದರು. ಅವರ ಆ ಉತ್ಸಾಹಪೂರ್ಣವಾದ ಗಾಯನದ ಸ್ವರವು ಅನಂತವಾದ ಆಕಾಶದಲ್ಲಿ ವಿಲೀನವಾಗಿ ಹೋಗತೊಡಗಿತು.

ಮೇವಾಡದ ಹನ್ನೆರಡು ಜನ ರಾಜಕುಮಾರರಲ್ಲಿ ಹಿರಿಯನಾದ ಅರುಣ ಸಿಂಹನು ಒಳ್ಳೆಯ ಕವಿಯಾಗಿದ್ದನು. ಅರುಣಸಿಂಹನು ಏರಿದ ಪಂಚವರ್ಣದ ಕಾರೇವಾಡದ ಕುದುರೆಯು ಗರ್ವದಿಂದ ಕುತ್ತಿಗೆಯನ್ನು ಅಲ್ಲಾಡಿಸುತ್ತ ಮುಂಗಾಲುಗಳನ್ನು ದರ್ಪದಿಂದ ಎತ್ತಿಹಾಕಿ ನೆಲವನ್ನು ನಡುಗಿಸುತ್ತ ಕುಣಿದಾಡುತ್ತ ನಡೆಯುತ್ತಿತ್ತು. ಅರುಣಸಿಂಹನೂ ಉಳಿದ ರಾಜಪುತ್ರರೊಡನೆ ಹಾಡುತ್ತಲಿದ್ದನು. ಅವನ ನಡುವಿನಲ್ಲಿ ಅಲೆದಾಡುತ್ತಿದ್ದ ಒರೆಗೂಡಿದ ಖಡ್ಗವು ಕುದುರೆಯ ಬೆನ್ನಿಗೆ ತಗಲಿ ಹುಟ್ಟುತ್ತಿದ್ದ ಧ್ವನಿಯಿಂದ ಅದು ತಾಳವನ್ನು ಹಾಕುತ್ತಿರುವುದೋ ಎಂಬಂತೆ ತೋರುತ್ತಿತ್ತು !

ಚಿತ್ತೂರಿಗೆ ಕೆಲವು ಮೈಲುಗಳ ದೂರದಲ್ಲಿ ಗಿರಿನಾರವೆಂಬ ಪರ್ವತವು ಇರುವುದು. ಸುತ್ತಲಿನ ಮರುಪ್ರದೇಶದ ಮಧ್ಯದಲ್ಲಿ ಇದು ರಾಜಸ್ಥಾನದ ಕಾಶ್ಮೀರವೆಂದು ಇಂದಿಗೂ ಪ್ರಸಿದ್ಧವಾಗಿದೆ ಆ ಮನೋಹರವಾದ ಪ್ರದೇಶದಲ್ಲಿ ಅಲ್ಲಲ್ಲಿಗೆ ಭಿಲ್ಲರು ಗುಡಿಸಲುಗಳಲ್ಲಿ ವಾಸವಾಗಿರುವರು. ಆ ಸ್ಥಳದ ಮಧ್ಯದಲ್ಲಿ ಅತಿ ಮನೋಹರವಾದೊಂದು ಅರಣ್ಯವಿರುವುದು. ಅಲ್ಲಿ! ಚಿಗರಿಗಳೂ ಕಾಡಹಂದಿಗಳೂ ಇತರ ವನ್ಯಪಶುಗಳೂ ತಂಡತಂಡವಾಗಿ ವಾಸಿಸುವುವು. ಸುತ್ತಲೂ ವಾಸಿಸಿರುವ ಭಿಲ್ಲರು ಆ ಅರಣ್ಯವನ್ನು ಹಗಲಿರುಳು ಕಾಯುವರು. ವರುಷದಲ್ಲಿ ಒಂದೇ ದಿವಸ, 'ಆಹೇರಿಯಾ' ದ ದಿವಸ ಮಾತ್ರ, ಚಿತ್ತೂರಿನ ರಾಣನು ತನ್ನ ಪರಿವಾರದೊಂದಿಗೆ ಇಲ್ಲಿಗೆ ಬೇಟೆಗೆ ಬರುವನು. ಇತರ ದಿನಗಳಲ್ಲಿ ಆ ಅರಣ್ಯದೊಳಗಿನ ಒಂದು ಮೊಲವನ್ನು ಕೂಡ ಯಾರೂ ಕೊಲ್ಲರು. ಆಹೇರಿಯಾದ ದಿವಸ ರಜಪೂತರು ಆ ಅರಣ್ಯವನ್ನೆಲ್ಲ ತುಳಿದಾಡಿ ಮೃಗಸಂಹಾರವನ್ನು ಆರಂಭಿ

ಸುವರು. ಆ ದಿನ ಅರಣ್ಯದಲ್ಲಿ ಒಂದು ಹರಿಣವು ಕೂಡ ತಪ್ಪಿಸಿ ಉಳಿಯು ಲಾಗದು. ಇಂದು ಆಹೇರಿಯಾ; ಆದುದರಿಂದ ರಜಪೂತ ವೀರರು ಆ ಅರಣ್ಯದ ಕಡೆಗೆ ಮಹಾ ಉತ್ಸಾಹದೊಡನೆ ಹೊರಟಿದ್ದರು

ಆಗಿನ ಕಾಲದಲ್ಲಿ, ಉದಯಸಾಗರದ ಬಳಿಯಲ್ಲಿ ಕಮಳವಿಹಾರದ ಅರಸರ ಪ್ರಾಸಾದಗಳು ಇನ್ನೂ ನಿರ್ಮಿತವಾಗಿರಲಿಲ್ಲ. ಸೃಷ್ಟಿಯ ಸ್ವಾಭಾವಿಕವಾದ ಶೋಭೆಯು ಕೃತ್ರಿಮವಾದ ಅಲಂಕಾರಗಳಿಂದ ಮರೆಮಾಡಲ್ಪಟ್ಟಿರಲಿಲ್ಲ! ಆ ಶೋಭಾಯುಕ್ತವಾದ ಸ್ಥಳದಲ್ಲಿ ಸಂಪೂರ್ಣವಾದ ಶಾಂತತೆಯು, ಪಕ್ಷಿಗಳ ಕಲ ಕಲರವವನ್ನೂ ನಿರ್ಝರಗಳ ಕಲನಿನಾದವನ್ನೂ ಈ ರಜಪೂತಸೇನೆಯ ಕೋಲಾ ಹಲವನ್ನೂ ಲಕ್ಷಿಸದೆ, ಎಲ್ಲೆಲ್ಲಿಯೂ ತಾನೇತಾನಾಗಿ ವಿರಾಜಮಾನವಾಗಿತ್ತು. ಆ ಶಾಂತಿಯ ಪ್ರಭಾವದಿಂದ ಎಂತಹ ಅಸಹ್ಯವಾದ ಮನೋವಿಕಾರಗಳಿಗೊಳ ಗಾದ ಪುರುಷನು ಅಲ್ಲಿಗೆ ಬಂದರೂ ಅವನ ಮನಸ್ಸು ಕ್ಷಣಕೊತ್ತಾದರೂ ಸಮಾಧಾನವನ್ನು ಹೊಂದದಿರದು !

ಮೇಲ್ಗಡೆಗೆ ಮನೋಹರವಾದ ಮೇಘಮಾಲೆಯಂತೆ ನಭೋಮಂಡಲ ವನ್ನು ವ್ಯಾಪಿಸಿರುವ ಪರ್ವತದ ಶಿಖರಗಳು, ಕೆಳಗೆ ಸ್ವಚ್ಛವಾದ ನೀರಿನ ಮಡು ವುಗಳು, ಕೆಲವು ಹರಿಯುತ್ತಿರುವುವು, ಕೆಲವು ಸ್ಥಿರವಾಗಿರುವುವು. ಅಲ್ಲಲ್ಲಿಗೆ ಸಣ್ಣ ದೊಡ್ಡ ಗುಡಿಸಲುಗಳು. ಅರುಣಸಿಂಹನು ಇವನ್ನೆಲ್ಲ ನೋಡುತ್ತ ನಡೆದಿ ದನು. ಆದರೆ ಎದುರಿಗೆ, ಸಣ್ಣದೊಂದು ಮಡುವಿನ ನೆರೆಯಲ್ಲಿ ಹಸುರು ಬೆಳೆಯ ಮಧ್ಯದಲ್ಲಿ ಎತ್ತರವಾದೊಂದು ಮಂಚಿಕೆಯ ಮೇಲೆ ಅದೇನು? ಸುಂದ ರಿಯಾದ ರಮಣಿಯ ಪ್ರತಿಮೆಯೇ? ಛೆ, ಅಲ್ಲ! ಪ್ರತಿಮೆಯು ಚಲಿಸುವುದುಂಟೆ? ಅವಳು ಓರ್ವ ರಜಪೂತ ತರುಣಿಯು. ಹೊಲದ ಬೆಳೆಯನ್ನು ಹಕ್ಕಿಗಳಿಂದ ಕಾಯಲು ನಿಂತಿರುವಳು! ಎಂತಹ ಲಾವಣ್ಯವತಿಯುವಳು! ಸ್ವಲ್ಪ ಹಿಂದೆ ಉಳಿ ದಿದ್ದ ಅರುಣಸಿಂಹನು ಅವಳನ್ನು ನೋಡಿದನು.

ಅರುಣಸಿಂಹನು ಮಾರ್ಗಕ್ರಮಣ ಮಾಡುವಾಗ ಹಾದಿಯನ್ನು ನೋಡು ತ್ತಿರಲಿಲ್ಲ. ಆ ಕೆಲಸವನ್ನು ಅವನ ಕುದುರೆಯು ಮಾಡುತ್ತಿತ್ತು! ಹಾಗಾದರೆ ಅವನೇನು ಮಾಡುತ್ತಿದ್ದನು? ಅವನು ವನಸೌಂದರ್ಯವನ್ನು ನೋಡುತ್ತಿದ್ದನು;

ಆ ಮಂಚಿಕೆಯ ಮೇಲಿನ ತರುಣಿಯನ್ನು ನೋಡುತ್ತಿದ್ದನು. ಬರಬರುತ್ತ ಅವನ ಕುದುರೆಯೂ ಆ ಮಂಚಿಕೆಯ ಸಮೀಪಕ್ಕೆ ಬಂದಿತು ರಜಪೂತವೀರರ ಕೋಲಾಹಲದಿಂದ ಬೆಚ್ಚಿ ಬೆರಗಾಗಿ ಗೂಡುಗಳನ್ನು ಬಿಟ್ಟು ಹಾರಾಡುವ ಪಕ್ಷಿಗಳು ತನ್ನ ಹೊಲದ ಪೈರಿನ ಮೇಲೆ ಬಂದು ಕೂತು ಅದನ್ನು ಮೇಯುವುದನ್ನು ನೋಡಿ, ಆ ತರುಣಿಯು ತನ್ನ ಬಳಿಯಲ್ಲಿದ್ದ ಕವಣೆಯನ್ನು ಬೀಸಿ ಕಲ್ಲನ್ನು ಒಗೆದಳು ಹಕ್ಕಿಗಳು ಪುನಃ ಚಲವಿಚಲವಾಗಿ ಹಾರಾಡತೊಡಗಿದುವು. ಅರುಣಸಿಂಹನು ಇವನ್ನೆಲ್ಲ ನೋಡುತ್ತಲೇ ಇದ್ದನು. ಅವನು ಮನಸ್ಸಿನಲ್ಲಿ– "ಸ್ವಭಾವಸುಂದರಿಯಾದ ಈ ಅಬಲೆಯು ಶರೀರವನ್ನು ಕೊಳೆಯಾದ ಹರಕು ಬಟ್ಟೆಯೂ ಮಲಿನವಾದ ಸೊಟ್ಟಡೊಂಕ ಬೆಳ್ಳಿಯ ಆಭರಣಗಳೂ ಹೇಗೆ ಅಂದಗೆಡಿಸಿರುವುವು! ನಮ್ಮ ಅರಮನೆಯೊಳಗಿನ ವಸ್ತ್ರಾಲಂಕಾರಗಳನ್ನು ತೊಡಿಸಿದರೆ ಆಗ ಇವಳು ಹೇಗೆ ತೋರಬಹುದು? ಇಂತಹ ದೃಢವಾದ ಶರೀರಾವಯವಗಳುಳ್ಳ ಕಮನೀಯವಾದ ಕಾಮಿನಿಯ ಮೂರ್ತಿಯನ್ನು ನಾನು ಹಿಂದೆ ಎಂದಾದರೂ ನೋಡಿರುವೆನೇ?" ಎಂದು ಮುಂತಾಗಿ ಭಾವಿಸುತ್ತಲಿದ್ದನು.

ರಜಪೂತ ಸೈನಿಕರು ಮಂಚಿಕೆಯನ್ನು ದಾಟಿ ಮುಂದಕ್ಕೆ ನಡೆದರು. ಅರುಣಸಿಂಹನ ಕುದುರೆಯೂ ಅವನ ಶರೀರವನ್ನು ಅವರೊಡನೆ ಎಳೆದೊಯ್ದು ಬಿಟ್ಟಿತು! ಆದರೆ ಅವನ ಮನಸ್ಸು ಮಾತ್ರ, ಹಿಂದೆಯೇ ಉಳಿಯಿತು. ಅವನು ಪುನಃ ಪುನಃ ಹಿಂದಿರುಗಿ ನೋಡುತ್ತಲಿದ್ದನು. ಒಮ್ಮಿಂದೊಮ್ಮೆ "ಜಯ್! ಮಹಾರಾಣಾಕೀ ಜಯ್!" ಎಂಬ ಮಹಾಧ್ವನಿಯು ಎದುರಿನ ಆರಣ್ಯದಲ್ಲಿ ಮಾರ್ದನಿಗೊಂಡಿತು. ಅರುಣಸಿಂಹನು ಎಚ್ಚತ್ತು ನೋಡಿದನು. ಅವರೆಲ್ಲರೂ ನಿರ್ದಿಷ್ಟವಾದ ಸ್ಥಳಕ್ಕೆ ಬಂದು ಮುಟ್ಟಿದ್ದರು! ಎದುರಿಗಿರುವುದೇ ಗಿರಿನಾರದ ಮಹಾರಣ್ಯ! ಅವರು ಇನ್ನು ಬೇಟೆಯನ್ನು ಆರಂಭಿಸಬೇಕು.

ಆಗ ಮಹಾರಾಣನು:—"ಸೈನಿಕರೇ! ನೀವೆಲ್ಲರೂ ಅರಣ್ಯವನ್ನು ಸುತ್ತಿಕೊಂಡು ನಿಂತುಕೊಳ್ಳಿರಿ. ನಾನೂ ಕಾಕಾಜಿಯವರೂ ಒಳಗೆ ಸೇರಿ ಬೇಟೆಯನ್ನು ಆರಂಭಿಸುವೆವು. ಎಚ್ಚರದಿಂದಿರಬೇಕು! ಒಂದೇ ಒಂದು ಪ್ರಾಣಿಯೂ ಕೂಡ ತಪ್ಪಿಸಿಕೊಂಡು ಹೋಗಕೂಡದು. ಮೇವಾಡದ ಅದೃಷ್ಟವು ಇಂದು ನಿಮ್ಮ ಕೈಯಲ್ಲಿರುವುದು!" ಎಂದು ಗಾಂಭೀರ್ಯದಿಂದ ನುಡಿದನು.

# ಎರಡನೆಯ ಪರಿಚ್ಛೇದ

ಮಹಾರಾಣನು ಸೈನಿಕರಿಗೆ ಹೀಗೆಂದು ಆಜ್ಞಾಪಿಸಿ ಭೀಮಸಿಂಹನೊಡನೆ ಅರಣ್ಯವನ್ನು ಪ್ರವೇಶಿಸಿ ಬೇಟೆಯನ್ನು ಆರಂಭಿಸಿದನು. ರಜಪೂತರು ಅರಣ್ಯವನ್ನು ಬಳಸಿಕೊಂಡು ನಿಲ್ಲಲು ಬೇರೆ ಬೇರೆ ದಿಕ್ಕಿಗೆ ಹೊರಟರು. ಆಗ ರಾಜಪುತ್ರನಾದ ಅರುಣಸಿಂಹನು:—"ನನಗೆ ಈ ಸ್ಥಳದ ಪರಿಚಯವು ಚೆನ್ನಾಗಿರುವುದು; ಅದರಿಂದ ನಾನು ಇಲ್ಲಿಯೇ ನಿಲ್ಲುವೆನು. ನೀವು ಉಳಿದ ಕಡೆಗಳನ್ನಿಮ್ಮು ಕೊಂಡು ಬೇಟೆಯನ್ನು ನೋಡಿಕೊಳ್ಳಿರಿ. ನಿಮಗೆ ಈ ದಿಕ್ಕಿನ ಯೋಚನೆಯೇ ಬೇಡ." ಎಂದು ಹೇಳಿದನು.

ಸೈನಿಕರೆಲ್ಲರೂ ದಿಕ್ಕುದಿಕ್ಕಿಗೆ ಹೋಗಿ ಅರಣ್ಯವನ್ನು ಸುತ್ತುಗಟ್ಟಿ ನಿಂತು ಬೇಟೆಯನ್ನು ಆರಂಭಿಸಿದರು. ಅರುಣಸಿಂಹನು ನಿಂತಿದ್ದ ಭಾಗವು ಸ್ವಲ್ಪ ಬೈಲಾಗಿದ್ದುದರಿಂದ ಆ ಕಡೆಗೆ ಬೇಟೆಯ ಮೃಗಗಳು ಎಷ್ಟು ಹೊತ್ತಾದರೂ ಬರಲೇ ಇಲ್ಲ. ಅವನು ಭಲ್ಲೆಯನ್ನು ಹಿಡಿದುಕೊಂಡು ನಿಂತು ನಿಂತು ಬೇಸತ್ತನು. ಕಡೆಗೆ ಅವನ ಮನಸ್ಸು ಸಹಜವಾಗಿ ತನ್ನ ಪೂರ್ವದ ಬೇಟೆಯ ಕಡೆಗೆ ತಿರುಗಿತು; ಅರುಣಸಿಂಹನು ತಿರುಗಿ ನೋಡಿದನು. ಆ ತರುಣಿಯು ಆಗಲೂ ಅದೇ ಮುಂಚಿಕೆಯ ಮೇಲೆ ಹಾಗೆಯೇ ನಿಂತಿದ್ದಳು!

ಅರುಣಸಿಂಹನಿಗೆ ಹೊರಗಿನ ಬೇಟೆಯು ಸಿಕ್ಕಲಿಲ್ಲ. ಆದುದರಿಂದ ಅವನು ಅಂತರಂಗದಲ್ಲಿ ಅಪೂರ್ವವಾದೊಂದು ಬೇಟೆಯ ಆಲೋಚನೆಯನ್ನು ಆರಂಭಿಸಿದ್ದನು. ಹೊರಗೆ ಬೇಟೆಗೆ ವನ್ಯಮೃಗವು ಸಿಕ್ಕದೆ ಇದ್ದುದರಿಂದ ಅವನು ಒಳಗೆ ಚಿಂತೆಯ ಮೇಲೆ ಚಿಂತೆಯ ಆಘಾತಗಳಿಂದ ಮನಸ್ಸನ್ನು ಕ್ಷತವಿಕ್ಷತವಾಗಿ ಮಾಡಿಬಿಟ್ಟನು! ಅವನು:—"ಈ ತರುಣಿಯು ಯಾರು? ಇಂತಹ ನಿರ್ಜನವಾದ ಅರಣ್ಯದ ನೆರೆಯಲ್ಲಿ ಒಬ್ಬಳೇ ನಿಂತಿರುವಳಲ್ಲಾ! ಈಕೆಯು ಭಿಲ್ಲರವಳೇ? ರಜಪೂತ ಕನ್ನಿಕೆಯೇ? ಇವಳ ಮನೆಯು ಎಲ್ಲಿರುವುದು? ಒಂದು ತಾಸಾಯಿತು. ಎರಡು ತಾಸಾಯಿತು, ಸಾಯಂಕಾಲವಾಗುತ್ತ ಬಂದಿತು. ಇವಳು

ಮನೆಗೆ ತಿರುಗಿ ಹೋಗಲಿಲ್ಲವೇಕೆ ? ನನ್ನಂತೆಯೇ ಇವಳೂ ನನ್ನನ್ನು ನೋಡುವ ಆಶೆಯಿಂದಲೇ ಇಲ್ಲಿ ಉಳಿದಿರುವಳೇ ? ಸರಿ. ಹಾಗಲ್ಲದಿದ್ದರೆ ಅವಳು ಇತ್ತ ಕಡೆಗೇ ನೋಡುತ್ತಿರಲು ಕಾರಣವೇನು? ಅತ್ತಕಡೆಗೆ ಪಕ್ಷಿಗಳು ಬೆಳೆಗಳನ್ನು ಮೇದುಹೋದರೂ ಆ ಕಡೆಗೆ ಅವಳ ಲಕ್ಷ್ಯವೇ ಇಲ್ಲವಲ್ಲ ! " ಈ ರೀತಿಯಾಗಿ ಅರುಣಸಿಂಹನ ಮನಸ್ಸಿನಲ್ಲಿ ಹಲವು ವಿಚಾರಗಳು ಬಂದುವು.

ದಿನಮಣಿಯು ಪಶ್ಚಿಮಾಕಾಶವನ್ನು ಸಾರಿದನು. ಅಕಸ್ಮಾತ್ತಾಗಿ ಪ್ರಾಣ ಭಯಕ್ಕೀಡಾದ ಮಹಾ ವರಾಹವೊಂದು ಅರಣ್ಯದ ಮಧ್ಯದಿಂದ ಶರವೇಗದಿಂದ ಹೊರಬಿದ್ದಿತು. ಹಲವು ಭಾವನಾತರಂಗಗಳೊಡನೆ ಕ್ರೀಡಿಸುತ್ತಿದ್ದ ಅರುಣ ಸಿಂಹನ ಮನಸ್ಸು ತಲ್ಲಣಗೊಂಡಿತು. ಅವನು ಭಾಲೆಯನ್ನು ಹಿರಿದು ವರಾಹ ವನ್ನು ಚುಚ್ಚಹೋದನು. ವರಾಹವೆಲ್ಲಿ? ಭಾಲೆಯು ನಲದಲ್ಲಿ ಒಂದು ಗೇಣು ಹುಗಿದುಕೂತಿತು. ವರಾಹವು ಅದೃಶ್ಯವಾಗಿ ಹೋಯಿತು ! ಅರುಣಸಿಂ ಹನು ತಲೆಯಮೇಲೆ ಕೈಯಿಟ್ಟುಕೊಂಡು ಕುಳಿತುಬಿಟ್ಟನು ! ಅವನ ಮುಖವು ಸಪ್ಪಗಾಯಿತು. ಆದರೆ ಅದೇ ಕ್ಷಣದಲ್ಲಿ ಸ್ವಲ್ಪ ದೂರದಲ್ಲಿ ಪ್ರಾಣೋ ತ್ಕ್ರಮಣಕಾಲದಲ್ಲಿ ಚೀರಿದ ವರಾಹದ ಕ್ರೂರಧ್ವನಿಯು ಕೇಳಬಂದಿತು ! ಅರು ಣಸಿಂಹನು ತಿರುಗಿ ನೋಡುವಷ್ಟರಲ್ಲಿ ಮಂಚಿಕೆಯಿಂದ ತುಸು ದೂರದಲ್ಲಿ ವರಾ ಹವು ನತ್ತುಬಿದ್ದಿತ್ತು. ಆ ತರುಣಿಯು ತನ್ನ ಭಾಲೆಯನ್ನು ಅದರ ಮೈಯೊಳ ಗಿಂದ ಕಿತ್ತುಕೊಂಡು ಎತ್ತಿ ಹಿಡಿದು ಮಂಚಿಕೆಯ ಕಡೆಗೆ ಬರುತ್ತಲಿದ್ದಳು !

ಅರುಣಸಿಂಹನು ಆನಂದದಿಂದ ಉನ್ಮತ್ತನಾದನು. ಅವನು ಕುದುರೆ ಯನ್ನು ತಿರುಗಿಸಿಕೊಂಡು ಆ ಕಡೆಗೆ ಹೋಗಬೇಕೆಂದಿರುವಷ್ಟರಲ್ಲಿ ಮತ್ತೊಂದು ವರಾಹವು ಅದೇ ದಾರಿಯಿಂದ ಹೊರಬಿದ್ದಿತು ! ಅದೂ ಪ್ರಾಣಭಯದಿಂದ ವಾಯುವೇಗದಿಂದ ಓಡುತ್ತಿತ್ತು ! ಅರುಣಸಿಂಹನು ಹೊರಳಿ ನೋಡುವಷ್ಟರಲ್ಲಿ ಅದು ಹತ್ತುಮಾರು ದೂರ ಹೋಗಿಬಿಟ್ಟಿತ್ತು ! ಅವನು ಪುನಃ ಹತಾಶನಾದನು. ವರಾಹವು ಈ ಸಲ ಮಂಚಿಕೆಯು ಇರುವ ದಿಕ್ಕಿನಿಂದ ಹೋಗದೆ ಎರಡನೆಯ ದಿಕ್ಕಿನಿಂದ ಹೋಗಿಬಿದ್ದಿತು ! ಅವನು ಈ ಸಾರೆ ಉದ್ಧಾರಕ್ಕೆ ಮಾರ್ಗವಿಲ್ಲವೆಂ ದನು. ಆದರೆ ಎಂಥ ಆಶ್ಚರ್ಯ! ಕ್ಷಣಮಾತ್ರದಲ್ಲಿ ಪುನಃ ವರಾಹದ ಚೀತ್ಕಾರವು

ಕೇಳಬಂದಿತು. ಅರುಣಸಿಂಹನು ನೋಡುವಷ್ಟರಲ್ಲಿ ಆ ತರುಣಿಯು ಗಹಗಹಿಸಿ ನಗುತ್ತ ನಿಂತಿದ್ದಳು; ಬಳಿಯಲ್ಲಿಯೇ ವರಾಹವು ಸತ್ತುಬಿದ್ದಿತ್ತು!

ಇನ್ನು ಅರುಣಸಿಂಹನಿಗೆ ಹಿತಾಹಿತದ ಜ್ಞಾನವು ಉಳಿಯಲಿಲ್ಲ! ಅವನ ಅಂತರಂಗದಲ್ಲಿ ಆ ತರುಣಿಯ ವಿಚಾರದ ಹೊರತಾಗಿ ಬೇರೆ ಯಾವ ಕಲ್ಪನೆಗಳಿಗೂ ಅವಕಾಶವುಳಿಯಲಿಲ್ಲ. "ಇವಳು ನಿಜವಾಗಿಯೂ ಯಾವಳೋ ಒಬ್ಬ ವನದೇವಿಯಾಗಿರಲಿಕ್ಕೆ ಬೇಕು. ಹಾಗಲ್ಲದೆ ಓರ್ವ ಸಾಮಾನ್ಯ ರಮಣಿಯಾಗಿದ್ದರೆ ಇವಳಿಗೆ ಇಂಥ ಧೈರ್ಯ-ಶೌರ್ಯ-ಸಾಹಸಗಳೆಲ್ಲಿಂದ ಬರಬೇಕು? ರಜಪೂತ ಕನ್ನಿಕೆಯಾಗಿರಬಹುದೇ? ಎಂಥ ಮನೋಹರವಾದ ರೂಪವಿವಳದು! ಅದೃಷ್ಟವಿದ್ದಂತೆ ಆಗಲಿ! ನಾನಂತೂ ಬೇಟೆಯ ಉದ್ಯೋಗವನ್ನು ಬಿಟ್ಟು ಅವಳನ್ನು ಒಮ್ಮೆ ಮಾತಾಡಿಸಿ ಬರುವದು ಸಿಶ್ಚಯವು! ಯಾವನಿಗೆ ಪ್ರತ್ಯಕ್ಷ ವನದೇವಿಯೇ ಸಹಾಯುಮಾಡಲು ಬಂದು ನಿಂತಿರುವಳೋ ಅವನಿಗೆ ಪಾರ್ಥಿವ ಪದಾರ್ಥಗಳ ಭಯವೇಕೆ? ವರಾಹಗಳ ಶವಗಳನ್ನು ತರುವ ನೆವದಿಂದ ಒಮ್ಮೆ ಅವಳ ಬಳಿಗೆ ಹೋಗಿ ಮಾತಾಡಿಸಿ ಬರುವೆನು!" ಎಂದು ಅವನು ಮನಸ್ಸಿನಲ್ಲಿ ಅಂದುಕೊಂಡನು.

ಅರುಣಸಿಂಹನು ಹೀಗೆಂದು ಭಾವಿಸಿಕೊಂಡು ತನ್ನ ಕುದುರೆಯನ್ನು ತಿರುಗಿಸಿ ಆ ಮಂಚಿಕೆಯಿರುವ ಕಡೆಗೆ ಹೊರಟನು. ಹತ್ತು ಹೆಜ್ಜೆ ಮುಂದಕ್ಕೆ ಹೋದನೋ ಇಲ್ಲವೋ ಹಿಂದಿನಿಂದ ಮತ್ತೊಂದು ವರಾಹವು ಕಂಟಿಗಳ ಜಿಡುಪಿ (ಹಿಂಡಿ) ನೊಳಗಿಂದ ಓಡಿಬರುವ ಸಪ್ಪಳವುಕೇಳಬಂದಿತು. ಇದೇನು ಸರ್ವನಾಶ! ವರಾಹದ್ದೊಂದೇ ಅಲ್ಲ, ಅದನ್ನು ಬೆನ್ನಟ್ಟಿಬರುವ ಅಶ್ವದ ಖುರಗಳ ಧ್ವನಿಯೂ ಕೇಳಿಸುವದಲ್ಲ! ಮೂರನೆಯುದದೇನು? ರಾಣಾ ಲಕ್ಷ್ಮಣಸಿಂಗನ ಚೀತ್ಕಾರಧ್ವನಿ! ವರಾಹವೂ ಅಶ್ವವೂ ರಾಣನೂ ಬಂದೇಬಿಟ್ಟರು! ಅರುಣಸಿಂಹನು ವರಾಹದ ಧ್ವನಿಯನ್ನು ಕೇಳಿ ತನ್ನ ಕುದುರೆಯ ಮುಖವನ್ನು ಅತ್ತಕಡೆಗೆ ತಿರುಗಿಸುವಷ್ಟರಲ್ಲಿ ಇಷ್ಟೆಲ್ಲ ಕೆಲಸವು ನಡೆದುಹೋಯಿತು. ಅರುಣಸಿಂಹನು ತನ್ನ ಕುದುರೆಯನ್ನು ಆ ಕಡೆಗೆ ಬಿಟ್ಟನು. ಆದರೆ ಫಲವೇನು? ವರಾಹವು ಶರವೇಗದಿಂದ ಹೋಗಿಬಿಟ್ಟಿತು! ರಾಣನೂ ಬಹು ದೂರದವರೆಗೆ ಅದನ್ನು ಹಿಂಬಾಲಿ

ಲಿಸಿದನು. ಆದರೂ ಕೃತಕಾರ್ಯನಾಗಲಿಲ್ಲ! ವರಾಹವು ಅದೃಶ್ಯವಾಗಿ ಬಿಟ್ಟಿತು! ಆ ವನ್ಯರಮಣಿಯೂ ಈ ಸಾರೆ ಮಂಚಿಕೆಯಿಂದ ಕದಲಿರಲಿಲ್ಲ. ಅವಳೂ ಅರುಣ ಸಿಂಹನು ತನ್ನೆಡೆಗೆ ಬರುವುದನ್ನು ನೋಡುತ್ತ ಮುಗ್ಧಳಾಗಿ ನಿಂತುಬಿಟ್ಟಿದ್ದಳು!

ಮಹಾರಾಣನು ಕುದುರೆಯಿಂದಿಳಿದು ತಲೆಯಮೇಲಿನ ಉಷ್ಣೀಷವನ್ನು ತೆಗೆದೊಗೆದು ಭೂಮಿಯ ಮೇಲೆ ಬಿದ್ದುಬಿಟ್ಟನು ಅವನ ಕುದುರೆಯು ಹತ್ತಿರ ದಲ್ಲಿ ಬುಸುಗುಟ್ಟುತ್ತ ನಿಂತುಕೊಂಡಿತ್ತು. ಅದರ ಶುಭ್ರವಾದ ಮೈಯು ರಕ್ತ ದಿಂದ ತೊಯ್ದು ಕೆಂಪಗಾಗಿ ಹೋಗಿತ್ತು. ಬೆವರಿನೊಡನೆ ಬೆರೆದ ರಕ್ತದ ಹನಿ ಗಳು ತಟಕಿಕ್ಕಿ ಸೋರುತ್ತಿದ್ದುವು. ಅರುಣ ಸಿಂಹನು ಇದನ್ನೆಲ್ಲ ನೋಡಿದನು.

ಅಷ್ಟರಲ್ಲಿ ಅರಣ್ಯದ ನಾಲ್ಕೂ ಕಡೆಗಳಿಂದ ಸೈನಿಕರು ಮಹಾವೇಗದಿಂದ ಹೊರಬಿದ್ದು ಬರತೊಡಗಿದರು. ಅವರಲ್ಲಿ ಕೆಲವರು ತಲೆತಗ್ಗಿಸಿ ನಿಂತಿದ್ದ ಅರುಣಸಿಂಹನ ಬಳಿಗೆ ಬಂದು "ರಾಣಾಜಿಯವರು ಎಲ್ಲಿ" ಎಂದು ಕೇಳಿದರು. ಅರುಣಸಿಂಹನು ಮಾತಾಡಲಿಲ್ಲ, ತಲೆಯೆತ್ತಲಿಲ್ಲ. ಸುಮ್ಮನೆ ಬೆರಳಿನಿಂದ ರಾಣನು ಬಿದ್ದಿರುವ ಸ್ಥಳವನ್ನು ತೋರಿಸಿದನು. ಎಲ್ಲರೂ ಆ ಕಡೆಗೆ ನಡೆದರು. ಅವರ ಹಿಂದೆ ಅರುಣಸಿಂಹನೂ ಸಾವಕಾಶವಾಗಿ ಹೊರಟನು

ಪರಿವಾರದವರನ್ನು ನೋಡಿದೊಡನೆಯೇ ರಾಣನು ಮಹಾ ಗರ್ಜನೆ ಯಿಂದ—"ಕುಲಗೇಡಿಯಾದ ಅರುಣಸಿಂಹನು ಸರ್ವನಾಶ ಮಾಡಿಬಿಟ್ಟನು! ಇಂದು ನಾನು ವರಾಹದ ಬದಲಾಗಿ ಅವನನ್ನೇ ಸಂಹರಿಸುವೆನು!" ಎಂದನು.

ರಾಣಾ ಭೀಮಸಿಂಹನು ನಡೆದ ಸಂಗತಿಗಳನ್ನೆಲ್ಲ ತಿಳಿದುಕೊಂಡು ರಾಣ ನನ್ನು ಸಮಾಧಾನಗೊಳಿಸಲು ಯತ್ನಿಸಿದನು. ಅವನು:—ಎಷ್ಟಾದರೂ ಅರು ಣನು ಇನ್ನೂ ಚಿಕ್ಕವನು. ಅವನ ಮೇಲೆ ಸಿಟ್ಟು ಮಾಡುವುದರಿಂದ ಪ್ರಯೋ ಜನವೇನು? ಆದದ್ದು ಆಗಿಹೋಯಿತು. ತಪ್ಪಿದುದನ್ನು ತಿದ್ದಿಕೊಂಡವನೇ ಜಾಣನು! ಇಂದು ಆ ವರಾಹದ ಬದಲಾಗಿ ನಾವು ನಮ್ಮ ಹೃದಯದ ರಕ್ತ ವನ್ನು ಹಿಂಡಿ ಚಿತ್ತೂರಿನ ದೇವಿಗೆ ಅರ್ಪಿಸೋಣವಂತೆ! ಅವಳು ಸಂತುಷ್ಟ ಳಾಗೇ ಆಗುವಳು. ನಿಜವಾಗಿಯೂ ಚಿತ್ತೂರಿಗೆ ಮಂಗಲವಾಗುವುದು.

ರಾಣನಿಗೆ ಆ ಮಾತುಗಳಿಂದ ಎಷ್ಟು ಮಾತ್ರವೂ ಸಮಾಧಾನವಾದಂತೆ ತೋರಲಿಲ್ಲ. ಅವನು ಅರುಣಸಿಂಹನನ್ನು ದುರದುರನೆ ನೋಡುತ್ತ ಬಳಿಯಲ್ಲಿದ್ದ ಖಡ್ಗವನ್ನು ಹಿರಿದು ಎರಡೇ ಹಾರು ಹಾರಿ ಅವನ ಬಳಿಗೆ ಹೋದನು. ಅಷ್ಟರಲ್ಲಿ ಭೀಮಸಿಂಹನು ನಡುವೆ ಬಂದು ಅವನನ್ನು ತಡೆದನು. ಮತ್ತೊಬ್ಬ ಸರದಾರನು ತಲೆತಗ್ಗಿಸಿ ನಿಂತಿದ್ದ ಅರುಣಸಿಂಹನನ್ನು ದೂರ ಸರಿಸಿ ನಿಲ್ಲಿಸಿಕೊಂಡನು.

ಅಷ್ಟರಲ್ಲಿ ದೂರದಲ್ಲಿ ಮಹಾವೇಗದಿಂದ ಫುಟನೆಗೆದು ಹಾರುತ್ತ ಬರುತ್ತಿರುವ ಕುದುರೆಯ ಖುರಗಳ ಧ್ವನಿಯು ಕೇಳಿಬರತೊಡಗಿತು. ಎಲ್ಲರೂ ಕಿವಿಗೊಟ್ಟು ಆಲಿಸತೊಡಗಿದರು. ಆ ಕುದುರೆಯು ಚಿತ್ತೂರು ದುರ್ಗದ ದಾರಿಯಿಂದ ಅವರ ಕಡೆಗೆ ಬರುವುದೆಂದು ನಿರ್ಣಯವಾಯಿತು. ಸಕಲರೂ ವಿಸ್ಮಿತನೇತ್ರದಿಂದ ಆ ಕಡೆಗೇ ನೋಡುತ್ತ ನಿಂತುಕೊಂಡರು. ಕ್ಷಣಮಾತ್ರದಲ್ಲಿ ಅಶ್ವವೂ ಅಶ್ವಾರೋಹಿಯೂ ಅವರ ಎದುರಿಗೆ ಬಂದರು ಮೇಲೆ ಕುಳಿತ ಬಾಲಕನು ಕುದುರೆಯ ವೇಗವನ್ನು ಕಡಿಮೆಮಾಡಲು ಯತ್ನಿಸುತ್ತಿದ್ದನು. ಅದು ಅವರ ಬಳಿಯಲ್ಲಿ ಬಂದು ನಿಂತಿತು. ಈ ಅಶ್ವಾರೋಹಿಯು ಯಾರು ? ಬಾದಲನು ! ಅವನ ಕುದರೆಯ ಬೆನ್ನ ಮೇಲೆ ಹಿಂಗಡೆಗೆ ಭಯಂಕರವಾದೊಂದು ವರಾಹದ ಶವವೂ ಇದ್ದಿತು

**ರಾಣನು** ವಿಸ್ಮಿತಸ್ವರದಿಂದ—"ಬಾದಲ ! ಇದೇನು ! ನೀನು ಇಲ್ಲಿಗೇಕೆ ಬಂದೆ ? " ಎಂದನು.

**ಬಾದಲ** :— "ರಾಣಾಜೀ, ಅತ್ಯಂತ ಅವಸರದ ಕೆಲಸವಿದ್ದುದರಿಂದ ಬಂದೆನು. ಅಲ್ಲಾವುದ್ದೀನ್ ! ಅಲ್ಲಾವುದ್ದೀನನು ಮಹಾ ಸೈನ್ಯದೊಂದಿಗೆ ಮೇವಾಡವನ್ನು ಪ್ರವೇಶಿಸಿರುವನಂತೆ. ಅವನ ಸೈನಿಕರು ನಮ್ಮ ದೇಶದ ಗಡಿಯಲ್ಲಿದ್ದ ಶಂಕರದೇವನ ಮಂದಿರವನ್ನು ಮುತ್ತಿದುದನ್ನು ನಮ್ಮ ಕಡೆಯ ಗುಪ್ತಚಾರರು ನೋಡಿ ಬಂದಿರುವರು. ದುರ್ಗದ ದ್ವಾರವನ್ನು ಮುಚ್ಚಲೇ ಬೇಕು " ಎಂದು ತೇಕುತ್ತ ( ಉಬ್ಬಸಬಡುತ್ತ ) ಕುದುರೆಯ ಮೇಲೆ ಕುಳಿತೇ ಮಾತಾಡಿದನು.

ಆಕಸ್ಮಿಕವಾದೊಂದು ಸ್ಫೂರ್ತಿ–ವಿಸ್ಮಯಗಳ ವಿದ್ಯುತ್ ಪ್ರವಾಹವು ಆ ರಜಪೂತ ಸೈನಿಕ ಸೇನಾಪತಿಗಳ ಅಂತರಂಗದೊಳಗಿಂದ ಹಾದುಹೋಯಿತು. ಸಕಲರೂ ಖಡ್ಗವನ್ನು ಹಿರಿದು ನಿಂತರು. "ಜಯ್! ಮಹಾರಾಣಾಕೀ ಜಯ್!" ಎಂಬ ಜಯಘೋಷವು ವನವನಾಂತರವನ್ನು ವ್ಯಾಪಿಸಿತು.

ರಾಣನು ಭೀಮಸಿಂಹನನ್ನು ಕುರಿತು:— “ಕಾಕಾಜೀ, ನೋಡಿದಿರಾ, ಆಹೇರಿಯಾದ ಬೇಟೆಯಲ್ಲುಂಟಾದ ವಿಘ್ನದ ಫಲವು ಎದುರಿಗೇ ಬಂದಿತು. ಪ್ರಾಯಶ್ಚಿತ್ತ ಮಾಡಲಿಕ್ಕೂ ಕೂಡ ಅವಕಾಶವುಳಿದಿಲ್ಲ. ಇನ್ನೇನು ಮಾಡಬೇಕು ?” ಎಂದು ಹೇಳಹೇಳುತ್ತ ರಾಣನ ದೃಷ್ಟಿಯು ಬಾದಲನ ಕುದುರೆಯ ಕಡೆಗೆ ತಿರುಗಿತು. ಅವನ ಕುದರೆಯ ಬೆನ್ನ ಮೇಲಿನ ವರಾಹದ ಶವವನ್ನು ನೋಡಿ ರಾಣನಿಗೆ ತುಂಬಾ ಆಶ್ಚರ್ಯವೆನಿಸಿತು. ಅವನ ಮುಖವು ಆನಂದದಿಂದ ಅರಳಿತು. ಆವನ ಕೈಯೊಳಗಿಂದ ತಪ್ಪಿಸಿಕೊಂಡು ಓಡಿಹೋದ ವರಾಹವು ಇದೇ ! ರಾಣನು ಅದರ ಮೈಯಲ್ಲಿ ಚುಚ್ಚಿದ ಭಾಲೆಯ ಘಾಯದಿಂದ ಈಗಲೂ ರಕ್ತವು ತಟಿಕಿಕ್ಕಿ ಸೋರುತ್ತಿತ್ತು. ಅವನು ಬಾದಲನನ್ನು ಕುರಿತು:—“ಬಾದಲ, ಇದೆಲ್ಲಿ ದೊರಕಿತು ? ಚಿತ್ತೂರಿನ ಭಾಗ್ಯಲಕ್ಷ್ಮಿಯು ಇನ್ನೂ ನಮ್ಮನ್ನು ತೊಲಗಿ ಹೋಗಿಲ್ಲ ! ” ಎಂದನು.

**ಬಾದಲ:**—ದಾರಿಯಲ್ಲಿ ಬರಬರುತ್ತ ಪ್ರಾಣಭಯದಿಂದ ಓಡುತ್ತಿರುವ ಗಾಯವಡೆದ ಈ ವರಾಹವನ್ನು ನೋಡಿದೆನು. ಕೂಡಲೆ ಇದು ಆಹೇರಿಯಾದ ಬೇಟೆಯು, ತಪ್ಪಿಸಿಕೊಂಡು ಓಡಿಹೋಗುವುದು; ಎಂದು ಯೋಚಿಸಿ ಕೈಯೊಳಗಿನ ಭಾಲೆಯಿಂದ ಇದನ್ನು ಇರಿದು ಕೊಂದೆನು. ರಾಣಾಜಿಯವರಿಗೆ ಕಾಣಿಕೆಯಾಗಿ ಕೊಡಲೆಂದು ಸಂಗಡ ತೆಗೆದುಕೊಂಡು ಬಂದಿರುವೆನು.

ರಾಣನು ಬಾದಲನನ್ನು ಕುದುರೆಯ ಬೆನ್ನಿನ ಮೇಲಿಂದ ಎಳೆದು ಕೆಳಗಿಳಿಸಿಕೊಂಡು ಬಿಗಿದಪ್ಪಿ ಮುದ್ದಾಡಿದನು. ಮತ್ತು:– “ಸಿಂಹಳೀ ವೀರನೇ, ನೀನಿಂದು ಆಹೇರಿಯಾದ ಬೇಟೆಯನ್ನು ಸಾಂಗಮಾಡಿದೆ; ಇಷ್ಟೇ ಅಲ್ಲ, ಸಾಂಪ್ರತದ ಸಂಗ್ರಾಮದಲ್ಲಿ ನಿನ್ನಿಂದಲೇ ಚಿತ್ತೂರು ರಕ್ಷಿಸಲ್ಪಡುವುದು. ಈ ಸಂಗ್ರಾಮದಲ್ಲಿ ನೀನೇ ಸೇನಾಪತಿಯು. ಕಾಕಾಜೀ, ಜಗದಂಬೆಯು ಈ ಅಕಲ್ಪಿತವಾದ ಕೃತಿಯಿಂದ ಬಾದಲನನ್ನೇ ಸೇನಾಪತಿಯನ್ನು ಮಾಡಿರೆಂದು ನಮಗೆ ಅಜ್ಞಾಪಿಸಿದಳು. ಆಕೆಯ ಅಪ್ಪಣೆಯನ್ನು ಮೀರುವುದು ಸರಿಯಲ್ಲ. ಇಂದಿನಿಂದ ಮೇವಾಡದ ಸೈನ್ಯಕ್ಕೆ ಈ ಅಭಿಮನ್ಯುವೇ ನಾಯಕನು! ” ಎಂದನು. ಬಳಿಕ ಅರುಣಸಿಂಹನ ಕಡೆಗೆ ತಿರುಗಿ:– “ಅರುಣಸಿಂಹ, ಇಂದಿನಿಂದ ನೀನು ಚಿತ್ತೂರಿನ ಗಡಿಯಲ್ಲಿ

ಕೂಡ ಕಾಲಿಡಲಾಗದು, ನೀನು ದುರ್ಗವನ್ನು ಪ್ರವೇಶಿಸಿದುದನ್ನು ನೋಡಿದರೆ ನಿನಗೆ ಪ್ರಾಣದಂಡನೆಯನ್ನು ವಿಧಿಸುವೆನು. ಎಚ್ಚರದಿಂದಿರು ಕುಲಾಂಗಾರನೇ, ರಜಪೂತ ರಾಣನ ಹೊಟ್ಟೆಯಲ್ಲಿ ಹುಟ್ಟಿ ಅವರ ಕುಲಕ್ಕೆ ಕಳಂಕವನ್ನು ತಂದು ಬಿಟ್ಟೆಯಲ್ಲ! ಕರ್ತವ್ಯವೆಂಬ ಪಾರಿಜಾತ ಕುಸುಮವನ್ನು ಮರೆತು ಅಡವಿಯ ಹೂವನ್ನು ನೋಡಿ ಮೋಹಗೊಂಡೆಯಲ್ಲವೇ ? ಇಂಥ ಕರ್ತವ್ಯಭ್ರಷ್ಟನಾದ ನಿನಗೆ ಚಿತ್ತೂರಿನಲ್ಲಿ ಸ್ಥಳವಿಲ್ಲ. ನೀನು ಇಂಥ ನೀಚನಾಗುವೆಯೆಂದು ಗೊತ್ತಿದ್ದರೆ ಹುಟ್ಟಿದ ಹೊಲೆಮನೆಯಲ್ಲಿಯೇ ನಿನ್ನನ್ನು ಮುರಿದು ಎಸೆದುಬಿಡುತ್ತಿದ್ದೆನಲ್ಲ! ನಡೆ, ನಿಲ್ಲದಿರು. ನಿನ್ನ ಆ ಸುಟ್ಟ ಮುಸುಡನ್ನು ನೋಡಲಾರೆನು !" ಎನ್ನುತ್ತ ಅತಿಶಯ ತಿರಸ್ಕಾರ ದೃಷ್ಟಿಯಿಂದ ಅವನನ್ನು ನೋಡಿ ಮುಖವನ್ನು ತಿರುಗಿಸಿದನು.

ಅಕಸ್ಮಾತ್ತಾಗಿ ಸಿಡಿಲುಬಿದ್ದಂತಾಯಿತು ! ಸೈನಿಕರೂ ಭೀಮಸಿಂಹನೂ ಘಾತವಾಯಿತೆಂದರು. ಭೀಮಸಿಂಹನು ಮುಂದೆ ಬಂದು:– "ರಾಣಾ, ಇಂತಹ ಆಪತ್ತಿನ ದಿನದಲ್ಲಿ ಹೀಗೆ ದುಡುಕಿ ಚಿತ್ತೂರಿನ ಬಲವನ್ನು ಕುಂದಿಸದಿರು. ಅರುಣನು ಬಾಲಕನು, ಅವನ ಈ ಪ್ರಥಮ ಅಪರಾಧವು ಕ್ಷಮ್ಯವು" ಎಂದನು.

ಲಕ್ಷ್ಮಣಸಿಂಹನು ಸ್ವಲ್ಪ ಅಧಿಕಾರಯುಕ್ತವೂ ನ್ಯಾಯನಿಷ್ಠುರವೂ ಆದ ವಾಣಿಯಿಂದ:– "ಕಾಕಾಜೀ, ರಾಜಪುತ್ರನೆಂದು ಹೀಗೆ ಪಕ್ಷಪಾತದಿಂದ ಮಾತಾಡೋಣವಾಗುವುದೇ ? ರಾಜ್ಯಕಾರಭಾರದಲ್ಲಿ ಹೀಗೆ ಪಕ್ಷಪಾತ ಮಾಡುವುದು ಸರಿಯಲ್ಲ. ನಾನು ರಾಣನು. ರಾಣನ ಕರ್ತವ್ಯವನ್ನು ಮಾಡಿದೆನು. ಕಾಡಿನ ಕುಸುಮವನ್ನು ಕಂಡು ಮೋಹಿತನಾದ ಕಾಡಾಡಿಯು ನಾಡಿನಲ್ಲಿರಲು ತಕ್ಕವನಲ್ಲ. ಅವನು ಆ ಅಡವಿಯ ಭಿಲ್ಲರ ಹುಡುಗಿಯ ಗುಡಿಸಲಿನಲ್ಲಿ ಹೋಗಿ ಇರಲಿ."

ಭೀಮಸಿಂಹನು ಮೌನವನ್ನು ತಾಳಿದನು. ಇತರ ಸರದಾರರೂ ರಾಜಪುತ್ರರೂ ಬಾದಲನೂ ಅರುಣಸಿಂಹನ ಅಪರಾಧವನ್ನು ಕ್ಷಮಿಸಬೇಕೆಂದು ರಾಣನನ್ನು ಬೇಡಿಕೊಳ್ಳಬೇಕೆಂದು ಯೋಚಿಸಿದ್ದವರು ಭೀಮಸಿಂಹನ ಸ್ಥಿತಿಯನ್ನು ನೋಡಿ ಮುಂದೆ ಬಂದು ಮಾತಾಡಲಾರದಾದರು. ದುರ್ದೈವಿಯಾದ ಅರುಣಸಿಂಹನು ನೆಲವನ್ನು ನೋಡುತ್ತ ನಿಂತುಕೊಂಡನು.

ರಾಣನೂ ಸರದಾರರೂ ನಗರಾಭಿಮುಖವಾಗಿ ಹೊರಟರು. ಆಗ ಬಾದಲನು ಸ್ವಲ್ಪ ಹಿಂದೆ ಉಳಿದು ಅರುಣಸಿಂಹನ ಬಳಿಗೆ ಹೋಗಿ– "ಕುಮಾರ, ಏನು ಮಾಡಿಬಿಟ್ಟೆ? ಇಂತಹ ಆಪತ್ತಿನ ಸಮಯದಲ್ಲಿ ನಿನ್ನನ್ನು ಕಳೆದುಕೊಂಡೆವಲ್ಲಾ!" ಎಂದನು.

ಅರುಣಸಿಂಹನು ಬಾದಲನ ಕೋಮಲ ಹೃದಯದ ಮಾತುಗಳನ್ನು ಕೇಳಿ ಅವನ ಪ್ರೇಮಪೂರ್ಣವಾದ ಮುಖಭಾವವನ್ನೂ ಸಹಾನುಭೂತಿಗೂಡಿದ ದೃಷ್ಟಿಯನ್ನೂ ನೋಡಿ, ಕಣ್ಣೀರು ಸುರಿಸತೊಡಗಿದನು. ಅವನು - "ಬಾದಲ! ನೀನು ಇಂದು ಚಿತ್ತೂರನ್ನು ಉದ್ಧರಿಸಿದೆ, ಹಾಗೆಯೇ ಚಿತ್ತೂರಿಗೆ ಈಗ ಒದಗಿ ಬಂದಿರುವ ಸಂಕಟವನ್ನು ನೀನೇ ನೀಗುವೆಯೆಂದು ಆಶಿಸುವೆನು ನಾನು ದುರ್ದೈವಿಯು. ನನ್ನ ಸಲುವಾಗಿ ವ್ಯರ್ಥವಾಗಿ ವ್ಯಸನಪಡುವೆಯೇಕೆ? ನನ್ನ ಅಪರಾಧಕ್ಕೆ ತಕ್ಕ ಶಿಕ್ಷೆಯು ವಿಧಿಸಲ್ಪಟ್ಟಿತು. ರಾಣರವರು ನ್ಯಾಯಾನ್ಯಾಯಗಳನ್ನು ವಿಚಾರಿಸಿಯೇ ನನಗೆ ಈ ಶಿಕ್ಷೆಯನ್ನು ವಿಧಿಸಿದರು. ನಾನು ಇನ್ನು ಈ ಸುಟ್ಟ ಮೋರೆಯನ್ನು ತೋರಿಸಿಕೊಂಡು ಚಿತ್ತೂರನ್ನು ಪ್ರವೇಶಿಸಲಾರೆನು. ಹೋಗು; ವೀರಶ್ರೇಷ್ಠನೇ ಹೋಗು, ಪ್ರಾಣವನ್ನು ಕೂಡ ಲಕ್ಷಿಸದೆ, ಚಿತ್ತೂರನ್ನು ಉದ್ಧರಿಸಲು ಯತ್ನಿಸು. ನನ್ನ ದೈವದಲ್ಲಿ ಅಂತಹ ಪುಣ್ಯಕರ್ಮವು ಇಲ್ಲದೆ ಹೋಯಿತು ತಡಮಾಡಬೇಡ; ಎಲ್ಲರೂ ಹೋಗಿಬಿಟ್ಟರು! ನಾನು ವನವಾಸಕ್ಕೆ ಬೆದರುವುದಿಲ್ಲ. ಮಾತೃಭೂಮಿಗೆ ಆಪತ್ತು ಒದಗಿರುವಾಗ ಅದನ್ನು ನೀಗುವುದಕ್ಕೆ ನಾನು ನೆರವಾಗದೆ ಹೋದೆನಲ್ಲ ! ಜನ್ಮದಾತೆಗೆ ನನ್ನ ಜನ್ಮವು ಭಾರವಾಗಿ ಸಂದಿತಲ್ಲ! ಎಂದು ಚಿಂತಿಸುವೆನು" ಎಂದನು.

ಹಸುಳನಾದ ಬಾದಲನ ಕೋಮಲವಾದ ಅಂತಃಕರಣವು ದುಃಖದಿಂದ ಕರಗಿ ನೀರಾಯಿತು. ಆದರೆ ಮಾಡುವುದೇನು? ಅವನು ದುಃಖಿತಾಂತಃಕರಣದಿಂದ ಕುದುರೆಯನ್ನು ತಿರುಗಿಸಿಕೊಂಡು 'ಅರುಣ, ಆದದ್ದು ಆಯಿತು. ಚಿತ್ತೂರನ್ನು ಮಾತ್ರ ಮರೆಯಬೇಡ,' ಎನ್ನುತ್ತ ವೇಗದಿಂದ ನಡೆದು ಉಳಿದವರನ್ನು ಸೇರಿಕೊಂಡನು.

# ಮೂರನೆಯ ಪರಿಚ್ಛೇದ.

ಕ್ರಮವಾಗಿ ಸಾಯಂಕಾಲವಾಗುತ್ತ ಬಂದಿತು. ಪ್ರಭಾಮಯಳಾದ ಸೃಷ್ಟಿಯುವತಿಯ ಮುಖವು ಕಪ್ಪಾಯಿತು. ಕೊನೆಗೆ ಗಾಢಾಂಧಕಾರವೇ ಮುಸುಕಿತು—ಸೃಷ್ಟಿಯುವತಿಯು ಅದೃಶ್ಯಳಾಗಿ ಬಿಟ್ಟಳು! ಹೊಂಬಣ್ಣದ ರವಿ ಕಿರಣಗಳಿಂದ ಬೆಳಗುತ್ತಿದ್ದ ಹಾಸ್ಯಮಯಳಾದ ಭೂದೇವತೆಯು ಇದ್ದಕ್ಕಿದ್ದ ಹಾಗೆ ಕಾಲಿಮಾಮಯವಾದ ಅಂಧತಮಸ್ಸಿನಲ್ಲಿ ಮುಳುಗಿಹೋದಳು! ಅರುಣ ಸಿಂಹನು ನೋಡಿದನು; ಏನನ್ನು? ಕತ್ತಲೆಯನ್ನು! 'ಇದು ಕತ್ತಲೆಯಲ್ಲ, ನೀಲವರ್ಣದ ಆಕಾಶವೇ ನನ್ನ ಮೇಲೆ ಕಡಿದುಕೊಂಡು ಬಿದ್ದಿದೆ' ಎಂದು ಅವನು ಭಾವಿಸಿಕೊಂಡು ನಿಟ್ಟುಸಿರು ಬಿಟ್ಟು ನೆಲದ ಮೇಲೆ ಕುಳಿತುಬಿಟ್ಟನು.

ಅರುಣಸಿಂಹನ ಹೃದಯವು ಗಡಗಡನೆ ನಡುಗಿತು. ಅವನ ಅಂತರಂಗ ದಲ್ಲಿ ಅವಮಾನ, ಶಿಕ್ಷೆಯ ಭಯ, ಅನುತಾಪಗಳೆಂಬ ಅನೇಕ ಮನೋಭಾವನೆ ಗಳು ಉದಯಹೊಂದಿದುವು. ಕೊನೆಗೆ ಅವೆಲ್ಲ ಹೋಗಿ ಭಯವೋ ವಿಷಾ ದವೋ ಯಾವುದೋ ಒಂದೇ ಒಂದು ಭಾವನೆಯು ಅವನ ಅಂತರಂಗವನ್ನೆಲ್ಲ ವ್ಯಾಪಿಸಿ ಬಿಟ್ಟಿತು! ವಿಶ್ವಸಂಸಾರವೆಲ್ಲ ಅವನ ಪಾಲಿಗೆ ಶೂನ್ಯವಾಗಿ ಹೋಗಿ ಬಿಟ್ಟಿತು! ಜಗತ್ತಿನಲ್ಲಿ ಮತ್ತಾವುದೂ ಇಲ್ಲದೆ ಅನಂತವ್ಯಾಪಿಯಾದ, ಅಂಧಕಾರ ದಿಂದ ಆವೃತವಾದ ಆಕಾಶವೊಂದೇ ಇದ್ದ ಹಾಗೆ ತೋರಿತು. ಕೆಳಗೆ, ಮೇಲೆ, ಸುತ್ತಲು—ಎಲ್ಲ ಕಡೆಗಳಲ್ಲಿಯೂ ಆ ಅಂಧಕಾರಮಯವಾದ ಆಕಾಶವೇ ಆಕಾಶ! ಅವನು ಕಣ್ಣುಗಳನ್ನು ಮುಚ್ಚಿಕೊಂಡನು. ಅಂಧಕಾರವು ಇಮ್ಮಡಿಸಿತು. ಅವನು ತನ್ನೊಳು ತಾನೇ ಹೀಗೆ ಅಂದುಕೊಂಡನು:—ನಾನು ಅಂಜಿದೆನೇ? ನಾನು ಕ್ಷತ್ರಿಯನು. ಕ್ಷತ್ರಿಯರ ಕುಲಕ್ಕೆ ಗೌರವ ಸ್ವರೂಪನಾದ ರಾಣಾಲಕ್ಷ್ಮ ಣಸಿಂಗನು ನನಗೆ ತಂದೆಯಾಗಬೇಕು. ಹೀಗಿದ್ದು ಇಂದು ಈ ನಿರ್ಜನತೆಗೆ, ಕತ್ತಲೆಗೆ, ಸೃಷ್ಟಿಯಲ್ಲಿ ಯಾವುದು ಪದಾರ್ಥವಲ್ಲವೋ ಅಂಥದಕ್ಕೆ ಅಂಜಬೇಕೆ? ಇದ್ದಕ್ಕಿದ್ದ ಹಾಗೆ ಹೃದಯದ ಆವೇಶಭಾವನೆಯೊಂದು ಹೊರಚಲ್ಲಿತು. ಅವನು

ತನ್ನ ನಡುವಿನೊಳಗಿನ ಖಡ್ಗವನ್ನು ಹಿರಿದನು. ಹಿರಿದು ಮಾಡುವುದೇನು ? ಅವನು ' ಈ ಭಯವೂ ಈ ಕಾಳಿಮೆಯೂ ಪದಾರ್ಥಗಳಾಗಿದ್ದರೆ ಅವುಗಳನ್ನು ಕಡಿದೊಗೆದು ಬಿಡುತ್ತಿದ್ದೆನಲ್ಲ! ' ಎಂದು ಯೋಚಿಸಿದನು. ಹೃದಯದ ಆವೇಶವು ಕುಂದುತ್ತಲೇ ಖಡ್ಗವನ್ನು ಒರೆಗಾಣಿಸಿ ಪುನಃ ಯೋಚಿಸತೊಡಗಿದನು·— ನನಗೆ ದುಃಖವಾಯಿತೇ ? ನಾನು ರಾಜಕುಮಾರನು. ನನಗೆ ಇಂದಿನವರೆಗೆ ದುಃಖದ ಕಲ್ಪನೆಯು ಕೂಡ ಇರಲಿಲ್ಲ ! ಜನರು ಹಸಿವೆಯಾದಾಗ ಹೊಟ್ಟೆಯೊಳಗಾಗುವ ಕಳವಳಕ್ಕೆ ದುಃಖವೆನ್ನುತ್ತಿರಬಹುದೇ ? ನಾನು ಏನಾದರೂ ಬೇಡಿದಾಗ ನಮ್ಮ ಅಮ್ಮನು ಅದನ್ನು ಕೊಡದಿದ್ದರೆ ಮನಸ್ಸಿನಲ್ಲಿ ಉಂಟಾಗುವ ಉದ್ವೇಗಕ್ಕೆ ದುಃಖವೆನ್ನಬಹುದೇ ? ದುಃಖವು ಹೇಗಿರುವುದು ? ಎಂದು ಯೋಚಿಸುತ್ತಿದ್ದೆನಲ್ಲ ! ಈಗ ತಿಳಿಯಿತು. ದುಃಖವು ಈ ರೀತಿಯಾಗಿ ಅಂಧಕಾರಮಯವಾಗಿರುವುದು ! ನಿರ್ಜನವಾಗಿರುವುದು ! ನಿಃಶಬ್ದವಾಗಿರುವುದು ! ಇತ್ಯಾದಿ.

ಕೊನೆಗೆ ಅರುಣಸಿಂಹನ ಹೃದಯದಲ್ಲಿ ಒಂದು ಯೋಚನೆಯು ಹುಟ್ಟಿತು. ಅವನು ' ನನ್ನ ಆ ವನದೇವಿಯೆಲ್ಲಿ? ಆ ನನ್ನ ವನಕುಸುಮವೆಲ್ಲಿ ? ಅವಳೂ ಇಂಥದೇ ಅಂಧಕಾರಮಯವಾದ, ನಿರ್ಜನವಾದ, ನಿಃಶಬ್ದವಾದ, ದುಃಖಕ್ಕೆ ಒಳಗಾದಳೇ ? ಅವಳಿಗೆ ಭಯವುಂಟಾಗಿರಬಹುದೇ ? ' ಎಂದು ಭಾವಿಸಿದನು.

ಆ ವನದೇವಿಯ ಕಲ್ಪನೆಯು ಬಂದಕೂಡಲೆ ಅರುಣಸಿಂಹನ ಮನಸ್ಸಿನೊಳಗಿನ ಅಂಧಕಾರವು ಸ್ವಲ್ಪ ಕಡಿಮೆಯಾಯಿತು. ಮೇಲೆ ಮುಸುಕಿದ ಕತ್ತಲೆಯ ಪಡದೆಯನ್ನು ಭೇದಿಸಿಕೊಂಡು ಅಲ್ಲಿ ಒಂದೇ ಒಂದು ನಕ್ಷತ್ರವು ಉದಯ ಹೊಂದಿದಂತಾಯಿತು. ಆದರೆ ಆ ವನದೇವಿಗೂ ದುಃಖವಾಗಿರಬಹುದೆಂಬ ಕಲ್ಪನೆಯು ಬಂದೊಡನೆಯೇ ಆ ನಕ್ಷತ್ರಾಲೋಕವು ಕೂಡ ಅಡಗಿ ಮೊದಲಿನಂತೆ ಕತ್ತಲೆಗವಿಯಿತು. ಅವನು— " ಅಯ್ಯೋ ! ನನ್ನ ವನದೇವಿಯೇ ! ನೀನೆಲ್ಲಿ? " ಎಂದು ಚಿಟ್ಟನೆ ಚೀರಿದನು. " ಅರುಣಸಿಂಹ ! ಅಂಜಿದೆಯಾ ? ಕ್ಷತ್ರಿಯ ರಾಜಕುಮಾರನಾಗಿ ಈ ಕತ್ತಲೆಗೆ ಅಂಜಿದೆಯಾ ? ಹಾಗಿದ್ದರೆ ನೀನು ಹುಟ್ಟಿದುದು ವ್ಯರ್ಥ ! " ವನದೇವಿಯು ಉತ್ತರವಿತ್ತಳು.

ನಿಶ್ಶಬ್ದತೆಯನ್ನು ಭೇದಿಸಿಕೊಂಡು ಬಂದ ಆ ಕಲಕಂಠದ ಸುಸ್ವರವನ್ನು ಕೇಳಿ, ಅರುಣಸಿಂಹನ ಅಂತರಂಗದ ದುಃಖವೂ ಭಯವೂ ಎಲ್ಲಿಯೋ ಅಡಗಿ

ಹೋದುವು. ಆದರೆ ಆ ಮಾತಿನ ಭಾವವನ್ನು ಕೇಳಿ ಅವನಿಗೆ ಸ್ವಲ್ಪ ನಾಚಿಕೆ ಯುಂಟಾಯಿತು; ಅಲ್ಪ ಆನಂದವೂ ಉಂಟಾಯಿತು. ಮೇಲೆ ತಲೆಯೆತ್ತಿ ನೋಡಿದನು. ಆಕಾಶವು ಮೊದಲಿನಂತೆ ಕಾಳಿಮಾಮಯವಾಗಿರಲಿಲ್ಲ. ಅಲ್ಲಿ ಅನೇಕಾನೇಕ ನಕ್ಷತ್ರಪುಂಜಗಳು ಮಿಣಿಮಿಣಿ ಮಿಣುಗುತ್ತಿದ್ದುವು; ಥಳಥಳನೆ ಹೊಳೆಯುತ್ತಿದ್ದುವು. ಅವನು ಪುನಃ ಹೇಳಿದನು:—"ವನದೇವೀ, ಇಲ್ಲ, ನಾನು ಅಂಜಿಲ್ಲ. ಅಂಜಿಕೆಯೆಂದರೆ ಎಂಥದೋ ಅದು ನನಗೆ ಇನ್ನೂ ಗೊತ್ತೇ ಇಲ್ಲ. ದುಃಖದ ಕಲ್ಪನೆಯೂ ನನಗಿಲ್ಲ. ನಾನು ಮೇವಾಡದ ರಾಜಕುಮಾರನು. ಕ್ಷತ್ರಿಯ ಪುತ್ರನು. ವನದೇವೀ, ನನಗೆ ಇಂದಿನವರೆಗೆ ಎಲ್ಲಿಯಾದರೂ ಒಂದು ಆಶ್ರಯದ ಸ್ಥಳವನ್ನು ತೋರಿಸಬಲ್ಲೆಯಾ ? ಬೆಳಗಾಗುತ್ತಲೇ ನನ್ನ ಹಾದಿಯನ್ನು ನಾನೇ ನೋಡಿಕೊಳ್ಳುವೆನು."

ವನದೇವಿಯು ಗಹಗಹಿಸಿ ನಕ್ಕಳು. ಅವಳು:—"ರಾಜಪುತ್ರ, ನಿಮಗೆ ಆಶ್ರಯಸ್ಥಾನವನ್ನು ತೋರಿಸಬಲ್ಲೆನು. ಹುಲಿಕರಡಿಗಳ ಉದರಲ್ಲಿ ನೀವು ನಿಶ್ಚಿಂತೆಯಿಂದ ಇಂದಿನ ರಾತ್ರಿಯನ್ನು ಕಳೆಯಬಹುದು." ಎಂದಳು.

ಅರುಣಸಿಂಹನು ಅಂತರಂಗದಲ್ಲಿ "ಈ ವನದೇವತೆಯು ಕೂಡ ನನ್ನನ್ನು ನಿಂದಿಸುವಳಲ್ಲ ! ಕರ್ತವ್ಯಭ್ರಷ್ಟನಾದ ನನಗೆ ಹುಲಿ ಕರಡಿಗಳ ಬಾಯಿಗೆ ಬಿದ್ದು ಸಾಯುವುದೇ ಗತಿಯೆನ್ನುವಳಲ್ಲ ! ಇರಲಿ, ಈ ಕ್ಷತ್ರಿಯ ವೀರನನ್ನು ನುಂಗುವ ಸಾಹಸವುಳ್ಳ ಹುಲಿ ಕರಡಿಗಳು ಎದುರಿಗೆ ಬಂದಾಗ ನೋಡೋಣ !" ಎಂದು ಯೋಚಿಸಿ:—"ದೇವೀ, ಆ ಸ್ಥಾನವನ್ನಾದರೂ ನನಗೆ ತೋರಿಸುವೆಯಾ ?" ಎಂದನು.

**ವನದೇವಿ**:— ರಾಜಪುತ್ರರೇ, ಎದುರಿಗೆ ಆಕಾಶದೊಳಗಿನ ಕಾರ್ಮೋಡಗಳಂತಿರುವ ಪರ್ವತಾವಳಿಯನ್ನು ನೋಡಿದಿರಾ ? ಆ ಪರ್ವತದ ಒಂದಾನೊಂದು ಕೊಳ್ಳದಲ್ಲಿಯೇ ತಾವು ಅಪೇಕ್ಷಿಸುವ ಆಶ್ರಯಸ್ಥಾನವಿರುವುದು. ನಾವು ಒಕ್ಕಲಿಗರು, ಜಾತಿಯಿಂದ ರಜಪೂತರು. ನಮ್ಮಮ್ಮನು ನಿಮ್ಮನ್ನು ನೋಡಿ ಅತಿಶಯ ಆನಂದಬಡುವಳು, ನಿಶ್ಚಯ. ಆದರೆ ಒಂದು ದೊಡ್ಡ ವಿಪತ್ತು ! ತಾವು ರಾಜಕುಮಾರರು !

ವನದೇವಿಯು ಮನುಷ್ಯತ್ವವನ್ನು ತಾಳಿದಳು. ಮೋಹದಿಂದ ಅವಳ ಹೃದಯವು ಮೃದುವಾಯಿತು.

**ಅರುಣಸಿಂಹ:** — ಆದರೇನಾಯಿತು ? ರಾಜಕುಮಾರನಿಗೆ ನೀವು ಆಶ್ರಯ ಕೊಡಲಾರಿರೋ ?

**ವನದೇವಿ** —ಕೊಡದೆ ಏನು ? ಆದರೆ ಹುಲಿಕರಡಿಗಳ ಗವಿಯಂತಿರುವ ಆ ನಮ್ಮ ಗುಡಿಸಲಿನಲ್ಲಿ ರಾಜಪುತ್ರರಿಗೆ ತಕ್ಕ ಆದರೋಪಚಾರಗಳು ನಡೆಯುವ ಬಗೆಯೆಂತು ?

**ಅರುಣಸಿಂಹ**·—ಅದಕ್ಕಾಗಿ ಯೋಚನೆ ಬೇಡ. ಹುಲಿ-ಕರಡಿಗಳ ಬಾಯಿಯಲ್ಲಿ ಬೀಳಲು ಸಿದ್ಧನಾಗಿರುವ, ದೇಶಭ್ರಷ್ಟನಾದ ನನಗೆ ಆದರವೇಕೆ ? ಉಪಚಾರವೇಕೆ ? ಆದರೆ ಇನ್ನೊಂದು ವಿಚಾರವಿರುವುದು. ನಾನು ಈ ಮಸಿ ಬಳಿದ ಮುಸುಡನ್ನು ತೋರಿಸಿಕೊಂಡು ಜನಸ್ಥಾನದಲ್ಲಿ ವಾಸಿಸಲಾರೆನು. ಎಂದಿನ ವರೆಗೆ ನನಗೆ ಪ್ರಾಯಶ್ಚಿತ್ತವು ದೊರೆಯುವದಿಲ್ಲವೋ ಅಂದಿನವರೆಗೆ ನಾನು ಅಡವಿ ಅಲೆಯುತ್ತಲಿರುವೆನು.

ವನದೇವಿಯ ಮುಖದ ಮೇಲೆ ಸಹಾನುಭೂತಿಪೂರ್ಣವಾದ ದುಃಖದ ಛಾಯೆಯು ಬಿದ್ದಿತು. ಕತ್ತಲೆಯಲ್ಲಿ ಅರುಣಸಿಂಹನು ಅದನ್ನು ನೋಡಲಿಲ್ಲ. ಅವಳು ಕುಂಠಿತ ಸ್ವರದಿಂದ—"ಅಡವಿಯಡವಿ ಅಲೆಯುತ್ತಲಿದ್ದರೆ ಏನು ಮಾಡಿದ ಹಾಗಾಯಿತು ? ಅದಕ್ಕಿಂತಲೂ ಜನಸ್ಥಾನದಲ್ಲಿ ವಾಸಿಸುವುದೇ ಮೇಲೆಂದು ನನಗೆ ತೋರುತ್ತದೆ." ಎಂದಳು.

**ಅರುಣಸಿಂಹ:**—ಜನಸ್ಥಾನಕ್ಕೆ ಹೋದರೆ ಅಲ್ಲಿ ಯಾರು ನನ್ನನ್ನು ಮಾತಾಡಿಸುವರು ? ಯಾರಾದರೂ ನನ್ನ ಪರಿಚಯವನ್ನು ಕೇಳಿದರೆ, ಅವರಿಗೆ ಏನೆಂದು ತಾನೇ ಉತ್ತರ ಕೊಡಲಿ? ಕರ್ತವ್ಯಭ್ರಷ್ಟನಾದುದರಿಂದ ತಂದೆಯು ನನ್ನನ್ನು ಗಡಿದಾಟಿಸಿ ಹೊರಗೆ ಹಾಕಿರುವನೆಂದು ಹೇಳಲಿಯಾ ? ಯಾವಬಾಯಿಯಿಂದ ಇದನ್ನು ಆಡಲಿ ?

**ವನದೇವಿ:**—ತಿರುತಿರುಗಿ ಅದನ್ನೇ ಆಡಿ ಫಲವಿಲ್ಲ. ದೈವಯೋಗದಿಂದಲೋ ಮನಸ್ಸಿನ ಆವೇಗವನ್ನು ತಗ್ಗಿಸಿಕೊಳ್ಳಲಾರದೆಹೋದುದರಿಂದಲೋ

ಒಂದು ಅಪರಾಧವು ಘಟಿಸಿದುದು ಘಟಿಸಿಹೋಯಿತು. ಇನ್ನು ಆ ಕಳಂಕವನ್ನು ತೊಳೆದುಕೊಳ್ಳುವ ಮಾರ್ಗವನ್ನು ಯೋಚಿಸಬೇಕು. ಕಳೆದುಕೊಂಡಿರುವ ಗೌರವವನ್ನು ಪುನಃ ದೊರಕಿಸಿಕೊಳ್ಳುವ ಮಾರ್ಗವನ್ನು ಹುಡುಕುವುದು ಸರಿಯಾದ ವಿಚಾರ. ಈ ಸಾರೆ ಒದಗಿರುವ ಪರಾಣಿ ಮಹಾಸಂಗ್ರಾಮದಲ್ಲಿ ಈ ಕಳಂಕವನ್ನು ಕಳೆದುಕೊಳ್ಳಬೇಕು.

ಅರುಣಸಿಂಹನಿಗೆ ಅವಳ ವಿಚಾರವು (ಸಲಹೆಯು) ಯೋಗ್ಯವಾಗಿ ತೋರಿತು. ಕ್ಷಣಕಾಲದ ಮೇಲೆ ಅವನ ಮುಖವು ಪ್ರಫುಲ್ಲಿತವಾಯಿತು. ಆದರೆ ಆ ತೇಜವು ಹೆಚ್ಚು ಹೊತ್ತು ನಿಲ್ಲಲಿಲ್ಲ. 'ನಾನು ಒಂಟಿಗನಾಗಿ ಏನು ಮಾಡಬಲ್ಲೆನು?' ಎಂಬ ವಿಚಾರವು ಬಂದೊಡನೆಯೇ ಅವನ ಮುಖವು ಮತ್ತೆ ಕಪ್ಪೇರಿತು. ಅವನು ಮಾತಾಡಲಾರದೆ ಸುಮ್ಮನಾದನು.

ಅರುಣಸಿಂಹನು ಮಾತಾಡದೆ ಇದ್ದುದನ್ನು ನೋಡಿ, ವನದೇವಿಯು ಅವನ ಅಂತರಂಗದ ಭಾವನೆಯನ್ನು ಕಲ್ಪಿಸಿಕೊಂಡಳು. ಅವಳು—"ರಾಜಕುಮಾರರೇ! ತಾವು ಯೋಚಿಸುವುದು ತಿಳಿಯಿತು. 'ಒಂಟಿಗನಾಗಿ ಏನುಮಾಡಲಿ?' ಎಂದು ಆಲೋಚಿಸುವಿರಿ. ಅದಕ್ಕೆ ಒಂದು ಉಪಾಯವಿರುವುದು. ಆತ್ಮವಿಶ್ವಾಸವಿಲ್ಲದವರ ಕೈಯಿಂದ ಯಾವ ಕೆಲಸವೂ ಆಗದು! ಜನರು ಅಂಥವರಿಗೇ ಹೇಡಿಗಳೆನ್ನುವುದು. ತಾವು ನನ್ನ ಸಂಗಡ ಬನ್ನಿರಿ. ಈ ಅರಣ್ಯದಲ್ಲಿ ವಾಸಿಸುವ ಭಿಲ್ಲರೆಲ್ಲರೂ ನನ್ನ ತಂದೆಯ ಅನುಚರರು. ನಾನು ತಮಗೆ ಅವರ ಸಹಾಯವನ್ನು ಒದಗಿಸಿ ಕೊಡುವೆನು. ಅವರ ಸಹಾಯದಿಂದ ತಾವು ನಿಶ್ಚಯವಾಗಿಯು ಈ ಮಾತೃಭೂಮಿಯ ಉದ್ಧಾರವನ್ನು ಮಾಡಬಲ್ಲಿರಿ. ಹೀಗೆ ಮಾಡಿದರೆ ತಮ್ಮ ಕಳಂಕವು ನಿಜವಾಗಿಯೂ ತೊಳೆದು ಹೋಗುವುದು." ಎಂದಳು.

ಈ ಮಾತುಗಳನ್ನು ಕೇಳಿ ಅರುಣಸಿಂಹನ ಮನಸ್ಸಿನಲ್ಲಿ ಧೈರ್ಯವೂ ಆಶೆಯೂ ಉಂಟಾದುವು. ಅವನು ಇಷ್ಟು ಹೊತ್ತಿನ ವರೆಗೆ ಆ ವನದೇವಿಯ ಜಾಲದಲ್ಲಿ ಸಿಕ್ಕುವುದು ಮತ್ತಿಷ್ಟು ತನ್ನ ಅಪಹಾಸ್ಯಕ್ಕೇ ಕಾರಣವಾಗಬಹುದೆಂಬ ಆಶಂಕೆಯಿಂದ ಅವನ್ನು ತಪ್ಪಿಸಿಕೊಳ್ಳಲು ಆವಷ್ಟು ಯತ್ನಿಸುತ್ತಿದ್ದನು. ಆದರೆ ಅವಳೇ ತನ್ನ ಉದ್ಧಾರಕ್ಕೆ ಯೋಗ್ಯಳಾದ ಸಹಾಯಕರ್ತ್ರಿಯೆಂಬುದು ಗೊತ್ತಾದ

ಬಳಿಕ ಅವನು ಕಂಪಿತಸ್ವರದಿಂದ—“ ಅನ್ವರ್ಥಾಭಿಧಾನವುಳ್ಳ ವನದೇವಿಯೇ ನಿನ್ನ ಹೆಸರೇನು! ” ಎಂದು ಕೇಳಿದನು.

ಅವಳು ಮುಖದಲ್ಲಿ ಮುಗುಳ್ನಗೆ ತಳೆದು—“ನನ್ನ ಹೆಸರು **ಮಯನಾ.** ತಂದೆ-ತಾಯಿಗಳು ಪ್ರೇಮದಿಂದ ನನ್ನನ್ನು **ಮುನ್ನಾ** ಎಂದು ಕರೆಯುವರು; ತಾವೂ ಅದೇ ಹೆಸರಿನಿಂದಲೇ ನನ್ನನ್ನು ಸಂಬೋಧಿಸಬೇಕು! ” ಎಂದಳು

**ಅರುಣಸಿಂಹ:** —ನೀನು ವನ್ಯಮೃಗಗಳ ಬೇಟೆಯಲ್ಲಿ ಮಾತ್ರವೇ ಪ್ರವೀಣೆಯಲ್ಲ ! ಮನುಷ್ಯರ ಬೇಟೆಯಲ್ಲಿಯೂ ನಿಷ್ಣಾತೆಯಾಗಿರುವಂತೆ ತೋರುವುದು. ನಡೆ, ನಿನ್ನ ಮನಸ್ಸಿನಂತೆಯೇ ಆಗಲಿ, ನಿನ್ನ ಆ ಹುಲಿ ಕರಡಿಗಳ ಉದರದಲ್ಲಿಯೇ ನನಗೆ ಆಶ್ರಯಂಗೊಡು.

ರಾಜಕುಮಾರರೇ, ನಾನಿಂದು ಧನ್ಯಳು. ಆದರೆ ಇನ್ನೊಂದು ವಿಚಾರವಿದೆ. ನಾವು ತಮಗೆ ಕೊಡುವ ಆಶ್ರಯಕ್ಕೆ ಪ್ರತಿಯಾಗಿ ತಾವು ಏನನ್ನು ತಾನೇ ಕೊಡಬಲ್ಲಿರಿ ? ಅದೂ ಒಂದು ಕೇಳತಕ್ಕ ಮಾತೇ ಸರಿ.

ಅರುಣಸಿಂಹನು ತನ್ನ ಕೊರಳೊಳಗಿನ ಮುತ್ತಿನ ಹಾರವನ್ನು ತೆಗೆದು ಅವಳ ಕೊರಳಿಗೆ ಹಾಕಹೋದನು. ಆಗಲವಳು ಕೊರಳಿಗಿಕ್ಕುವ ಹಾರವನ್ನು ತಡೆದು ಹಿಡಿದುಕೊಂಡು ‘ ತಾವು ಪ್ರತಿಜ್ಞೆಮಾಡಬೇಕು. ನಾನೀ ಬರೇ ಹಾರವನ್ನು ಒಲ್ಲೆನು. ’ ಎಂದು ಮೃದುಸ್ಮಿತೆಯಾಗಿ ನುಡಿದಳು.

ಅರುಣಸಿಂಹನು ಪ್ರತಿಜ್ಞೆಯನ್ನು ಮಾಡಿ ತನ್ನ ಆತ್ಮವನ್ನು ಮಯನೆಗೆ ಸಮರ್ಪಿಸಿದನು. ತರುವಾಯ ಮಯನೆಯು ಮಾರ್ಗದರ್ಶಕಳಾಗಿ ಮುಂದೆ ನಡೆದಳು. ಅರುಣಸಿಂಹನು ಅವಳನ್ನು ಹಿಂಬಾಲಿಸಿದನು. ತಂದೆಯಿಂದ ಬಹಿಷ್ಕೃತನಾದೆನೆಂಬ ದುಃಖಕ್ಕೂ ಗಾಢಾಂಧಕಾರದ ಭೀತಿಗೂ ಅವನ ಹೃದಯದಲ್ಲಿ ಇನ್ನು ಅವಕಾಶವುಳಿಯಲಿಲ್ಲ. ತನ್ನ ಕಳಂಕವನ್ನು ಕ್ಷಿಪ್ರದಲ್ಲಿಯೇ ತೊಳೆದುಕೊಳ್ಳುವೆನೆಂಬ ಉತ್ಸಾಹದಿಂದ ಅವನ ಅಂತರಂಗವು ಉಕ್ಕಿಬರತೊಡಗಿತು.

---

# ನಾಲ್ಕನೆಯ ಪರಿಚ್ಛೇದ

ರಾಣಾ ಲಕ್ಷ್ಮಣಸಿಂಗನು ಆಹೇರಿಯಾದ ಬೇಟೆಯಿಂದ ಹಿಂದಿರುಗಿ ಬಂದು ದುರ್ಗವನ್ನು ಪ್ರವೇಶಿಸಿದ ಬಳಿಕ ಎಲ್ಲ ಸೈನಿಕರನ್ನೂ ಸರದಾರರನ್ನೂ ಕೂಡಿಸಿ ಸಭೆಗೊಂಡು:—“ ಪ್ರಿಯ ಸರದಾರರೇ, ಇಂದಿನಿಂದ ಈ ನಮ್ಮ ಅಭಿನವ ಅಭಿಮನ್ಯುವನ್ನು ಮೇವಾಡದ ಸೇನಾನಾಯಕನಾಗಿ ಆರಿಸಿರುವೆನು. ಎಲ್ಲರೂ ಆತನ ಅಪ್ಪಣೆಯಂತೆ ನಡೆದುಕೊಳ್ಳತಕ್ಕದ್ದು. ಬಾದಲ ! ನೀನು ನಿನ್ನ ಸೈನಿಕರಿಗೆ ಕಾಲಕಾಲಕ್ಕೆ ಯಥಾಯೋಗ್ಯವಾದ ಅಪ್ಪಣೆಗಳನ್ನು ಕೊಟ್ಟು ಅವರ ಕಡೆಯಿಂದ ಕೆಲಸಮಾಡಿಸಿಕೊಳ್ಳತಕ್ಕದ್ದು. ಸಂಪೂರ್ಣ ಸಾವಧಾನದಿಂದಿದ್ದು ಕೊಂಡು ಪರಾಣರಿಂದ ದುರ್ಗವನ್ನು ರಕ್ಷಿಸಿಕೊಳ್ಳುವುದು ನಿನಗೆ ಕೂಡಿತು. ಸಿಂಹಳೀಯರ ಮರ್ಯಾದೆಗೆ ಭಂಗಬರದಂತೆ ನೋಡಿಕೋ. ಏನಾದರೂ ವಿಶೇಷವಾದ ಆಪ್ತಾಲೋಚನೆಗಳಿದ್ದರೆ ರಾಣಾ ಭೀಮಸಿಂಹರ ಸಲಹೆಗಳನ್ನು ಕೇಳಿಕೊಂಡು ಅವರ ಅನುಮತಿಯಂತೆ ನಡೆಯಬಹುದು. ” ಎಂದು ಸೈನಿಕರಿಗೂ ಬಾದಲನಿಗೂ ಆಜ್ಞಾಪಿಸಿದನು.

ಇನ್ನೂ ಹಲವು ಮಾತುಕಥೆಗಳಾದಬಳಿಕ ಸಭಾವಿಸರ್ಜನವಾಯಿತು. ಸರದಾರರೂ ಸೈನಿಕರೂ ಯುದ್ಧದ ಸಿದ್ಧತೆಯ ವಿಷಯವಾಗಿ ಆವೇಶದ ಮಾತುಗಳನ್ನಾಡುತ್ತ ತಮ್ಮ ತಮ್ಮ ಮನೆಗಳಿಗೆ ನಡೆದರು. ಬಳಿಕ ಬಾದಲನು ರಾಣನ ಅಪ್ಪಣೆಯನ್ನು ಪಡೆದುಕೊಂಡು ಪದ್ಮಿನಿಯ ಕಕ್ಕನಾದ **ಗೋರಾಸಿಂಗನ** ಮನೆಗೆ ಬಂದನು.

ಗೋರಾಸಿಂಗನು ಆ ಸಮಯದಲ್ಲಿ ಮನೆಯ ಮುಂದಿನ ಜಗುಲಿಯಲ್ಲಿ ಒಂದು ಮಂಚದ ಮೇಲೆ ಕುಳಿತುಕೊಂಡು ತನ್ನ ಅರ್ಧನರೆತ ಮೀಸೆಯ ಕುಡಿಯನ್ನು ಹುರಿ ಮಾಡುತ್ತ ನಡುನಡುವೆ ಹುಬ್ಬುಗಳನ್ನು ಸುರುಗಿಸಿಕೊಂಡು ಏನೋ ಯೋಚನೆ ಮಾಡುತ್ತಲಿದ್ದನು. ಅವನು ಬಾದಲನನ್ನು ಕಂಡಕೂಡಲೆ ಕಿರು ನಗೆಯನ್ನು ನಕ್ಕು:—“ ಏನು ನಮ್ಮ ಸೌಭಾಗ್ಯವು ! ಸೇನಾಪತಿ ಮಹಾ

ಶಯರೇ, ಪ್ರತ್ಯಕ್ಷ ನಮ್ಮ ಬಾಗಿಲಿಗೆ ಬಂದರು ! ಸೇನಾಪತಿಗಳೇ ಎಲ್ಲವೂ ಸರಿಯಾಗಿರುವುದಿಷ್ಟೇ ? " ಎಂದನು.

**ಬಾದಲ**—ದಾದಾ! ಸೇನಾಪತಿಯು ಯಾರು ? ನಾನೋ ? ನೀವೋ ? ನಾನಂತೂ ನಿಮ್ಮನ್ನು ನಂಬಿಯೇ ಈ ಮಹಾಕಾರ್ಯವನ್ನು ಒಪ್ಪಿಕೊಂಡಿರುವೆನು.

ಗೋರಾಸಿಂಗನು ಎದ್ದು ನಿಂತು ತನ್ನ ವಿಶಾಲವಾದ ಬಾಹುಗಳಿಂದ ಬಾದಲನನ್ನು ಅಪ್ಪಿಕೊಂಡು ಅವನ ಎರಡೂ ಹೆಗಲುಗಳ ಮೇಲೆ ತನ್ನ ಮುಂಗೈಗಳನ್ನಿಟ್ಟು ಎರಡು ಬಾರಿ ಗಟ್ಟಿಯಾಗಿ ಒತ್ತಿದನು. ಮತ್ತು ನಗುತ್ತ— "ಎಂಥ ಹುಚ್ಚು ಭ್ರಮೆ ! ನಮ್ಮ ಕಾಲವು ಕಳೆದು ಹೋಗಿದೆ. ತಲೆಯ ಕೂದಲೆಲ್ಲ ಬೆಳ್ಳಗಾಗಿ ಹೋಗಿವೆ. ಈಗ ನಮ್ಮ ಕೈಯಿಂದ ಏನಾದೀತು? ಮಾಡುವ ಕಾಲದಲ್ಲಿ ಎಲ್ಲವನ್ನೂ ಮಾಡಿದೆವು. ಈಗ ವಿಶ್ರಾಂತಿಯ ಕಾಲ; ಮಂಚದ ಮೇಲೆ ಕುಳಿತುಕೊಂಡು, ಸುತ್ತಲೂ ಸಣ್ಣ ಸಣ್ಣ ಹುಡುಗರು ಕುಳಿತು ಉತ್ಸುಕತೆಯಿಂದ ಕೇಳುತ್ತಿರಲು, ಅವರಿಗೆ ಆ ಸುದ್ದಿ ಈ ಸುದ್ದಿಗಳನ್ನು ಹೇಳುತ್ತ ಕಾಲ ಕಳೆಯುವ ದಿವಸವಿದು! ಈಗ ನಿಮ್ಮಂಥವರು ಮಾಡುವ ಶೌರ್ಯಸಾಹಸಗಳ ಸಂಗತಿಗಳನ್ನು ಕೇಳಿ ಆನಂದಬಡುವುದಿಷ್ಟೇ ನಮ್ಮ ಕೆಲಸವು." ಎಂದನು.

ಗೋರಾಸಿಂಗನ ಒತ್ತುವಿಕೆಯಿಂದ ಬಾದಲನ ಶರೀರವೆಲ್ಲಾ ಒಮ್ಮೆಂದೊಮ್ಮೆ ಕುಸಿಯುವಂತೆ ತೋರಿತು. ಅವನು ಕಳವಳದಿಂದ—" ದಾದಾ! ದಾದಾ! ಏನು ಮಾಡುತ್ತೀರಿ ? ಸೇನಾಪತಿಯ ಶರೀರದ ಕಸುವನ್ನು ಪರೀಕ್ಷಿಸುತ್ತೀರೇನು? ನನ್ನ ಹೆಗಲೂ ನಡುವೂ ಕುಸಿದು ಹೋದುವು. ತಮ್ಮ ಪರೀಕ್ಷೆಯಲ್ಲಿ ನಾನು ಸರಿಯಾಗಿ ಉತ್ತೀರ್ಣನಾಗಲಾರೆನು." ಎಂದನು.

**ಗೋರಾಸಿಂಗ**—ಬಾಲಕನೇ, ನೀನು ನಿಜವಾಗಿಯೂ ಸೇನಾಪತಿಯ ಕಾರ್ಯಕ್ಕೆ ಯೋಗ್ಯನೇ ಸರಿ. ಸೇನಾಪತಿಗೆ ತಕ್ಕ ಶಾರೀರದಾರ್ಢ್ಯವನ್ನು ದೇವರು ನಿನಗೆ ದಯಪಾಲಿಸಿರುವನು. ರಾಣಾ ಭೀಮಸಿಂಹನನ್ನೂ ನಾನು ಒಮ್ಮೆ ಇದೇ ರೀತಿಯಿಂದ ಪರೀಕ್ಷಿಸಿದ್ದೆನು. ಆದರೆ ಅವನು ಅದರಲ್ಲಿ ಸರಿಯಾಗಿ ಉತ್ತೀರ್ಣನಾಗಿರಲಿಲ್ಲ. ಅವನು ನನ್ನ ಮೊದಲನೆಯ ಆಘಾತಕ್ಕೇ ಕುಸಿದು ಕೂತುಬಿಟ್ಟಿದ್ದನು. ನೀನು ನನ್ನ ಮೂರು ಆಘಾತಗಳನ್ನೂ ಸರಿಯಾಗಿ ಸಹಿ

ಸಿಕೊಂಡೆ. ಚಿಂತೆಯಿಲ್ಲ; ರಾಣಾ ಲಕ್ಷ್ಮಣಸಿಂಗನು ಚೆನ್ನಾಗಿ ನೋಡಿಯೇ ನಿನ್ನನ್ನು ಆರಿಸಿದನು. ಅಭಿಮನ್ಯು ! ಚಕ್ರವ್ಯೂಹವನ್ನು ಪ್ರವೇಶಿಸಬೇಕಾದೀತು. ಎಚ್ಚರದಿಂದಿರು. ಯವನರ ಕೈಯೊಳಗಿಂದ ಚಿತ್ತೂರನ್ನು ರಕ್ಷಿಸುವ ಕಾರ್ಯವು ನಿನ್ನ ಕೈಯಿಂದ ಕೊನೆಗಾಣುವಂತೆ ತೋರುತ್ತದೆ.

**ಬಾದಲ:**—ದಾದಾ, ಸುಮ್ಮಸುಮ್ಮನೆ ಮುಖಸ್ತುತಿ ಮಾಡಿ ನನ್ನನ್ನು ಉಬ್ಬಿಸಬೇಕೆನ್ನುತ್ತೀರೇನು ? ನಾನು ಸಿಕ್ಕಿದ ಹಾಗೆ ಹಾದಿ ತಪ್ಪಿ ಉಬ್ಬಿ ಕುಣಿದಾಡುವವನಲ್ಲ. ಮೊದಲು ನನಗೆ ಕೆಲವು ಉಪದೇಶಗಳನ್ನು ಹೇಳಿರಿ. ಪರಾಣರಂತೂ ಮೇವಾಡವನ್ನು ಪ್ರವೇಶಿಸಿರುವರು. ನಿಮ್ಮ ಹಂಚಿಕೆಯ ಚೀಲವನ್ನು ಬಿಚ್ಚಿರಿ. ಹಾಗಲ್ಲದೆ ನೀವು ಮತ್ತೂ ಮತ್ತೂ ಚೇಷ್ಟೆ ಮಾಡಿ ನನ್ನನ್ನು ಕುಣಿದಾಡಿಸುವ ಹಾಗಿದ್ದರೆ ನಾನು ನೆಟ್ಟಗೆ ಅಮ್ಮನ ಬಳಿಗೆ ಹೋಗಿ ನಿಮ್ಮ ಮೇಲೆ 'ಫಿರ್ಯಾದಿ' ಮಾಡುವೆನು.

ಆ ಸಮಯದಲ್ಲಿ ಅತ್ಯಂತ ಲಾವಣ್ಯವತಿಯಾದ ರಮಣಿಯೊಬ್ಬಳು ಅಲ್ಲಿಗೆ ಬಂದು,—" ಬಾದಲ! ಏನಾಯಿತು. ಮಗು!" ಎಂದು ನಗುತ್ತ ಕೇಳಿದಳು.

**ಬಾದಲ:**—ಅಮ್ಮಾ ! ದಾದನ ಅನ್ಯಾಯವನ್ನು ನೋಡಿದಿರಾ ! ಸಿಂಹಳೀಯನಾಗಿದ್ದು ಸಿಂಹಳೀಯರ ಮಾನವನ್ನು ರಕ್ಷಿಸಲು ಯತ್ನಿಸುವುದಿಲ್ಲ. ನಾನು ಇಂದು ಸೇನಾಪತಿಯಾಗಿರುವೆನು. ಹೀಗಿದ್ದು ಇವರ ಹತ್ತರ ಒಂದು ಕೆಲವು ಆಪ್ತಾಲೋಚನೆಗಳನ್ನೂ ಹಂಚಿಕೆಗಳನ್ನೂ ಕೇಳಿದರೆ ನನಗೆ ಹೇಳುವುದಿಲ್ಲ. ನೀವು ಇದರ ವಿಚಾರ ಮಾಡಬೇಕು. ಇದೇ ನನ್ನ 'ಫಿರ್ಯಾದಿ'

ರಮಣಿಯು ನಗುತ್ತ:—"ಒಳ್ಳೇದು ಮಗು ! ನಾನು ಇವರ ವಿಚಾರ ಮಾಡುವೆನು; ಅಡ್ಡಿಯಿಲ್ಲ. ನಾನು ನಿನಗೊಂದು ಉಪಾಯವನ್ನೂ ಸೂಚಿಸುವೆನು. ಹೇಗಿದ್ದರೂ ನೀನು ಸೇನಾಪತಿ, ಆದುದರಿಂದ ನೀನು ಸೇನಾಪತಿಯ ಅಧಿಕಾರವನ್ನು ನಡಿಸಿ ಅವರಿಗೆ ಅಪ್ಪಣೆ ಮಾಡಬಾರದೇ ? ಸುಮ್ಮನೆ 'ಜೀ!' 'ಜೀ!' ಮಾಡುವೆಯೇಕೆ ?" ಎಂದಳು.

**ಬಾದಲ:**—ದಾದಾ ! ಈಗ ಹೇಗೆ ?

**ಗೋರಾಸಿಂಗ:**–ಹಾಗಾದರೆ ಉಪಾಯವಿಲ್ಲ. ಸೇನಾಪತಿಗಳೇ, ಅಪ್ಪಣೆಯಾಗಬೇಕು; ನನ್ನ ಕರ್ತವ್ಯವೇನು ?

**ಬಾದಲ:**—"ಈಗ ವಿಶೇಷವೇನೂ ಇಲ್ಲ. ಅಲ್ಲಾವುದ್ದೀನನು ಮಹಾ ಸೈನ್ಯದೊಂದಿಗೆ ಚಿತ್ತೂರಿಗೆ ಬರುವನು. ಅವನನ್ನು ಚಂಡಿನ ಮೇಲೆ ಕೈಕೊಟ್ಟು ನೂಂಕ ಬೇಕಾಗಿದೆ. ದೇಶವನ್ನು ಯವನರ ಅತ್ಯಾಚಾರ ಅನಾಚಾರಗಳಿಂದ ರಕ್ಷಿಸಬೇಕಾಗಿದೆ !" ಎನ್ನುತ್ತ ಮಹಾವೀರದರ್ಪವನ್ನು ಅಭಿನಯಿಸಿದನು.

**ಗೋರಾಸಿಂಗ.**—ಸೈ ! ಇಷ್ಟೇ ಅಲ್ಲವೇ ? ಸೇನಾಪತಿಗಳೇ, ಎಷ್ಟು ಸುಲಭವಾದ ಮಾತನ್ನು ಹೇಳಿದಿರಿ ! ನೋಡಲಿಕ್ಕೆ ಎರಡೇ ಮಾತು ! ನಿಮ್ಮ ಮಾತುಗಳನ್ನು ಕೇಳಿದರೆ ಈಗಾಗಲೇ ಅರ್ಧ ಕೆಲಸವು ತೀರಿದಂತೆ ತೋರುವುದು. ಉಳಿದ ಅರ್ಧವನ್ನೂ ಇಷ್ಟೇ ಸುಲಭವಾಗಿ ಕೊನೆಗಾಣಿಸಿ ಬಿಡಬೇಕು ! ಹೀಗೆ ಮಾಡಿದರೆ ಮಾತ್ರ ಸೇನಾಪತಿಗಳು ತಮ್ಮ ಮರ್ಯಾದೆಯನ್ನು ಉಳಿಸಿಕೊಂಡಂ ತಾಗುವುದು. ಅಲ್ಲಾವುದ್ದೀನನು ಈಗ ಎಲ್ಲಿಯವರೆಗೆ ಬಂದಿರುವನು ?

**ಬಾದಲ:**—ಇನ್ನೂ ಚಿತ್ತೂರಿನ ಗಡಿಗೆ ಬಂದು ಮುಟ್ಟಿಲ್ಲ. ಸೈನ್ಯದವರು ತುಂಬಾ ದಣಿದಿರುವುದರಿಂದ ಅವನು ಗಿರಿನಾರ ಪರ್ವತದಬಳಿಯಲ್ಲಿ ವಿಶ್ರಾಂತಿಗಾಗಿ ಇಳಿದುಕೊಂಡಿರುವನಂತೆ. ಇಲ್ಲಿಗೆ ಬರಲಿಕ್ಕೆ ಇನ್ನೂ ಎರಡು ದಿವಸಗಳುಬೇಕು.

**ಗೋರಾಸಿಂಗ** — (ನಕ್ಕು) ಅಲ್ಲ, ಸೇನಾಪತೀ, ಅಲ್ಲ. ಪಠಾಣರು ವಿಶ್ರಾಂತಿಗಾಗಿ ಇಳಿದುಕೊಂಡಿಲ್ಲ. ಅಲ್ಲಾವುದ್ದೀನನು ಮಹಾ ಕಪಟಿಯು. ಅವನು ನಿಮ್ಮನ್ನು ಮೋಸಗೊಳಿಸುವುದಕ್ಕಾಗಿ ಇಂಥ ಸೋಗು ತೆಗೆದಿರುವನು. ಅವನು ತಕ್ಕ ಸಮಯವನ್ನೂ ಕೋಟೆಗೆ ಯಾವ ಕಡೆಯಿಂದ ಲಗ್ಗೆಹತ್ತಿದರೆ ಯೋಗ್ಯವಾದೀತೆಂಬುದನ್ನೂ ನಿರ್ಣಯಿಸಿಕೊಂಡು ಒಮ್ಮಿಂದೊಮ್ಮೆ ಹಲ್ಲೆಮಾ ಡುವನು. ಅಲ್ಲಾವುದ್ದೀನನ ಸೈನಿಕರು ಇವನ್ನೆಲ್ಲ ತಿಳಿದುಕೊಳ್ಳುವುದಕ್ಕಾಗಿ ಅಲ್ಲಿ ವಿಶ್ರಾಂತಿಯ ನೆವದಿಂದ ಇಳಿದುಕೊಂಡಿದ್ದಾರೆ. ಪಠಾಣರು ಕ್ಷತ್ರಿಯರ ಹಾಗೆ ಧರ್ಮಯುದ್ಧ ಮಾಡುವವರಲ್ಲ. ಮೊದಲು ದುರ್ಗದ ದ್ವಾರವನ್ನು ಮುಚ್ಚಿಬಿ ಡಲು ಅಪ್ಪಣೆ ಕಳುಹಿಸಬೇಕು. ಕುಹಕರಾದ ಪಠಾಣರ ಸಂಗಡ ಎದುರಿಗೆ ನಿಂತು ಯುದ್ಧಮಾಡುವುದು ಸರಿಯಲ್ಲ. ಯುದ್ಧಕಾಲದಲ್ಲಿ ಕಪಟಾಚರಣಕ್ಕೆ ಕಪಟಾಚರಣವೇ ಬೇಕು.

**ಬಾದಲ**·—ದುರ್ಗದ ದ್ವಾರವನ್ನು ಮುಚ್ಚಿಸಿಬಿಟ್ಟಿರುವೆವು· ಆ ವ್ಯವಸ್ಥೆ ಯನ್ನು ರಾಣಾ ಭೀಮಸಿಂಹರು ಈಗಾಗಲೇ ಮಾಡಿರುವರು; ಇಷ್ಟೇ ಅಲ್ಲದೆ ಅವರ

ಅಪ್ಪಣೆಯ ಮೇರೆಗೆ ಸೈನಿಕರು ದುರ್ಗದ ಗೋಡೆಯ ಬಳಿಯಲ್ಲಿ ಅಲ್ಲಲ್ಲಿಗೆ ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನೂ ಕವಣೆಗಲ್ಲುಗಳನ್ನೂ ಸಂಗ್ರಹಿಸಿಟ್ಟಿರುವರು-

**ಗೋರಾಸಿಂಗ.**—ರಾಣಾ ಭೀಮಸಿಂಹನು ಯುದ್ಧವಿದ್ಯೆಯಲ್ಲಿ ಒಳ್ಳೇ ಪ್ರವೀಣನು. ಅವನು ಈ ಮೊದಲೇ ಎಲ್ಲ ಸಿದ್ಧತೆಯನ್ನು ಮಾಡಿಟ್ಟಿರುವನಾಗಿ ತೋರುತ್ತದೆ. ಆದರೆ ಇನ್ನೊಂದು ವಿಚಾರ. ಸೇನಾಪತೀ, ಅವರೆಲ್ಲರೂ ನಿನ್ನ ಸಲುವಾಗಿ ಸ್ವಲ್ಪ ಅವಿಚಾರವನ್ನು ತೋರಿಸುವಂತೆ ಕಾಣುತ್ತದೆ. ನೀನು ಹೆಸರಿಗೆ ಮಾತ್ರ ಸೇನಾಪತಿ. ಕೆಲಸಮಾಡುವವರು ಅವರೇ. ನೀನಿನ್ನೂ ಹಸುಳನೆಂದು ನಿನ್ನ ಮೇಲೆ ಭಾರಹಾಕಲು ಅವರಿಗೆ ಧೈರ್ಯವಿಲ್ಲ ಅಭಿಮನ್ಯು, ನೀನು ಅವರ ಈ ಅಭಿಪ್ರಾಯವನ್ನು ಹೋಗಲಾಡಿಸಬೇಕು. ಸೇನಾಪತಿಯು ಹಸುಳನಾದರೂ ಅವನಲ್ಲಿರುವ ಕ್ಷತ್ರಿಯತ್ವವೂ ಯುದ್ಧಕಲೆಯೂ ಹಸುಳತನದವಲ್ಲವೆಂಬುದನ್ನು ತೋರಿಸಿ ಕೂಡಲೇ ಬೇಕು.

ಹೀಗೆಂದು ಗೋರಾಸಿಂಗನು ಬಾದಲನ ಮೇಲೆ ಇನ್ನಷ್ಟು ಕರ್ತವ್ಯದ ಭಾರವನ್ನು ಹೇರಹೋದನು. ಆದರೆ ಬಾದಲನು ಆ ಭಾರವನ್ನು ತಾನೊಬ್ಬನೇ ವಹಿಸದೆ ಸಂಗಡ ಗೋರಾಸಿಂಗನನ್ನೂ ಕೂಡಿಸಿಕೊಂಡನು.

**ಬಾದಲ**.—ದಾದಾ ! ಇವರಿಗೆ ನನ್ನೊಬ್ಬನ ಮೇಲೆಯೇ ಅವಿಶ್ವಾಸವೆಂತಲ್ಲ. ಸಿಂಹಳೀಯರ ಮೇಲೆಯೇ ಹದಿನಾರಾಣೆಯ ಅವಿಶ್ವಾಸ' ಈ ಯುದ್ಧದಲ್ಲಿ ನಾನು ಸೇನಾಪತಿಯಾಗಿದ್ದರೂ ತಾವು ನನಗೆ ನಿಶ್ಚಯವಾಗಿಯೂ ಸಹಾಯಮಾಡುವಿರಿ, ಎಂಬುದು ಅವರಿಗೆ ಗೊತ್ತೇ ಇದೆ. ಆದುದರಿಂದ ಈ ಪ್ರಸಂಗದಲ್ಲಿ ನಿಮ್ಮಂಥ ಯುದ್ಧವಿದ್ಯಾವಿಶಾರದರಾದವರ ವಿಷಯವಾಗಿ ಅವಿಶ್ವಾಸಪಡುವುದೂ ನನ್ನ ಮೇಲೆ ವಿಶ್ವಾಸವಿಡದೆ ಇರುವುದೂ ಒಂದೇ ಸರಿ. ಅದರಿಂದ ನಾವಿಬ್ಬರೂ ಅವರ ವಿಚಾರವನ್ನು ಸುಳ್ಳುಮಾಡಿ ತೋರಿಸಲೇಬೇಕು.

**ಗೋರಾಸಿಂಗ:**—ಬಾದಲ, ಈ ಅಪರವಯಸ್ಸಿನಲ್ಲಿ ನನ್ನ ಬಾಗಿದ ಬೆನ್ನಿನ ಮೇಲೆ ಇಂಥ ಭಾರವನ್ನು ಹೇರಲೆಳಸುವಿಯಾ ? ಆಗಲಿ, ಬೇರೆ ಉಪಾಯವಿಲ್ಲದ ಮೇಲೆ ಮಾಡುವುದೇನು. ಆದರೆ ಕಾರ್ಯವನ್ನು ಆರಂಭಿಸುವುದಕ್ಕಿಂತಲೂ ಮೊದಲು ಒಮ್ಮೆ ಪದ್ಮಿನೀ ರಾಣಿಗೆ ಭೆಟ್ಟಿಯಾಗಿ ಬರೋಣ, ನಡೆ.

**ಬಾದಲ:**—ಸರಿ. ಆ ಮಾತು ಯೋಗ್ಯವೇ ಸರಿ. ಆದರೆ ಆಕೆಯು ಈಗ ರಾಜಪುತ್ರನಾದ ಅರುಣಸಿಂಹನ ವಿಷಯವಾಗಿ ಅತ್ಯಂತ ಕಾತರಳಾಗಿರುವಳು. ಅವಳು ಈಗ ರಾಜಪುತ್ರನ ಅಪರಾಧವನ್ನು ಕ್ಷಮಿಸಿ ಅವನನ್ನು ತಿರುಗಿ ಕರೆದು ಕೊಳ್ಳುವ ಬಗ್ಗೆ ಯಾವ ಉಪಾಯವನ್ನು ಯೋಜಿಸಬೇಕೆಂಬ ಆಲೋಚನೆ ಯಲ್ಲಿರುವಳು. ರಾಣಾ ಭೀಮಸಿಂಹರೂ ಅದೇ ವಿಚಾರದಲ್ಲಿರುವರು. ಆದ್ದರಿಂದ ಈಗ ಅವರ ಭೆಟ್ಟಿಯಾಗಲಿಕ್ಕಿಲ್ಲ.

**ಗೋರಾಸಿಂಗ:**—ಚಿಂತೆಯಿಲ್ಲ. ನಡೆ, ಹೋಗೋಣ, ರಜಪೂತರಿಗೆ ಮೊದಲು ಮಾತೃಭೂಮಿಯಯೋಚನೆ; ಚಿತ್ತೂರಿನ ವಿಚಾರ, ಆಮೇಲೆ ತಮ್ಮ ಬಂಧುಬಳಗದವರ ಚಿಂತೆ. ಸೇನಾಪತಿಯು ರಾಜಕಾರಣಗಳ ವಿಚಾರಕ್ಕಾಗಿ ಬಂದಿರುವನೆಂದರೆ ಅವಳು ಆ ವಿಚಾರವನ್ನೆಲ್ಲ ಬಿಟ್ಟುಬಿಡುವಳು!

ಹೀಗೆಂದು ಗೋರಾಸಿಂಗನು ತನ್ನ ಉಡಿಗೆತೊಡಿಗೆಗಳನ್ನು ಧರಿಸಿ ಪದ್ಮಿನೀ ರಾಣಿಯ ಬಳಿಗೆ ಹೊರಟನು. ಬಾದಲನು ಅವನನ್ನು ಹಿಂಬಾಲಿಸಿದನು.

ಪದ್ಮಿನಿಗೆ ಮಕ್ಕಳಿರಲಿಲ್ಲ. ರಾಣನ ಮಕ್ಕಳೇ ತನ್ನ ಮಕ್ಕಳೆಂದು ಅವಳು ಭಾವಿಸಿಕೊಂಡಿದ್ದಳು. ಅವರಲ್ಲಿಯೂ ಹಿರಿಯನಾದ ಅರುಣಸಿಂಹನ ಮೇಲೆ ಅವಳಿಗೆ ತುಂಬಾ ಮಮತೆ. ಪದ್ಮಿನಿಯ ಹೇಳಿಕೆಯ ಮೇರೆಗೆ, ಬಾಲಕ ಅರುಣಸಿಂಹನ ಅಪರಾಧವನ್ನು ಕ್ಷಮಿಸಿ ಅವನನ್ನು ತಿರುಗಿ ಕರೆಯಿಸಿಕೊಳ್ಳಬೇಕೆಂದು ಕೇಳಿಕೊಳ್ಳಲು ಭೀಮಸಿಂಹನು ರಾಣನ ಬಳಿಗೆ ಹೋಗಿದ್ದನು. ಪದ್ಮಿನಿಯು ಪುನಃ ಪುನಃ ಕಿಟಕಿಯಲ್ಲಿ ಮುಖವನ್ನಿಟ್ಟು ಪತಿಯ ಆಗಮನವನ್ನು ನಿರೀಕ್ಷಿಸುತ್ತಿದ್ದಳು; ತಲೆಬಾಗಿಲಲ್ಲಿ ಯಾರೋ ಬರುವ ದನಿಯನ್ನು ಕೇಳಿ ಪದ್ಮಿನಿಯು ತಟ್ಟನೆ ಎದ್ದು ಬಂದು ಬಾಗಿಲವನ್ನು ತೆರೆದಳು- ಎದುರಿಗೆ ಗೋರಾಸಿಂಗನೂ ಬಾದಲನೂ ನಿಂತಿದ್ದರು.

ಗೋರಾಸಿಂಗನೂ ಬಾದಲನೂ ಪದ್ಮಿನಿಯೊಂದಿಗೆ ಹಲವು ರಾಜಕಾರಣಗಳ ವಿಷಯವಾಗಿ ಮಾತಾಡಿಕೊಂಡು ಅವಳ ಅಪ್ಪಣೆಯನ್ನು ಪಡೆದು ಹೊರಗೆ ಬಂದರು.

---

# ಐದನೆಯ ಪರಿಚ್ಛೇದ

ಇಂದು ಕೃಷ್ಣಪಕ್ಷ ಚತುರ್ದಶಿ; ರಾತ್ರಿಯ ಎರಡನೆಯ ಪ್ರಹರವೂ ಕಳೆಯುತ್ತ ಬಂದಿತ್ತು- ಅಂದ ಬಳಿಕ ಕೇಳುವುದೇನು ? ಗಾಢವಾದ ಅಂಧಕಾರದಲ್ಲಿ ವಿಶ್ವಸಂಸಾರವೇ ಮುಳುಗಿಹೋಗಿತ್ತು. ನಾಲ್ಕು ಕಡೆಗೆ ನಿಶ್ಶಬ್ದವಾಗಿದ್ದ ರಾತ್ರಿಯೇ ನಿದ್ದೆಮಾಡುವಂತೆ ತೋರುತ್ತಿತ್ತು.

ಆ ಸಮಯದಲ್ಲಿ ಚಿತ್ತೂರಿನ ರಾಜಮಾರ್ಗದಲ್ಲಿ ಪ್ರಾಣಿಗಳ ಸುಳಿವು ಕೂಡ ಇರಲಿಲ್ಲ. ನಗರವಾಸಿಗಳೆಲ್ಲರೂ ಮಲಗಿ ನಿದ್ದೆಹೋಗಿದ್ದರು ಸುತ್ತಲೂ ಕತ್ತಲೆ ಕವಿದಿತ್ತು; ದೂರದಲ್ಲಿ ಅಲ್ಲೊಂದು ಇಲ್ಲೊಂದರಂತೆ ದೀಪಗಳು ಗಾಢವಾದ ಅಂಧಕಾರದಿಂದ ಆವೃತವಾಗಿ ಮಿಂಚುಹುಳಗಳಂತೆ ಮಿಣಿಮಿಣಿ ಮಿನುಗುತ್ತಲಿದ್ದುವು. ಜೀವಿತ ಜಗತ್ತೆಲ್ಲವೂ ನಿದ್ರಾದೇವಿಯ ಆಶ್ರಯದಲ್ಲಿ ವಿಶ್ರಾಂತಿ ಹೊಂದಿತ್ತು; ಅದರಿಂದ ಶಾಂತಿಯು ಎಲ್ಲ ಕಡೆಯಲ್ಲಿಯೂ ತಾನೇ ತಾನಾಗಿ ವಿರಾಜಮಾನವಾಗಿತ್ತು. ಆ ಗಂಭೀರವಾದ ನಿಶಿಯ ನಿಸ್ತಬ್ಧತೆಯನ್ನು ಭೇದಿಸಿಕೊಂಡು ಬಾದಲನೂ ಗೋರಾಸಿಂಗನೂ ಮುಂದೆ ಹೊರಟರು. ಅವರಿಗೆ ತಮ್ಮ ಕಾಲಿನ ಸಪ್ಪಳವು ಕೂಡ ಸ್ಪಷ್ಟವಾಗಿ ಕೇಳಬರುತ್ತಿತ್ತು. ಅವರ ಪಾದಾಘಾತವನ್ನು ಕೇಳಿ ಎಡಬಲದ ಸಾಲುಗಿಡಗಳ ಮೇಲೆ ಕುಳಿತಿದ್ದ ಕೆಲವು ಪಕ್ಷಿಗಳು 'ಫಡಫಡ' ರೆಕ್ಕೆಗಳನ್ನು ಬಡಿದುಕೊಳ್ಳುತ್ತ ಒಂದು ಕೊಂಬೆಯಿಂದ ಮತ್ತೊಂದು ರೆಂಬೆಗೆ ಹಾರಿಹೋಗಿ ಕುಳಿತುಕೊಳ್ಳುತ್ತಿದ್ದುವು. ಮುಂದೆ ಹೋಗುತ್ತಿದ್ದ ಗೋರಾಸಿಂಗನು ಥಟ್ಟನೆ ಬೆಪ್ಪಾಗಿ ನಿಂತನು! ಅದನ್ನು ನೋಡಿ ಬಾದಲನೂ ನಿಂತನು. ಗೋರಾಸಿಂಗನು ಕಿವಿಗೊಟ್ಟು ಆಲಿಸುತ್ತಿದ್ದನು. ಅವನು:- 'ಬಾದಲ! ಘಾತವಾಯಿತು. ಕೇಳಿದೆಯಾ ! ಮುಸಲ್ಮಾನರ ಜಯಧ್ವನಿ !- ಅಲ್ಲಾಹೋ ಅಕಬರ್ ! ದುರ್ಗದ ಕೆಳಭಾಗದಿಂದ ಕೇಳಿಬರುವುದು. ನಿಶ್ಚಯವಾಗಿಯೂ ಪಠಾಣರು ದುರ್ಗಕ್ಕೆ ಲಗ್ಗೆ ಹತ್ತಿರುವರು ! ನಡೆ, ಬೇಗನೆ ನಡೆ. ಸರ್ವನಾಶವಾಯಿತು! ' ಎಂದನು.

ಓಡುತ್ತೋಡುತ್ತ ಒಂದೇ ಉಸಿರಿಗೆ ಅವರಿಬ್ಬರೂ ದುರ್ಗದ ಬಾಗಿಲ ಬಳಿಗೆ ಬಂದರು. ಈಗಂತೂ ಪೂರ್ವದನಿಟ್ಟಿನಿಂದ "ಅಲ್ಲಾಹೋ ಅಕಬರ್!" ಎಂಬ ಜಯಧ್ವನಿಯು ಸ್ಪಷ್ಟವಾಗಿ ಕೇಳಿಬಂದಿತು.

ಗೋರಾಸಿಂಗನೂ ಬಾದಲನೂ ಕಲ್ಲುಮುಳ್ಳೆನ್ನದೆ ಆ ಕಡೆಗೆ ಧಾವಿಸಿ ನಡೆದರು. ಅವರು ಹೋಗುವಷ್ಟರಲ್ಲಿ ಅಲ್ಲಿ ಇನ್ನೂ ಬಹು ಜನರು ನೆರೆದಿದ್ದರು. ರಾಣಾ ಭೀಮಸಿಂಹನೂ ಅಲ್ಲಿದ್ದನು. ಅವನು ಸ್ವತಃ ಒಂದೇಸವನೆ ಶತ್ರುಗಳ ಮೇಲೆ ಕಲ್ಲಿನ ಮಳೆಯನ್ನು ಕರೆಯುತ್ತಲಿದ್ದನು. ಮೇಲಿನ ರಜಪೂತ ಸೈನಿಕರು ಎಸೆದ ಕಲ್ಲುಗಳಿಂದ ಕೆಳಗೆ ಕೃಷ್ಣಸಾಗರದಂತಿದ್ದ ಪಠಾಣರ ಸೈನ್ಯವು ಚಲ ವಿಚಲಿತವಾಗುತ್ತಿತ್ತು. ಹಾಗು ಆ ಸಂಕ್ಷುಬ್ಧವಾದ ಸಾಗರದಿಂದ "ಅಲ್ಲಾಹೋ ಅಕಬರ್!" ಎಂಬ ಘೋರತರವ ಘನಗರ್ಜನೆಯು ರಾತ್ರಿಯ ಶಾಂತತೆಯನ್ನು ಭೇದಿಸಿಕೊಂಡು ದಿಗಂತವನ್ನು ವ್ಯಾಪಿಸುತ್ತಲಿತ್ತು. ಬಾದಲನೂ ಗೋರಾ ಸಿಂಗನೂ ತೇಕುತ್ತ ಭೀಮಸಿಂಹನ ಬಳಿಗೆ ಬಂದರು. ಆಗ ಭೀಮಸಿಂಹನು ದೊಡ್ಡದೊಂದು ಬಂಡೆಗಲ್ಲನ್ನು ಶತ್ರುಗಳ ಮೇಲೆ ಉರುಳಿಸುವ ಪ್ರಯತ್ನದಲ್ಲಿ ದ್ದನು. ಆದರೆ ಅದು ಅವನಿಗೆ ಎತ್ತಲಿಲ್ಲ. ಅಷ್ಟರಲ್ಲಿ ಗೋರಾಸಿಂಗನು ಕಾಲಿನ ಒಂದೇ ಒದೆತದಿಂದ ಅದನ್ನು ಕೆಳಗೆ ಉರುಳಿಸಿಬಿಟ್ಟನು. ಭೀಮಸಿಂಹನು ಮುಖ ವೆತ್ತಿ ನೋಡುವಲ್ಲಿ ಗೋರಾಸಿಂಗ! 'ಮಶಾಲಿ'ನ ಬೆಳಕಿನಲ್ಲಿ ಅವನು ತೇಕುತ್ತ ನಿಂತದ್ದು ಸ್ಪಷ್ಟವಾಗಿ ಕಾಣಿಸಿತು.

ಭೀಮಸಿಂಹನು ಅವನನ್ನು ನೋಡಿ:- "ಕಾಕಾಜೀ, ಪಠಾಣರ ಸಾಹಸ ವನ್ನು ನೋಡಿದಿರಾ! ಪಠಾಣರು ಇಲ್ಲಿಗೆ ಬಂದು ಮುಟ್ಟಲಿಕ್ಕೆ ಇನ್ನೂ ನಿನಿ ಲ್ಲೆಂದರೂ ಎರಡು ದಿವಸಗಳು ಬೇಕೆಂತಲೂ ಅವರು ದಣಿದು ವಿಶ್ರಾಂತಿಗಾಗಿ ಗಿರಿನಾರದ ನೆರೆಯಲ್ಲಿ ಇಳಿದುಕೊಂಡಿರುವರೆಂತಲೂ ನಾವು ಭಾವಿಸಿದ್ದೆವು. ಕಪಟಿಗಳಾದ ಪಠಾಣರು ಹೀಗೆ ನಡುರಾತ್ರಿಯಲ್ಲಿ ಕಿಲ್ಲೆಗೆ ಲಗ್ಗೆ ಹತ್ತಬಹು ದೆಂದು ನಾವು ಕನಸಿನಲ್ಲಿಯೂ ಕೂಡ ಭಾವಿಸಿರಲಿಲ್ಲ! ಸೇನಾಪತಿಯೆಲ್ಲಿ? ಈಗ ಊಟಮಾಡಲಿಕ್ಕೂ ನಿದ್ರೆಮಾಡಲಿಕ್ಕೂ ಸಮಯವಲ್ಲ. ಬಾಗಿಲಲ್ಲಿ ಬಂದು ನಿಂತ ಶತ್ರುಗಳನ್ನು ಹೊರಗೆ ಹಾಕುವುದು ಮೊದಲನೆಯ ಕೆಲಸ; ಅವನಿಗೆ ಈ ವರ್ತ ಮಾನವನ್ನು ತಿಳಿಸಬೇಕಾಗಿತ್ತು" ಎಂದನು.

**ಗೋರಾಸಿಂಗ:—** ರಾಣಾ, ಹೀಗೆ ಗಾಬರಿಯಾಗಲು ಕಾರಣವಿಲ್ಲ. ಪಠಾಣರು ಮೇಲೆ ಏರಿಬರಲಿ. ಸೇನಾಪತಿ ಬಾದಲನು ಆಗಲೇ ಬಂದಿರುವನು. ಅವನು ವೈರಿಗಳ ಮೇಲೆ ಕಲ್ಲುಬೀರುವುದನ್ನು ನಿಲ್ಲಿಸಬೇಕೆಂದು ಅಪ್ಪಣೆಮಾಡಿ ರುವನು. ತಾವೆಲ್ಲರೂ ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ತೆಗೆದುಕೊಳ್ಳಿರಿ.

ಭೀಮಸಿಂಹನು ವಿಸ್ಮಿತನೇತ್ರದಿಂದ ಗೋರಾಸಿಂಗನ ಮುಖವನ್ನು ನೋಡುತ್ತ ನಿಂತುಕೊಂಡನು. ಅವನು ಮನಸ್ಸಿನಲ್ಲಿ ಇದು ಬಾದಲನ ಅಪ್ಪಣೆ ಯಲ್ಲವೆಂತಲೂ ಇದರಲ್ಲಿ ಗೋರಾಸಿಂಗನ ಕೌಶಲವೇನಾದರೂ ಇರಬೇಕೆಂತಲೂ ಭಾವಿಸಿಕೊಂಡು ಎಲ್ಲ ಸೈನಿಕರಿಗೂ ಅದರಂತೆ ಅಪ್ಪಣೆ ಕಳುಹಿಸಿದನು. ಕ್ಷಣ ಮಾತ್ರದಲ್ಲಿ ಮೇಲಿನಿಂದ ಬೀಳುವ ಕಲ್ಲಿನ ಮಳೆಯು ಪೂರಾ ನಿಂತುಹೋಯಿತು.

ಮೇಲಿನಿಂದ ಕಲ್ಲು ಬೀಳುವುದು ನಿಂತಕೂಡಲೆ ಪಠಾಣ ಸೈನಿಕರು ತಡ ವಿಲ್ಲದೆ ದುರ್ಗವನ್ನು ಏರಿಬರತೊಡಗಿದರು. ಆದರೂ ದುರ್ಗದ ಕೆಳಗಿನ ಪರ್ವ ತವು ತುಂಬಾ ಕಡಿದಾಗಿದ್ದುದರಿಂದ ಅವರಿಗೆ ಏರಿಬರಲು ಬಹು ಪ್ರಯಾಸವಾ ಯಿತು. ಅಡಿಯಿಂದ ಮುನ್ನೂರು ಅಡಿ ಎತ್ತರವಾದ ದರಿಯನ್ನು ಏರಿ ಬಂದು ಆ ಮೇಲೆ ದುರ್ಗದ ಗೋಡೆಯನ್ನು ಏರಬೇಕು! ಕಗ್ಗತ್ತಲೆಯಲ್ಲಿ ಏರಿಬರುವಾಗ ಎಷ್ಟೋ ಮಂದಿ ಪಠಾಣರು ಕಾಲುಜಾರಿ ಉರುಳಿಬಿದ್ದರು. ಆದರೂ ಅವರಿಗೆ ಮನಸ್ಸಿನಲ್ಲಿ ಇನ್ನೊಂದು ಧೈರ್ಯವಿತ್ತು ! ರಜಪೂತರು ಮೇಲೆ ಸಂಗ್ರಹಿಸಿಟ್ಟು ಕೊಂಡಿದ್ದ ಬಂಡೆಗಲ್ಲುಗಳೆಲ್ಲ ಇಷ್ಟರಲ್ಲಿಯೇ ತೀರಿಹೋದುವೆಂದು ಅವರು ತಿಳಿದು ಕೊಂಡಿದ್ದರು. ಅದರಿಂದ ಅವರು ಒಳ್ಳೇ ಉತ್ಸಾಹದಿಂದ ಜಯಧ್ವನಿಗೈಯುತ್ತ ಏರಿಬರತೊಡಗಿದರು ! ಆದರೆ ಇದೇನು ?

ಸಾವಿರಾರು ಮಂದಿ ಪಠಾಣ ಸೈನಿಕರು ಮೇಲಿನಿಂದ ಕೆಳವರೆಗೆ ಸಾಲು ಗೊಂಡು ಏರಿಬರತೊಡಗಿದ್ದರು ಒಂದೊಂದು ಸಾಲಿನಲ್ಲಿ ನೂರಾರು ಜನರಿ ದ್ದರು. ಅವರಲ್ಲಿ ಹಲವರು ದರಿಯ ಭಾಗವನ್ನು ಏರಿಬಂದು, ದುರ್ಗದ ಗೋಡೆ ಯನ್ನು ಏರುವುದಕ್ಕೆ ಆರಂಭಿಸಿದ್ದರು. ಇಷ್ಟರಲ್ಲಿ ಅಕಸ್ಮಾತ್ ಬಾದಲನು ತನ್ನ ಸೈನಿಕರಿಗೆ ಅಪ್ಪಣೆಕೊಟ್ಟನು. ರಜಪೂತರು ಮೊದಲಿನಂತೆ ಒಂದೇಸವನೆ ದೊಡ್ಡದೊಡ್ಡ ಬಂಡೆಗಲ್ಲುಗಳನ್ನು ಉರುಳಿಸತೊಡಗಿದರು ! ಒಂದೊಂದು ಕಲ್ಲಿ

ನಿಂದ ನೂರಾರು ಪಠಾಣರು ಸತ್ತು ಬೀಳಹತ್ತಿದರು. ಇಷ್ಟು ಹೊತ್ತಿನವರೆಗೆ ಪಠಾಣರು ಕೆಳಗೆ ಇದ್ದರು. ಅದರಿಂದ ರಜಪೂತರು ಎಸೆದ ಕಲ್ಲು ಒಬ್ಬಿಬ್ಬರಿಗೆ ಮಾತ್ರ ತಾಕುತ್ತಿತ್ತು. ಅದರಿಂದ ಅವರಷ್ಟೇ ಸಾಯುತ್ತಿದ್ದರು; ಇಲ್ಲವೆ ಗಾಯ ಪಡುತ್ತಿದ್ದರು. ಆದರೆ ಅವರು ಈಗ ದರಿಯ ಮೇಲೆ ಒಪ್ಪೋರಿಯಾಗಿ ಸಾಲಾಗಿ ಏರಿಬರತೊಡಗಿದ್ದರು. ಅದರಿಂದ ಈ ಸಾರೆ ಮೇಲಿನಿಂದ ಒಂದು ಕಲ್ಲನ್ನು ಉರುಳಿಸಿದರೆ ಅದು ತಳಕ್ಕೆ ಮುಟ್ಟುವವರೆಗೆ ನೂರಾರು ಜನರನ್ನು ಉರುಳಿಸಿ ಅವರ ಶವಗಳನ್ನು ಕೂಡ ಚಿಪ್ಪಾಡಿ ಮಾಡಿಬಿಡುತ್ತಿತ್ತು ! ಯಾರಿಗೆ ಕಲ್ಲು ಬಡಿಯಿತೋ ಅವರಂತೂ ಉರುಳಿಯೇ ಉರುಳಿದರು. ಆದರೆ ಕಲ್ಲುಬಡಿಯದೆ ಇದ್ದವರು ಕೂಡ ಮೇಲಿನಿಂದ ಉರುಳಿಬರುವವರ ಹೊಡೆತದಿಂದ ಉರುಳಿ ಬೀಳುತ್ತಿದ್ದರು. ಹೀಗೆ ಒಬ್ಬನ ಆಘಾತದಿಂದ ಇನ್ನೊಬ್ಬನೂ ಅವರಿಬ್ಬರ ಹೊಡತದಿಂದ ಮತ್ತಿಬ್ಬರೂ ಒಂದಕ್ಕೆ ಹತ್ತಾಗಿ ಹಲವಾಗಿ ಜನರು ಉರುಳಿಬೀಳತೊಡಗಿದರು. ತುಸು ಹೊತ್ತಿನಲ್ಲಿಯೇ ಮೇಲಕ್ಕೆ ಏರಿಬಂದವರಲ್ಲಿ ಒಬ್ಬನೂ ಉಳಿಯಲಿಲ್ಲ, ಇಷ್ಟೇ ಅಲ್ಲ, ಕೆಳಗೆ ನಿಂತವರಲ್ಲಿಯೂ ಹಲವರು ಸತ್ತುಬಿದ್ದರು. ಪಠಾಣರು ದುರ್ಗವನ್ನು ಏರಿಬರುವ ಆಶೆಯನ್ನು ಬಿಟ್ಟರು !

ಭೀಮಸಿಂಹನು ಈ ಆಶ್ಚರ್ಯಕರವಾದ ನೋಟವನ್ನು ನೋಡಿ ಬಾದಲನನ್ನು ಆನಂದದಿಂದ ಅಪ್ಪಿಕೊಂಡು—“ಸೇನಾಪತೀ, ಅಭಿಮನ್ಯೂ! ನೀನಿಂದು ಚಿತ್ತೂರನ್ನು ಶತ್ರುಗಳ ಕೈಯೊಳಗಿಂದ ಉದ್ಧಾರ ಮಾಡಿದೆ. ಅದರಿಂದ ನಾವೆಲ್ಲರೂ ನಿನಗೆ ಸ್ಥಿರ-ಋಣಿಗಳಾಗಿರುವೆವು! ” ಎಂದನು

ಹೀಗೆಂದು ಭೀಮಸಿಂಹನು ತನ್ನ ಕೊರಳೊಳಗಿನ ಒಂದು ರತ್ನದ ಹಾರವನ್ನು ತೆಗೆದು ಬಾದಲನ ಕೊರಳಿಗೆ ಹಾಕಿದನು.

ಇಷ್ಟರಲ್ಲಿ ಪಠಾಣರು ದುರ್ಗವನ್ನು ಏರಿಬರುವ ಆಲೋಚನೆಯನ್ನು ಬಿಟ್ಟುಬಿಟ್ಟು ತುಸು ದೂರದಲ್ಲಿದ್ದ ತಮ್ಮ ಶಿಬಿರವನ್ನು ಸೇರಿದರು. ಪೂರ್ವದಿಕ್ಕಿನಲ್ಲಿ ಉಷಃಕಾಲದ ಅರುಣರಾಗವು ಆಕಾಶವನ್ನು ಅಲಂಕರಿಸಿತು. ಚಿತ್ತೂರಿನ ಸೇನಾಪತಿ ಬಾದಲನ ಅಪ್ಪಣೆಯ ಮೇರೆಗೆ ರಜಪೂತ ಸರದಾರರೂ ಸೈನಿಕರೂ ತಮ್ಮ ತಮ್ಮ ಮನೆಗಳಿಗೆ ಹೋದರು.

---

# ಆರನೆಯ ಪರಿಚ್ಛೇದ

ಗುಪ್ತಚಾರರ ಮಾತನ್ನು ನಂಬಿ ಅಲ್ಲಾವುದ್ದೀನನು ನಡುರಾತ್ರಿಯಲ್ಲಿ ಲಗ್ಗೆ ಹತ್ತಿ ಚಿತ್ತೂರು ದುರ್ಗವನ್ನು ವಶಪಡಿಸಿಕೊಳ್ಳಬಹುದೆಂದು ಯೋಚಿಸಿದ್ದನು. ಮತ್ತು ಅದೇ ನಂಬಿಗೆಯಿಂದಲೇ ಇಂದು ಆಕಸ್ಮಿಕವಾಗಿ ಬಂದು ದುರ್ಗವನ್ನು ಏರಿ ಹೋಗಿರೆಂದು ತನ್ನ ಸೈನಿಕರಿಗೆ ಅಪ್ಪಣೆಕೊಟ್ಟಿದ್ದನು. ಆದರೆ ಬೆಳಗಾಗುತ್ತಲೇ ನೋಡುತ್ತಾನೆ, ಏನು ಭಯಂಕರ ! ಒಂದೇ ರಾತ್ರಿಯಲ್ಲಿ ಸಾವಿರಾರು ಸೈನಿಕರು ಶವದ ಗುರುತು ಕೂಡ ಹತ್ತದಂತೆ ನುಗ್ಗುನುಗ್ಗಾಗಿ ಬಿದ್ದು ಹೋಗಿದ್ದರು ! ದುರ್ಗವನ್ನು ಏರಿಹೋಗಲು ಯತ್ನಿಸಿದ ಜನರಲ್ಲಿ ಒಬ್ಬನು ಕೂಡ ಸುರಕ್ಷಿತವಾಗಿ ತಿರುಗಿ ಬಂದಿರಲಿಲ್ಲ. ಜೀವದಿಂದ ಉಳಿದಿದ್ದವರಲ್ಲಿ ಕೆಲವರ ಕೈಕಾಲುಗಳು ಮುರಿದಿದ್ದುವು; ಕೆಲವರ ತಲೆಯೊಡೆದಿತ್ತು; ಕೆಲವರು ಮೇಲಿನಿಂದ ಉರುಳಿ ಬಿದ್ದು ಅವರ ಒಂದೊಂದು ಮಗ್ಗಲವೇ ಮುರಿದು ಹೋಗಿತ್ತು.

ದುರ್ಗವು ಐನೂರಡಿ ಉನ್ನತವಾದ ದಿಣ್ಣೆಯ ಮೇಲಿರುವುದು. ಅದರಲ್ಲಿಯೂ ಪ್ರತ್ಯಕ್ಷ ದುರ್ಗದ ಕೆಳಗಿನಿಂದ ಮುನ್ನೂರು ಅಡಿಗಳವರೆಗೆ ಕಡಿದಾದ ದರಿ; ಮೇಲೆ ದುರ್ಗದ ಗೋಡೆ; ಇಂಥ ದುರ್ಗಮವಾದ ದುರ್ಗವನ್ನು ಅವನು ಇನ್ನೆಲ್ಲಿಯೂ ನೋಡಿರಲಿಲ್ಲ. ಅವನು ದುರ್ಗವನ್ನು ಏರಿಹೋಗಿ ವಶಮಾಡಿಕೊಳ್ಳುವುದು ತೀರ ಅಸಾಧ್ಯವಾದ ಸಂಗತಿಯೆಂದು ನಿರ್ಣಯಿಸಿಕೊಂಡನು. ಅದರಿಂದ ಅಲ್ಲಾವುದ್ದೀನನು ಚಿತ್ತೂರನ್ನು ಮುತ್ತಿ, ಒಳಗಿನವರಿಗೆ ಹೊರಗಿನ ಸಂಬಂಧವನ್ನು ತಪ್ಪಿಸಿ ಅವರನನ್ನು ಹಣ್ಣಿಗೆ ತರಬೇಕೆಂದು ಯೋಚಿಸಿದನು.

ಅಲ್ಲಾವುದ್ದೀನನ ಸೈನಿಕರು ಪೂರ್ವ–ಉತ್ತರ–ಪಶ್ಚಿಮಗಳೆಂಬ ಮೂರೂ ದಿಕ್ಕುಗಳಲ್ಲಿ ದುರ್ಗವನ್ನು ಆಕ್ರಮಣಮಾಡಿದರು. ರಜಪೂತರು ಆ ಮೂರು ದಿಕ್ಕುಗಳಲ್ಲಿ ಇರುವ ದುರ್ಗದ ಮಹಾದ್ವಾರಗಳನ್ನು ಸಂಪೂರ್ಣವಾಗಿ ಮುಚ್ಚಿ ಬಿಡಬೇಕಾಯಿತು. ದಕ್ಷಿಣದಿಕ್ಕಿನಲ್ಲಿ ಆರಾವಲೀಪರ್ವತದ ಒಂದು ಶಾಖೆಯು ದುರ್ಗಕ್ಕೆ ಹೊಂದಿಕೊಂಡಿದ್ದು ಅಲ್ಲಿ ದಟ್ಟವಾದ ಅರಣ್ಯವು ಬೆಳೆದುಕೊಂಡಿತ್ತು.

ಅಲ್ಲಾವುದ್ದೀನನು ಆ ದಕ್ಷಿಣ ದಿಕ್ಕಿನಲ್ಲಿ ಮಾತ್ರ ದುರ್ಗದ ಒಳಗಿನವರಿಗೂ ಹೊರಗಿನವರಿಗೂ ಇರುವ ಸಂಬಂಧವನ್ನು ತಪ್ಪಿಸಲು ಸಮರ್ಥನಾಗಲಿಲ್ಲ. ಅದರಿಂದ ಅವನು ದುರ್ಗವನ್ನು ಮುತ್ತಿದರೂ ಮುತ್ತದಂತೆಯೇ ಆಗಿತ್ತು. ಆ ದಕ್ಷಿಣದ ದಾರಿಯಿಂದ ಅರಣ್ಯದೊಳಗಿನ ಭಿಲ್ಲರು ರಜಪೂತರಿಗೆ ಬೇಕಾಗುವ ಸಾಮಗ್ರಿಗಳನ್ನೆಲ್ಲ ಹೊತ್ತುಹೊತ್ತಿಗೆ ಒದಗಿಸಿಕೊಡುತ್ತಿದ್ದರು.

ಅಲ್ಲಾವುದ್ದೀನನ ಮನಸ್ಸು ಕಳವಳಗೊಂಡಿತು. ಅವನು ತನಗೆ ಇಂತಹ ಪ್ರಸಂಗವು ಬರಬಹುದೆಂದು ಎಂದೂ ಯೋಚಿಸಿರಲಿಲ್ಲ. ಹಾಗಿದ್ದರೆ ಅವನು ಚಿತ್ತೂರಿನವರನ್ನು ಕೆಣಕುವ ಹವ್ಯಾಸಕ್ಕೇ ಹೋಗುತ್ತಿದ್ದಿಲ್ಲ. ಅವನು ಅತಿ ಸುಲಭವಾಗಿ ಚಿತ್ತೂರನ್ನು ವಶಮಾಡಿಕೊಂಡು ಪದ್ಮಿನೀರಾಣಿಯನ್ನು ಎಬ್ಬಿಸಿಕೊಂಡು ಹೋಗಬಹುದೆಂದು ತಿಳಿದಿದ್ದನು. ಅವನಿಗೆ ಪದ್ಮಿನಿಯು ಅಷ್ಟೊಷ್ಟು ಪ್ರಯತ್ನಕ್ಕೆ ದೊರೆಯಲಾರಳೆಂಬುದು ಈಗ ತಿಳಿಯಿತು. ಅವನು ಮನಸ್ಸಿನಲ್ಲಿ ಈ ರೀತಿಯಾಗಿ ಯೋಚಿಸತೊಡಗಿದನು —"ಭುವನಸುಂದರಿಯೆಂದು ಹೇಳುವ ಆ ಪದ್ಮಿನಿಯ ರೂಪಲಾವಣ್ಯಗಳು ಹೇಗಿರಬಹುದು ? ಅವಳು ನನ್ನ ಕಣ್ಣಿಗೂ ಬೀಳಲಾರಳೇ ? ಅವಳು ಇಂಥ ಅಡವಿಯಲ್ಲಿರುವ ಕ್ಷುಲ್ಲಕನಾದ ಒಬ್ಬ ಸರದಾರನ ಬಳಿಯಲ್ಲಿರಲು ಯೋಗ್ಯಳೇ ? ದಿಲ್ಲೀಪತಿಯಾದ ರಾಜರಾಜೇಶ್ವರನ ರಾಣೀವಾಸವೇ ಅವಳಿಗೆ ಯೋಗ್ಯವಾದ ಸ್ಥಳವು. ನಾನಂತೂ ಅವಳಿಗೆ ಪ್ರತಿಯಾಗಿ ನನ್ನ ಸಕಲ ದ್ರವ್ಯಭಾಂಡಾರವನ್ನೂ ಕೊಡಲು ಸಿದ್ಧನಿರುವೆನು. ರಜಪೂತರು ಅದನ್ನು ತೆಗೆದುಕೊಂಡು ನನಗೆ ಪದ್ಮಿನಿಯನ್ನು ಕೊಡಬಾರದೇ ? ಎಂಥ ಮೂರ್ಖರಿವರು ? ಇರಲಿ ! ನೋಡೋಣ, ಇವರ ಸಾಹಸವನ್ನು! ನಾನು ಹೀಗೆಯೇ ಮುತ್ತಿಗೆ ಹಾಕಿ ಕುಳಿತುಕೊಂಡರೆ ಇವರು ಏನು ಮಾಡುವರು ? "

ಅಲ್ಲಾವುದ್ದೀನನು ಹೀಗೆಂದು ಯೋಚಿಸಿ ಚಿತ್ತೂರನ್ನು ಮುತ್ತಿಕೊಂಡು ಕುಳಿತನು. ಅವನ ಅಂತರಂಗದ ಆಶೆಯಂತೂ ದಿನದಿನಕ್ಕೆ ಹೆಚ್ಚುತ್ತ ನಡೆದಿತ್ತು. ಅವನು " ಪದ್ಮಿನಿಯನ್ನಾದರೂ ಕೊಂಡೊಯ್ದೇನು, ಇಲ್ಲವೆ ಇಲ್ಲಿಯೇ ಪ್ರಾಣವನ್ನಾದರೂ ಬಿಟ್ಟೇನು " ಎಂದು ನಿರ್ಣಯಿಸಿಕೊಂಡನು.

ಬರಬರುತ್ತ ಅಲ್ಲಾವುದ್ದೀನನ ಹೃದಯದಲ್ಲಿ ಭೀತಿಸಂಚಾರವಾಗತೊಡಗಿತು. ದಿನಗಳ ಮೇಲೆ ದಿನಗಳು ಕಳೆದು ಹೋದುವು. ಒಂದು ಮಾಸವಾಯಿತು

ಎರಡು ಮಾಸಗಳಾದುವು; ಕ್ರಮವಾಗಿ ವರುಷವಾಯಿತು! ರಜಪೂತರು ಸಂಧಿಯ ಪ್ರಸ್ತಾಪವನ್ನು ಎತ್ತಲೊಲ್ಲರು ! ಇಲ್ಲವೆ ದುರ್ಗದ ಬಾಗಿಲನ್ನು ತೆರೆದು ಅವರ ಮೇಲೆ ಏರಿಬಂದು ಯುದ್ಧವನ್ನೂ ಮಾಡಲೊಲ್ಲರು. ವೈರಿಗಳ ಮುತ್ತಿಗೆಯಿಂದ ರಜಪೂತರಿಗೆ ಯಾವ ರೀತಿಯಿಂದಲೂ ಪ್ರತಿಬಂಧವಾದಂತೆ ತೋರಲಿಲ್ಲ.

ಅಲ್ಲಾವುದ್ದೀನನಿಗೆ ರಜಪೂತರ ಹಾಗೆ ಚಿತ್ತೂರಿನ ಯೋಚನೆಯೊಂದೇ ಇರಲಿಲ್ಲ. ದಿಲ್ಲಿಯ ಸಾಮ್ರಾಜ್ಯಕ್ಕೇ ಒಡೆಯನಾಗಿದ್ದ ಅವನು ದಿಲ್ಲಿಯನ್ನು ಬಿಟ್ಟು ಬಂದು ಪೂರಾ ಒಂದು ವರುಷವಾಗಿ ಹೋಗಿತ್ತು. ಇಷ್ಟರಲ್ಲಿ ಅಲ್ಲಿ ಯಾವ ಅವ್ಯವಸ್ಥೆಯುಂಟಾಯಿತೋ ಯಾರು ಬಲ್ಲರು ? ಆ ಕಾಲದಲ್ಲಿ ಅರಸನಾದವನಿಗೆ ಹೆಜ್ಜೆಹೆಜ್ಜೆಗೆ ಭಯ ! ಅದರಲ್ಲಿಯೂ ಅಲ್ಲಾವುದ್ದೀನನಂಥ ಕ್ರೂರನೂ ದುರಾಚಾರಿಯೂ ವಿಶ್ವಾಸಘಾತಕಿಯೂ ಆದ ಬಾದಷಹನಿಗೆ ಆಪತ್ತಿಗೇನು ಕೊರತೆ ? ಅವನು—"ದೇಶದಲ್ಲಿ ನಾನು ಕಾಯ್ದುಕೊಂಡಿರುವ ಸುಖಶಾಂತತೆಗಳಿಗೆ ನನ್ನ ಸೈನ್ಯದ ಬಲವೇ ಕಾರಣವಾಗಿರುವುದು. ಹೀಗಿದ್ದು ನಾನು ರಾಜಧಾನಿಯನ್ನು ಬಿಟ್ಟು ಇಷ್ಟು ದೂರ ಅಡವಿಯಲ್ಲಿದ್ದುಕೊಂಡರೆ ಯಾವನಾದರೂ ಗೊಂದಲ ಎಬ್ಬಿಸಿ ದಿಲ್ಲಿಯ ಸಿಂಹಾಸನವನ್ನೇ ಹಿಡಿದುಕೊಂಡರೆ ಏನು ಮಾಡಲಿ? ಮೇಲಾಗಿ ಮೊಗಲರು ಆಗಾಗ ದಿಲ್ಲಿಯ ಮೇಲೆ ದಾಳಿಮಾಡುತ್ತಲೇ ಇದ್ದಾರೆ. ಈಗ ಮೊಗಲರು ಬಂದು ದಿಲ್ಲಿಯನ್ನು ಹಿಡಿದುಕೊಂಡರೆ ಏನು ಮಾಡಲಿ ? " ಎಂದು ಯೋಚಿಸಿದನು. ಅಲ್ಲಾವುದ್ದೀನನ ಸೈನಿಕರೂ ಬೇಸತ್ತಿದ್ದರು. ಒಂದೇಸವನೆ ಒಂದು ವರುಷದ ವರೆಗೆ ಇಂಥ ಗುಡ್ಡಗಾಡು ಪ್ರದೇಶದಲ್ಲಿ ಬಿದ್ದು ಬಿದ್ದು ಬೇಸರಗೊಂಡು ಅವರೆಲ್ಲರೂ ಮನಸ್ಸಿನಲ್ಲಿಯೇ ಅಲ್ಲಾವುದ್ದೀನನ್ನು ಬೈಯುತ್ತಿದ್ದರು.

ಇಂಥ ಪ್ರಸಂಗದಲ್ಲಿ ಅಲ್ಲಾವುದ್ದೀನನ ಸೈನ್ಯದಲ್ಲಿ ಮಾರೀ ಜೇನೆಯು ಹಬ್ಬಿತು ! ಮರುಭೂಮಿಯ ಸೌಳು ನೀರು ಕುಡಿದು ಕುಡಿದು ಅವರ ಆರೋಗ್ಯವು ಕೆಟ್ಟುಹೋಯಿತು. ಪ್ರತಿದಿನವೂ ಸೈನ್ಯದಲ್ಲಿ ೪೦–೫೦ ಜನರು ಸಾಯತೊಡಗಿದರು. ಇದರಿಂದಂತೂ ಅಲ್ಲಾವುದ್ದೀನನ ಕೈಕಾಲೇ ಹೋದುವು.

ಸೈನಿಕರ ಅಸಂತೋಷ; ದಿನದಿನಕ್ಕೆ ಹೆಚ್ಚುತ್ತಿರುವ ಪ್ರಾಣನಾಶ; ಅದರ ಮೇಲೆ ದಿಲ್ಲಿಯ ಸುರಕ್ಷಿತತೆಯ ಸಂಬಂಧವಾದ ಸಂಶಯ; ಇವುಗಳನ್ನು ನೋಡಿ

ದರೆ ಅಲ್ಲಾವುದ್ದೀನನಿಗೆ ದಿಲ್ಲಿಗೆ ತಿರುಗಿ ಹೋಗುವುದೇ ಯೋಗ್ಯವೆನಿಸುವುದು. ಆದರೆ ದಿಲ್ಲೀಶ್ವರನಾಗಿ ಇಂಥ ಯಃಕಶ್ಚಿತನಾದ ರಾಣನನ್ನು ಜಯಿಸುವುದಾಗ ದಿದ್ದರೆ ಜನರಲ್ಲಿ ಅವಹಾಸ್ಯಕ್ಕೆ ಗುರಿಯಾಗಬೇಕಾಗುವುದಲ್ಲಾ! ಎಂಬುದು ಒಂದು ಯೋಚನೆ; ಯಾವ ಪದ್ಮಿನಿಯ ನಿಮಿತ್ತವಾಗಿ ನಾನು ಇಷ್ಟೊಂದು ಕಷ್ಟನಷ್ಟ ಗಳನ್ನು ಸಹಿಸಿದೆನೋ ಆ ಪದ್ಮಿನಿಯ ಮೋರೆಯನ್ನು ಕೂಡ ನೋಡದೆ ಹೇಗೆ ತಿರುಗಿ ಹೋಗಲೆಂಬುದು ಇನ್ನೊಂದು ವಿಚಾರ; ಇವೆರಡೂ ಭಾವನೆಗಳು ಮನ ಸ್ಸಿನಲ್ಲಿ ಬಂದಕೂಡಲೆ ಅವನು "ಈ ಚಿತ್ತೂರು ದುರ್ಗವನ್ನು ವಶಮಾಡಿಕೊಳ್ಳ ಲಾರದೆ ಹೋದರೆ ನನ್ನ ಹೆಸರು ಅಲ್ಲಾವುದ್ದೀನನಲ್ಲ" ಎಂದು ಪ್ರತಿಜ್ಞೆ ಮಾಡು ವನು. ಹೀಗಾಗಿ ಅಲ್ಲಾವುದ್ದೀನನ ಮನಸ್ಸು ಹೊಯ್ದಾಡಲಾರಂಭಿಸಿತು. ಅವನು ಒಂದೇ ಸವನೆ ಅನೇಕ ದಿನಗಳ ವರೆಗೆ ವಿಚಾರಮಾಡಿದನು. ಆದರೂ ಅವನಿಂದ ಯಾವುದನ್ನೂ ನಿರ್ಣಯಿಸುವುದಾಗಲಿಲ್ಲ. ಅಲ್ಲಾವುದ್ದೀನನು ಚಿತ್ತೂರನ್ನು ಮುತ್ತಿ ಸುಮಾರು ಆರು ತಿಂಗಳಾಗುತ್ತ ಬಂದಿತು.

ಇಂಥ ಪ್ರಸಂಗದಲ್ಲಿ ಇನ್ನೊಂದು ಸಂಕಟವೊದಗಿತು. ಅಲ್ಲಾವುದ್ದೀನನು 'ಏನು ಮಾಡಲಿ ! ಹೇಗೆ ಮಾಡಲಿ?' ಎಂದು ಯೋಚಿಸುತ್ತ ಕುಳಿತುಕೊಂಡಾಗ ದಿಲ್ಲಿಯಿಂದ ಒಬ್ಬ ಸರದಾರನು ಬಂದು--"ಮೊಗಲ ಸೇನಾಪತಿಯಾದ ತುರ್ಕೀ ಖಾನನು ದೊಡ್ಡದೊಂದು ಸೈನ್ಯವನ್ನು ತೆಗೆದುಕೊಂಡು ಬಂದು ದಿಲ್ಲಿಯನ್ನು ಮುತ್ತಿರುವನು! ಅವನು ಕೆಲವು ದಿನಗಳಲ್ಲಿಯೇ ಲಗ್ಗೆ ಹತ್ತಿ ರಾಜಧಾನಿಯನ್ನು ವಶ ಮಾಡಿಕೊಳ್ಳುವನು! ಸೇನಾಪತಿಯಾದ ಜಾಫರಖಾನನು ಒಳಗೆ ತಕ್ಕಷ್ಟು ಸೈನ್ಯ ಸನ್ನಾಹವಿಲ್ಲದೆ ಇರುವುದರಿಂದ ಬಾದಷಹರ ಆಗಮನವನ್ನು ನಿರೀಕ್ಷಿಸು ತ್ತಲಿರುವನು!" ಎಂದು ವಿಜ್ಞಾಪಿಸಿದನು.

ಇದನ್ನು ಕೇಳಿ ಅಲ್ಲಾವುದ್ದೀನನ ಎದೆಯು ದಗ್ಗೆಂದಿತು. ಅವನು ಕೂಡಲೆ ಅರ್ಧ ಸೈನಿಕರು ದಿಲ್ಲಿಗೆ ತಿರುಗಿ ಹೋಗಬೇಕೆಂದು ಅಪ್ಪಣೆಕೊಟ್ಟು ಕಳುಹಿಸಿದನು. ಬಳಿಕ ತನ್ನ ಮುಖ್ಯ ಮುಖ್ಯ ಮಂತ್ರಿಗಳನ್ನೂ ಸರದಾರರನ್ನೂ ಕೂಡಿಸಿ ಸಭೆ ಗೊಂಡು ಚಿತ್ತೂರಿನವರ ಸಂಗಡ ಒಪ್ಪಂದಮಾಡಿಕೊಳ್ಳಬೇಕೆಂದು ನಿರ್ಣಯಿ ಸಿದನು.

---

## ಏಳನೆಯ ಪರಿಚ್ಛೇದ

ಮಾರನೆಯ ದಿನ ಮಧ್ಯಾಹ್ನದ ಮೇಲೆ ದುರ್ಗದ ಶಿಖರದಲ್ಲಿ ನಿಂತಿದ್ದ ಸೇನಾಪತಿ ಬಾದಲನು ಒಂದು ಆಶ್ಚರ್ಯಕರವಾದ ನೋಟವನ್ನು ನೋಡಿದನು. ಪಠಾಣ ಸವಾರನೊಬ್ಬನು ವೇಗದಿಂದ ದುರ್ಗದ ಕಡೆಗೆ ಬರುತ್ತಿದ್ದನು. ಅವನ ಕೈಯಲ್ಲಿ ಸಂಧಿಸೂಚಕವಾದ ಬಿಳಿಯ ನಿಶಾನೆಯಿತ್ತು. ಸವಾರನು ಸಮೀಪಕ್ಕೆ ಬಂದ ಕೂಡಲೆ ದುರ್ಗದ ಕಾವಲುಗಾರರು ಬಾಗಿಲನ್ನು ತೆಗೆದು ಅವನನ್ನು ಒಳಗೆ ಬಿಟ್ಟರು. ಅಲ್ಲಾವುದ್ದೀನನು ತಾನಾಗಿಯೇ ಸಂಧಿಯ ಪ್ರಸ್ತಾವವನ್ನು ಎತ್ತಿರುವನೆಂಬ ಸುದ್ದಿಯು ಕ್ಷಣಮಾತ್ರದಲ್ಲಿ ದುರ್ಗದಲ್ಲೆಲ್ಲ ಹಬ್ಬಿತು. ರಜಪೂತ ಸರದಾರರೆಲ್ಲರಿಗೂ ಪರಮಾನಂದವಾಯಿತು.

ದ್ವಾರಪಾಲಕರಲ್ಲೊಬ್ಬನು ಆ ಸವಾರನನ್ನು ಕರೆದುಕೊಂಡು ರಾಣನ ಅರಮನೆಯ ಬಳಿಗೆ ಬಂದನು. ರಾಣನು ಸವಾರನು ಕೊಟ್ಟ ಪತ್ರವನ್ನು ತಟ್ಟನೆ ಒಡೆದು ಓದತೊಡಗಿದನು. ಮೊದಲು ಅವನ ಮುಖದಲ್ಲಿ ಆನಂದದ ಹೊಳಪು ಕಂಡಿತು. ಕೂಡಲೆ ವಿಷಾದದ ಛಾಯೆಯು ಮುಖವನ್ನೆಲ್ಲ ಆವರಿಸಿ ಬಿಟ್ಟಿತು! ಬಳಿಯಲ್ಲಿಯೇ ಕುಳಿತಿದ್ದ ಭೀಮಸಿಂಹನು ರಾಣನ ಮುಖಲಕ್ಷಣಗಳನ್ನು ನೋಡಿ, "ರಾಣಾಜೀ, ಪಠಾಣನು ಹೇಳುವುದೇನು ?" ಎಂದನು.

ರಾಣನು ಮಾತಾಡದೆ ಮುಖವನ್ನು ತಗ್ಗಿಸಿ ಪತ್ರವನ್ನು ಭೀಮಸಿಂಹನ ಕೈಯಲ್ಲಿ ಕೊಟ್ಟನು. ಭೀಮಸಿಂಹನು ಪತ್ರವನ್ನು ಓದಿ ನೋಡಿದನು. ಅದರ ಸಾರಾಂಶವು ಈ ರೀತಿಯಾಗಿತ್ತು :—

**ಮಹಾರಾಣಾ,**

ನಿಮ್ಮ ಶೌರ್ಯ ಸಾಹಸಗಳನ್ನು ನೋಡಿ ನನಗೆ ಅತ್ಯಂತ ಆನಂದವಾಯಿತು. ಇಡೀ ಹಿಂದುಸ್ಥಾನದಲ್ಲೆಲ್ಲ ಚಿತ್ತೂರಿನ ರಜಪೂತರೇ ನನ್ನ ಎದುರು ನಿಂತು ಯುದ್ಧ ಮಾಡಿದವರು. ನಾನು ನಿಮ್ಮ ಸ್ನೇಹವನ್ನು ಕೋರುವೆನು.

ರಾಣಾ, ಇನ್ನೊಂದು ವಿಚಾರವಿದೆ. ತಾವು ಅತಿಥಿವತ್ಸಲರೆಂದು ಕೇಳಿದ್ದೇನೆ. ಇಂದು ನಾನು ತಮ್ಮ ಅತಿಥಿ; ತಾವು ಈ ಅತಿಥಿಯ ಆಶೆಯನ್ನು

ಭಂಗಪಡಿಸಲಿಕ್ಕಿಲ್ಲವೆಂದು ನಂಬಿದ್ದೇನೆ. ತಮ್ಮ ಆತ್ಮಾಭಿಮಾನಕ್ಕಾಗಲಿ, ರಾಣಿಯವರ ಪವಿತ್ರತೆಗಾಗಲಿ ಭಂಗತರುವುದು ನನ್ನ ಉದ್ದೇಶವಲ್ಲ. ಆದರೆ ಯಾರ ರೂಪಲಾವಣ್ಯಗಳನ್ನು ಕೇಳಿ ಮೋಹಗೊಂಡು ಹದಿನೆಂಟು ತಿಂಗಳುಗಳ ವರೆಗೆ ಈ ಮರುಭೂಮಿಯಲ್ಲಿ ಬಿದ್ದಿರುವೆನೋ ಆ ಮಹನೀಯಳ ರೂಪಲಾವಣ್ಯಗಳನ್ನು ಒಮ್ಮೆ ಕಣ್ಣಿನಿಂದ ನೋಡಿಯಾದರೂ ಮನಸ್ಸನ್ನು ಸಮಾಧಾನಪಡಿಸಿಕೊಳ್ಳಬೇಕೆಂದು ಅಭಿಲಾಷೆಯಿರುವುದು. ಅದೊಂದೇ ಅಭಿಲಾಷೆಯಿಂದ ಈ ದಿನ ನಾನು ನಿಮ್ಮೊಡನೆ ಸಂಧಿಯ ಪ್ರಸ್ತಾವವನ್ನು ಎತ್ತಿರುವೆನು. ಇದೊಂದು ಮಾತಿಗೆ ನೀವು ಒಪ್ಪಿಕೊಂಡರೆ, ನಾನು ಬದುಕಿರುವವರೆಗೂ ನಿಮ್ಮೊಡನೆ ಸ್ನೇಹಭಾವದಿಂದ ನಡೆದುಕೊಳ್ಳುವೆನು. ನನಗಿನ್ನು ನಿಮ್ಮೊಡನೆ ಯುದ್ಧಮಾಡುವ ಅಪೇಕ್ಷೆಯಿಲ್ಲ. ಆದರಿಂದ ನಿನ್ನೆಯೇ ನನ್ನ ಅರ್ಧ ಸೈನ್ಯವನ್ನು ದಿಲ್ಲಿಗೆ ಕಳುಹಿಸಿಬಿಟ್ಟೆನು. ಇತಿ

ತಮ್ಮ ಸ್ನೇಹಾಭಿಲಾಷಿ, **ಅಲ್ಲಾವುದ್ದೀನ.**

ಭೀಮಸಿಂಹನು ಪತ್ರವನ್ನು ಓದಿದಕೂಡಲೆ ‘ ಒಂದು ವೇಳೆ ಚಿತ್ತೂರಿಗೆ ಮಂಗಲವಾಗುವಂತಿದ್ದರೆ ಪರಾಣನ ಅಭಿಪ್ರಾಯವನ್ನು ಒಪ್ಪಿಕೊಳ್ಳಬಹುದು. ಮೊದಲು ದೇಶಾಭಿಮಾನ; ಬಳಿಕ ಆತ್ಮಾಭಿಮಾನ. ಅವಶ್ಯವಿದ್ದರೆ ಚಿತ್ತೂರಿನ ಸಲುವಾಗಿ ನಾನು ಪದ್ಮಿನಿಯನ್ನು–ಇಷ್ಟೇ ಯಾಕೆ ? ಪ್ರಾಣವನ್ನು ತ್ಯಜಿಸಲು ಕೂಡ ಸಮ್ಮತಿಸುವೆನು.’ ಎಂದನು.

ಭೀಮಸಿಂಹನ ಮಾತುಗಳನ್ನು ಕೇಳಿ ಬಾಲಕ ಬಾದಲನು ಕೆರಳಿ ಕಿಚ್ಚಾದನು. ಅವನು ಖಡ್ಗವನ್ನು ಹಿರಿದು —“ ಆಗದು! ಎಂದಿಗೂ ಆಗದು! ನೀವು ರಜಪೂತರು, ಚಿತ್ತೂರಿನ ಉದ್ಧಾರಕ್ಕಾಗಿ ರಾಣಿಯವರ ಮಾನವನ್ನು ಕಳೆದರೂ ಕಳೆಯಬಹುದು. ಆದರೆ ನಾವು ಸಿಂಹಳೀಯರು; ಈ ದೇಹದಲ್ಲಿ ಜೀವನಸಂಚಾರವಾಗುತ್ತಿರುವವರೆಗೆ ಈ ಮಾತಿಗೆ ನಾವು ಎಂದಿಗೂ ಒಪ್ಪಿಕೊಳ್ಳಲಾರೆವು ” ಎಂದು ಹೇಳುತ್ತ ಗೋರಾಸಿಂಗನ ಮುಖವನ್ನು ನೋಡಿದನು.

ಇದನ್ನು ಕೇಳಿ ರಾಣಾ ಲಕ್ಷ್ಮಣಸಿಂಗನು “ಬಾದಲ, ಸ್ವಲ್ಪ ಸಮಾಧಾನ ತಾಳು. ನಮ್ಮ ಅಭಿಪ್ರಾಯವನ್ನು ಮೊದಲು ಚೆನ್ನಾಗಿ ತಿಳಿದುಕೋ. ನಾವೂ

ಅಂಥ ಹೇಡಿ ಪಾಷಂಡರಲ್ಲ! ನಮಗೆ ಚಿತ್ತೂರಿನ ಕಲ್ಯಾಣವೂ ಸ್ತ್ರೀಯರ ಮರ್ಯಾದಾರಕ್ಷಣೆಯೂ ಸಮಾನವಾಗಿವೆ. ಜೀವದಿಂದಿರುವಮಟ್ಟಿಗೂ ಇವುಗಳಲ್ಲಿ ಯಾವುದನ್ನೂ ಬಿಡಲಾರೆವು. ಆದರೆ ಈಗ ಆ ವಿಚಾರವಿಲ್ಲ. ಅಲ್ಲಾವುದ್ದೀನನು ಪದ್ಮಿನೀ ದೇವಿಯರನ್ನು ನೋಡಲು ಅಪೇಕ್ಷಿಸುತ್ತಾನೆ. ಚಿತ್ತೂರಿನ ರಕ್ಷಣೆಗಾಗಿ ಈ ವಿಚಾರವು ಗ್ರಾಹ್ಯವೋ ಅಗ್ರಾಹ್ಯವೋ ಎಂಬುದನ್ನು ನೋಡಬೇಕು. ದೇವಿಯವರ ಮಾನಭಂಗವಾಗದೆ ಯಾವುದಾದರೂ ಉಪಾಯದಿಂದ ಅಲ್ಲಾವುದ್ದೀನನನ್ನು ಸಮಾಧಾನಗೊಳಿಸಲಿಕ್ಕೆ ಬರುವಂತಿದ್ದರೆ ನಾವು ಅದನ್ನು ಒಪ್ಪಿ ಕೊಳ್ಳಕೂಡದೇಕೆ ? ಇಂಥ ಯಾವುದಾದರೂ ಒಂದು ಉಪಾಯವನ್ನು ನಾವು ಸದ್ಯಕ್ಕೆ ಹುಡುಕಿಕೊಳ್ಳಬೇಕಾಗಿದೆ

**ಬಾದಲ**:—ದೇವಿಯವರ ಮಾನಕ್ಕೆ ಭಂಗಬರದಂತೆ ನೀವು ಬೇಕಾದ ರೀತಿಯಿಂದ ಒಪ್ಪಂದ ಮಾಡಿಕೊಳ್ಳಿರಿ. ಆದರಿಂದ ನಮಗೇನೂ ಅಡ್ಡಿಯಿಲ್ಲ. ಆ ಒಪ್ಪಂದದಲ್ಲಿ ದೇವಿಯವರ ಸಂಬಂಧವಿದ್ದರೆ ಆ ವಿಚಾರವನ್ನು ಅವರ ಅನುಮತಿಯಿಂದಲೇ ನಿರ್ಣಯಿಸಬೇಕು. ಹಾಗಲ್ಲದೆ ನೀವು ನಿಮ್ಮ ಮನಸ್ಸಿಗೆ ಬಂದಂತೆ ಒಪ್ಪಂದ ಮಾಡಿಕೊಳ್ಳುವಂತಿದ್ದರೆ ಹಾಗೂ ಆಗಬಹುದು. ಆ ಬಳಿಕ ನಮ್ಮ ಹಾದಿಯನ್ನು ನಾವು ನೋಡಿಕೊಳ್ಳುವೆವು.

ಮಹಾರಾಣನೂ ಭೀಮಸಿಂಹನೂ ಬಾದಲನ ಮಾತನ್ನು ಒಪ್ಪಿಕೊಂಡರು. ಸಭಿಕರೂ ಅದಕ್ಕೆ ಸಮ್ಮತಿಸಿದರು. ರಾಣನು ಭೀಮಸಿಂಹನೊಡನೆ ತಾನೇ ಪದ್ಮಿನಿಯ ಅರಮನೆಗೆ ಬಂದನು.

ಭೀಮಸಿಂಹನು ಒಳಗೆ ಹೋಗಿ ಪದ್ಮಿನಿಗೆ ಅಲ್ಲಾವುದ್ದೀನನ ಪತ್ರವನ್ನು ತೋರಿಸಿದನು. ಪತ್ರವನ್ನು ಓದಿದವಳೇ ಪದ್ಮಿನಿಯು ಒಮ್ಮೆ ಬೆಚ್ಚಿಬಿದ್ದಳು. ಆದರೆ ಕಡೆಗೆ ಮನಸ್ಸನ್ನು ಸಮಾಧಾನಪಡಿಸಿಕೊಂಡು, —“ಇದಕ್ಕೆ ನಿಮ್ಮ ಅಭಿಪ್ರಾಯವೇನಿದೆ? ” ಎಂದಳು.

**ಭೀಮಸಿಂಹ**:—ರಮಣಿಯರ ಮರ್ಯಾದೆಯನ್ನು ಕಾಯ್ದುಕೊಳ್ಳುವುದು, ಚಿತ್ತೂರನ್ನು ರಕ್ಷಿಸುವುದು, ಇವೆರಡೂ ನಮ್ಮ ಕರ್ತವ್ಯಗಳು. ಇವೆರಡರಲ್ಲಿ ಒಂದಕ್ಕೆ ಬಾಧೆಬಂದರೂ ನಾವು ಬದುಕಿದ್ದರೂ ಸತ್ತ ಹಾಗೆಯೇ ಸರಿ.

ಅದರಿಂದ ಇವೆರಡಕ್ಕೂ ಕೊರತೆ ಬರದ ಹಾಗೆ ಏನಾದರೂ ಉಪಾಯವನ್ನು ಸೂಚಿಸಿದರೆ ಒಳ್ಳೆಯದಾಗುವುದು. ಅದರಿಂದಲೇ ನಾವು ಇಲ್ಲಿಗೆ ಬಂದೆವು.

**ಪದ್ಮಿನಿ** :—ರಾಣಾಜೀ, ಹಿಂದೆ ಒಂದು ದಿನ ತಾವು ವಿನೋದದಿಂದ ನನಗೆ ಭಯ ತೋರಿಸುವುದಕ್ಕಾಗಿ ಅಲ್ಲಾವುದ್ದೀನನ ಸಂಗಡ ಸಂಧಿಯ ಪ್ರಸ್ತಾಪವು ನಡೆಯುವುದಾದರೆ ನಿನ್ನ ಹೆಸರು ಮೊದಲು ಬರುವುದೆಂದು ಹೇಳಿದ್ದಿರಿ. ಅದಕ್ಕೆ ಚಿತ್ತೂರಿನ ಉದ್ಧಾರಕ್ಕಾಗಿ, ರಾಣನ ರಾಜನಿಷ್ಠ ಪ್ರಜಳಾದ ನಾನು ಪಠಾಣನ ಪಾಳೆಯಕ್ಕೆ ಹೋಗಬೇಕಾದರೂ ಸಂತೋಷದಿಂದ ಹೋಗುವೆನೆಂದು ಹೇಳಿದ ಉತ್ತರವು ತಮ್ಮ ಸ್ಮರಣೆಯಲ್ಲಿರಬಹುದು. ಅಂದು ಆಡಿದ ಮಾತನ್ನು ಇಂದು ಮಾಡಿ ತೋರಿಸುವ ಸಮಯವು ಬಂದಿರುವುದು. ರಜಪೂತ ಕುಲದಲ್ಲಿ ಹುಟ್ಟಿ ಆಡಿದ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಲಾರೆನು. ಪಠಾಣನ ಮಾತಿಗೆ ಒಪ್ಪಿಕೊಳ್ಳುವೆವೆಂದು ಉತ್ತರ ಕಳುಹಿರಿ.

ಪದ್ಮಿನಿಯು ತಟ್ಟನೆ ಸಮ್ಮತಿ ಕೊಟ್ಟುದನ್ನು ನೋಡಿ ಭೀಮಸಿಂಹನು ವಿಸ್ಮಿತನಾದನು. ಅವನು, ಅತ್ಯಂತ ಅಭಿಮಾನಿಯಾದ ಪದ್ಮಿನಿಯು ಈ ಮಾತನ್ನು ಇಷ್ಟು ಸುಲಭವಾಗಿ ಒಪ್ಪಿಕೊಳ್ಳಬಹುದೆಂದು ಭಾವಿಸಿರಲಿಲ್ಲ. ಅವಳ ಅಂತರಂಗದ ಸ್ಥಿರತೆಯ ನೆಲೆಯು ಇನ್ನೂ ಅವನಿಗೆ ತಿಳಿದಿರಲಿಲ್ಲ. ಅವನು ವಿಸ್ಮಿತ ನೇತ್ರದಿಂದ ಪದ್ಮಿನಿಯ ಮುಖವನ್ನು ನೋಡುತ್ತ ನಿಂತುಕೊಂಡನು.

ಪದ್ಮಿನಿಯು ಪುನಃ ಹೇಳಿದಳು:—ಅಲ್ಲಾವುದ್ದೀನನು ನನ್ನ ರೂಪಲಾವಣ್ಯಗಳನ್ನು ನೋಡಲು ಇಚ್ಛಿಸುವನು. ಅಡ್ಡಿಯಿಲ್ಲ, ನೋಡಲಿ. ಆದರೆ ಅವನು ನನ್ನ ಪ್ರತ್ಯಕ್ಷ ಶರೀರವನ್ನು ಮಾತ್ರ ನೋಡಲಾರನು

**ಭೀಮಸಿಂಹ**:—ಅದು ಹೇಗಾದೀತು ? ಅವನು ನಿನ್ನ ಭಾವಚಿತ್ರವನ್ನು ನೋಡಿ ತಿರುಗಿ ಹೋಗಲು ಒಡಂಬಡುವಂತೆ ತೋರುವುದಿಲ್ಲ

**ಪದ್ಮಿನಿ**:—ಇಲ್ಲ. ಚಿತ್ರವಲ್ಲ. ನಿರ್ಜೀವ ಚಿತ್ರವನ್ನಾಗಲಿ ಪ್ರತಿಮೆಯನ್ನಾಗಲಿ ತೋರಿಸಬೇಕೆಂದು ನಾನು ಹೇಳುವುದಿಲ್ಲ ಅವನು ಅರಮನೆಯೊಳಗಿನ ವಜ್ರದ ನಿಲವುಗನ್ನಡಿಯಲ್ಲಿ ನನ್ನ ಪ್ರತಿಬಿಂಬವನ್ನು ನೋಡಬಹುದು.

ಭೀಮಸಿಂಹನು ಈ ವಿಚಾರವನ್ನು ರಾಣನಿಗೆ ತಿಳಿಸಿದನು. ಇಬ್ಬರಿಗೂ ಆನಂದವಾಯಿತು. ಕೊನೆಗೆ ಚಿತ್ತೂರಿಗೇ ಆನಂದವಾಯಿತು.

---

# ಎಂಟನೆಯ ಪರಿಚ್ಛೇದ

ಹೀಗೆಯೇ ಸವನೆ ಒಂದೂವರೆ ವರುಷದವರೆಗೆ ಯುವನರೊಡನೆ ಕಾದಾಡಿ ರಜಪೂತರು ಬೇಸತ್ತಿದ್ದರು. ಒಳಗಿದ್ದ ರಜಪೂತವೀರರ ಸಂಖ್ಯೆಯೂ ದಿವಸ ದಿವಸಕ್ಕೆ ಕುಂದುತ್ತಲಿತ್ತು. ಕಡೆಗೆ ಯುವನರು ಎಲ್ಲಿ ದುರ್ಗವನ್ನು ಜಯಿಸಿ ಬಿಡುವರೋ ಎಂಬ ಭೀತಿಯೂ ರಾಣನ ಮನಸಿನಲ್ಲಿ ಉಂಟಾಗಿತ್ತು. ಕಲ್ಲೋಲವಾದ ಸಮುದ್ರದ ಪ್ರಚಂಡವಾದ ಅಲೆಗಳ ಹೊಡತವನ್ನು ದಂಡೆಯ ಮೇಲಿದ್ದ ಬಂಡೆಗಲ್ಲು ಲಕ್ಷಿಸದಿರುವಂತೆ, ಅಸಂಖ್ಯ ಯುವನ ಸೈನಿಕರ ಶಸ್ತ್ರಘಾತಗಳನ್ನು ರಜಪೂತರು ಸುಲಭವಾಗಿ ಸಹಿಸಿಕೊಂಡಿದ್ದರು. ಆದರೂ ಒಳಗಿಂದೊಳಗೆ ಅವರು ತುಂಬಾ ಹಣ್ಣಾಗಿದ್ದರು, ಅವರಿಗೂ ಯುದ್ಧವು ಸಾಕುಸಾಕಾಗಿತ್ತು. ಇವೆಲ್ಲ ಕಾರಣಗಳಿಂದಲೂ ಪದ್ಮಿನೀದೇವಿಯು ಸೂಚಿಸಿದ ಉಭಯ ಪಕ್ಷಗಳಿಗೂ ಸಮಾಧಾನಕರವಾದ ಹಂಚಿಕೆಯಿಂದಲೂ ಅವರು ಅಲ್ಲಾವುದ್ದೀನನೊಡನೆ ಸಂಧಿಯನ್ನು ಮಾಡಿಕೊಳ್ಳಲು ಸಮ್ಮತಿಸಿದರು. ಒಂದೂವರೆ ವರುಷದಿಂದಲೂ ಹಗಲಿರುಳು ಒರೆಗಳೆದು ಧಳಧಳನೆ ಹೊಳೆಯುತ್ತಿದ್ದ ರಜಪೂತ ವೀರರ ಖಡ್ಗಗಳು ಇಂದು ಒರೆಗಂಡವು. ಅವರಿಗೆ ಆನಂದವಾಯಿತು.

ಮಹಾರಾಣನ ಅನುಮತಿಯ ಮೇರೆಗೆ ಅಲ್ಲಾವುದ್ದೀನನಿಗೆ ಉತ್ತರವು ಕಳುಹಿಸಲ್ಪಟ್ಟಿತು. ಅಲ್ಲಾವುದ್ದೀನನು ಸಂತುಷ್ಟನಾದನು. ಅವನು, ರಜಪೂತರು, ಅದರಲ್ಲಿಯೂ ಮಹಾ ಅಭಿಮಾನಿಯಾದ ಪದ್ಮಿನಿಯು ಈ ವಿಚಾರವನ್ನು ಇಷ್ಟು ಸುಲಭವಾಗಿ ಒಪ್ಪಿಕೊಳ್ಳಬಹುದೆಂದು ಯೋಚಿಸಿರಲಿಲ್ಲ. ಪದ್ಮಿನೀದೇವಿಯು ಒಮ್ಮಿಂದೊಮ್ಮೆ ಈ ವಿಚಾರವನ್ನು ಒಪ್ಪಿಕೊಂಡಳೆಂಬುವನ್ನು ಕೇಳಿ ಅವನಿಗೆ ಆಶ್ಚರ್ಯವೆನಿಸಿತು; ಅವನ ಮನಸ್ಸಿನಲ್ಲಿ ಇನ್ನೊಂದು ದುಷ್ಟ ಭಾವನೆಯೂ ಉದಯವಾಯಿತು. 'ಪದ್ಮಿನಿಯು ತನ್ನನ್ನು ನೋಡಲು ಉತ್ಸುಕಳಾಗಿರುವಳೇ? ಅವಳು ತನ್ನಲ್ಲಿ ಅನುರಕ್ತಳೇ?' ಎಂಬ ಸಂಶಯದಿಂದ ಅವನ ಮನಸ್ಸು ಚಂಚಲವಾಯಿತು. ಹೇಗಾದರೂ ಮಾಡಿ ಈ ರಜಪೂತರನ್ನು ಬಗ್ಗುಬಡಿದರೆ ಪದ್ಮಿನಿಯು ಸಹಜವಾಗಿ ತನ್ನವಳಾಗುವಳೆಂದು ಅವನು ಭಾವಿಸಿಕೊಂಡನು.

ಪತಿವ್ರತಾ ಶಿರೋಮಣಿಯಾದ ಪದ್ಮಿನೀದೇವಿಯು ತನ್ನ ಕರ್ತವ್ಯಪಾಲನಕ್ಕಾಗಿ ನಿರುಪಾಯಳಾಗಿ ಈ ವಿಚಾರವನ್ನು ಒಪ್ಪಿಕೊಂಡಳೆಂಬುದು ಆ ಮೂಢನಿಗೇನು ಗೊತ್ತು? ಪತಿಯೇ ಪರದೇವತೆಯೆಂದು ತಿಳಿದಿದ್ದ ಪದ್ಮಿನಿಯ ಕುಲಶೀಲಗಳನ್ನು ಈ ನೀಚನು ಎತ್ತಬಲ್ಲನು? ಅನೇಕ ವಿಘ್ನಗಳಿಂದ ಮಲಿನವಾಗಿದ್ದ ಪದ್ಮಿನಿಯ ಮೇಲಿನ ಅವನ ಮನಸ್ಸಿನ ಮೋಹವು ಈಗ ಪುನಃ ಉಜ್ವಲವಾಯಿತು. ಅವನು, ನಾನು ಇಷ್ಟು ಅವಸರ ಮಾಡಿ ಅರ್ಧ ಸೈನಿಕರನ್ನು ತಿರುಗಿ ಕಳುಹಿಸಿ ಮೂರ್ಖತನ ಮಾಡಿದೆನೆಂದು ಭಾವಿಸಿಕೊಂಡನು.

ಮೋಹದಲ್ಲಿ ತೊಳಲುತ್ತಿದ್ದ ಅಲ್ಲಾವುದ್ದಿನನು ಮೊದಲು ಪದ್ಮಿನಿಯ ರೂಪಲಾವಣ್ಯಗಳನ್ನು ಕನ್ನಡಿಯಲ್ಲಿಯಾದರೂ ನೋಡಿ ಆನಂದಪಡುವೆನೆಂದು ಅಂದುಕೊಂಡು ರಜಪೂತರ ಹೇಳಿಕೆಗೆ ಒಪ್ಪಿದನು. ಅವನು ಅಲ್ಪಪರಿವಾರದೊಡನೆ ದುರ್ಗದೊಳಗೆ ಬರಬೇಕೆಂದು ಗೊತ್ತಾಯಿತು. ಯುದ್ಧವು ನಿಂತಿತು.

ಮಾರನೆಯದಿನ ಗೊತ್ತಾದಂತೆ ಅಲ್ಲಾವುದ್ದೀನನು ಒಳಗೆ ಬರಲು ಭೀಮಸಿಂಹನು ಅವನನ್ನು ಕರೆದುಕೊಂಡು ಪದ್ಮಿನಿಯ ಅರಮನೆಗೆ ಹೋದನು. ಅಲ್ಲಿ ತುಸು ಹೊತ್ತಿನವರೆಗೆ ಗಾಯನ ನರ್ತನಾದಿಗಳು ನಡೆದ ಬಳಿಕ ಭೀಮಸಿಂಹನು ಅವನನ್ನು ಕರೆದುಕೊಂಡು ಮತ್ತೊಂದು ಕೋಣೆಗೆ ಹೋದನು. ಅಲ್ಲಿ ಬಾಗಿಲಿನ ಎದುರಿಗೆ ಒಂದು ನಿಲುವುಗನ್ನಡಿಯನ್ನಿಟ್ಟಿದ್ದರು. ಅಲ್ಲಾವುದ್ದೀನನು ಆ ಕನ್ನಡಿಯ ಎದುರಿಗೆ ನಿಂತುಕೊಂಡನು. ಅವನ ಹಿಂದೆ ನಿಂತಿದ್ದ ಭೀಮಸಿಂಹನು ಸಂಜ್ಞೆಯನ್ನು ಮಾಡಿದ ಕೂಡಲೆ ಎದುರಿಗಿದ್ದ ಕನ್ನಡಿಯ ಮೇಲಿನ ಪರದೆಯು ಪ್ರತಿಬಿಂಬವು ಸರಿಯಿತು. ಅಲ್ಲಾವುದ್ದೀನನು ಕ್ಷಣಹೊತ್ತು ತಟಸ್ಥನಾಗಿ ನಿಂತುಬಿಟ್ಟನು! ಅವನ ದೇಹವು ಶಿಲಾಪ್ರತಿಮೆಯಂತಾಗಿ ಹೋಯಿತು. ಎಂಥ ಮನೋಹರವಾದ ರೂಪವದು! ಅಲ್ಲಾವುದ್ದೀನನಿಗೆ, ಅಂತರಂಗದಲ್ಲಿ ಮನೋಹರವಾದೊಂದು ವೀಣೆಯು ಸ್ಪಷ್ಟವಾಗಿ ನುಡಿಯುತ್ತಿದ್ದಂತೆ ಭಾಸವಾಯಿತು. ಆ ಮೃದುಮಧುರವಾದ ವೀಣೆಯ ಧ್ವನಿಯು ಬರಬರುತ್ತ ಸ್ಪಷ್ಟವಾಗುತ್ತ ಬಂದಂತೆ ತೋರಿತು! ಕೊನೆಗೆ ಆ ಧ್ವನಿಯು ಸುಸ್ಪಷ್ಟವಾಗಿ ಹೇಳಿದಂತೆ ಭಾಸವಾಯಿತು. "ಅಲ್ಲಾವುದ್ದೀನ, ನೀನು ಈ ಜಗತ್ತಿನಲ್ಲಿ ಹುಟ್ಟಿದ್ದು ವ್ಯರ್ಥ!"

ಅವನ ಮೋಹಮುಗ್ಧವಾದ ಮನೋದೇವತೆಯೇ ಈ ಮಾತನ್ನು ಆಡಿರಬಹುದೇ? ಅವನು ಈ ಧ್ವನಿಯನ್ನು ಕೇಳಿದವನೇ ಸ್ಮೃತಿಹೀನನಾಗಿ ಬಿಟ್ಟನು. ಯಾವದೋ ಒಂದು ಅಜ್ಞಾತವಾದ ಶಕ್ತಿಯು ಅವನನ್ನು ಎದುರಿಗಿದ್ದ ದರ್ಪಣದ ಕಡೆಗೆ ಎಳೆದೊಯ್ಯುತೊಡಗಿತು. ಅವನು ಆ ದರ್ಪಣದ ಬಳಿಗೆ ಹೋಗಿ ಅದರ ಮೇಲೆ ಮುಕ್ಕರಿಸಿ ಬೀಳಲಾದನು!

ಇದನ್ನು ನೋಡಿ ಭೀಮಸಿಂಹನು·—"ಶಾಹೇನ್‌ಶಾ! ಇದೇನು ಮಾಡುತ್ತೀರಿ? ಸಾವಧಾನ! ಪದ್ಮಿನಿಯನ್ನು ಅವಮಾನವಡಿಸಲಾಗದು!" ಎಂದನು.

ಅಲ್ಲಾವುದ್ದೀನನು ಬೆಚ್ಚಿ ಹಿಂಜರಿದು ನಿಂತನು. ಎದುರಿಗಿದ್ದ ಕನ್ನಡಿಯಲ್ಲಿದ್ದ ಭುವನಮೋಹಿನಿಯಾದ ರಮಣಿಯ ಪ್ರತಿಬಿಂಬವು ಈಗ ಅಲ್ಲಿರಲಿಲ್ಲ. ಅದರ ಸ್ಥಳದಲ್ಲಿ ಒರೆಗಳೆದ ಖಡ್ಗವನ್ನು ಹಿರಿದು ನಿಂತಿದ್ದ ಉಜ್ವಲವಾದ ಕ್ಷತ್ರಿಯ ತೇಜದಿಂದೊಪ್ಪುವ ಬಾಲಕನ ಛಾಯೆಯು ಸ್ಥಾಪಿತವಾಗಿತ್ತು! ಅಲ್ಲಾವುದ್ದೀನನಿಗೆ ಅದು ಯಾರ ಪ್ರತಿಬಿಂಬವೆಂಬುದು ತಿಳಿಯಲಿಲ್ಲ. ಆದರೆ ಭೀಮಸಿಂಹನಿಗೆ ತಿಳಿಯಿತು. ಅದು ಸೇನಾಪತಿ ಬಾದಲನದಾಗಿದ್ದಿತು. ಭೀಮಸಿಂಹನು ಅಲ್ಲಾವುದ್ದೀನನ ಕೈಯನ್ನು ಹಿಡಿದುಕೊಂಡು ಅವನನ್ನು ಮತ್ತೊಂದು ಕೋಣೆಗೆ ಕರೆದೊಯ್ದನು. ಮತ್ತು,—"ಬಾದಷಹರೇ! ಬಾಲಕನ ಅಪರಾಧವನ್ನು ಕ್ಷಮಿಸಬೇಕು! ಅತಿಥಿಗಳನ್ನು ಅವಮಾನವಡಿಸುವುದು ರಜಪೂತರಿಗೆ ಧರ್ಮವಲ್ಲ. ಈ ವಿಚಾರವು ಆ ಬಾಲಕನಿಗಿನ್ನೂ ತಿಳಿಯದು!" ಎಂದನು.

ಅಲ್ಲಾವುದ್ದೀನನು ಸುಮ್ಮನೆ ರಾಣನ ಸಂಗಡ ಹೊರಗೆ ಬಂದು ಕುದುರೆಯನ್ನು ಏರಿ ಹೊರಟನು. ಅವನ ಅಂತರಂಗದಲ್ಲಿ ಉಂಟಾದ ಮಹಾ ಉದ್ವೇಗವು ಇನ್ನೂ ಶಾಂತವಾಗಿರಲಿಲ್ಲ. ಅದರಿಂದಲೇ ಅವನಿಗೆ ಭೀಮಸಿಂಹನ ಮಾತುಗಳ ಅರ್ಥವು ಸರಿಯಾಗಿ ಆಗಲಿಲ್ಲ.

ದುರ್ಗದ ಹೊರಗೆ ಬರುವವರೆಗೂ ಅಲ್ಲಾವುದೀನನು 'ಪಿಟ್' ಎಂದು ಮಾತಾಡಲಿಲ್ಲ. ಅವನ ಮನಸ್ಸಿನಲ್ಲಿ ರಜಪೂತರ ಸರಳವಾದ ಸ್ವಭಾವ, ಮನಸ್ಸಿನ ಉದಾರತೆ, ಅತುಲವಾದ ಶೌರ್ಯ ಇವು ತಕ್ಕಮಟ್ಟಿಗೆ ಪ್ರತಿಬಿಂಬಿತವಾಗಿದ್ದುವು. ಹಿಂದೆ ಎಂದೂ ಹುಟ್ಟದೆ ಇದ್ದಂಥ ಕೃತಜ್ಞತೆಯೆಂಬ ಸದ್ಗುಣದ

ಅಂಕುರವು ಈಗ ಒಮ್ಮೆ ಅವನ ಅಂತರಂಗದಲ್ಲಿ ಉದಯವಾಗಿತ್ತು. ಆದರೆ ಪರಕ್ಷಣದಲ್ಲಿಯೇ ಪದ್ಮಿನಿಯ ರೂಪಲಾವಣ್ಯಗಳ ದರ್ಶನದಿಂದುಂಟಾದ ಮೋಹವೆಂಬ ದುರ್ಭಾವನೆಯು ಆ ಕೃತಜ್ಞತೆಯ ಮೊಳಕೆಯನ್ನು ಕಿತ್ತೊಗೆಯಲು ಪ್ರಯತ್ನಿಸುತ್ತಿತ್ತು. ಆದುದರಿಂದ ಅವನ ಮನಸ್ಸಿನಲ್ಲಿ ಅಲ್ಲೋಲಕಲ್ಲೋಲವುಂಟಾಗಿತ್ತು. ಕೊನೆಗೆ ಆ ದುರ್ಭಾವನೆಯೇ ಜಯವನ್ನು ಹೊಂದಿತು.

ಅಲ್ಲಾವುದ್ದೀನನು ಪದ್ಮಿನಿಯ ರೂಪಲಾವಣ್ಯಗಳನ್ನು ಸ್ಮರಿಸಿಕೊಂಡ ಹಾಗೆ ಅವನ ಮನಸ್ಸು ಅದರೊಡನೆ ತನ್ಮಯವಾಗಹತ್ತಿತು. ಅವನು ಭಾವಿಸಿಕೊಂಡುದೇನಂದರೆ—"ಈ ಸಂಸಾರ, ಈ ಸಾಮ್ರಾಜ್ಯ, ಈ ಐಶ್ವರ್ಯ ಇವೆಲ್ಲಾ ಒಂದು ಕಡೆಗೆ; ಕೇವಲ ಪದ್ಮಿನಿಯೊಬ್ಬಳೇ ಒಂದು ಕಡೆಗೆ. ಪದ್ಮಿನಿಯ ಹೊರತಾಗಿ ಇವೆಲ್ಲಾ ಶೂನ್ಯವೇ ಸರಿ. ಪದ್ಮಿನಿಯಿಲ್ಲದಿದ್ದರೆ ನನಗೆ ಈ ಜಗತ್ತು ಅಂಧಕಾರಮಯವೆನಿಸುವುದು. ದಿಲ್ಲಿಯ ಸಿಂಹಾಸನದ ಬಲಗಡೆಗೆ ಈ ರತ್ನದ ದೀಪವು ಜ್ವಲಿಸುತ್ತಿದ್ದರೆ ಮಾತ್ರ ಅದು ಸಿಂಹಾಸನ. ಇಲ್ಲದಿದ್ದರೆ ಆ ರಾಜಧಾನಿಯು ಕೇವಲ ಶ್ಮಶಾನದಂತೆಯೇ ಸರಿ; ಆ ಸಿಂಹಾಸನವು ಮರುಭೂಮಿಯೊಳಗಿನ ಬಂಡೆಗಲ್ಲಿನಂತೆಯೇ ಸರಿ. ಸರ್ವಸ್ವವನ್ನೂ ತೊರೆಯಬಲ್ಲೆನು. ಆದರೆ ಪದ್ಮಿನಿಯನ್ನು ಮರೆಯಲಾರೆನು."

ಹೀಗೆ ಯೋಚಿಸುತ್ತ ಯೋಚಿಸುತ್ತ ಅಲ್ಲಾವುದ್ದೀನನು ದುರ್ಗದ ಏಳನೆಯ ಮಹಾದ್ವಾರವನ್ನು ದಾಟಿದನು. ಅವನ ಅನುಚರರನೇಕರು ಒರೆಗಳೆದ ಖಡ್ಗವನ್ನು ಧರಿಸಿ ಅವನ ಸುತ್ತಲೂ ನಡೆಯುತ್ತಿದ್ದರು ಬಳಿಯಲ್ಲಿಯೇ ಭೀಮಸಿಂಹನೂ ಇದ್ದನು. ಅಲ್ಲಾವುದ್ದೀನನು ಒಮ್ಮೆ ಮುಖವೆತ್ತಿ ಭೀಮಸಿಂಹನ ಮುಖವನ್ನು ನೋಡಿದನು. ಆಗ ಅಲ್ಲಾವುದ್ದೀನನ ಮುಖವಲ್ಲಿ ಒಂದು ಪೈಶಾಚಿಕ ವಿಚಾರದ ಛಾಯೆಯು ಸ್ಪಷ್ಟವಾಗಿ ತೋರುತ್ತಿತ್ತು!

ದುರ್ಗದ ಮಹಾದ್ವಾರವನ್ನು ದಾಟಿ ತುಸು ದೂರ ಹೋದಬಳಿಕ ಭೀಮಸಿಂಹನು,—"ಬಾದಷಹರೇ! ಇನ್ನು ನಮ್ಮ ಕೆಲಸವು ತೀರಿದಂತಾಯಿತು. ತಿರುಗಿ ಹೋಗುತ್ತೇನೆ. ಪ್ರೀತಿಯಿರಲಿ." ಎಂದು ವಿನಯದಿಂದ ನುಡಿದು ಮರಳಿ ಹೊರಟನು. ಅಲ್ಲಾವುದ್ದೀನನು ತಿರುಗಿನಿಂತು "ಮಹಾರಾಜ!" ಎಂದನು.

ಭೀಮಸಿಂಹನೂ ಹೊರಳಿ ನಿಂತು ಅಪ್ಪಣೆಯೇನೆಂದು ಬೆಸಗೊಂಡನು. ಅಲ್ಲಾವುದ್ದೀನನು ಸುಮ್ಮ ಸುಮ್ಮನೆ ಅತ್ತಿತ್ತ ನೋಡಿ " ತಮ್ಮ ಸೌಜನ್ಯವನ್ನು ನೋಡಿ ನನಗೆ ಅತ್ಯಂತ ಆನಂದವಾಯಿತು. ಆದರೆ ಉಪಾಯವಿಲ್ಲ. ಪದ್ಮಿನೀ ರಾಣಿಯನ್ನು ಮರೆಯಲಾರೆನು. ನಾನು ಜೀವದಿಂದಿರುವವರೆಗೂ ತಮ್ಮೊಡನೆ ಸ್ನೇಹಭಾವದಿಂದ ನಡೆದುಕೊಳ್ಳಬೇಕೆನ್ನುತ್ತೇನೆ ಈ ಬಂಧುತ್ವವನ್ನು ಸ್ಥಿರಪಡಿಸುವುದಕ್ಕಾಗಿ ತಾವು ನನಗೆ ಪದ್ಮಿನಿಯನ್ನು ಕೊಡಬೇಕು. " ಎಂದು ನಿರ್ಲಜ್ಜನಾಗಿ ನುಡಿದನು ಕಾಮಾತುರನಿಗೆ ಭಯವೆಲ್ಲಿದೆ? ನಾಚಿಕೆಯೆಲ್ಲಿದೆ?

ಭೀಮಸಿಂಹನು ಅವಡುಗಚ್ಚಿ ತನ್ನ ಖಡ್ಗವನ್ನು ಹಿರಿದನು. ಅಲ್ಲಾವುದ್ದೀನನ ಪ್ರಾಮಾಣಿಕತನದ ವಿಷಯವಾಗಿ ಅವನಿಗೆ ಈ ಮೊದಲೇ ಸಂಶಯವುಂಟಾಗಿದ್ದಿತು. ಆದರೆ ಆ ನೀಚನು ಈ ರೀತಿಯಾಗಿ ನ್ಯಾಯದೇವತೆಯ ತಲೆಯಮೇಲೆ ಪ್ರತ್ಯಕ್ಷವಾಗಿ ಕಾಲನ್ನಿಡಬಹುದೆಂದು ಮಾತ್ರ ಅವನು ಭಾವಿಸಿರಲಿಲ್ಲ. ಅವನು " ಬಾದಷಹ, ನಾಲಿಗೆಯನ್ನು ಬಿಗಿಹಿಡಿದು ಮಾತಾಡೋಣಾಗಲಿ. ಜಗತ್ತಿನಲ್ಲಿ ಧರ್ಮ, ಕರ್ಮ, ಸತ್ಯ, ಕೃತಜ್ಞತೆ ಮುಂತಾದ ಸದ್ಗುಣಗಳಿಗೆ ಇನ್ನೂ ಮರ್ಯಾದೆಯಿರುವುದು ಬಾಯಿಗೆ ಬಂದಂತೆ ಮಾತಾಡುವುದು ತಮಗೆ ಸರಿಯಲ್ಲ. ಹೀಗೆ ಇನ್ನೊಮ್ಮೆ—"

ಭೀಮಸಿಂಹನ ಮಾತು ಅರ್ಧಕ್ಕೇ ನಿಂತಿತು. ಅಲ್ಲಾವುದ್ದೀನನು ತನ್ನ ಅನುಚರರಿಗೆ ಏನೋ ಸಂಜ್ಞೆ ಮಾಡಿದನು. ಇಬ್ಬರು ಪಠಾಣರು ಬಂದು ಭೀಮಸಿಂಹನನ್ನು ಕುದುರೆಯಿಂದ ಕೆಳಗೆಳೆದರು. ಭೀಮಸಿಂಹನು ಈ ಅಕಲ್ಪಿತವಾದ ಘಟನೆಯಿಂದ ಬೆಪ್ಪಾಗಿ ನಿಂತನು. ಅವನು ಮನಸ್ಸು ಮಾಡಿದ್ದರೆ ಒಂದೇ ಆಘಾತದಿಂದ ಅವರಿಬ್ಬರನ್ನೂ ಹೊಡೆದು ಕೆಡವಬಹುದಾಗಿತ್ತು. ಆದರೆ ಮೊದಲು ಅವನು ಪ್ರಜ್ಞಾಸ್ಥಿತಿಯಲ್ಲಿರಲಿಲ್ಲ. ಬಳಿಕ ದೂರದಿಂದ ನೂರಾರು ಪಠಾಣ ಸವಾರರು ತನ್ನ ಕಡೆಗೆ ಧಾವಿಸಿ ಬರುವುದನ್ನು ನೋಡಿ ಅವನು ಅಂಥ ಸಾಹಸಕ್ಕೆ ಹೋಗಲಿಲ್ಲ. ದುರ್ಗದ ಬಾಗಿಲಲ್ಲಿದ್ದ ರಜಪೂತ ರಾಜದೂತರೂ ಹೆಚ್ಚಿಗೆ ಇರಲಿಲ್ಲ; ಅಲ್ಲದೆ ಅವರು ದೂರದಲ್ಲಿದ್ದರು. ಅದರಿಂದ ಈ ಸಮಯದಲ್ಲಿ ತಾನು ಯುದ್ಧಮಾಡುವ ಗೋಜಿಗೆ ಹೋಗುವುದು ಸರಿಯಲ್ಲವೆಂದು ತಿಳಿದು ಭೀಮಸಿಂಹನು ಸುಮ್ಮನಾದನು. ಪಠಾಣರು ಅವನ ಕೈಗೆ ಸಂಕೋಲೆಯನ್ನು

ತೊಡಿಸಿ ತಮ್ಮ ಶಿಬಿರದ ಕಡೆಗೆ ತೆಗೆದುಕೊಂಡು ನಡೆದರು! ಆಗ ಭೀಮ ಸಿಂಹನು— "ಅಯ್ಯೋ ದುಷ್ಟರೇ, ಒಮ್ಮೆ ನನ್ನನ್ನು ಬಿಟ್ಟಿದ್ದರೆ!—" ಮುಂದಿನ ಶಬ್ದಗಳು ಅವನ ಮುಖದಿಂದ ಹೊರಡಲಿಲ್ಲ. ಬಾಯೊಳಗಿನ ಹಲ್ಲುಗಳ 'ಕಡ ಕಡ' ಎಂಬ ಶಬ್ದವು ಮಾತ್ರ ಕೇಳಿಸಿತು. ನೆರೆಯಲ್ಲಿದ್ದ ಪಠಾಣರಿಗೆ ಅವನು ಕಣ್ಣುಗಳಿಂದ ಕಿಡಿಯನ್ನು ಕಾರುವನೇನೋ ಎಂಬಂತೆ ತೋರಿತು. ಆದರೆ ಏನು ಪ್ರಯೋಜನ! ಮೃಗರಾಜನು ಬಲೆಯಲ್ಲಿ ಸಿಕ್ಕಿಬಿದ್ದಿದ್ದನು. ದುರ್ಗದ ದ್ವಾರದಲ್ಲಿದ್ದ ಕೆಲವರು ರಜಪೂತರು ಇದನ್ನು ನೋಡಿದರು; ಆದರೆ ಅವರಿಗೆ ದುರ್ಗದ ಬಾಗಿಲನ್ನು ಬಿಟ್ಟು ಮುಂದೆ ಬರಲು ರಾಜಾಜ್ಞೆಯಿರಲಿಲ್ಲ. ಅವರ ಚೀತ್ಕಾರವನ್ನು ಕೇಳಿ ನೆರೆಯಲ್ಲಿದ್ದ ಕೆಲವರು ರಜಪೂತ ಸವಾರರು ಓಡಿ ಬಂದರು. ಆದರೆ ಅದರಿಂದ ಪ್ರಯೋಜನವಾಗಲಿಲ್ಲ. ಪಠಾಣರು ಬೇಟೆಯನ್ನು ತೆಗೆದುಕೊಂಡು ತಮ್ಮ ಶಿಬಿರಕ್ಕೆ ಹೋಗಿ ಬಿಟ್ಟಿದ್ದರು. ಅವರು ತಿರುಗಿ ಬಂದು ತಡಮಾಡದೆ ದುರ್ಗದ ಗೋಡೆಯನ್ನೇರಿ ರಣಭೇರಿಯನ್ನು ಬಾರಿಸಿದರು. ಆ ಭೇರಿಯ ನಾದದಿಂದ ಹಠಾತ್ತಾಗಿ ಚಿತ್ತೂರು ನಗರವೆಲ್ಲ ಮಹಾ ಭಯಭೀತಿ ಗಳಿಂದ ಚಂಚಲವಾಗಿ ಹೋಯಿತು! ಪಠಾಣರು ವಿಶ್ವಾಸಘಾತಕತನದಿಂದ ಭೀಮಸಿಂಹನನ್ನು ಹಿಡಿದೊಯ್ದರೆಂಬ ದುರ್ವಾರ್ತೆಯು ಕ್ಷಣಮಾತ್ರದಲ್ಲಿ ದುರ್ಗ ದಲ್ಲೆಲ್ಲ ಹಬ್ಬಿತು. ರಜಪೂತ ಸರದಾರರು ಕೋಪ-ಸಂತಾಪಗಳಿಂದ ಉರಿ ದುರಿದು ಬಿದ್ದರು.

ಯಾವುದೋ ಒಂದು ಪ್ರಕಾರದ, ಅಜ್ಞಾತವಾದ, ವಿಘ್ನದ ಭೀತಿಯಿಂದ ಮನಸ್ಸಿಗೆ ಸಮಾಧಾನವಿಲ್ಲದೆ ಕುಳಿತುಕೊಂಡಿದ್ದ ಪದ್ಮಿನಿಯು ಈ ಗದ್ದಲವನ್ನು ಕೇಳಿ ಹೊರಗೆ ಬಂದು ಏನೆಂದು ಕೇಳಿದಳು. ರಾಜದೂತರು ಭೀತಿಯಿಂದಲೂ ಕೋಪಸಂತಾಪಗಳಿಂದಲೂ ತೊದಲುತ್ತ "ಅಲ್ಲಾವುದ್ದೀನ, ಯವನ! ನಮ್ಮ ರಾಣರವರನ್ನು ಹಿಡಿ— " ಮುಂದೆ ಅವರ ಬಾಯಿಂದ ಶಬ್ದಗಳು ಹೊರಡಲಿಲ್ಲ.

ಪದ್ಮಿನಿಯು ಮುಂದಿನ ಮಾತುಗಳನ್ನು ಕೇಳಲೂ ಇಲ್ಲ; ದುಃಖಾತಿರೇಕ ದಿಂದ ಸ್ಮೃತಿತಪ್ಪಿ ಬಿದ್ದುಬಿಟ್ಟಳು. ಪರಿಚಾರಿಕೆಯರು ಬಂದು ಅವಳನ್ನು ಎಬ್ಬಿಸಿ ಒಳಗೆತೆಗೆದುಕೊಂಡುಹೋಗಿ ಮಲಗಿಸಿ ಶೈತ್ಯೋಪಚಾರಗಳನ್ನು ನಡೆಯಿಸಿದರು.

# ನಾಲ್ಕನೆಯ ಖಂಡ

## ಮುಯ್ಯಿಗೆ ಮುಯ್ಯಿ

### ಮೊದಲನೆಯ ಪರಿಚ್ಛೇದ

ಮಾರನೆಯ ದಿನ ಮಧ್ಯಾಹ್ನದ ಮೇಲೆ ಪದ್ಮಿನಿಯು ತನ್ನ ಭವಿತವ್ಯತೆಯನ್ನು ಯೋಚಿಸುತ್ತ ಕುಳಿತುಕೊಂಡಿದ್ದಳು. ಅದೇ ಸಮಯದಲ್ಲಿ ನೆರೆಯ ಕೋಣೆಯಲ್ಲಿ ಕುಳಿತು ಇಬ್ಬರು ದಾಸಿಯರು ಮಾತಾಡುತ್ತಲಿದ್ದರು. ಅವರವರ ಸಂಭಾಷಣೆಯಿಂದ ಅಲ್ಲಾ ವುದ್ದೀನನು, ರಾಣಾಲಕ್ಷ್ಮಣಸಿಂಗನಿಗೆ, ಪದ್ಮಿನಿಯನ್ನು ತಡಮಾಡದೆ ತಂದೊಪ್ಪಿಸಬೇಕೆಂತಲೂ ಇಲ್ಲವಾದರೆ ಭೀಮಸಿಂಹನನ್ನು ಪಂಜರದಲ್ಲಿ ಸೆರೆಹಾಕಿ ದಿಲ್ಲಿಗೆ ಒಯ್ದು ಅರಮನೆಯ ಮಹಾದ್ವಾರದಲ್ಲಿ ಇರಿಸುವೆನೆಂತಲೂ ಪತ್ರ ಬರೆದಿರುವನೆಂಬ ಸಂಗತಿಯು ಪದ್ಮಿನಿಗೆ ತಿಳಿದುಬಂದಿತು.

ಪದ್ಮಿನೀದೇವಿಯು ಈ ಸಂಗತಿಯನ್ನು ಕೇಳಿ ಅತ್ಯಂತ ಶೋಕಾಕುಲಳಾದಳು. ಅವಳಿಗೆ ಏನು ಮಾಡಬೇಕೋ ತಿಳಿಯದಾಯಿತು. ಅವಳು ನೆರೆಯಲ್ಲಿಯೇ ತೂಗಾಡುತ್ತಿದ್ದ ಭೀಮಸಿಂಹನ ಖಡ್ಗವನ್ನು ತೆಗೆದುಕೊಂಡಳು. ಆಗ ಅದೇ ಆಧಾರಕ್ಕೆ ತೂಗಗಟ್ಟಿದ ಢಾಲು ದೊಪ್ಪೆಂದು ಕೆಳಗೆ ಬಿದ್ದಿತು. ನೆರೆಯ ಕೊಠಡಿಯಲ್ಲಿದ್ದ ದಾಸಿಯರು ಆ ಧ್ವನಿಯನ್ನು ಕೇಳಿ ಪದ್ಮಿನಿಯ ಕೋಣೆಗೆ ಒಂದರು. ಒಂದರಕ್ಷಣ ತಡವಾಗಿದ್ದರೆ ಸಕಲವೂ ವ್ಯರ್ಥವಾಗಿ ಹೋಗುತ್ತಿತ್ತು; ಚಿತ್ತೂರಿನ ಇತಿಹಾಸವೇ ವಿಪರೀತವಾಗಿ ಹೋಗುತ್ತಿತ್ತು! ಪದ್ಮಿನೀರಾಣಿಯು ತನ್ನ ಪತಿಯ ಖಡ್ಗವನ್ನು ಚುಂಬಿಸಿ ಅದನ್ನು ತನ್ನ ಉದರದಲ್ಲಿ ಚುಚ್ಚಿಕೊಳ್ಳಲು ಸಿದ್ಧಳಾಗಿದ್ದಳು! ದಾಸಿಯರು ಧಾವಿಸಿ ಬಂದು ಅವಳನ್ನು ತಡೆದರು. ಅವರಲ್ಲಿ ವೃದ್ಧೆಯಾದವಳೊಬ್ಬಳು— "ತಾಯೀ, ನಾವು ಇಂದಿನ

ವರೆಗೂ ನಿಮ್ಮನ್ನು ಕ್ಷತ್ರಿಯ ಕುಮಾರಿಯೆಂದು ಭಾವಿಸಿದ್ದೆವು; ನಿಮ್ಮಲ್ಲಿ ಸ್ವಲ್ಪ ವಾದರೂ ಕ್ಷತ್ರಿಯತ್ವದ ಲಕ್ಷಣವು ಇರಬಹುದೆಂದು ಯೋಚಿಸಿದ್ದೆವು. ಆದರೆ ಇಂದಿನ ಈ ಆಚರಣೆಯು ಕ್ಷತ್ರಿಯನ ಪುತ್ರಿಯಾಗಿ ಕ್ಷತ್ರಿಯನ ಕೈಹಿಡಿದ ವೀರಳಿಗೆ ಒಪ್ಪುವಂಥದಲ್ಲ! ಇದು ವೀರತ್ವದ ಲಕ್ಷಣವಲ್ಲ; ಪೈಶಾಚಿಕವಾದ ನಿಷ್ಠುರತೆ! ಹೀಗೆ ಹೇಡಿಗಳಂತೆ ಆತ್ಮಹತ್ಯೆ ಮಾಡಿಕೊಂಡರೆ ಪ್ರಯೋಜನವೇನು ? ದುಷ್ಟ ಯವನನ ನೀಚತನಕ್ಕೆ ತಕ್ಕ ಪ್ರತೀಕಾರವನ್ನು ಮಾಡಿದರೆ ಮಾತ್ರ ಸರಿಯಾದ ಕೆಲಸ ಮಾಡಿದ ಹಾಗಾಗುವುದು" ಎಂದು ಆವೇಶದಿಂದ ನುಡಿದಳು.

ಪದ್ಮಿನಿಯು ದಾಸಿಯ ಮಾತುಗಳನ್ನು ಅನಿಮಿಷನೇತ್ರೆಯಾಗಿ ಕೇಳುತ್ತ ಕುಳಿತುಕೊಂಡಿದ್ದಳು. ಅವಳಿಗೆ ಆ ಮಾತುಗಳೂ ಸರಿಯಾಗಿ ತೋರಿದುವು. ಮನಸ್ಸಿನ ದುಃಖಾತಿರೇಕದಿಂದುಂಟಾದ ಅವಳ ಅವಿವೇಕಭಾವನೆಯು ಅಳಿದು ಹೋಗಿ ಆ ಸ್ಥಳದಲ್ಲಿ ವಿವೇಕಬುದ್ಧಿಯುಂಟಾಯಿತು. ಆದರೆ ಅದೂ ಹೆಚ್ಚು ಹೊತ್ತು ಉಳಿಯಲಿಲ್ಲ. ಅವಳು ತುಳಿದೆಬ್ಬಿಸಿದ ಸರ್ಪಿಣಿಯ ಹಾಗೆ ಬುಸುಗುಟ್ಟುತ್ತ "ಹಾ! ದುಷ್ಟ ಯವನನೇ, ನಿನ್ನ ಈ ನೀಚತನಕ್ಕೆ ತಕ್ಕ ಪ್ರತಿಫಲವನ್ನು ತುಸು ದಿನಗಳಲ್ಲಿಯೇ ಪಡೆಯುವೆ. ಜಗತ್ತಿನಲ್ಲಿ ಈಶ್ವರನಿದ್ದಾನೆ; ಧರ್ಮವಿರುವುದು; ಆ ಪರಮೇಶ್ವರನಿಗೆ ನಿನ್ನಂಥ ನೀಚರನ್ನು ಶಿಕ್ಷಿಸುವ ಅಧಿಕಾರವೂ ಯೋಚನೆಯೂ ಇರುವುವು. ಅವನು ನಿನ್ನನ್ನು ಮರೆತುಬಿಟ್ಟಿಲ್ಲ. ಪಾಪದ ಕೊಡವು ತುಂಬಬೇಕು. ಆ ಮೇಲೆ ಅದು ಒಂದರಗಳಿಗೆಯೂ ನಿಲ್ಲದೆ ನರಕದ ಕುಂಡದಲ್ಲಿ ಮುಳುಗಿಹೋಗುವುದು. ನಿನ್ನ ಪಾಪದ ಕೊಡವು ತುಂಬುತ್ತ ಬಂದಿರುವುದು—" ಪದ್ಮಿನಿಯು ಇನ್ನು ಮಾತಾಡಲಾರದಂತಾದಳು.

ಪದ್ಮಿನಿಯು ಆತ್ಮಹತ್ಯೆ ಮಾಡಿಕೊಳ್ಳುವ ವಿಚಾರವನ್ನು ಬಿಟ್ಟುಬಿಟ್ಟಳು. ತನ್ನ ಪತಿಯನ್ನು ಬಿಡಿಸಿಕೊಳ್ಳುವ ಬಗೆ ಹೇಗೆ? ಚಿತ್ತೂರನ್ನು ಉದ್ಧರಿಸುವ ಮಾರ್ಗವೆಂತು? ಪಠಾಣನ ಮೇಲೆ ಸೇಡನ್ನು ತೀರಿಸಿಕೊಳ್ಳುವ ಹಂಚಿಕೆಯೇನು? ಎಂಬ ವಿಚಾರಗಳು ಅವಳ ಮನಸ್ಸನ್ನು ಆಕ್ರಮಿಸಿದುವು. ಆ ರಾತ್ರಿ ಅವಳು ಕಣ್ಣು ಮುಚ್ಚಿ ಮಲಗಲಿಲ್ಲ. ಕೆಲವು ಹೊತ್ತು ಹಾಸಿಗೆಯ ಮೇಲೆ ಬಿದ್ದು ಉರುಳಾಡುವಳು; ಕೆಲವು ಹೊತ್ತು ಕೋಣೆಯಿಂದ ಹೊರಗೆ ಬಂದು ಮಾಳಿಗೆ

ಯನ್ನು ಹತ್ತಿ ಒಮ್ಮೆ ನಿರ್ಮಲವಾದ ಆಕಾಶವನ್ನು ನೋಡುವಳು; ಒಮ್ಮೆ ಪಠಾಣನ ಶಿಬಿರದ ಕಡೆಗೆ ನೋಡುವಳು.

ಅವಳಿಗೆ ಪತಿಯ ಸಂಬಂಧವಾದ ಚಿಂತೆಯೊಂದೇ ಅಲ್ಲ; ಮುಂದೆ ಚಿತ್ತೂರಿನ ಅವಸ್ಥೆಯೇನು? ಎಂಬ ವಿಚಾರವೂ ಬರುವುದು. ಅವಳು ಕಾತರಳಾಗುವಳು. ಅವಳು ಯೋಚಿಸಿದಳೇನೆಂದರೆ:—"ಅಲ್ಲಾವುದ್ದೀನನು ನನ್ನ ಪತಿಯನ್ನು ಸೆರೆಯಲ್ಲಿಟ್ಟು ಅಷ್ಟರಿಂದಲೇ ಸಂತುಷ್ಟನಾಗಬಹುದೆಂಬುದು ಎಲ್ಲಿಯ ಮಾತು ! ರಾಣನ ಬಲಸ್ಥೈಯಂತಿದ್ದ ನನ್ನ ಪತಿಯ ಅವಸ್ಥೆಯು ಹೀಗಾದಮೇಲೆ ಚಿತ್ತೂರಿನ ಅರ್ಧಬಲವೇ ಕುಂದಿಹೋದಂತಾಯಿತು. ಈ ವಿಚಾರವು ಅಲ್ಲಾವುದ್ದೀನನಿಗೆ ಗೊತ್ತಿಲ್ಲನೆಂತಲ್ಲ ಅವನು ಸ್ವಲ್ಪ ದಿನಗಳಲ್ಲಿಯೇ ಚಿತ್ತೂರನ್ನು ವಶ ಮಾಡಿಕೊಂಡು, ಹಿಂದೂ ಅಬಲೆಯರ ಮಾನಗೇಡು ಮಾಡಿ, ಹಸುಳರನ್ನೂ ಬಲವಳಿದ ವೃದ್ಧರನ್ನೂ ಕೊಂದು ನಗರವನ್ನೆಲ್ಲ ಸುಟ್ಟು ಸೂರೆ ಮಾಡುವನು. ಅಹಹಾ ! ಇಷ್ಟೆಲ್ಲ ಅನರ್ಥಕ್ಕೆ ನಾನೇ ಕಾರಣಳಲ್ಲವೆ ? ವಿಧಾತನು ನನಗೆ ಇಂತಹ ರೂಪಲಾವಣ್ಯಗಳನ್ನು ಯಾಕೆ ಕೊಟ್ಟಿದ್ದಾನು ? ನಾನು ಆತ್ಮಹತ್ಯೆ ಮಾಡಿಕೊಂಡರೂ ಆ ನೀಚನು ಚಿತ್ತೂರನ್ನು ಬಿಟ್ಟು ಹೋಗುವನೆಂದು ನಂಬುವ ಬಗೆ ಹೇಗೆ ? ಅವನ ರಾಜ್ಯತೃಷ್ಣೆಯು ನನ್ನ ಮರಣದಿಂದ ತಗ್ಗುವುದೆಂತು ?"

ಅವಳು ಪುನಃ ಈ ರೀತಿಯಾಗಿ ವಿಚಾರ ಮಾಡಿದಳು:—"ಭೀಮಸಿಂಹನೊಬ್ಬನೇ ಚಿತ್ತೂರಿನ ಉದ್ಧಾರಕರ್ತನು ! ಅವನು ಎಂದು ತಿರುಗಿ ಬರುವನೋ ಅಂದೇ ಚಿತ್ತೂರಿನ ಉದ್ಧಾರಕ್ಕೆ ಮಾರ್ಗವು ದೊರೆತಂತಾಗುವದು. ಆದರೆ ಅವನು ಹೇಗೆ ತಿರುಗಿ ಬರಬೇಕು ? ಬಹಿರಂಗವಾಗಿ ಪಠಾಣರನ್ನು ಎದುರಿಸುವುದಂತೂ—ಅದೂ ಒಂದೂವರೆ ವರುಷದವರೆಗೆ ಈ ರೀತಿಯಾಗಿ ನಡೆದ ಮಹಾಸಂಗ್ರಾಮದ ತರುವಾಯ—ರಜಪೂತರಿಗೆ ಅಸಾಧ್ಯವೇ ಸರಿ. ಪಠಾಣನ ಲೆಕ್ಕವಿಲ್ಲದ ಸೇನೆಯ ಮುಂದೆ ಈ ಅಲ್ಪ ಸಂಖ್ಯಾಕವಾದ ರಜಪೂತ ಸೇನೆಯು ಏನನ್ನು ತಾನೇ ಮಾಡಬಲ್ಲುದು ? ಯಾರಾದರೂ ಗುಪ್ತ ವೇಷದಿಂದ ಹೋಗಿ ಸೆರೆಮನೆಯ ಕಾವಲುಗಾರರಿಗೆ ಹಣಕೊಟ್ಟು ಭೀಮಸಿಂಹನನ್ನು ಬಿಡಿಸಬಹುದೇ ?

ಆದರೆ ಅಂಥ ಕುಶಲತೆಯುಳ್ಳವರು ಯಾರು? ರಜಪೂತರು ವೀರರು; ಪ್ರಾಣಕ್ಕೆ ಅಂಜಿ ಹಿಂಜರಿಯುವವರಲ್ಲ; ಆದರೆ ಪ್ರಾಣಕೊಟ್ಟರೆ ಸದ್ಯಕ್ಕೆ ಪ್ರಯೋಜನವೇನು? ಅಂಥ ಸಾಹಸಿಗರ ಆವಶ್ಯಕತೆಯು ಈಗ ಇರುವುದಿಲ್ಲ. ಇದಕ್ಕೆ ಧೂರ್ತರೂ ಹೊತ್ತು ಬಂದಾಗ ನ್ಯಾಯಾನ್ಯಾಯಗಳನ್ನು ನೋಡದ ದಮನಕರೂ ಬೇಕು. ಇದು ಧರ್ಮವೀರರಾದ ರಜಪೂತರಿಗೆ ಸಾಧ್ಯವಾದ ಮಾತಲ್ಲ."

ಹೀಗೆ ಪದ್ಮಿನಿಯು ಬಹಳವಾಗಿ ಯೋಚಿಸಿದಳು. ಯಾವ ರೀತಿಯಿಂದ ವಿಚಾರಮಾಡಿದರೂ ಭೀಮಸಿಂಹನ ಬಿಡುಗಡೆಯ ಮಾರ್ಗವೇ ತೋರಲೊಲ್ಲದು.

ಪದ್ಮಿನಿಯ ಮನಸ್ಸಿನಲ್ಲಿ ಇನ್ನೂ ಅನೇಕ ವಿಚಾರಗಳು ಬಂದುವು. ಪಠಾಣನಿಗೆ ಆತ್ಮ ಸಮರ್ಪಣ ಮಾಡಿದರೆ ಹೇಗೆ? ಬೆರಳೊಳಗಿನ ವಜ್ರದ ಉಂಗುರವನ್ನು ದಿಟ್ಟಿಸಿ ನೋಡಿ, 'ಸಮಯ ಬಿದ್ದಾಗ ಇದರ ಉಪಯೋಗವಾದರೂ ಆದೀತು' ಎಂದುಕೊಂಡಳು. ಕೂಡಲೆ ಅವಳ ಮನಸ್ಸಿನಲ್ಲಿ ಮತ್ತೊಂದು ಸಂಶಯ ವುಂಟಾಯಿತು. ಪಠಾಣನು ಈ ನನ್ನ ದೇಹವು ತನ್ನ ವಶವಾದರೂ ಭೀಮಸಿಂಹನನ್ನು ಬಿಡದಿದ್ದರೆ ಹೇಗೆ? ವಿಶ್ವಾಸಘಾತಕನಲ್ಲಿ ವಿಶ್ವಾಸವಿಡುವ ಬಗೆಯೆಂತು? ಇನ್ನು ಉಪಾಯವೇನು?

ಹೀಗೆ ವಿಚಾರ ಮಾಡುತ್ತ ನಿಂತಿದ್ದಹಾಗೆ ಪೂರ್ಣಿಮೆಯ ಚಂದ್ರನು ಪಶ್ಚಿಮಾಕಾಶದ ಮೇರೆಯನ್ನು ಸಾರಿ ಅವಳ ಎದುರಿಗೆ ಬಂದನು. ತಂಗಾಳಿಯು ತೊನೆಯತೊಡಗಿತು. ಅವಳು ಒಮ್ಮೆ ಸಕಲ ಜನಾನಂದದಾಯಕನಾದ ಚಂದ್ರನನ್ನು ದಿಟ್ಟಿಸಿ ನೋಡಿದಳು. ಇದ್ದಕ್ಕಿದ್ದಹಾಗೆ ಅವಳ ಮುಖವು ಅರಳಿತು. "**ಶಠೇಶಾಠ್ಯಂ ಸಮಾಚರೇತ್**" ಎಂಬ ಶಬ್ದಗಳು ಅವಳ ಮುಖದಿಂದ ಹೊರಬಿದ್ದುವು. ಅವಳು—"ನೀಚ ಪಠಾಣನೇ, ನೀನು ಅಸ್ತ್ರಯುದ್ಧದಲ್ಲಿ ಬಹು ಜನರನ್ನು ಜಯಿಸಿರುವೆ, ಆದರೆ ಕಪಟಯುದ್ಧದಲ್ಲಿ ನೀನು ಈ ಬಾರಿ ಪದ್ಮಿನಿಯಿಂದ ಪರಾಭೂತನಾಗುವೆ" ಎಂದು ಸ್ಪಷ್ಟವಾಗಿ ನುಡಿದಳು.

ಆ ಬಳಿಕ ಪದ್ಮಿನಿಯು ತನ್ನ ಕೋಣೆಯೊಳಗೆ ಹೋಗಿ ನಿಶ್ಚಿಂತಳಾಗಿ ಮಲಗಿ ನಿದ್ದೆ ಹೋದಳು.

# ಎರಡನೆಯ ಪರಿಚ್ಛೇದ

ಮೂರನೆಯ ದಿನ ಮಧ್ಯಾಹ್ನದ ಸಮಯದಲ್ಲಿ ಪದ್ಮಿನಿಯು ತನ್ನ ಅರಮನೆಯ ಮುಂಗಡೆಯಲ್ಲಿ ಹಸನ್ಮುಖಿಯಾಗಿ ಯಾರ ದಾರಿಯನ್ನೋ ನೋಡುತ್ತ ನಿಂತಿದ್ದಳು. ಅಷ್ಟರಲ್ಲಿ ಬಾದಲನು ಅಲ್ಲಿಗೆ ಬರಲು—“ಏನು ಸೇನಾಪತೀ, ದರ್ಬಾರದ ಸಮಾಚಾರವೇನು ? ” ಎಂದು ಕೇಳಿದಳು.

**ಬಾದಲನು**—“ಅಮ್ಮಾ! ಇಂದೇ ನನ್ನ ಸೇನಾಪತಿಯ ಅಧಿಕಾರವು ಮುಗಿಯುವಂತೆ ತೋರುತ್ತದೆ. ನಿಮ್ಮನ್ನು ಒಂದು ಮಾತು ಕೇಳಿ ಹೋಗೋಣವೆಂದು ಬಂದೆನು. ಅಮ್ಮಾ! ಆ ಮಾತು ಸತ್ಯವೇನು ? ” ಎಂದು ವ್ಯಸನಾತಿರೇಕವನ್ನೂ ಮಿತಿಮೀರಿದ ಸಂತಾಪವನ್ನೂ ಅಭಿನಯಿಸುತ್ತ ಕೇಳಿದನು.

**ಪದ್ಮಿನಿ** —(ನಗುತ್ತ) ಯಾವ ಮಾತು, ಸೇನಾಪತಿ ?

**ಬಾದಲ:**—“ನೀವು ಪಠಾಣನ .....” ಮುಂದಿನ ಮಾತು ಅವನ ಬಾಯಿಯಿಂದ ಹೊರಡಲಿಲ್ಲ. ಅವನ ಹಣೆಯ ಮೇಲಿನ ನರಗಳು ಉಬ್ಬಿ ಹುರಿಗೊಂಡವು, ಕಣ್ಣುಗಳು ಅರಳಿದುವು; ಮುಖವು ಕೆಂಪಡರಿತು.

**ಪದ್ಮಿನಿ:**—ನಗುವೇ, ಹೌದು. ಇಷ್ಟು ದಿನ ಇಲ್ಲಿದ್ದುಕೊಂಡು ನಿಮ್ಮಂಥ ರಜಪೂತರ ಪರಾಕ್ರಮವನ್ನು ನೋಡಿದೆನು. ಇನ್ನು ಪಠಾಣರ ಶಿಬಿರಕ್ಕೆ ಹೋಗಿ ಅವರ ಶೌರ್ಯವನ್ನು ನೋಡಬೇಕೆನ್ನುತ್ತೇನೆ.

ಬಾದಲನು ಆಶ್ಚರ್ಯ—ವಿಸ್ಮಯ—ಕ್ರೋಧಗಳಿಂದ ಅಧೀರನಾಗಿ :— ಅಮ್ಮಾ! ನಾನೇನು ಮಾಡಲಿ? ಇವರಲ್ಲಿ ನನ್ನ ಅಪರಾಧವೇನು ? ರಾಣಾಜಿಯವರು ಹೀಗೆ ಯಾರನ್ನೂ ಕೇಳದೆ ಹೇಳದೆ ಪಠಾಣನೊಡನೆ ಸಂಧಿಯನ್ನು ನಿಶ್ಚಯಿಸಿಕೊಳ್ಳುವರೆಂದು ಯಾರು ತಿಳಿದಿದ್ದರು? ದಾದಾ (ಗೋರಾಸಿಂಗ)ನು ನೀನು ಹೆಸರಿಗೆ ಮಾತ್ರ ಸೇನಾಪತಿಯೆಂದು ನನಗೆ ಮೊದಲೇ ಹೇಳಿದ್ದನು; ಇಂದು ಆ ಮಾತು ಸತ್ಯವಾಯಿತು. ರಾಣಾಜಿಯವರು ನನ್ನನ್ನು ಒಂದು ಮಾತು ಕೇಳಿ ಆಮೇಲೆ ತಮ್ಮ ಮನಬಂದಂತೆ ಸಂಧಿ ಮಾಡಿಕೊಂಡಿದ್ದರೆ ನನಗೆ ಅಷ್ಟೊಂದು ಕೆಡಕೆನಿಸುತ್ತಿರಲಿಲ್ಲ.

**ಪದ್ಮಿನಿ :**—"ಮಗುವೇ, ಒಮ್ಮೆಲೆ ಕೋಪದ ಕೈಯಲ್ಲಿ ಬುದ್ಧಿಯನ್ನು ಕೊಡದಿರು. ಪಠಾಣನ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಕೊಟ್ಟೇ ಕೊಡೋಣ ಅದಕ್ಕಾಗಿಯೇ ನಾನು ಅವನ ಶಿಬಿರಕ್ಕೆ ಹೋಗುವೆನು; ನನ್ನ ಸಂಗಡ ನೀನೂ ಬರಬೇಕಾಗುವುದು.

"ನಾನು ! ನಾನು ಬರಬೇಕೇ ?" ಹೀಗೆನ್ನುತ್ತ ಬಾದಲನು ಖಡ್ಗವನ್ನು ಹಿರಿದನು. "ಅಮ್ಮಾ ! ಈ ಶರೀರದಲ್ಲಿ ಜೀವವಿರುವವರೆಗೆ ಆ ನೀಚ ಪಠಾಣನ ಮುಖವನ್ನು ನೋಡುವುದಿಲ್ಲ. ಬಾದಲನು ಅಂತಹ ಅವಿವೇಕಿಯೆಂದು ಭಾವಿಸಕೂಡದು. ಇನ್ನೊಂದು ಮಾತನ್ನು ಹೇಳುವೆನು, ತಾವು ಪಠಾಣನ ಶಿಬಿರಕ್ಕೆ ಹೋಗುವುದು ನನ್ನ ಮನಸ್ಸಿಗೆ ಸರ್ವಥಾ ಸರಿದೋರುವುದಿಲ್ಲ. ನಾನು ನಿಮ್ಮ ಸ್ಥಳದಲ್ಲಿದ್ದರೆ, ಪಠಾಣನ ಶಿಬಿರಕ್ಕೆ ಹೋಗಬೇಕಾಗಿರುವುದೆಂಬುದನ್ನು ಕೇಳಿದ ಪರಕ್ಷಣದಲ್ಲಿಯೇ ಈ ಜಗತ್ತನ್ನಾದರೂ ಬಿಟ್ಟು ಹೋಗಿಬಿಡುತ್ತಿದ್ದೆನು. ಅಭಿಮಾನಿಗಳಾದ ರಜಪೂತರಿಗೆ ಮಾನಕ್ಕಿಂತ ಪ್ರಾಣವು ಪ್ರಿಯಕರವಾದದ್ದೇ ?"

**ಪದ್ಮಿನಿ**—ಸೇನಾಪತೀ, ಹೀಗೆ ದುಡುಕದಿರು. ಪಠಾಣನ ಶಿಬಿರಕ್ಕೆ ನಾನೊಬ್ಬಳೇ ಹೋಗುವುದಿಲ್ಲ. ಆರೇಳು ನೂರು ಪಲ್ಲಕ್ಕಿಗಳು ಹೋಗುವವು. ಪ್ರತಿಯೊಂದು ಪಲ್ಲಕ್ಕಿಯನ್ನೂ ನಾಲ್ವರು ಭೋಯಿಗಳು ಹೊರುವರು. ಆ ಭೋಯಿಗಳಲ್ಲಿ ನೀನೊಬ್ಬನು !

ಬಾದಲನಿಗೆ ಪದ್ಮಿನಿಯ ಮಾತಿನ ಅರ್ಥವಾಗಲಿಲ್ಲ. ಅವನು ಆಶ್ಚರ್ಯದಿಂದ—"ಹೀಗಂದರೇನು? ನೀವು ಏನೋ ಒಂದು ಗೂಢವಾದ ಹಂಚಿಕೆಯನ್ನು ಯೋಚಿಸಿದಂತೆ ತೋರುತ್ತದೆ; ಹಾಗಾದರೆ ಭೋಯಿಗಳೆಲ್ಲರೂ ನನ್ನಂತೆ ಸೈನಿಕರೇ ಇರಬೇಕೇನು ?" ಎಂದನು.

ಪದ್ಮಿನಿಯು ತನ್ನ ಗುಪ್ತಾಲೋಚನೆಗಳನ್ನೆಲ್ಲ ವಿವರಿಸಿ ಹೇಳಿದಳು. ಬಾದಲನಿಗೆ ತುಂಬಾ ಆನಂದವಾಯಿತು ಅವನು:—"ಅಮ್ಮಾ, ನಾಳೆ ಯವನರ ರಕ್ತದಿಂದ ರಣದೇವತೆಯು ಸಂತೃಪ್ತಳಾಗುವಳು. ನನ್ನ ಖಡ್ಗಕ್ಕಿರುವ ಯವನರ ರಕ್ತದ ತೃಷ್ಣೆಯು ಪೂರಾ ಹಿಂಗುವುದು." ಎನ್ನುತ್ತ ತನ್ನ ಒರೆಗಳೆದ ಖಡ್ಗವನ್ನು ಝಳಪಿಸಿದನು.

---

# ಮೂರನೆಯ ಪರಿಚ್ಛೇದ

ಭೀಮಸಿಂಹನನ್ನು ಸೆರೆಯಲ್ಲಿಟ್ಟು ತಾನು ಪದ್ಮಿನಿಯನ್ನು ಪಡೆಯುವೆನೆಂದು ಅಲ್ಲಾವುದ್ದೀನನು ಯೋಚಿಸಿದ್ದನು, ಆದರೂ ಅವನ ಮನಸ್ಸಿನಲ್ಲಿ ಅಭಿಮಾನಿಯಾದ ಹಿಂದೂ ರಮಣಿಯು ತನಗೆ ಎಲ್ಲಿ ವಶಳಾಗದಿರುವಳೋ ಎಂಬ ಅನುಮಾನವೂ ಕೊಂಚ ಇದ್ದೇ ಇತ್ತು. ಅವಳು ಈ ರೀತಿಯಾಗಿ ತಾನಾಗಿಯೇ ಬಂದು ತನ್ನ ಪದತಲದಲ್ಲಿ ಬೀಳಬಹುದೆಂದು ಅವನು ಭಾವಿಸಿರಲಿಲ್ಲ. ಇಂದು ರಾಣಿಯಿಂದ ಕಳುಹಿಸಲ್ಪಟ್ಟ ಸಂಧಿಪತ್ರದ ಕರಾರುಗಳನ್ನು ನೋಡಿ ಅವನು ಆನಂದಪರವಶನಾಗಿ ಹೊಕ್ಕುಳಿನವರೆಗೆ ಬೆಳೆಯುತ್ತಿದ್ದ ತನ್ನ ಗಡ್ಡದ ಮೇಲೆ ಕೈಯಾಡಿಸುತ್ತ—"ವಾ! ಕಾಫರರಿಗೆ ಹೀಗೆಯೇ ಆಗಬೇಕು. ಮೊದಲೇ ಇಷ್ಟು ಮಾಡಿಬಿಡಬಾರದಿತ್ತೇ? ಈ ರೀತಿಯಾಗಿ ಒಂದೂವರೆ ವರುಷಗಳವರೆಗೆ ನನಗೂ ಕಷ್ಟಕೊಟ್ಟು ತಾವೂ ಶ್ರಮಪಡುವುದರಲ್ಲಿ ಏನು ಅರ್ಥವಿತ್ತು? ಕಾಫರರು ಮೂರ್ಖರು. ಧರ್ಮವಂತೆ! ಏನೇ ಆಗಲಿ, ಕಡೆಗೆ ನನ್ನಂತೆಯೇ ಆಯಿತು. ಯಾವ ರಮಣೀರತ್ನದ ಸಲುವಾಗಿ ದಿಲ್ಲಿಯ ರತ್ನಖಚಿತವಾದ ಸಿಂಹಾಸನವನ್ನೂ ರಾಣೀವಾಸವನ್ನೂ ತೊರೆದು ಇಂಥ ನಿರ್ಜನವಾದ, ನಿರಾನಂದವಾದ ಮರುಭೂಮಿಯಲ್ಲಿ ಹದಿನೆಂಟು ತಿಂಗಳುಗಳವರೆಗೆ ವನವಾಸ-ಕಷ್ಟವನ್ನು ಅನುಭವಿಸಿದೆನೋ ಆ ರತ್ನವು ನನಗಿಂದು ಲಭಿಸಿತು. ಮರುಪ್ರದೇಶದ ಮರೀಚಿಕೆಯಂತಿದ್ದ ಈ ರಜಪೂತ ರಮಣಿಯ ಮೇಲಿನ ನನ್ನ ಆಶೆಯು ಇಂದು ಪ್ರತ್ಯಕ್ಷವಾಗಿ ಪರಿಣಮಿಸಿತಲ್ಲಾ! ನಿಶ್ಚಯವಾಗಿಯೂ ನನ್ನ ಮೇಲೆ ಅಲ್ಲಾನ ಕೃಪೆಯಿರುವುದು. ಯಾ! ಅಲ್ಲಾ! ಇಂದು ನಿನ್ನ ದಾಸನನ್ನು ಧನ್ಯನನ್ನಾಗಿ ಮಾಡಿದೆ!" ಎಂದು ಯೋಚಿಸಿದನು.

ಅಂದು ದರ್ಪಣದಲ್ಲಿ ನೋಡಿ ಬಂದಿದ್ದ ಪದ್ಮಿನಿಯ ಅಚ್ಚಗುಲಾಬೀ ವರ್ಣದ ಕಪೋಲ, ಧನುಯುಗಲದಂತಿದ್ದ ಭ್ರೂಯುಗಲ, ನಾಚಿಕೆಯಿಂದ ಅವನತವಾದ ದೃಷ್ಟಿ, ಸಂಪಗೆಯ ಮೊಗ್ಗಿನಂತೆ ಎಸಳಾದ ನಾಸಿಕ ಇವೆಲ್ಲಾ

ಈಗ ಅಲ್ಲಾವುದ್ದೀನನ ಕಣ್ಣಮುಂದೆ ಕಟ್ಟಿದಂತಾದುವು. ಅವನಿಗೆ ಮೈಮೇಲಿನ ಸ್ಮೃತಿಯು ತಪ್ಪಿಹೋಯಿತು. ಅವನು ಪದ್ಮಿನಿಯ ಸಂಬಂಧವಾದ ಮೋಹ ಮಯವಾದ ಕನಸಿನಲ್ಲಿ ಈ ರೀತಿಯಾಗಿ ಕನವರಿಸಿದನು:—"ಅಹಹಾ! ಎಂಥ ಸುಂದರವಾದ ಮುಖ! ಎಂಥ ಸುಂದರವಾದ ಬೆಳಕು ಹೊರಡುತ್ತಲಿತ್ತು! ಎಂಥ ಕಪ್ಪಾದ ಗುಂಗುರು ಗುಂಗುರಾದ ಮುಂಗುರುಳು! ಎಂಥ ಮನೋಹ ರವಾದ ನೋಟ! ಎಂಥ ದೇಹಘಟನೆ! ಎಲ್ಲಾ ದೇವದುರ್ಲಭವಾದುವು!"

"ಪದ್ಮಿನಿಯು ಬಾದಷಹನಿಗೆ ಭೆಟ್ಟಿಯಾಗುವದಕ್ಕಿಂತ ಮೊದಲು ಭೀಮ ಸಿಂಹನು ಪಠಾಣರ ಶಿಬಿರದಿಂದ ಮುಕ್ತನಾಗಿ ದುರ್ಗಕ್ಕೆ ಹೋಗಿರಬೇಕು; ಭೀಮಸಿಂಹನು ಪಠಾಣರ ಶಿಬಿರದಲ್ಲಿರುವವರೆಗೆ ಪದ್ಮಿನಿಯು ತನ್ನ ಏಳುನೂರು ದಾಸಿಯರೊಂದಿಗೆ ಬೇರೊಂದು ಸ್ವತಂತ್ರವಾದ ಡೇರೆಯಲ್ಲಿ ಉಳಿಯುವಳು." ಎಂದು ರಾಣಾನ ಪತ್ರದಲ್ಲಿ ಬರೆದಿತ್ತು. ಅಲ್ಲಾವುದ್ದೀನನು ಯೋಚಿಸಿದ್ದೇನೆಂ ದರೆ:—"ಭೀಮಸಿಂಹನು ನನಗೇಕೆ ಬೇಕು? ಆದಷ್ಟು ಬೇಗನೆ ಆ ಕಾಫರನನ್ನು ಇಲ್ಲಿಂದ ಹೊರಡಿಸುವೆನು. ಪದ್ಮಿನಿಯನ್ನು ನೋಡುವುದೊಂದೇ ತಡ."

ಅಲ್ಲಾವುದ್ದೀನನು ತಾನು ಪದ್ಮಿನಿಯ ಸಂಗಡ ಹೇಗೆ ಮಾತಾಡಬೇಕು? ಅವಳನ್ನು ಏನೆಂದು ಸಂಬೋಧಿಸಬೇಕು? ಇವೇ ಮುಂತಾದ ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಾ ಕಲ್ಪನಾಸಾಮ್ರಾಜ್ಯದಲ್ಲಿ ಅರಸನಾಗಿಬಿಟ್ಟಿದ್ದನು. ಅವನು ರತ್ನಖಚಿತವಾದ ವಸ್ತ್ರಾಲಂಕಾರಗಳನ್ನು ಧರಿಸಿಕೊಂಡು ಪದ್ಮಿನಿಯು ಬರುವ ಹಾದಿಯನ್ನು ಅನಿಮಿಷನೇತ್ರದಿಂದ ನಿರೀಕ್ಷಿಸುತ್ತ ಕುಳಿತಿದ್ದನು.

ಹಗಲೆಲ್ಲ ಅತ್ಯುಗ್ರವಾದ ಕಿರಣಗಳನ್ನು ಬೀರಿ ಬೀರಿ ಶ್ರಾಂತನಾದ ಸೂರ್ಯದೇವನು ಅಸ್ತಾಚಲವನ್ನು ಸಮೀಪಿಸಿದನು. ಅವನ ಸುವರ್ಣವರ್ಣದ ಕಿರಣಗಳಿಂದ ಜಗತ್ತೆಲ್ಲ ನಗುವಂತೆ ಭಾಸವಾಗಹತ್ತಿತ್ತು! ಅಷ್ಟರಲ್ಲಿ ಚಿತ್ತೂರು ದುರ್ಗದ "ರಾಮಪೋಲ" ಮಹಾದ್ವಾರದಲ್ಲಿ ಮಹಾಜನ ಸಮ್ಮರ್ದವು ನೆರೆದಿ ದ್ದಂತೆ ತೋರಿತು. ಅಲ್ಲಾವುದ್ದೀನನು ಉತ್ಫುಲ್ಲನಯನದಿಂದ ಆ ಕಡೆಗೆ ನೋಡಿದನು. ಆ ಜನಸಮ್ಮರ್ದದ ಮಧ್ಯದಲ್ಲಿ ಸಂಪೂರ್ಣವಾಗಿ ಮುಚ್ಚಿದ್ದ ಅಸಂಖ್ಯ ಪಲ್ಲಕ್ಕಿಗಳು ಸ್ಪಷ್ಟವಾಗಿ ಕಾಣಿಸಿದುವು.

ವಲ್ಲಕ್ಕಿಗಳು ಹತ್ತಿರಕ್ಕೆ ಬಂದ ಹಾಗೆಲ್ಲಾ ಅಲ್ಲಾವುದ್ದೀನನ ಹೃದಯವು ಆನಂದದಿಂದ ನರ್ತನ ಮಾಡುತ್ತಿತ್ತು. ಪಲ್ಲಕ್ಕಿಗಳು ಒಂದರಹಿಂದೊಂದು ಸಾಲಾಗಿ ಕಪ್ಪುಬಣ್ಣದ ಹೊದಿಕೆಯಿಂದ ಮುಚ್ಚಲ್ಪಟ್ಟು ಭಯಂಕರವಾದ ಕೃಷ್ಣ ಸರ್ಪದ ಹಾಗೆ ಸಾವಕಾಶವಾಗಿ ಅಲ್ಲಾವುದ್ದೀನನ ಶಿಬಿರದ ಕಡೆಗೆ ಬರುತ್ತಿದ್ದುವು. ಆ ಸರ್ಪವು ಹೊತ್ತಿನಲ್ಲಿ ತನ್ನ ಸೇನೆಯನ್ನೂ ತನ್ನನ್ನೂ ಕಡಿದು ಕೊಲ್ಲಬಹುದೆಂದು ಅವನು ಯೋಚಿಸಿರಲಿಲ್ಲ. ಅವನ ದೃಷ್ಟಿಯು ಆ ಸರ್ಪದ ಹೆಡೆಯೊಳಗಿನ ರತ್ನವನ್ನು ನಿರೀಕ್ಷಿಸುವುದರಲ್ಲಿ ತೊಡಗಿಕೊಂಡಿತ್ತು. ಮಣಿಯನ್ನು ಹಿಡಿಯಹೋದರೆ ಸರ್ಪವು ಕಡಿಯುವುದೆಂಬ ಭಾವನೆಯು ಅವನ ಮನಸ್ಸಿನಲ್ಲಿ ಬರಲಿಲ್ಲ. ಮೂಢ!

ಕ್ರಮವಾಗಿ ಪಲ್ಲಕ್ಕಿಗಳು ಪಠಾಣರ ಶಿಬಿರದ ಬಾಗಿಲಿಗೆ ಬಂದುವು. ಆಗ ಒಬ್ಬ ಪಠಾಣ ಸೈನಿಕನು ಅವರಿಗೆ ಪದ್ಮಿನಿಗಾಗಿ ಹೊಸದಾಗಿ ಸಿದ್ಧಮಾಡಿದ ವಿಶಾಲವಾದ ತಂಬೂವನ್ನು (ಡೇರೆಯನ್ನು) ತೋರಿಸಿದನು.

ರಜಪೂತರು ಏಳುನೂರು ಪಲ್ಲಕ್ಕಿಗಳನ್ನು ತೆಗೆದುಕೊಂಡು ಆ ತಂಬೂವನ್ನು ನೇರಿದರು. ಆ ಬಳಿಕ ಕೆಲವರು ರಜಪೂತ ಸರದಾರರು ಬಾದಷಹನ ಬಳಿಗೆ ಬಂದು ಭೀಮಸಿಂಹನನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಂಡರು.

ಅವರಿಗೆ ಬಾದಷಹನು ಹೇಳಿದ್ದೇನಂದರೆ—"ಭೀಮಸಿಂಹನನ್ನು ಬಿಡಲಿಕ್ಕೆ ಎಷ್ಟು ಮಾತ್ರವೂ ಅಡ್ಡಿಯಿಲ್ಲ. ಅವನು ಈಗ ನಮಗೆ ಪರಮಾಪ್ತನು! ನಾನು ಇಂದೇ ಚಿತ್ತೂರನ್ನು ಬಿಟ್ಟು ದಿಲ್ಲಿಗೆ ಹೋಗಿಬಿಡುವೆನು. ನೀವು ಭೀಮಸಿಂಹನನ್ನು ಈ ಕ್ಷಣ ಕರೆದುಕೊಂಡು ಹೋಗಿರಿ."

ಹೀಗೆಂದು ಅಲ್ಲಾವುದ್ದೀನನು ಭೀಮಸಿಂಹನನ್ನು ಬಿಟ್ಟುಬಿಡಿರೆಂದು ತನ್ನ ಅನುಚರರಿಗೆ ಆಜ್ಞಾಪಿಸಿ ರಜಪೂತ ಸರದಾರರಿಗೆ ಭೀಮಸಿಂಹನನ್ನು ಸೆರೆಯಲ್ಲಿಟ್ಟಿದ್ದ ತಂಬೂವನ್ನು ತೋರಿಸಿದನು. ಅವರು ಆ ಕಡೆಗೆ ನಡೆದರು.

ಇಬ್ಬರು ಮೂವರು ರಜಪೂತ ಸರದಾರರೊಂದಿಗೆ ಭೀಮಸಿಂಹನು ಚಿತ್ತೂರಿನ ದುರ್ಗದ ಕಡೆಗೆ ಹೊರಟನು. ಯಾರೂ ಅವನನ್ನು ಪ್ರತಿಬಂಧಿಸಲಿಲ್ಲ. ರಜಪೂತ ಸರದಾರರೂ ಪಿಟ್ಟೆಂದು ಮಾತಾಡಲಿಲ್ಲ. ಬಾದಷಹನು ತನ್ನ

ಶಿಬಿರದಲ್ಲಿದ್ದುಕೊಂಡು ಭೀಮಸಿಂಹನು ನಿರ್ವಿಘ್ನವಾಗಿ ಚಿತ್ತೂರು ದುರ್ಗದ ಬಾಗಿಲಿಗೆ ಮುಟ್ಟಿದ್ದನ್ನು ನೋಡಿದನು. ಅಷ್ಟರಲ್ಲಿ ಅಕಸ್ಮಾತ್ತಾಗಿ ಪಠಾಣರ ಪಾಳೆಯದಲ್ಲಿ ಮಹಾ ಹಾಹಾಕಾರವೆದ್ದಿತು! ಬಾದಷಹನು ತನ್ನ ಶಿಬಿರದಲ್ಲಿದ್ದು ಕೊಂಡು ಇಣಿಕಿ ನೋಡಿದನು; ಅವನ ಎದೆಯೊಡೆದು ನೀರಾಯಿತು. ಸಾವಿ ರಾರು ರಜಪೂತ ವೀರರು ಸಶಸ್ತ್ರರಾಗಿ "ಹರಹರ ಮಹಾದೇವ!" ಎಂದು ಜಯಧ್ವನಿ ಮಾಡುತ್ತ ಪಠಾಣ ಸೈನಿಕರೊಡನೆ ಯುದ್ಧವನ್ನು ಹೂಡಿದ್ದರು. ಕ್ಷಣ ಕಾಲದವರೆಗೆ ಅಲ್ಲಾವುದ್ದೀನನು ಭೀತಿ-ವಿಸ್ಮಯಗಳಿಂದ ಮೈಮರೆತು ಕುಳಿತು ಬಿಟ್ಟನು ಅವನಿಗೆ ಮಾತಾಡಲಿಕ್ಕೆ ಬಾಯಿಯಿರಲಿಲ್ಲ; ಎದ್ದು ನಿಲ್ಲಲಿಕ್ಕೆ ಕಾಲು ಬರಲಿಲ್ಲ. ಅಷ್ಟರಲ್ಲಿ ಅವನ ಸೇನಾಪತಿಯಾದ ಮಲಿಕಕಾಫುರನು ಅಲ್ಲಿಗೆ ಬಂದು—" ಜಹಾಪನಾ! ಸರ್ವನಾಶವಾಯಿತು! ರಜಪೂತರು ನಮ್ಮನ್ನು ಸಂಪೂರ್ಣವಾಗಿ ಮೋಸಗೊಳಿಸಿದರು! ಚಿತ್ತೂರು ದುರ್ಗದಿಂದ ಹೊರಗೆ ಬಂದ ಮೊದಲಿನ ನಾಲ್ಕಾರು ಮೇನೆಗಳಲ್ಲಿ ನಿಜವಾಗಿ ಹೆಂಗಸರೇ ಇದ್ದರು. ಹಿಂದಿನ ಮೇನೆಗಳಲ್ಲಿ ಬಂದವರು ಅಂತಃಪುರದ ಅಬಲೆಯರಲ್ಲ! ಸಮರ್ಥರಾದ ರಜಪೂತ ವೀರರು! ಸೈನಿಕರೇ ಭೋಯಿಗಳಾಗಿದ್ದರು! ಪ್ರತಿಯೊಂದು ಮೇನೆ ಯಲ್ಲಿಯೂ ಶಸ್ತ್ರಾಸ್ತ್ರಗಳು ತುಂಬಿದ್ದುವು! ಪದ್ಮಿನಿಯದೆಂದು ಹೇಳುವ ಸುಂದರ ವಾದ ಮೇನೆಯಲ್ಲಿ ರಣಪಟುವಾದ ಗೋರಾಸಿಂಗನು ಸಮರಸನ್ನದ್ಧನಾಗಿ ಕುಳಿ ತಿದ್ದನು! ಮುಂದೇನು ಗತಿ?" ಎಂದು ಮಹಾ ಉದ್ವೇಗದಿಂದ ನುಡಿದನು.

ಕೂಡಲೇ ಅಲ್ಲಾವುದ್ದೀನನು ಕೆರಳಿ ಕಿಚ್ಚಾಗಿ— "ಹೇಳಲಿಕ್ಕೆ ಹೆಸರುಳಿ ಯದಂತೆ ಎಲ್ಲ ಕಾಫರರನ್ನು ಕಡಿದು ಚಲ್ಲಿರಿ" ಎಂದು ತನ್ನ ಸೇನಾಪತಿಗೆ ಅಪ್ಪಣೆ ಕೊಟ್ಟನು ಪರಕ್ಷಣದಲ್ಲಿಯೇ ಮಹಾ ಕೋಲಾಹಲಕ್ಕೆ ಮೊದಲಾ ಯಿತು. ಒಂದು ಕಡೆಗೆ 'ಅಲ್ಲಾಹೋ ಅಕಬರ್!' ಇನ್ನೊಂದು ಕಡೆಗೆ 'ಹರ ಹರ ಮಹಾದೇವ!' ಎಂಬ ರಣಧ್ವನಿ ಎದ್ದಿತು. ರಣಭೂಮಿಯು ಬಲು ಭೀಷಣ ಸ್ವರೂಪವನ್ನು ತಾಳಿತು.

---

# ನಾಲ್ಕನೆಯ ಪರಿಚ್ಛೇದ

ಬಾದಲನ ಸಲುವಾಗಿ ಗೋರಾಸಿಂಗನು ಪುನಃರಣರಂಗವನ್ನು ಪ್ರವೇಶಿಸಬೇಕಾಯಿತು. ಇಷ್ಟರಲ್ಲಿ ರಜಪೂತರೆಲ್ಲರೂ ಪಠಾಣರ ಸೇನೆಯನ್ನು ಭಿನ್ನ ಭಿನ್ನ ಮಾಡಿಕೊಂಡು ದುರ್ಗದ ಬಾಗಿಲದ ಸಮೀಪಕ್ಕೆ ಬಂದು ಬಿಟ್ಟಿದ್ದರು. ಆದರೆ ಬಾದಲನು ಮಾತ್ರ ಏನುಮಾಡಿದರೂ ತಿರುಗಿ ಬರಲೊಲ್ಲನು. ರಣದೇವತೆಯು ಅವನ ದೇಹದಲ್ಲಿ ಸೇರಿಕೊಂಡದ್ದರಿಂದ ಅವನಿಗೆ ಮೈಮೇಲಿನ ಪರವೆ (ಪ್ರಜ್ಞೆ)ಯೇ ಇರಲಿಲ್ಲ. ಅವನ ಕೈಯೊಳಗಿನ ಖಡ್ಗವು ಕೋಲ್ಮಿಂಚಿನ ಹಾಗೆ ಪಠಾಣಸೈನಿಕರ ಕಾರ್ಮೋಡದಂತಿದ್ದ ಶರೀರವನ್ನು ಭೇದಿಸಿಕೊಂಡು ಹೊರಗೆ ಬರುತ್ತಿತ್ತು! ಅವನ ಬರ್ಚಿಯು ಮಹಾ ಸಿಡಿಲಿನ ಹಾಗೆ ಪಠಾಣಸೇನೆಯನ್ನು ಭಿನ್ನ ಭಿನ್ನ ಮಾಡುತ್ತಿತ್ತು! ಯುದ್ಧಾವೇಶದಿಂದ ಅವನು ಘುಡಿಘುಡಿಸುತ್ತ ನುಡಿಯುವ ಹೊಡಿ! ಕಡಿ! ಎಂಬ ಶಬ್ದಗಳು ಗುಡುಗಿನ ಹಾಗೆ .ರಣಭೂಮಿಯನ್ನೆಲ್ಲ ನಡುಗಿಸುತ್ತಿದ್ದುವು.

ಎಂಥ ಅಪೂರ್ವವಾದ ನೋಟವದು! ಪಾಂಡವ ಸೇನಾಪತಿಯಾದ ಬಾಲಕ ಅಭಿಮನ್ಯುವು ಹಿಂದೊಂದು ದಿನ ಕೌರವರ ಪಡೆಯೊಳಗಿನ ಲಕ್ಷಾವಧಿ ಅತಿರಥ ಮಹಾರಥರನ್ನು ಲಕ್ಷ್ಯಕ್ಕೆ ತಾರದೆ ಇದೇ ರೀತಿಯಾಗಿ ರಣಮದದಿಂದ ಉನ್ಮತ್ತನಾಗಿ ಹೋಗಿದ್ದನು ಇಂದು ಚಿತ್ತೂರಿನ ರಜಪೂತರ ಸೇನಾಪತಿಯಾದ ಬಾದಲನು ಅದೇ ರೀತಿಯಿಂದ ರಣಮದದಿಂದ ಮೈಮರೆತು ಪಠಾಣರ ಸೇನಾ ಸಮುದ್ರವನ್ನು ಮಂಥನ ಮಾಡಲು ತೊಡಗಿದನು. ಬಾದಲನ ಅಸಾಧಾರಣವಾದ ಯುದ್ಧಕುಶಲತೆಯನ್ನು ನೋಡಿ ಪಠಾಣರು ಭೀತಿ.ವಿಸ್ಮಯಗಳಿಂದ ಬೆಪ್ಪಾಗಿ ನಿಂತರು. ರಜಪೂತರು ಆನಂದಾತಿಶಯದಿಂದ ಜಯಘೋಷಮಾಡಿದರು! "ಹರ ಹರ ಮಹಾದೇವ!" ಎಂಬ ಧ್ವನಿಯು ದಶದಿಕ್ಕುಗಳಲ್ಲಿಯೂ ಪಸರಿಸಿತು.

ಬಾದಲನು ಯುದ್ಧಮಾಡುತ್ತಿದ್ದ ಸ್ಥಳದಲ್ಲಿ ಹೆಚ್ಚಾಗಿ ರಜಪೂತ ಸೈನಿಕರಿರಲಿಲ್ಲ. ಗೋರಾಸಿಂಗನು ಘಾತವಾಯಿತೆಂದನು. ದೂರದಿಂದ ಪಠಾಣಸೇನೆಯು

ಆತನೆಡೆಗೆ ನುಗ್ಗಿಬರುತ್ತಲಿತ್ತು. ಗೋರಾಸಿಂಗನು ಇದೇ ಕೊನೆಯ ಪ್ರಯತ್ನವೆಂದು ಅಂದುಕೊಂಡನು. ಆತನು ಈ ಸಾರೆ ಬಾದಲನನ್ನು ರಕ್ಷಿಸಿಕೊಳ್ಳದಿದ್ದರೆ ಪುನಃ ಆಶೆಯಿದ್ದಿಲ್ಲ. ಈಗ ಬಾದಲನನ್ನು ಸುತ್ತಿದ್ದ ಪಠಾಣ ಸೈನಿಕರ ಭಯವು ಅಷ್ಟೊಂದು ಇಲ್ಲದಿದ್ದರೂ ಮಹಾಸಾಗರದ ಭಯಂಕರವಾದ ಅಲೆಯಂತೆ ಬಹು ದೂರದಿಂದಲೂ ಏರಿಬರುತ್ತಿದ್ದ ಪಠಾಣಸೇನೆಯು ಅಲ್ಲಿಗೆ ಬಂದು ಮುಟ್ಟಿದರೆ ಮಾತ್ರ ಬಾದಲನು ಪಾರಾಗುವದು ಮಹಾಪ್ರಯಾಸವೇ ಸರಿ.

ಗೋರಾಸಿಂಗನ ಅಶ್ವವು ನಾಲ್ಕೇ ಹಾರು ಹಾರಿ ಬಾದಲನ ಬಲಪಾರ್ಶ್ವದಲ್ಲಿ ಬಂದು ನಿಂತಿತು. ಪಠಾಣರು ಅವರಿಬ್ಬರನ್ನೂ ಸುತ್ತುಗಟ್ಟಿದರು.

ಗೋರಾಸಿಂಗನ ಶಸ್ತ್ರಚಾಲನ ಕ್ರಮವನ್ನು ನೋಡಿ ಪಠಾಣರು ಬೆರಗಾದರು ಎಂಥ ಹಸ್ತಚಾಪಲ್ಯ! ಎಂಥ ರಣಕುಶಲತೆ! ಈ ವೃದ್ಧನೂ ಬಾಲಕನೂ ಯಾರೆಂದು ಅವರು ಯೋಚಿಸತೊಡಗಿದರು. ಅವರು ಈ ಮೊದಲು ಅನೇಕರು ಯುದ್ಧಮಾಡುವ ರೀತಿಯನ್ನು ಕಂಡಿದ್ದರು. ಆದರೆ ಇಂಥ ಅಪೂರ್ವವಾದ ಯುದ್ಧವಿದ್ಯೆಯ ಮಾದರಿಯನ್ನು ಅವರು ಎಂದೆಂದೂ ನೋಡಿರಲಿಲ್ಲ. ಪಠಾಣರು ಸಮಯ ನೋಡಿ ಕಾಲ್ಕಿಗೆಯುವ ಯೋಚನೆಯಲ್ಲಿದ್ದರು !

ಗೋರಾಸಿಂಗನು ಬಾದಲನನ್ನು ಕುರಿತು –"ಬಾದಲ, ನಡೆ! ನಡೆ! ದುರ್ಗದ ಕಡೆಗೆ ನಡೆ ! ತಡಮಾಡಿದರೆ ಮಹಾ ಸಂಕಟವು ಸಂಭವಿಸುವುದು. ಪಠಾಣರೊಡನೆ ಯುದ್ಧಮಾಡುತ್ತ ನಿಲ್ಲುವುದು ನಮ್ಮ ಸದ್ಯದ ಉದ್ದೇಶವಲ್ಲ. ನಮ್ಮ ಧ್ಯೇಯವೇನೋ ನಮಗೆ ಸಾಧ್ಯವಾಗಿ ಹೋಗಿದೆ ನೋಡು; ಪಠಾಣಸೇನೆಯು ಹೇಗೆ ಧಾವಿಸಿಬರುತ್ತಿರುವುದು ! ಅದು ಇಲ್ಲಿಗೆ ಬಂದು ಮುಟ್ಟಿದರೆ ನಮ್ಮ ಅವಸ್ಥೆಯು ಸಮುದ್ರದ ತೆರೆಯ ನಡುವೆ ಸಿಕ್ಕಿದ ಚಿಪ್ಪಾಡಿಯಂತಾಗಿ ಹೋಗಬಹುದು. ಅದರಿಂದ ಹೊತ್ತುನೋಡಿ ಕುದುರೆಯನ್ನು ಹಿಂದಕ್ಕೆ ದುರ್ಗದ ಕಡೆಗೆ ಬಿಡು. ತಡಮಾಡಿದರೆ ಮೋಸವಾಗುವುದು." ಎಂದನು.

ಆದರೆ ಬಾದಲನು, ಹೂ ಇಲ್ಲ; ಹಾ ಇಲ್ಲ. ಏಕೆಂದರೆ ರಣೋನ್ಮತ್ತನಾದ ಬಾದಲನು ಈಗ ಪ್ರಜ್ಞಾವಸ್ಥೆಯಲ್ಲಿದ್ದಿಲ್ಲ. ಕೇವಲ ಶತ್ರುಗಳನ್ನು ತುಂಡುಗಡಿಯುವುದರಲ್ಲಿಯೇ ಆಸಕ್ತನಾಗಿದ್ದನು. ಗೋರಾಸಿಂಗನ ಮಾತುಗಳು ಅವನ ಕಿವಿಯೊ

ಳಗೆ ಪ್ರವೇಶಿಸಲೇ ಇಲ್ಲ. ಗೋರಾಸಿಂಗನು ಒದರಿದನು, ಕೈಮಾಡಿ ಹೇಳಿದನು, ಬಾದಲನ ರಟ್ಟೆಯನ್ನು ಹಿಡಿದೆಳೆದು ಹೇಳಿದನು. ಆದರೆ ಬಾದಲನು ಈಗ ಬಧಿರ! ಜ್ಞಾನಶೂನ್ಯ! ಗೋರಾಸಿಂಗನು ಘಾತವಾಯಿತೆಂದು ಅಂದುಕೊಂಡನು. ನೋಡ ನೋಡುವಷ್ಟರಲ್ಲಿ ಪಠಾಣಸೇನೆಯು ಅಲ್ಲಿಗೆ ಬಂದು ಮುಟ್ಟಿತು.

ಪ್ರಬಲವಾದ ಜಲಪ್ರವಾಹವು ಹಾಯ್ದು ಹೋಗುವಾಗ ಈಸುತ್ತಿರುವವನ ಶಕ್ತಿಯನ್ನು ಮೀರಿ ಅವನನ್ನು ತನ್ನ ಪ್ರವಾಹದಗುಂಟ ಎಳೆದುಕೊಂಡು ಹೋಗುತ್ತಿರುವಂತೆ ಕ್ಷಣಕಾಲದವರೆಗೆ ಗೋರಾಸಿಂಗ-ಬಾದಲರ ಅವಸ್ಥೆಯಾಯಿತು. ಬಾದಲನು ಒಮ್ಮೆ ಕುದುರೆಯಿಂದ ಉರುಳಿ ಬೀಳುವಂತಾದನು. ಗೋರಾಸಿಂಗನು 'ಹರ! ಮಹಾದೇವ!' ಎನ್ನುತ್ತ ಮುಂದ ಬಂದು ಯುದ್ಧವನ್ನು ಆರಂಭಿಸಿದನು.

ಇಷ್ಟು ಹೊತ್ತಿನವರೆಗೆ ಗೋರಾಸಿಂಗನು ಬಾದಲನ ರಕ್ಷಣೆಯ ಸಲುವಾಗಿಯೇ ಯುದ್ಧಮಾಡುತ್ತಿದ್ದನು. ಆದರೆ ಈಗ ವೈರಿಗಳನ್ನು ಸಂಹರಿಸುವ ಉದ್ದೇಶದಿಂದ ಯುದ್ಧವನ್ನು ಆರಂಭಿಸಿದನು. ಅವನು,- "ಇನ್ನು ಆತ್ಮರಕ್ಷಣೆಯ ಯೋಚನೆಯಿಲ್ಲ ಅರಿಬಲವನ್ನು ತುಂಡುಗಡಿಯುವುದೊಂದೇ ನಮ್ಮ ಉದ್ದೇಶವು. ಮರಣವೇನೋ ಬಂದ ಹಾಗೆಯೇ ಸರಿ. ಆದರೆ ಈ ದೇಹಪಂಜರದೊಳಗಿನ ಪ್ರಾಣಪಕ್ಷಿಯು ಹಾರಿ ಹೋಗುವವರೆಗೂ ಸಾಧ್ಯವಿದ್ದಷ್ಟು ವೈರಿಗಳನ್ನು ಕೊಲ್ಲಬೇಕು." ಎಂದು ನಿಶ್ಚಯಿಸಿಕೊಂಡನು. ಗೋರಾಸಿಂಗನು ಖಡ್ಗಪಾಣಿಯಾಗಿ ಪಠಾಣರ ಸೇನಾಸಮುದ್ರದಲ್ಲಿ ಧುಮ್ಮಿಕ್ಕಿದನು. ಅವನ ಸುದೀರ್ಘವಾದ ಖಡ್ಗದ ಹೊಡತದಿಂದ ಹಲವರು ಪಠಾಣರು ಸತ್ತುಬಿದ್ದರು.

ಈ ಸಮಯದಲ್ಲಿ ಗೋರಾಸಿಂಗನು ಮಾಡಿದ ಅಪ್ರತಿಮವಾದ ರಣಕಲ್ಲೋಲವು ಅವರ್ಣನೀಯವಾದುದೇ ಸರಿ. ಅವನ ಅಸಾಧಾರಣವಾದ ಖಡ್ಗದ ಕಡತದಿಂದ ಪಠಾಣಸೇನೆಯು ಚಲವಿಚಲವಾಗಿ ಹೋಯಿತು. ಸಾವಿರಾರು ಪಠಾಣಸೈನಿಕರು ಅವನೊಬ್ಬನೇ ರಜಪೂತವೀರನ ಖಡ್ಗದ ಎದುರಿಗೆ ಬರಲಾರರು! ಅವರು ಮೆಲ್ಲಗೆ ಹಿಂಜರಿದರು. ಬಾದಲನು ಬಳಿಯಲ್ಲಿಯೇ ಇದ್ದನು. ಅವನು ಕ್ಷಣಹೊತ್ತು ಸುಮ್ಮನೆ ನಿಂತು ಗೋರಾಸಿಂಗನು ಯುದ್ಧಮಾಡುವ ರೀತಿಯನ್ನು ನಿರೀಕ್ಷಿಸುತ್ತಲಿದ್ದನು. ಅವನು ಗೋರಾಸಿಂಗನ ಯುದ್ಧದ ಚಾತುರ್ಯವನ್ನು

ಎಂದೂ ನೋಡಿರಲಿಲ್ಲ. ತುಸು ಗರ್ವ, ಸ್ವಲ್ಪ ಆತ್ಮನಿಂದೆ, ಕೊಂಚ ಆನಂದ ಇವೆಲ್ಲಾ ಬಾದಲನ ಮನಸಿನಲ್ಲಿ ಉಂಟಾದುವು. ಕೊನೆಗೆ ಅವನು ಆನಂದಪರವಶನಾಗಿ ಚಪ್ಪಳೆಬಾರಿಸುತ್ತ—“ವಾಃ ! ವಾಃ ! ದಾದಾ ! ಹೊಡಿ ! ಕಡಿ ! ನೀಚಪಠಾಣರನ್ನು ತುಂಡುಗಡಿ! ” ಎಂದು ಒದರಿದನು.

ಗೋರಾಸಿಂಗನು ಆನಂದದಿಂದ ಉನ್ಮತ್ತನಾದನು: ಅವನ ಖಡ್ಗವು ಇನ್ನಷ್ಟು ವೇಗದಿಂದ ಸಂಚರಿಸಹತ್ತಿತು ಗೋರಾಸಿಂಗನಿಗೆ ಈಗ ಆದಷ್ಟು ಆನಂದವು ಹಿಂದೆ ಎಂದೂ ಆಗಿರಲಿಲ್ಲ. ಇಂದಿನ ಮಹಾಯಾತ್ರೆಯ ಮಾರ್ಗದಲ್ಲಿ ಅವನ ಪ್ರಿಯತಮನಾದ ಬಾದಲನು, ಅವನ ನೇತ್ರದ ಮಣಿಯು, ಬಳಿಯಲ್ಲಿ ನಿಂತುಕೊಂಡು ಅವನಿಗೆ ಆವೇಶವುಂಟಾಗುವಂತೆ ಪ್ರೋತ್ಸಾಹವಚನಗಳಿಂದ ಹುರಿದುಂಬಿಸುತ್ತಿದ್ದನು. ಮನುಷ್ಯನಿಗೆ ಇದಕ್ಕಿಂತಲೂ ಹೆಚ್ಚಾಗಿನ್ನೇನು ಬೇಕು? ಇಂಥ ಮಹಾಸಂಗ್ರಾಮದ ಮಧ್ಯದಲ್ಲಿಯೂ ಗೋರಾಸಿಂಗನ ಕಣ್ಣುಗಳಿಂದ ಆನಂದಾಶ್ರುಗಳು ಉದುರಿದುವು. ಅಕಸ್ಮಾತ್ ಗೋರಾಸಿಂಗನ ಕುದುರೆಯು ಒಬ್ಬ ಪಠಾಣ ಸೈನಿಕರ ಕಡತದಿಂದ ಬಿದ್ದುಹೋಯಿತು. ಗೋರಾಸಿಂಗನ ಹೃದಯವು ಕ್ಷಣಹೊತ್ತು ನಡುಗಿತು. ಆದರೆ ಪರಕ್ಷಣದಲ್ಲಿಯೇ ಅವನು ಧೈರ್ಯದಿಂದ ನೆಲದ ಮೇಲೆ ನಿಂತುಕೊಂಡೇ ಯುದ್ಧವನ್ನು ಆರಂಭಿಸಿದನು.

ನೂರಾರು ಪಠಾಣವೀರರು ಏಕಕಾಲದಲ್ಲಿ ಗೋರಾಸಿಂಗನನ್ನು ಆಕ್ರಮಣ ಮಾಡಿದರು. ಹತ್ತುಮಂದಿ ಪಠಾಣರು ಸುತ್ತುಕಡೆಯಿಂದ ಅವನ ಮೇಲೆ ಕತ್ತಿಗಳನ್ನು ಬೀಸಿದರು. ಆದರೆ ಅವುಗಳಲ್ಲಿ ಒಂದಾದರೂ ಅವನ ಮೈಗೆ ಸೋಂಕಲಿಲ್ಲ. ಅವನ ಉದ್ದವಾದ ಕತ್ತಿಯು ತಿರುಗುವ ವೇಗದಲ್ಲಿ ಅವೆಲ್ಲವೂ ಪ್ರತಿಹತವಾಗಿ ಹೋದುವು. ಮೂವರ ಕತ್ತಿಗಳು ಝಣ ಝಣ ಶಬ್ದದೊಂದಿಗೆ ದೂರ ಸಿಡಿದು ಬಿದ್ದುವು. ಇನ್ನಿಬ್ಬರ ಬಾಹುಗಳು ಕತ್ತರಿಸಿ ಕತ್ತಿಯೊಂದಿಗೆ ನೆಲಕ್ಕುರುಳಿದುವು. ಉದ್ದವಾದ ಗಡ್ಡಗಳಿಂದ ಮೆರೆಯುವ ಪಠಾಣರ ರುಂಡಗಳು ಕತ್ತರಿಸಿ ಉರುಳಿಬಿದ್ದವು. ತಲೆಗಳ ಮೇಲೆ ತಲೆಗಳು ಕತ್ತರಿಸಿ ಬಿದ್ದುವು; ಶವಗಳ ಮೇಲೆ ಶವಗಳು ಬಿದ್ದುವು. ರಕ್ತವು ಪ್ರವಾಹಗೊಂಡು ಹರಿಯಿತು. ಆದರೂ ಯುದ್ಧಕ್ಕೆ ತೆರಪಿಲ್ಲ. ಗೋರಾಸಿಂಗನ ಕತ್ತಿಯು ಏಕಕಾಲ

ದಲ್ಲಿ ನೂರಾರು ಕೋಲುಮಿಂಚುಗಳ ಹಾಗೆ ಹೊಳೆಯುತ್ತ ಶತ್ರುಬಲವನ್ನು ಸೀಳಿ ಒಗೆಯಲಾರಂಭಿಸಿತು. ಬಳಿಯಲ್ಲಿ ಸಿಂತಿದ್ದ ಬಾದಲನು "ಜಯ! ರಜಪೂತ ವೀರನಿಗೆ ಜಯ!" ಎಂದು ಒದರಿದನು. ಗೋರಾಸಿಂಗನ ರಣೋಲ್ಲಾಸವು ಇಮ್ಮಡಿಸಿತು. ಅವನ ನಾಲ್ಕು ದಿಕ್ಕುಗಳಲ್ಲಿಯೂ ಯವನ ಸೇನೆ! ಮೈಮೇಲೆಲ್ಲ ಯವನರ ರಕ್ತಧಾರೆ! ಪದತ್ತಲದಲ್ಲಿ ಯವನರ ಪ್ರೇತ! ಯವನರ ಮುಂಡ! ಬಹು ಸಂಖ್ಯಾಕವಾದ ಆ ಯವನರ ಸೇನೆಯನ್ನು ಗೋರಾಸಿಂಗನು ನಿಸ್ಸೀಮ ವಾದ ಉತ್ಸಾಹದಿಂದಲೂ ಅತುಲವಾದ ಸ್ಫೂರ್ತಿಯಿಂದಲೂ ಈಡಿಲ್ಲದೆ ಹೊಡೆದು ಕೆಡವಿದನು ಆದರೆ ಎಷ್ಟು ಹೊತ್ತು ತಾನೇ ಈಡಾಗಬಲ್ಲನು? ಕ್ರಮ ವಾಗಿ ಆತನ ಬಾಹುಗಳಲ್ಲಿ ಬಲವು ಕುಂದುತ್ತ ಬಂದಿತು. ಗಾಯಗಳಿಂದ ರಕ್ತವು ಸುರಿದು ದೇಹವು ನಿರ್ಬಲವಾಗುತ್ತ ಬಂದಿತು. ಕತ್ತಿಯು ಕಂಪಿತವಾಯಿತು. ಮೈಮೇಲಿನ ಎಚ್ಚರಿಕೆಯು ಹೋಗುತ್ತ ಬಂದಿತು ಆಗ ಗೋರಾಸಿಂಗನು— 'ಬಾದಲ! ಸಾಧ್ಯವಿದ್ದರೆ ಇನ್ನಾದರೂ ಆತ್ಮರಕ್ಷಣೆ ಮಾಡಿಕೋ! ನನ್ನ ಕೆಲ ಸವು ತೀರಿತು. ನನಗೆ ತಲೆತಿರುಗುತ್ತದೆ. ದೃಷ್ಟಿಶಕ್ತಿಯು ಕುಂದುತ್ತ ಬಂದಿತು. ನಾನಿನ್ನು ನಿಲ್ಲಲಾರೆನು.' ಎಂದು ಹೇಳಿದನು. ಗೋರಾಸಿಂಗನ ಬೆನ್ನ ಮೇಲಿನ ಭಯಂಕರವಾದ ಖಡ್ಗದ ಗಾಯವು ಅವರಿಬ್ಬರಲ್ಲಿ ಯಾರಲಕ್ಷ್ಯಕ್ಕೂ ಬಂದಿರಲಿಲ್ಲ.

ಬಾದಲನು ಗೋರಾಸಿಂಗನ ಮುಂದೆ ಬಂದು ನಿಂತು ಪುನಃ ಯುದ್ಧ ವನ್ನು ಆರಂಭಿಸಿದನು. ಗೋರಾಸಿಂಗನು ಗಾಯಹೊಂದಿ ಕೈಸೋತು ಹಿಂಜರಿ ದುದನ್ನು ನೋಡಿ ಪಠಾಣರು ಜಯಘೋಷ ಮಾಡಲಾರಂಭಿಸಿದರು. ಪಠಾಣ ಸೇನಾಪತಿಯಾದ ಮಲಿಕಕಾಫರನು,— "ಹೊಡೆಯಿರಿ! ಆ ಪೋರನನ್ನು ಹೊಡೆಯಿರಿ! ಮುದುಕನ ಕೆಲಸವು ತೀರಿತು! ಆ ಪೋರನನ್ನು ಹೊಡೆಯಿರಿ! ಏನು ನೋಡುತ್ತೀರಿ?" ಎಂದು ಒದರಿ ಹೇಳಿದನು. ಆದರೆ ಪಠಾಣ ಸೈನಿಕರಿಗೆ ಆ ಪೋರನನ್ನು ಹೊಡೆಯುವುದು ಹಾಗಿರಲಿ, ಕೋಲ್ಮಿಂಚಿನಂತೆ ಝುಳಪಿಸುತ್ತಿ ರುವ ಆ ಬಾಲಕನ ಖಡ್ಗದ ಕಡತದಿಂದ ಜೀವವನ್ನು ಉಳಿಸಿಕೊಳ್ಳಬೇಕಾದರೆ ಸಾಕು ಸಾಕಾಗಿ ಹೋಯಿತು. ಬಾಲಕನು ಸಾಮಾನ್ಯನಾಗಿರಲಿಲ್ಲ. ಇಷ್ಟು ಹೊತ್ತಿನವರೆಗೆ ಗೋರಾಸಿಂಗನು ಯುದ್ಧಮಾಡುತ್ತಿದ್ದನು. ಆಗ ಬಾದಲನು

ಸುಮ್ಮನೆ ನಿಂತು ಆ ಯುದ್ಧದ ಕ್ರಮವನ್ನು ನೋಡಿ ಆನಂದಪಡುತ್ತ ವಿಶ್ರಾಂತಿಯನ್ನು ಹೊಂದಿದ್ದನು. ಅದರಿಂದ ಅವನು ಈಗ ಹೊಸ ಹುರುಪಿನಿಂದ ಯುದ್ಧವನ್ನು ಆರಂಭಿಸಿದನು. ಪಠಾಣ ಸೇನೆಯು ಛಿನ್ನಭಿನ್ನವಾಗಿ ಹೋಯಿತು

ಮುಹೂರ್ತಮಾತ್ರದಲ್ಲಿ ಅವನ ಆ ಕರಾಳವಾದ ಕತ್ತಿಯ ಪೆಟ್ಟಿನಿಂದ ಅಸಂಖ್ಯ ಪಠಾಣ ಸೈನಿಕರು ಹತರಾದರು. ಆ ಬಾಲಕನ ದಕ್ಷತೆಯನ್ನೂ ಯುದ್ಧ ಕೌಶಲ್ಯವನ್ನೂ ಅಸಾಧಾರಣವಾದ ಬಾಹುಬಲವನ್ನೂ ಅವನ ಆ ಸುಕುಮಾರ ಮುಖಮಂಡಲದಲ್ಲಿಯ ಉತ್ಸಾಹ, ಸ್ಫೂರ್ತಿ ಮುಂತಾದ ಲಕ್ಷಣಗಳನ್ನೂ ನೋಡಿ ಪಠಾಣರು ತಮಗೆ ಯುದ್ಧದಲ್ಲಿ ಜಯವು ಅಸಂಭವವೆಂದು ಭಾವಿಸಿಕೊಂಡರು. ಆದರೆ ಈ ಸ್ಥಿತಿಯು ಬಹಳಹೊತ್ತಿನವರೆಗೆ ಉಳಿಯಲಿಲ್ಲ. ಅಗಣಿತವಾದ ಪಠಾಣ ಸೇನೆಯ ಎದುರಿಗೆ ಒಬ್ಬನೇ ಒಬ್ಬ ಬಾಲಕನು ಎಷ್ಟೆಂದು ಯುದ್ಧ ಮಾಡುವನು ? ಆ ಹಸುಳನು ಬಸವಳಿದನು. ಪಠಾಣ ಸೈನಿಕರ ಕಡತದಿಂದ ಅವನ ಕುದುರೆಯು ಸತ್ತು ಬಿದ್ದಿತು. ಆದರೂ ಆ ಅಭಿಮನ್ಯುವು ಧೈರ್ಯಗೆಡದೆ ಯುದ್ಧವನ್ನು ನಡಿಸುತ್ತಲೇ ಇದ್ದನು ಅವನು ಇಷ್ಟು ಹೊತ್ತಿನವರೆಗೆ ವೈರಿಗಳನ್ನು ತುಂಡಿಸಲು ಯತ್ನಿಸುತ್ತಿದ್ದನು, ಆದರೆ ಈಗ ಆತ್ಮರಕ್ಷಣೆಯನ್ನು ಮಾಡಿಕೊಳ್ಳಲು ಆರಂಭಿಸಿದನು. ಅವನ ಶರೀರದಲ್ಲಿ ಹಲವು ಸಣ್ಣ ದೊಡ್ಡ ಗಾಯುಗಳಾಗಿದ್ದುವು. ಮೈ ಮೇಲಿನ ಬಟ್ಟೆಯೆಲ್ಲ ರಕ್ತದಿಂದ ಸಂಪೂರ್ಣವಾಗಿ ತೊಯಿದು ಹೋಗಿತ್ತು! ಸಾವಿರಾರು ಪಠಾಣ ಸೈನಿಕರನ್ನು ಇವರಿಬ್ಬರೇ ಕಡಿದು ಚಲ್ಲಿದರು. ಎಲ್ಲಿ ನೋಡಿದರೂ ಬರೇ ಹೆಣ! ಅವರನ್ನು ಮುತ್ತಿದ ಪಠಾಣರಲ್ಲಿ ಇನ್ನು ಬಹಳ ಜನರು ಉಳಿದಿರಲಿಲ್ಲ. ಎಂಥ ಅಪ್ರತಿಮರಾದ ಭಟರವರು! ಅಂದಿನ ಗೋರಾಸಿಂಗ ಬಾದಲರ ಯುದ್ಧದ ವರ್ಣನಯನ್ನು ರಜಪೂತ ಭಾಟರು ಹಾಡುಕಟ್ಟಿ ಇಂದಿಗೂ ಹಾಡುವರು! ಆದರೆ ಪರಿಣಾಮವೇನಾಯಿತು?

ಬಾದಲನ ನೆರೆಯಲ್ಲಿ ಇನ್ನು ವಿಶೇಷ ಪಠಾಣ ಸೈನಿಕರಿರಲಿಲ್ಲ. ಆದರೆ ದೂರದಲ್ಲಿ ಸಮುದ್ರದ ತೆರೆಯಂತೆ ಏರಿಬರುತ್ತಿದ್ದ ಪಠಾಣ ಸೇನೆಯನ್ನು ನೋಡಿ ಮಾತ್ರ ಬಾದಲನು ಇನ್ನು ಆಶೆಯಿಲ್ಲವೆಂದಂದುಕೊಂಡನು. ಅವನು ಮನಸ್ಸಿನಲ್ಲಿ:— “ಆಯಿತು, ಒಳ್ಳೇದೇ ಆಯಿತು. ಇಂಥ ರಣಭೂಮಿಯಲ್ಲಿ

ಸ್ವದೇಶ ರಕ್ಷಣೆಗಾಗಿ ಸ್ವಜನರ ಅಭಿಮಾನರಕ್ಷಣೆಗಾಗಿ ಮೈಯಲ್ಲಿ ಪ್ರಾಣವಿರುವ ವರೆಗೂ ಕಾದಿ ದೇಹಬಿಡುವುದು ಕ್ಷತ್ರಿಯ ಕುಲೋತ್ಪನ್ನರಿಗೆ ಅತಿಶಯವಾದ ಶ್ರೇಯಸ್ಕರವೇ ಸರಿ. ಸೂರ್ಯ ದೇವನು ಅಸ್ತಾಚಲವನ್ನು ಸೇರಿರುವನು. ಆಕಾಶದಲ್ಲಿ ನಕ್ಷತ್ರಗಳು ಅಲ್ಲೊಂದು ಇಲ್ಲೊಂದು ಕಾಣಿಸುತ್ತಿರುವುವು. ಭೂದೇವಿಯು ನರಕಪಾಲಗಳಿಂದಲೂ ರಕ್ತ ಪ್ರವಾಹದಿಂದಲೂ ಕ್ಷತ್ರಿಯ ವೀರರಿಗೆ ಒಪ್ಪುವಂಥ ಭೀಷಣಸ್ವರೂಪವನ್ನು ತಳೆದಿರುವಳು. ಮಾತಾಮಹನಾದ ಗೋರಾಸಿಂಗನು ಇಲ್ಲಿಯೇ ಮಲಗಿರುವನು. ಇನ್ನೊಂದು ಗಳಿಗೆಯಲ್ಲಿ ನಾನೂ ಹೋಗಿ ಅವನ ಬಳಿಯಲ್ಲಿಯೇ ಮಲಗಿಕೊಳ್ಳುವೆನು. ಇಂಥ ಸುಪ್ರಸಂಗವನ್ನು ಒದಗಿಸಿಕೊಟ್ಟಿದ್ದಕ್ಕಾಗಿ ಈಶ್ವರನನ್ನು ಎಷ್ಟು ಸ್ತುತಿಸಿದರೂ ಕಡಿಮೆಯೇ ಸರಿ. ಹೇ! ಪರಮೇಶ್ವರಾ! ಚಿತ್ತೂರಿನ ಹಾಗು ರಜಪೂತರ ಮಾನದ ರಕ್ಷಣೆಗಾಗಿ ನಾನು ಸಾಧ್ಯವಿರುವ ಮಟ್ಟಿಗೂ ಯತ್ನಿಸಿದೆನು. ನನ್ನ ಕೈ ಮೀರಿತು. ಇನ್ನು ನೀನೇ ಆ ಕಾರ್ಯವನ್ನು ವಹಿಸಿಕೊಳ್ಳಬೇಕು. ದುಷ್ಟದಮನ ಶಿಷ್ಟಪಾಲನಗಳು ನಿನ್ನ ಕರ್ತವ್ಯಗಳೇ ಸರಿ." ಎಂದು ಯೋಚಿಸುತ್ತ "ಹರ! ಮಹಾದೇವ!" ಎನ್ನುತ್ತ ಕುದುರೆಯಿಂದ ಉರುಳಿ ಬಿದ್ದುಬಿಟ್ಟನು.

ಪರಮೇಶ್ವರನು ಆ ಬಾಲಕನ ಮೊರೆಯನ್ನು ಕೇಳಿ ದುಷ್ಟರಾದ ಯವನರ ಸಂಹಾರಕ್ಕಾಗಿ ತನ್ನ ಶಬರ ಸೇನೆಯನ್ನು ಕಳುಹಿದನೋ ಎಂಬಂತೆ ಕಾರ್ಮೋಡಗಳಂತೆ ಮೈಬಣ್ಣವುಳ್ಳ ಅಸಂಖ್ಯ ಭಿಲ್ಲರು ಅಕಸ್ಮಾತ್ ರಣರಂಗವನ್ನೆಲ್ಲ ವ್ಯಾಪಿಸಿ ಪಠಾಣ ಸೈನಿಕರನ್ನು ತುಂಡುಗಡಿಯಹತ್ತಿದರು! ಪಠಾಣ ಸೈನಿಕರು ಈ ಅಕಲ್ಪಿತವಾದ ವೈರಿಗಳ ಆಕ್ರಮಣವನ್ನು ಸಹಿಸಲಾರದೆ ರಣಭೂಮಿಯಿಂದ ಕಾಲ್ತೆಗೆಯಲಾರಂಭಿಸಿದರು!

ನಿಶಾಪತಿ ಚಂದ್ರನು ಅಸಂಖ್ಯ ತಾರಕಾಪುಂಜಗಳೊಡನೆ ಆಕಾಶದಲ್ಲಿ ವಿರಾಜಿಸುತ್ತಿದ್ದನು. ಹಸರು ಹುಲ್ಲಿನ ನೆಲದ ಮೇಲೆ ಕೆಂಬಣ್ಣದ ಸೀರ್ವನಿಗಳ ರಂಗವಲ್ಲಿಯನ್ನು ತಳಿದು ಸಿಂಗರಿಸಿದ ಹಾಸಿಗೆಯ ಮೇಲೆ ಬೆಳದಿಂಗಳಿನ ಬಿಳಿಯ ಬಟ್ಟೆಯನ್ನು ಹೊತ್ತುಕೊಂಡು ರಣಪಟು ಸೇನಾಪತಿ ಬಾದಲನು ವಿಶ್ರಾಂತಿಪಡೆಯುತ್ತಿದ್ದನು. ಮಂದಮಾರುತನು ಅವನ ಸಮರ ಶ್ರಮವನ್ನು ಕಳೆಯಲು ಯತ್ನಿಸುತ್ತಿದ್ದನು.

## ಐದನೆಯ ಪರಿಚ್ಛೇದ

ಮೂರ್ಛೆಯಿಂದ ಎಚ್ಚತ್ತ ಬಾದಲನು ಬೆರಗಾದನು. ಅವನು:— "ಭೀಮಸಿಂಹನು ದುರ್ಗದೊಳಗಿನ ಸೈನ್ಯವನ್ನು ತೆಗೆದುಕೊಂಡು ಬಂದಿರುವನೇ! ಛೇ! ಅಲ್ಲ. ಇವರು ರಜಪೂತರಲ್ಲ, ಭಿಲ್ಲರು! ಎಲ್ಲಿಯ ಭಿಲ್ಲರಿವರು!" ಎಂದುಯೋಚಿಸುತ್ತಲಿದ್ದನು. ಪರಕ್ಷಣದಲ್ಲಿಯೇ ಒಬ್ಬ ರಜಪೂತಸವಾರನು ಬಾದಲನ ಕಡೆಗೆ ಭರದಿಂದಬರಹತ್ತಿದನು. ಬಾದಲನು ಕಣ್ಣಿಟ್ಟು ನೋಡಿದನು **ಅರುಣಸಿಂಹ!**

" ಅರುಣ! ಅರುಣ!" ಬಾದಲನು ಹೆಚ್ಚಿಗೆ ಮಾತಾಡಲಾರನು.

ಅರುಣಸಿಂಹನು ಬಾದಲನ ಬಳಿಗೆ ಬಂದು ಕುದುರೆಯಿಂದಿಳಿದನು. ಬಾದಲನು ಮಲಗಿದಲ್ಲಿಯೇ ಕೈಚಾಚಿ ಅವನನ್ನು ಅಪ್ಪಿಕೊಂಡನು. ಕ್ಷಣಹೊತ್ತಿನವರೆಗೆ ಯಾರೂ ಮಾತಾಡಲಿಲ್ಲ ಕಡೆಗೆ ಅರುಣಸಿಂಹನು:—"ಬಾದಲ! ನಾನಿಂದು ಪ್ರಾಯಶ್ಚಿತ್ತವನ್ನು ಹೊಂದಲು ಬಂದಿರುವೆನು. ನಾನು ಅಧಮನು. ನಾನಿನ್ನು ಇಲ್ಲಿ ನಿಲ್ಲಲಾರೆನು. ಅದೋ ನೋಡು, ಪಠಾಣ ಸೇನಾಪತಿಯು ಓಡಿಹೋಗುತ್ತಿರುವ ತನ್ನ ಸೈನಿಕರನ್ನು ತಿರುಗಿ ಕೂಡಿಸಿಕೊಂಡು ಈ ಕಡೆಗೆ ಬರುತ್ತಿರುವನು. ಆಯಿತು, ಹೋಗಿ ಬರುತ್ತೇನೆ ಪುನಃ ನನ್ನ ಹಾದಿಯನ್ನು ನೋಡದೆ ದುರ್ಗಕ್ಕೆ ಹೋಗಿ ಸುಖದಿಂದಿರು!" ಹೀಗೆಂದು ಅಶ್ವವನ್ನೇರಿ ಶರವೇಗದಿಂದ ಪಠಾಣ ಸೇನಾಸಮುದ್ರವನ್ನು ಪ್ರವೇಶಿಸಲು ಹೊರಟನು.

ಆಗ **ಬಾದಲನು**:— " ಅರುಣ! ಇನ್ನೂ ಅನೇಕ ಮಾತು ಕಥೆಗಳಿವೆ. ಆದರೆ ಈಗ ಸಮಯವಿಲ್ಲ. ಪಠಾಣರನ್ನು ಸೋಲಿಸಿ ಬಾ! ನಾನು ಇಲ್ಲಿಯೇ ಇರುತ್ತೇನೆ. ಇದೇ ಸ್ಥಳದಲ್ಲಿಯೇ! ನೀನು ತಿರುಗಿ ಬಾರದಿದ್ದರೆ ನಾನು ಎಂದೆಂದೂ ತಿರುಗಿ ಚಿತ್ತೂರಿಗೆ ಹೋಗೆನು! ಬೇಗನೆ ಬಾ! ಬೇಗನೆ!" ಎಂದು ಒದರಿ ಹೇಳಿದನು.

ರಾತ್ರಿಯ ಅಂಧಕಾರದಲ್ಲಿಯ ನಕ್ಷತ್ರಾಲೋಕವಂತೆ, ದೂರದಿಂದ ಅಸ್ಪಷ್ಟವಾಗಿ, ಬಾದಲನ ಕಿವಿಗೆ " ಒಳ್ಳೆಯದು!" ಎಂಬ ಶಬ್ದವು ಕೇಳಿಸಿತು. ಬಳಿಕ ಬಾದಲನು ಮೆಲ್ಲಗೆ ಎದ್ದು ಶವದರಾಶಿಯಲ್ಲಿ ಹುಡುಕುತ್ತ ಹುಡುಕುತ್ತ ಗೋರಾ

ಸಿಂಗನು ಮಲಗಿರುವ ಸ್ಥಳಕ್ಕೆ ಬಂದು ಮುಟ್ಟಿದನು. "ಅಹಹಾ ! ಕ್ಷತ್ರಿಯ ವೀರನೇ, ನಿನಗೆ ಇಂತಹ ಶಯ್ಯೆಯೇ ಒಪ್ಪುವುದು !" ಎಂಬ ಮಾತು ಆತನ ಬಾಯಿಯಿಂದ ಹೊರಬಿದ್ದಿತು.

ಗೋರಾಸಿಂಗನು ಈಗಾಗಲೇ ಇಹಲೋಕವನ್ನು ಬಿಟ್ಟುಹೋಗಿದ್ದನು. ಅವನ ಪ್ರಾಣಪಕ್ಷಿಯು ಈ ದೇಹಪಂಜರವನ್ನು ತೊಲಗಿಹೋಗಿ ಬಹಳ ಹೊತ್ತಾಗಿತ್ತು. ಆದರೆ ಅವನ ಆ ದೇಹಪಂಜರವು ಯಾವ ಅಪರೂಪವಾದ ಶಯ್ಯೆಯ ಮೇಲೆ ವಿಶ್ರಾಂತಿಯನ್ನು ಹೊಂದಿತ್ತೋ ಆ ಶಯ್ಯೆಯು ಮಾತ್ರ ದೇವ ದುರ್ಲಭವಾದುದೇ ಸರಿ. ರಕ್ತದಿಂದ ತೊಯಿದುಹೋಗಿದ್ದ ಎಳೆಗರಿಕೆಯ ಮೇಲೆ ಗೋರಾಸಿಂಗನು ದೀರ್ಘ ವಿಶ್ರಾಂತಿಯನ್ನು ಹೊಂದಿದ್ದನು. ಅವನು ಮಲಗುವಾಗ ಇಬ್ಬರು ಪಠಾಣರ ಹೆಣಗಳನ್ನು ತಲೆದಿಂಬಿಗೂ ಇಬ್ಬರ ಶವಗಳನ್ನು ಎಡಬಲಕ್ಕೂ ಒಬ್ಬನ ದೇಹವನ್ನು ಗಾಯವಾಗಿದ್ದ ತನ್ನ ಎಡದ ತೊಡೆಗೆ ಆನಿಕೆಯಾಗಿಯೂ ಇಟ್ಟುಕೊಂಡು ಮಲಗಿದ್ದನು. ಬಾದಲನು ಈ ಅಪರೂಪವಾದ ನೋಟವನ್ನು ನೋಡಿ ವಿಸ್ಮಿತನಾಗಿ ಅಲ್ಲಿಯೇ ಕುಳಿತುಕೊಂಡನು.

ರಾತ್ರಿಯು ಸುಮಾರು ಹತ್ತುಗಳಿಗೆಯಾಯಿತು. ಅರುಣಸಿಂಹನು ಶತ್ರುಗಳ ಹೆಣಗಳನ್ನು ಎಡವುತ್ತ ತಡವುತ್ತ ಅಲ್ಲಿಗೆ ಬಂದನು. ಆಗ ಬಾದಲನು— "ಅರುಣ, ದಾದಾನ ಮೃತ್ಯುಶಯ್ಯೆಯನ್ನು ನೋಡಿದೆಯಾ ! ಅರುಣ,ಕ್ಷತ್ರಿಯ ವೀರರಿಗೆ ಇದಕ್ಕಿಂತಲೂ ಹೆಚ್ಚಿಗೆ ಏನು ಬೇಕು! " ಎಂದನು.

ಅರುಣಸಿಂಹನ ಕಣ್ಣುಗಳಲ್ಲಿ ನೀರು ತುಂಬಿತು. ಅವನು—"ಬಾದಲ, ಇಂಥ ವೀರಪುರುಷರಿಗೆ ಯೋಗ್ಯವಾದ ಶಯ್ಯೆಯಲ್ಲಿ ಮಲಗುವುದು ನನ್ನ ಅದೃಷ್ಟದಲ್ಲಿಲ್ಲ. ಬಾದಲ, ನಾನು ಎಂಥ ಪಾಪಿಯು. ಇಂಥ ಆಪತ್ಕಾಲದಲ್ಲಿ ಚಿತ್ತೂರಿನ ಒಬ್ಬ ಸಾಮಾನ್ಯ ಸೈನಿಕನ ಹಾಗೆ ಯುದ್ಧಮಾಡಿ ರಣರಂಗದಲ್ಲಿ ದೇಹ ಬಿಡುವುದು ಕೂಡ ನನ್ನ ಭಾಗ್ಯದಲ್ಲಿ ಇಲ್ಲದೆ ಹೋಯಿತಲ್ಲ ! " ಎಂದು ಮಹಾ ಶೋಕಾವೇಗದೊಡನೆ ನುಡಿದನು.

ಬಾದಲನು ದುಃಖದಿಂದ ಅರುಣಸಿಂಹನನ್ನು ನೋಡುತ್ತ ಎದ್ದುನಿಂತನು. ಅರುಣಸಿಂಹನು ಪುನಃ ಹೇಳಿದನು:—ಬಾದಲ, ಪಠಾಣರು ಪರಾಜಯ ಹೊಂದಿ

ದರು. ಇನ್ನು ಅವರಿಂದ ಚಿತ್ತೂರಿಗೆ ಭಯವಿಲ್ಲ. ಅಲ್ಲಾವುದ್ದೀನನು ಬೆಳಗಾಗುವುದರೊಳಗೆ ಇಲ್ಲಿಂದ ಹೊರಟುಹೋಗುವನು; ಆದರೆ ನನ್ನ ಮನಸ್ಸಿಗೆ ಮಾತ್ರ ಸ್ವಲ್ಪವೂ ಶಾಂತಿಯಿಲ್ಲ. ಯಾರೂ ನನ್ನನ್ನು ಇಂದು ಯುದ್ಧಕ್ಕಾಗಿ ಕರೆದಿರಲಿಲ್ಲ. ನಾನೇ ಯುದ್ಧರಂಗದಲ್ಲಿ ಮರಣಹೊಂದಿ ಈ ಪಾಪಿಜೀವಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಕೊಡಬೇಕೆಂದು ಬಂದಿದ್ದೆನು. ಆದರೆ ಅದೂ ಸಾಧಿಸಲಿಲ್ಲ. ಮೃತ್ಯುದೇವತೆಗೂ ನಾನು ಬೇಡವಾದೆನು. ನನಗೆ ಇನ್ನೆಲ್ಲಿ ಆಶ್ರಯ! ಬಾದಲ, ನನಗೆ ಪ್ರಾಯಶ್ಚಿತ್ತದ ಮಾರ್ಗವನ್ನಾದರೂ ತೋರಿಸುವೆಯಾ!

**ಬಾದಲ**–"ಅರುಣ, ಯಾತಕ್ಕೆ ವ್ಯಸನಪಡುವೆ? ಸುಮ್ಮನೆ ನನ್ನ ಸಂಗಡ ದುರ್ಗಕ್ಕೆ ನಡೆ. ಇಂದು ನಿನ್ನ ಸಾಹಸದಿಂದ ಚಿತ್ತೂರು ಉದ್ಧಾರವಾಯಿತು. ರಾಣರವರು ನಿಶ್ಚಯವಾಗಿಯೂ ನಿನ್ನನ್ನು ಕ್ಷಮಿಸುವರು. ಸಂಶಯವಿಲ್ಲ"

ಅರುಣಸಿಂಹನು ತಲೆಯನ್ನು ತಗ್ಗಿಸಿ–"ಬಾದಲ, ಆ ಮಾತು ಎಂದಿಗೂ ಆಗದು. ಚಿತ್ತೂರಿನಲ್ಲಿ ನನಗೆ ಇನ್ನು ಸ್ಥಳವಿಲ್ಲ. ಚಿತ್ತೂರಿಗೆ ತಿರುಗಿಹೋಗುವ ಆಶೆಯು ಇನ್ನು ಮೇಲೆ ನನಗಿರುವುದಿಲ್ಲ. ಚಿತ್ತೂರಿನ ಸುಖದುಃಖಗಳಲ್ಲಿ ಪಾಲುಗಾರನಾಗಬೇಕೆಂಬುದಿಷ್ಟೇ ನನ್ನ ಅಪೇಕ್ಷೆ. ಒಂದು ವೇಳೆ ಚಿತ್ತೂರಿನವರು ಸುಖದ ದಿನಗಳಲ್ಲಿ ನನ್ನನ್ನು ಸ್ಮರಿಸಿಕೊಳ್ಳದೆ ಇದ್ದರೂ ದುಃಖದ ಕಾಲದಲ್ಲಿಯಾದರೂ ಸ್ಮರಿಸಿ ಅವರ ದುಃಖದಲ್ಲಿ ನನ್ನನ್ನು ಪಾಲುಗಾರನನ್ನಾಗಿ ಮಾಡಿಕೊಂಡರೆ, ನಾನು ಕೃತಾರ್ಥನಾಗುವೆನು" ಎಂದನು.

ಬಾದಲನಿಗೆ ಈ ಮಾತಿನ ಅರ್ಥವಾಗಲಿಲ್ಲ. ಅವನು ವಿಸ್ಮಿತನೇತ್ರದಿಂದ ಅರುಣಸಿಂಹನ ಮುಖವನ್ನು ನೋಡುತ್ತ ನಿಂತುಕೊಂಡನು.

ಅರುಣಸಿಂಹನು ಮುಖವನ್ನು ಸ್ವಲ್ಪ ಮೇಲಕ್ಕೆತ್ತಿ, ವಿಸ್ಮಿತನೇತ್ರದಿಂದ ತನ್ನನ್ನು ನೋಡುತ್ತ ನಿಂತಿರುವ ಬಾದಲನ ಮೋರೆಯನ್ನು ನೋಡಿ ಮೆಲ್ಲನೆ ನಕ್ಕನು. ಹಾಗು–"ಬಾದಲ, ನಾನು ಹೇಳಿದ್ದು ತಿಳಿಯಲಿಲ್ಲವೇ? ನಿನಗೆ ಹೇಗೆ ತಾನೇ ತಿಳಿದೀತು? ಆ ಭಿಲ್ಲರ ಸೇನೆಯನ್ನು ನೋಡಿದೆಯಾ?" ಎಂದನು.

ಬಾದಲನು ಆಶ್ಚರ್ಯದಿಂದ—"ಆ ಭಿಲ್ಲರು ಎಲ್ಲಿಯವರು? ಆ ರೀತಿಯಾಗಿ ಮಹಾಸಾಗರದ ತೆರೆಯಂತೆ ಬಂದು ಪಠಾಣರನ್ನು ದಿಕ್ಕುದಿಕ್ಕಿಗೆ ಓಡಿಸಿಬಿಟ್ಟರು ಅರುಣ, ಅವರನ್ನೆಲ್ಲ ನೀನು ಎಲ್ಲಿ ಸಂಪಾದಿಸಿದೆ?" ಎಂದನು.

**ಅರುಣ** :—ಬಾದಲ, ನಾನು ಚಿತ್ತೂರಿನ ಸಿಂಹಾಸನದ ವಿನಿಮಯದಿಂದ ಈ ಭಿಲ್ಲರ ಆಧಿಪತ್ಯವನ್ನು ಸಂಪಾದಿಸಿದೆನು; ಇವರ ಹೃದಯಸಿಂಹಾಸನದಲ್ಲಿ ಆಶ್ರಯವನ್ನು ಹೊಂದಿದೆನು. ಈ ಸಿಂಹಾಸನವೂ ರಾಣಾನ ಸಿಂಹಾಸನದಂತೆಯೇ ಉಜ್ವಲವೂ ವೈಭವಯುಕ್ತವಾದದ್ದೂ ಆಗಿರುವುದು. ಭಿಲ್ಲರ ಹುಡುಗಿಯೊಬ್ಬಳು ತನ್ನ ಹೃದಯಸಿಂಹಾಸನದ ಅಧಿಕಾರವನ್ನು ನನಗೆ ಅರ್ಪಿಸಿರುವಳು.

ಬಾದಲನಿಗೆ ಈ ಮಾತಿನಲ್ಲಿ ಒಮ್ಮೆಲೆ ವಿಶ್ವಾಸವುಂಟಾಗಲಿಲ್ಲ. ಅವನು ಮನಸಿನಲ್ಲಿ—"ಅರುಣಸಿಂಹನು ಇದೇನು ಹೇಳುತ್ತಿರುವನು? ಅವನು ಮಹಾರಾಣಾನ ಜ್ಯೇಷ್ಠಪುತ್ರನಾಗಿ ಇಂಥ ಅಡವಿಯ ಭಿಲ್ಲರ ಹುಡುಗಿಯ ಪ್ರಣಯ ಪಾಶದಲ್ಲಿ ಸಿಲುಕಿಬಿದ್ದನೇ ? ಎಂದು ಯೋಚಿಸುತ್ತಲಿದ್ದನು. ಅರುಣಸಿಂಹನು ಬಾದಲನ ಮನಃಸ್ಥಿತಿಯನ್ನರಿತುಕೊಂಡು ಹೇಳಿದನು :—ಅಂಜಬೇಡ ಬಾದಲ! ಆ ರಮಣಿಯು ನಿಜವಾಗಿಯೂ ಕೀಳು ಕುಲದವಳಲ್ಲ. ಭಿಲ್ಲರ ಸಹವಾಸದಿಂದ ಅವಳು ಭಿಲ್ಲರಂತೆ ತೋರುವಳು. ಅವಳು ಶುದ್ಧ ರಜಪೂತಕುಲದಲ್ಲಿ ಹುಟ್ಟಿದವಳು. ಅವಳ ತಂದೆಯು ಚಂದನವಂಶದಲ್ಲಿ ಹುಟ್ಟಿದವನು. ಆಹೇರಿಯಾದ ದಿವಸದ ಕಥೆಯು ನೆನಪಿದೆಯಷ್ಟೇ! ಮಂಚಿಕೆಯಮೇಲೆ ನಿಂತು ಹೊಲಕಾಯುತ್ತಿದ್ದ ಆ ಸರ್ವಾಂಗಸುಂದರಿಯಾದ ರಮಣಿಯನ್ನು ನೀನು ನೋಡಿರುವೆಯಲ್ಲವೇ?

**ಬಾದಲ** —ಹಾ,! ತಿಳಿಯಿತು. ಆಹೇರಿಯಾದ ಬೇಟೆಯಿಂದ ತಪ್ಪಿಸಿಕೊಂಡು ಹೋಗುತ್ತಿರುವ ವರಾಹಗಳನ್ನು ಕೊಂದ ವೀರರಮಣಿಯಲ್ಲವೆ?

**ಅರುಣಸಿಂಹ**:—ಹೌದು. ಅವಳು ಭಿಲ್ಲರ ಅಧಿಪತಿಯಾದೊಬ್ಬ ರಜಪೂತ ಸರದಾರನ ಒಬ್ಬಳೇ ಮಗಳು. ಅವಳೇ ನನ್ನ ಆಶ್ರಯದಾತಳು.

**ಬಾದಲ**—ಹಾಗಾದರೆ ಅವಳು ನಿನ್ನ ಧರ್ಮಪತ್ನಿಯೇನು ?

**ಅರುಣಸಿಂಹ**—ಸರಿ. ಅದಕ್ಕಿಂತಲೂ ಹೆಚ್ಚಿನ ಶಬ್ದವೇನಾದರೂ ಇದ್ದರೆ ಅದನ್ನೇ ಹೇಳು. ಅವಳೇ ನನ್ನ ಆಯುಷ್ಯಮಾರ್ಗದ ಧ್ರುವತಾರೆಯು. ಅವಳೇ ನನ್ನ ಅಸ್ತ್ರವಿದ್ಯೆಯ ಗುರುವು. ಅವಳೇ ನನ್ನ ಇಹಲೋಕ ಪರಲೋಕಗಳ ಸಖಿಯು. ಈ ನಮ್ಮ ಸಂಬಂಧವು ಎಂದೂ ಭಿನ್ನವಾಗಲಾರದು.

ಕಿಶೋರವಯಸ್ಕನಾದ ಬಾದಲನಿಗೆ ಅರುಣಸಿಂಹನ ಇಷ್ಟೆಲ್ಲ ಮಾತಿನ ಅರ್ಥವಾಗಲಿಲ್ಲ. ಅವನು:—"ಅರುಣ, ಹಾಗಾದರೆ ನಿನಗಿನ್ನು ದುರ್ಗದಲ್ಲಿ ಸ್ಥಳವಿಲ್ಲ. ಹಾಯ್! ಎಂಥ ಪ್ರಮಾದವಾಯಿತು! ವಿಧಿಯ ಮಹಿಮೆಯು ವಿಚಿತ್ರವಾದದ್ದು. ಒಳ್ಳೆಯದು, ನೀನು ನಿನ್ನ ಸ್ಥಾನಕ್ಕೆ ಹೋಗು. ನಾನು ದುರ್ಗವನ್ನು ಪ್ರವೇಶಿಸುವೆನು. ರಾಣರವರು ನನ್ನ ದಾರಿಯನ್ನು ನೋಡುತ್ತಿದ್ದಾರು." ಎನ್ನುತ್ತ ಹೊರಡಲು ಸಿದ್ಧನಾದನು.

**ಅರುಣ**:—ಬಾದಲ, ಒಳ್ಳೇದು ಹೋಗಿಬಾರಪ್ಪಾ ಮಗು. ಅಮ್ಮನಾಗಲಿ ಪದ್ಮಿನೀದೇವಿಯವರಾಗಲಿ ನನ್ನನ್ನು ಕೇಳಿದರೆ ನಾನು ಸುಖವಾಗಿರುವೆನೆಂದು ಹೇಳು.

ಬಾದಲನು ಅರುಣಸಿಂಹನನ್ನು ಬೀಳ್ಕೊಂಡು ದುರ್ಗದ ಮಹಾದ್ವಾರಕ್ಕೆ ಬಂದು ಸೇರಿದನು. ರಾಣಾಲಕ್ಷ್ಮಣಸಿಂಹನೂ ಭೀಮಸಿಂಹನೂ ಮಿಕ್ಕ ಸರದಾರರೂ ಅಲ್ಲಿ ಅವನ ಇದಿರು ನೋಡುತ್ತಲಿದ್ದರು. ಬಾದಲನನ್ನು ಕಂಡೊಡನೆ ರಾಣನು ಮುಂದೆ ಬಂದು ಅವನನ್ನು ಕುದುರೆಯಿಂದ ಇಳಿಸಿಕೊಂಡು ಅಭಿಮನ್ಯು ಚಕ್ರಬಿಂಬದ ಕದನದಲ್ಲಿ ವಿಜಯ ಶಾಲಿಯಾಗಿ ಬಂದೆಯೇನಪ್ಪಾ ಮಗು, ದಾದಾ ಗೋರಾಸಿಂಗನೆಲ್ಲಿ?

ಬಾದಲನ ಹೃದಯದಲ್ಲಿ ರಣೋನ್ಮತ್ತತೆಯಿಂದ ಮರೆಯಾಗಿದ್ದ ದುಃಖದ ಪ್ರವಾಹವು ಕಟ್ಟೊಡೆದ ಜಲ ಪ್ರವಾಹದಂತೆ ಹೊರಸೂಸಿ ಹರಿಯಿತು. ಬಾದಲನು ಬಿಕ್ಕಿಬಿಕ್ಕಿ ಅಳಹತ್ತಿದನು. ಇದನ್ನು ಕಂಡ ರಾಣನೂ ಭೀಮಸಿಂಹನೂ ದುಃಖಾವೇಗದಿಂದ ಕಳವಳಗೊಂಡರು. ರಾಣನು:—"ಚಿತ್ತೂರಿನ ಉದ್ಧಾರಕ್ಕಾಗಿ ರಣದೇವತೆಗೆ ಸ್ವಶರೀರವನ್ನೇ ಬಲಿಯಾಗಿ ಅರ್ಪಿಸಿದ ವೀರಾಧಿವೀರ ಗೋರಾಸಿಂಗನ ಶರೀರವನ್ನು ಈಗಲೇ ಶೋಧಿಸಿಕೊಂಡು ಬಂದವರಿಗೆ ಈ ವಜ್ರದ ಬಿರುದಿನ ಬಳೆಯನ್ನು ಕೊಡುವೆನು" ಎಂದನು. ಆರೆಂಟು ಜನ ರಜಪೂತ ಸವಾರರು ಒಬ್ಬರಹಿಂದೊಬ್ಬರು ದುರ್ಗದಿಂದ ಇಳಿದು ಹೊರಟರು.

---

# ಆರನೆಯ ಪರಿಚ್ಛೇದ

ಈ ದಿನದ ಮಹಾಸಂಗ್ರಾಮದ ತರುವಾಯ ಅಲ್ಲಾವುದ್ದೀನನು ನಿರಾಶೆಯಿಂದ ತನ್ನ ಉಳಿದಿದ್ದ ಅಲ್ಪಸ್ವಲ್ಪ ಸೇನೆಯನ್ನು ತೆಗೆದುಕೊಂಡು ದಿಲ್ಲಿಗೆ ಹೊರಡಬೇಕಾಯಿತು. ಅವನು ಯುದ್ಧದಲ್ಲಿ ಗಾಯವಟ್ಟವರನ್ನು ಕೂಡಿಕೊಂಡು ನೀವು ಹಿಂದಿನಿಂದ ಬನ್ನಿರೆಂದು ಸೇನಾಪತಿಗೆ ಆಜ್ಞಾಪಿಸಿ ತಾನು ಕೆಲವರು ನಂಬಿಗಸ್ಥರಾದ ಸೈನಿಕರೊಡನೆ ಮುಂದೆ ದಿಲ್ಲಿಗೆ ಹೊರಟನು.

ಅಭಿಮಾನಿಗಳಾದ ರಜಪೂತರು ಕ್ರೂರಾತ್ಮನೂ ಅವಿಚಾರಿಯೂ ವಂಚಕನೂ ಆದ ವರಾಣನ ಕೈಯಿಂದ ಚಿತ್ತೂರನ್ನು ಅಂತೂ ಇಂತೂ ಸದ್ಯಕ್ಕೆ ಉದ್ಧಾರಮಾಡಿದರು ; ಅದರಿಂದ ಅವರಿಗೆ ಆನಂದವಾಯಿತು. ಆದರೆ ಅರುಣಸಿಂಹ ಗೋರಾಸಿಂಗರ ವಿಚಾರವು ಸ್ಮರಣೆಗೆ ಬಂದರೆ ಅವರಿಗೆ ಆ ಆನಂದವು ದುಃಖಕ್ಕೆ ಕಾರಣವಾಗುತ್ತಿತ್ತು.

ಅಪ್ರತಿಮ ರಣಶೂರನಾದ ಗೋರಾಸಿಂಗನು ರಣಭೂಮಿಯಲ್ಲಿ ದೇಹವಿಟ್ಟನು. ಅವನ ಎಣೆಯಿಲ್ಲದ ಯುದ್ಧಕೌಶಲವನ್ನು ನೋಡುವ ಪ್ರಸಂಗವು ಇಂದಿನವರೆಗೂ ಅವರಿಗೆ ಒದಗಿದ್ದಿಲ್ಲ. ಇಂದು ಅವರಿಗೆ ಆ ಸುಯೋಗವು ಒದಗಿ ಬಂದಿತ್ತು. ಆದರೆ ಒಡನೆಯೇ ಅವನನ್ನು ಕಳೆದುಕೊಳ್ಳುವ ದುರ್ಯೋಗವೂ ಕೂಡಿ ಬಂದಿತು ! ಸ್ವರ್ಗದ ಯಾವುದೋ ಒಂದು ದೇವತೆಯು ಮಾನವರೂಪವನ್ನು ಧರಿಸಿ ತಮ್ಮಲ್ಲಿ ಇಂದಿನವರೆಗೆ ಉಳಿದಿತ್ತೆಂತಲೂ ಇಂದು ಆ ದೇವತೆಯು ತಮ್ಮನ್ನು ಬಿಟ್ಟು ಸ್ವರ್ಗಕ್ಕೆ ತಿರುಗಿ ಹೋಗಿಬಿಟ್ಟಿತೆಂತಲೂ ಅವರು ಭಾವಿಸಿದರು.

ಇನ್ನು ರಾಜಪುತ್ರನಾದ ಅರುಣಸಿಂಹನ ವಿಚಾರ. ರಾಜಪುತ್ರನ ವಿಯೋಗದಿಂದ ಚಿತ್ತೂರಿನ ರಜಪೂತರಿಗೆ ಮೊದಲೇ ತುಂಬಾ ವಿಷಾದವುಂಟಾಗಿತ್ತು. ಆದರೆ ಇಡೀ ರಾಜ್ಯಕ್ಕೆ ಒದಗಿದ್ದ ಮಹಾ ವಿಪತ್ತಿನಲ್ಲಿ ಅವರಿಗೆ ಈ ವಿಚಾರವು ಅಷ್ಟೊಂದು ಕಷ್ಟವನ್ನುಂಟು ಮಾಡಿರಲಿಲ್ಲ. ಆದರೆ ರಜಪೂತರಿಗೂ ಯವನರಿಗೂ ನಡೆದ ಅಂದಿನ ಮಹಾ ಸಂಗ್ರಾಮದಲ್ಲಿ ಅವನು ತೋರಿಸಿದ ಅತುಲವಾದ ಶೌರ್ಯ, ಅಸಾಧಾರಣವಾದ ಸ್ವದೇಶಭಕ್ತಿ ಇವು ಸ್ಮರಣೆಗೆ ಬಂದ ಕೂಡಲೆ ರಜಪೂತ ಸರದಾರರೆಲ್ಲರೂ ಕಣ್ಣೀರು ಸುರಿಸುವರು. ರಾಣಾ ಲಕ್ಷ್ಮಣಸಿಂಗನೂ

ಅವನ ರಾಣಿಯೂ ಮಹಾ ದುಃಖಕ್ಕೆ ಒಳಗಾದರು. ಆದರೆ ರಾಣನು ತನ್ನ ಕರ್ತವ್ಯವನ್ನು ನೆನೆದು ಮಗನನ್ನು ತಿರುಗಿ ಕರೆಯಿಸಲು ಸಮ್ಮತಿಸಲಿಲ್ಲ.

ಪತಿಯ ಮರಣವಾರ್ತೆಯನ್ನು ಕೇಳಿ ಗೋರಾಸಿಂಗನ ಪತ್ನಿಯು ಮನಸ್ಸಿನಲ್ಲಿ ಅತ್ಯಂತ ಮರುಗಿದಳು. ಅವಳಿಗೆ ಜಗತ್ತೇ ಶೂನ್ಯವೆನಿಸಿತು. ಆದರೆ ಅವಳು ಪರಕ್ಷಣದಲ್ಲಿಯೇ ತಕ್ಕ ಸಮಾಧಾನವನ್ನು ಪಡೆದಳು. ಅವಳು ಬಾದಲನನ್ನು ಕರೆದು–"ಮಗುವೇ, ಒಮ್ಮೆ ಅವರ ಶೌರ್ಯ ರಣಚಾತುರ್ಯಗಳ ಸಂಗತಿಯನ್ನು ವರ್ಣಿಸಿ ಹೇಳು. ಅದನ್ನು ಕೇಳಿ ನಾನು ಸಂತೋಷದಿಂದ ಚಿತಾರೋಹಣಮಾಡುವೆನು." ಎಂದಳು. ಬಾದಲನು ಅವಳ ಬಳಿಯಲ್ಲಿ ನಿಂತುಕೊಂಡು, ಗೋರಾಸಿಂಗನು ಯಾವರೀತಿಯಾಗಿ ಶತ್ರುಸೇನೆಯನ್ನು ತುಂಡುಗಡಿದನು, ಯಾವ ರೀತಿಯಾಗಿ ಮರಣಕಾಲದಲ್ಲಿಯೂ ಶತ್ರುಗಳ ಮೃತದೇಹಗಳನ್ನು ಕೂಡಿಹಾಕಿ ಅವುಗಳ ಮೇಲೆ ಮಲಗಿಕೊಂಡು ಅತ್ಯಂತ ಸಮಾಧಾನದಿಂದ ಪ್ರಾಣವನ್ನು ಬಿಟ್ಟನು, ಇವೆಲ್ಲ ಸಂಗತಿಗಳನ್ನು ಒಳ್ಳೇ ಗಾಂಭೀರ್ಯಯುಕ್ತವಾದ ವಾಣಿಯಿಂದ ವರ್ಣಿಸಿ ಹೇಳಿದನು. ಆ ವಾರ್ತೆಯನ್ನು ಕೇಳಿ ಅವಳ ಕಣ್ಣುಗಳಿಂದ ಆನಂದಾಶ್ರುಗಳು ಉದುರಿದುವು. ಅವಳು ಬಾದಲನನ್ನು ಅಪ್ಪಿಕೊಂಡು, ಮಗುವೇ ಇನ್ನೊಮ್ಮೆ ಅದನ್ನೆಲ್ಲ ಹೇಳು, ಎಂದಳು. ಬಾದಲನು ಪುನಃ ಹೇಳಿದನು. ಆ ಬಳಿಕ ಅವಳು ಆನಂದದಿಂದ ಚಿತೋರೇಶ್ವರಿಯ ಮಂದಿರದ ಕಡೆಗೆ ನಡೆದಳು. ಅಂತ್ಯವಿಧಿಯನ್ನು ನೆರವೇರಿಸುವುದಕ್ಕಾಗಿ ಅವಳ ಪತಿಯ ಮೃತದೇಹವನ್ನು ಅಲ್ಲಿಗೆ ತಂದಿದ್ದರು.

ಚಿತ್ತೂರಿನ ಯಾವತ್ತು ಸ್ತ್ರೀ ಪುರುಷರು ಅಲ್ಲಿಗೆ ಬಂದಿದ್ದರು. ಅವರೆಲ್ಲರೂ ಹೂವಿನ ಮಾಲೆಗಳಿಂದಲೂ ಕುಂಕುಮಾದಿ ಸೌಭಾಗ್ಯಾಲಂಕಾರಗಳಿಂದಲೂ ಗೋರಾಸಿಂಗನ ಪ್ರೇತವನ್ನೂ ಆತನ ಪತ್ನಿಯನ್ನೂ ಅಲಂಕರಿಸಿದರು. ಪುರೋಹಿತನು ಮಂತ್ರವನ್ನು ಅನ್ನುತ್ತಿರಲು ಅವಳು ಆನಂದದಿಂದ ಪತಿಯ ಚಿತೆಯಲ್ಲಿ ದೇಹವನ್ನು ಈಡಾಡಿದಳು. ರಜಪೂತರೆಲ್ಲರೂ ದುಃಖಮಯವೋ ಸುಖಮಯವೋ ಆದ ಭಾವನೆಯಿಂದ 'ಹರಹರ ಮಹಾದೇವ!' ಎಂದು ಜಯಘೋಷ ಮಾಡಿದರು.

---

# ಐದನೆಯ ಖಂಡ

## ಪುನರ್ಮೇಘಸಂಚಾರ

### ಮೊದಲನೆಯ ಪರಿಚ್ಛೇದ

ದಿಲ್ಲೀನಗರದ ಒಂದು ಪಾರ್ಶ್ವದಲ್ಲಿ ಯಮುನಾನದಿಯ ದಂಡೆಯಲ್ಲಿ ಸುಸ್ವಚ್ಛವಾದೊಂದು ಬಂಡೆಗಲ್ಲಿನ ಮೇಲೆ ಮೊಗಲ್ ಸೇನಾಪತಿಯಾದ ತುರ್ಕೀ ಖಾನನೂ ಕರಣರಾಯನೂ ಕುಳಿತು ಮಾತಾಡುತ್ತಿದ್ದರು. ಸುನೀಲ-ಸಲಿಲ ವಾಹಿನಿಯಾದ ಯಮುನೆಯು, ದಂಡೆಯಲ್ಲಿಯ ಸುಂದರವಾದ ಮಂದಿರಗಳ ಅಸ್ಪಷ್ಟವಾದ ಛಾಯೆಯನ್ನೂ ಕಾಡುಗಿಡಗಳ ನೆರಳನ್ನೂ ಆಕಾಶಮಂಡಲದಲ್ಲಿ ವಿರಾಜಿಸುವ ತಾರಕಾಪತಿಯು ಉಡುಗಣ ಸಹಿತವಾದ ಪ್ರತಿಬಿಂಬವನ್ನೂ ಭೇದ ವಿಲ್ಲದೆ ಒಡಲಲ್ಲಿ ಧರಿಸಿಕೊಂಡು ಮಂದಗಮನದಿಂದ ಕೆಳಗಡೆಗೆ ಹರಿಯುತ್ತಲಿ ದ್ದಳು. ಒಬ್ಬ ದುಭಾಷಿಯು (ಉಭಯ ಭಾಷೆಗಳನ್ನು ಬಲ್ಲವ) ಒಬ್ಬರ ಅಭಿ ಪ್ರಾಯಗಳನ್ನು ಮತ್ತೊಬ್ಬರಿಗೆ ತಿಳಿಸಿ ಹೇಳುತ್ತಿದ್ದನು.

**ತುರ್ಕೀಖಾನ**:—ಅಲ್ಲಾವುದ್ದೀನನು ತಿರುಗಿ ಬರುವನಂತೆ! ನಮ್ಮ ಗುಪ್ತಚಾರರು ಸುದ್ದಿಯನ್ನು ತಂದಿರುವರು. ನಮಗೆ ದುರ್ಗದ ಒಳಭಾಗದ ವಿಚಾರವು ಏನೂ ಗೊತ್ತಿಲ್ಲ. ಸೇನಾಪತಿ ಜಾಫರಖಾನನ ಬಳಿಯಲ್ಲಿ ಎಷ್ಟು ಸೈನ್ಯವಿರುವದೋ ತಿಳಿಯದು. ಇಷ್ಟು ದಿನಗಳಾದರೂ ಅವನು ಹಣಿಯಲೊ ಲ್ಲನು. ಮೇಲಾಗಿ ನಮ್ಮ ಸೈನಿಕರಿಗೆ ಅಪರಿಚಿತವಾದ ಸ್ಥಳ. ಮುಂದೇನುಗತಿ?

ಕರಣರಾಯನು ತುಸುಹೊತ್ತು ಸುಮ್ಮನೆ ನಿಂತು ವಿಚಾರಮಾಡಿದನು. ಆ ಬಳಿಕ:—“ನೀವು ಹೇಳುವ ವಿಚಾರವು ಸರಿಯಾದುದಲ್ಲ. ಯಾಕಂದರೆ, ಈಗ ಆರೆಂಟು ದಿನ ಮುಂಚಿತವಾಗಿಯೇ ಹೊರಟ ಅವನ ಸೈನಿಕರು ಕೂಡ ಇನ್ನೂ

ದಿಲ್ಲಿಗೆ ಬಂದು ಮುಟ್ಟಿಲ್ಲ. ಹೀಗಿದ್ದು ಅಲ್ಲಾವುದ್ದೀನನೇ ಬಂದುಬಿಡಬಹುದೆಂಬುದು ಹೇಗೆ ? ಆದರೆ ಈಗ ನನ್ನ ಸಂಗಡ ಐವತ್ತು ಜನ ಶೂರ ಸಿಪಾಯಿಯರನ್ನು ಕಳುಹಿಸಿ ಕೊಡಿರಿ. ಬೆಳಗಾಗುವುದರೊಳಗೆ ನಿಮಗೆ ಎಲ್ಲ ಸಮಾಚಾರಗಳನ್ನು ತಂದು ಹೇಳುವೆನು. " ಎಂದನು.

**ತುರ್ಕೀಖಾನ**:— ನೀವು ಎಲ್ಲಿಗೆ ಹೋಗುವಿರಿ ?

**ಕರಣರಾಯ**:— ನಾನು ಗುಪ್ತರೀತಿಯಿಂದ ಅರಮನೆಯನ್ನು ಮೊದಲು ಪ್ರವೇಶಿಸಿ ಕಮಲೆಯನ್ನು ನನ್ನ ವಶಮಾಡಿಕೊಳ್ಳುವೆನು. ಆ ಬಳಿಕ ಉಳಿದ ವಿಚಾರ. ಅಂತಃಪುರದ ದಾಸ-ದಾಸಿಯರನ್ನು ಎದುರಿಸಲು ಐವತ್ತು ಜನ ಮೊಗಲ್ ಸೈನಿಕರು ಸಾಕು.

**ತುರ್ಕೀಖಾನ**:— ನೀವು ಮೊದಲು ನಿಮ್ಮ ಕಾರ್ಯವನ್ನು ಸಾಧಿಸಿಕೊಳ್ಳಲು ನೋಡುತ್ತೀರಿ. ದುರ್ಗವನ್ನು ವಶಮಾಡಿಕೊಂಡರೆ ನಿಮ್ಮ ಕಮಲೆಯು ನಿಮಗೆ ಸಹಜವಾಗಿ ದೊರೆಯಬಹುದಲ್ಲವೇ ?

**ಕರಣರಾಯ**:— ತಾವು ಹೀಗೆ ನನ್ನನ್ನು ಕೃತಘ್ನನೆಂದು ಭಾವಿಸುವಿರಾ ? ಕಮಲೆಯೂ ಅಂತಃಪುರದ ದಾಸದಾಸಿಯರೂ ಒಮ್ಮೆ ನಮ್ಮ ವಶರಾದರೆಂದರೆ ನಮಗೆ ದುರ್ಗದೊಳಗಿನ ಎಲ್ಲ ಗುಟ್ಟು ಸಹಜವಾಗಿ ಗೊತ್ತಾಗುವದು. ಅದಕ್ಕಾಗಿಯೇ ನಾನು ತಮಗೆ ಹೀಗೆ ಸೂಚನೆ ಮಾಡಿದೆನು. ಇದರಲ್ಲಿ ಅನ್ಯಥಾ ವಿಚಾರವಿಲ್ಲ.

**ತುರ್ಕೀಖಾನ** :— ನೀವು ಹೇಳುವಂತೆ ಕಮಲೆಯೂ ಅವಳ ದಾಸದಾಸಿಯರೂ ನಿಮ್ಮ ವಶವಾದರೂ ದುರ್ಗದ ಗುಟ್ಟನ್ನು ಹೇಳದಿದ್ದರೆ ?

**ಕರಣರಾಯ**:— ಮೊಗಲ್‌ಸೇನಾಪತಿಯೇ, ಆ ವಿಚಾರ ನನಗೆ ಕೂಡಿದುದು. ತಮಗೆ ಅದರ ಯೋಚನೆ ಬೇಡ.

ತುರ್ಕೀಖಾನನು ಹೆಚ್ಚಿಗೆ ಮಾತಾಡಲಿಲ್ಲ. ತನ್ನ ಸೈನಿಕರನ್ನು ಕರೆದು ಅವರಲ್ಲಿ ಐವತ್ತು ಜನರು ಕರಣರಾಯನನ್ನು ಅನುಸರಿಸಿ ಹೋಗಿ ಅವನು ಹೇಳಿದಂತೆ ನಡೆದುಕೊಳ್ಳಬೇಕೆಂದು ಅಪ್ಪಣೆಮಾಡಿದನು.

---

# ಎರಡನೆಯ ಪರಿಚ್ಛೇದ

ಗಭೀರವಾದ ರಾತ್ರಿಯಲ್ಲಿ, ನಿಶೆಯ ನಿಶ್ಚಲತೆಯನ್ನು ಭೇದಿಸಿಕೊಂಡು ಇಬ್ಬರು ಅಲ್ಲಾವುದ್ದೀನನ ಜನಾನಖಾನೆಯ ಬಳಿಯಲ್ಲಿ ಬಂದು ನಿಂತರು. ಅವರಲ್ಲಿ ಒಬ್ಬನು ಗಂಡಸು, ಇನ್ನೊಬ್ಬಳು ಹೆಂಗಸು.

**ಗಂಡಸು** ಕೇಳಿದನು:—ಇದೇ ಏನು ಕಮಲಾಬೇಗಮಳ ರಾಣೀವಾಸ ?

**ಹೆಂಗಸು** :— ಹೌದು. ( ಬಹು ಮೆಲ್ಲಗೆ ಹೇಳಿದಳು. )

**ಗಂಡಸು** :— ಅಲ್ಲಿ ಯಾರು ಯಾರು ಇದ್ದಾರೆ ?

**ಹೆಂಗಸು** :—ಅಲ್ಲಿ ಇನ್ನಾರೂ ಇಲ್ಲ. ಬೇಗಮಳೊಬ್ಬಳೇ ಮಲಗಿರುವಳು.

**ಗಂಡಸು** :— ಒಳ್ಳೇದು, ನೀನಿನ್ನು ಹೋಗಬಹುದು. ಹಿಡಿ. ಈ ಉಂಗುರವನ್ನು ಬಾಗಿಲಲ್ಲಿರುವ ದ್ವಾರಪಾಲಕರಿಗೆ ತೋರಿಸು. ಅವರು ನಿನ್ನನ್ನು ಹೊರಗೆ ಬಿಡುವರು. ನಡೆ. ನಿಲ್ಲಬೇಡ. ಹೊರಗೆ ಹೋದವಳೇ ಮಾರ್ಗದ ಬಳಿಯಲ್ಲಿರುವ ಸೈನಿಕರಿಗೆ ಯಾವ ರೀತಿಯಿಂದಲೂ ಸದ್ದುಮಾಡದೆ ನಿಂತಿರಬೇಕೆಂದು ಹೇಳಿದೆನೆಂದು ತಿಳಿಸು. ಇಲ್ಲಿ ಇನ್ನಾರೂ ದಾಸಿಯರಿಲ್ಲವಷ್ಟೇ ?

**ಹೆಂಗಸು** :— ಇಲ್ಲ. ನಾನೇ ಬೇಗಮಳ ಮುಖ್ಯದಾಸಿಯು. ಇಲ್ಲಿ ಇನ್ನಾರೂ ಇಲ್ಲ. ಅರಮನೆಯ ಆ ಭಾಗದಲ್ಲಿ ಇನ್ನೊಬ್ಬ ದಾಸಿಯು ಎಚ್ಚರದಿಂದಿರುವಳು. ಆದರೆ ಆ ಸ್ಥಳವು ಬಹಳ ದೂರದಲ್ಲಿದೆ.

**ಗಂಡಸು** :— ಸರಿ ಈಗ ನೀನು ಹೋಗು. ನಾಳೆ ಬೆಳಗಾಗುತ್ತಲೇ ನೀನು ಇನ್ನೊಮ್ಮೆ ನನ್ನನ್ನು ಕಾಣಬೇಕು.

ಹೆಂಗಸು ಹೊರಟುಹೋದಳು. ಪಾಠಕಮಹಾಶಯ, ಆ ಗಂಡಸು ಯಾರು ? ಗುರ್ಜರೇಶ್ವರನಾದ ಕರಣರಾಯ! ಕರಣರಾಯನು ದಾಸಿಯು ಹೊರಟು ಹೋದಬಳಿಕ ಬೇಗಮಳು ಮಲಗಿರುವ ಕೋಣೆಯನ್ನು ಪ್ರವೇಶಿಸಿದನು.

ಕೋಣೆಯ ಬಾಗಿಲಿಗೆ ಬಂದಕೂಡಲೆ ಒಳಗೆ ಯಾರೋ ಮಾತಾಡುವ ಹಾಗೆ ಕೇಳಿತು. ಕರಣರಾಯನು ಅಲ್ಲಿಯೇ ಮರೆಗೆ ನಿಂತು ಕೇಳತೊಡಗಿದನು. " ಬಹಳವಾದರೆ ಹದಿನೈದು ದಿನಗಳಲ್ಲಿಯೇ ತಿರುಗಿ ಬರುವೆನೆಂದು ಹೇಳಿ

ಹೋಗಿದ್ದಿರಿ. ಹದಿನೈದು ದಿನಗಳಾದವು, ಹದಿನೈದು ತಿಂಗಳುಗಳಾದವು! ಇನ್ನೂ ಇಲ್ಲ. ಸರದಾರ ತೊರಾಬಖಾನನು ಇಂದು ಮುಂಜಾನೆ ಹೇಳಿದನು,-- ಇಂದು ರಾತ್ರಿಯ ಹತ್ತು ಘಂಟೆಗೆ ಎಲ್ಲಿದರೂ ಬರುವರು. ಎಲ್ಲಿ? ಹತ್ತಾಯಿತು. ಹನ್ನೊಂದಾಯಿತು; ಹನ್ನೆರಡು ಬಡಿಯಿತು. "ಎಂದು ಬೇಗಮಳು ಕನವರಿಸಿದಳು.

ಕರಣರಾಯನು ಕೇಳಿ ಆಶ್ಚರ್ಯಗೊಂಡನು; ಮನಸ್ಸಿನಲ್ಲಿ ರೋಷವೂ ಉಂಟಾಯಿತು. ಅಲ್ಲಾವುದ್ದೀನನು ಇಂದೇ ಬರುವನೇ ? ಅಹಹಾ! ಕಮಲೆಯು ಅವನಲ್ಲಿ ಈ ರೀತಿಯಾಗಿ ಅನುರಕ್ತಳಾಗಿರುವಳೇ ? ರೋಷಾವೇಶದಿಂದ ಅವನ ಮೈನಡುಗಿತು. ಅವನು ತಟ್ಟನೆ ಬಾಗಿಲಿನ ಪರದೆಯನ್ನು ಸರಿಸಿ ಒಳಗೆ ಹೋದನು. ನೋಡುತ್ತಾನೆ, -- ಆಶ್ಚರ್ಯ! ಆಶ್ಚರ್ಯ! ಅಲ್ಲಿದ್ದವಳು ಕಮಲೆಯಲ್ಲ, ಅವಳ ದಾಸಿಯಾದ **ಮತಿಯಾ** ಕರುಣರಾಯನು ಆಶ್ಚರ್ಯೋದ್ವೇಗಗಳಿಂದ ತಟಸ್ಥನಾಗಿ ನಿಂತುಬಿಟ್ಟನು.

ಮತಿಯಳೂ ಮೊದಲು ಪರದೆಯನ್ನು ಸರಿಸಿದ ಸಪ್ಪಳವಾದ ಕೂಡಲೆ ಬಾದಷಹನೇ ಬಂದನೆಂದು ಉತ್ಕಂಠೆಯಿಂದ ಆ ಕಡೆಗೆ ನೋಡುತ್ತಲಿದ್ದಳು. ಆದರೆ ಒಳಗೆ ಬಂದವನು ಬಾದಷಹನಲ್ಲ, ಕರಣರಾಯ! ಅವಳೂ ಆಶ್ಚರ್ಯ ವಿಸ್ಮಯಗಳಿಂದ ಬೆಪ್ಪಾಗಿ ಕುಳಿತುಬಿಟ್ಟಳು.

ಎಷ್ಟೋ ಹೊತ್ತಿನವರೆಗೆ ಯಾರೂ ಮಾತಾಡಲಿಲ್ಲ. ಕೊನೆಗೆ ಮತಿಯಳು ಎದ್ದು ಕರಣರಾಯನ ಪಾದಕ್ಕೆ ಎರಗಿದಳು.

ಕರಣರಾಯನು ತನ್ನ ಕಠಾರಿಯನ್ನು ಹಿರಿದು, ದುಷ್ಟೇ, ನಿನ್ನ ಬೇಗಮಳೆಲ್ಲಿ ?

**ಮತಿಯಾ** :— ಮಹಾರಾಜ, ತಾವು ಇಲ್ಲಿಗೇತಕ್ಕೆ ಬರೋಣವಾಯಿತು? ಇಂದೇ ಬಾದಷಹರು ಬರತಕ್ಕವರಿರುವರು. ಸರ್ವ ನಾಶವಾಗಿ ಹೋದೀತಲ್ಲಾ! ದಯಮಾಡಿ ತಾವು ಇಲ್ಲಿಂದ ಹೊರಗೆ ಹೋಗಬೇಕು ತಮಗೆ ನಾನು ಎಲ್ಲವನ್ನೂ ಹಿಂದಿನಿಂದ ತಿಳಿಸುವೆನು.

**ಕರಣರಾಯ** —ನಾನು ಇಲ್ಲಿಂದ ತಿರುಗಿಹೋಗುವ ಅಪೇಕ್ಷೆಯಿಂದ ಬಂದಿಲ್ಲ. ವಿಶ್ವಾಸಘಾತಕರಾದವರಿಗೆ ಶಿಕ್ಷೆಯನ್ನು ವಿಧಿಸಲು ಬಂದಿರುವೆನು. ದುಷ್ಟೇ! ಇದೇ ಏನು ನಿನ್ನ ಸ್ವಾಮಿಭಕ್ತಿಯು ? ಆ ಪಾಪಿಯೆಲ್ಲಿ ?

**ಮತಿಯಾ** :—ಮಹಾರಾಜ! ತಾವು ಹೀಗೆ ದುಡುಕಬಾರದು. ನಾನು ತಮ್ಮ ಉಪ್ಪು ಉಂಡದ್ದನ್ನು ಮರೆತಿಲ್ಲ. ನಾನು ತಮಗೆ ಅಪಕಾರ ಮಾಡಿಲ್ಲ ; ಉಪಕಾರವನ್ನೇ ಮಾಡಿರುವೆನು. ಇನ್ನು ಹಟಮಾಡಿ ತಡಮಾಡಿದರೆ ತಾವೂ ಸಂಕಟಕ್ಕೊಳಗಾಗಿ ನನ್ನನ್ನೂ ಹಾಳುಮಾಡುವಿರಿ. ದಯಮಾಡಿ ಆತ್ಮರಕ್ಷಣೆ ಮಾಡಿಕೊಳ್ಳಿರಿ ಬಾದಷಹರು ಬಂದುಬಿಟ್ಟರು.

**ಕರಣರಾಯ** :—ನನಗೆ ಇನ್ನು ಆತ್ಮರಕ್ಷಣೆಯನ್ನು ಮಾಡಿಕೊಳ್ಳುವ ಆಶೆಯಿಲ್ಲ. ಪಾಪಿಯೂ ಚಂಡಾಲಿನಿಯೂ ಆದ ಕಮಲೆಯನ್ನು ನೋಡಿದ ಹೊರತು ನಾನು ಇಲ್ಲಿಂದ ಒಂದು ಹೆಜ್ಜೆಯನ್ನು ಕೂಡ ಹಿಂದಿಡುವವನಲ್ಲ. ಅವಳೆಲ್ಲಿರುವಳು ?

**ಮತಿಯಾ** —ಮಹಾರಾಜ, ಸತ್ತು ಸ್ವರ್ಗವಾಸಿಯಾದ ಆ ಪುಣ್ಯಾತ್ಮಳನ್ನು ಸುಮ್ಮಸುಮ್ಮನೆ ಬೈಯುವಿರೇಕೆ? ಅವರನ್ನು ತಾವು ಈ ಜನ್ಮದಲ್ಲಿ ನೋಡಲಾರಿರಿ. ಅವರು ಸ್ವರ್ಗಲೋಕದೊಳಗೆ ಸುಖಾಸನದಲ್ಲಿ ಮಂಡಿಸಿರುವರು. ಈ ದುಷ್ಟ ಯವನನ ದೃಷ್ಟಿಗೂ ಕೂಡ ಅವರು ಬೀಳಲಿಲ್ಲ. ನಾನೇ ಬಾದಷಹನ ಬೇಗಮಳು. ಗುರ್ಜರೇಶ್ವರಿಯನ್ನು ಯವನನ ಕೈಯಿಂದ ಉದ್ಧಾರ ಮಾಡಿದ್ದಕ್ಕಾಗಿ ಪರಮೇಶ್ವರನು ನನಗೆ ಈ ದಿಲ್ಲಿಯ ಸಿಂಹಾಸನದ ಅರ್ಧಭಾಗವನ್ನು ದಯಪಾಲಿಸಿರುವನು.

ರೋಷದಿಂದ ಕೆಂಪಡರಿದ ಕರಣರಾಯನ ಮುಖವು ಒಮ್ಮಿಂದೊಮ್ಮೆ ಬೆಳ್ಳಗಾಯಿತು. ಮುಖದಲ್ಲಿ ಬೆವರಹನಿಗಳು ಕಾಣಿಸಿಕೊಂಡವು. ಅವನು ಕಣ್ಣುಗಳನ್ನು ಮುಚ್ಚಿಕೊಂಡು—"ಕಮಲೆ, ನೀನೇ ಧನ್ಯಳು! ನಾನು ಪಾಪಿಯು!! ಪುಣ್ಯಾತ್ಮಳಾದ ನಿನ್ನ ಮೇಲೆ ಕಾರಣವಿಲ್ಲದೆ ಇಲ್ಲದ್ದೊಂದು ಅಪವಾದವನ್ನು ಹೊರಿಸಿದ ನನ್ನ ಅಪರಾಧವನ್ನು ಕ್ಷಮಿಸು! ಅಯ್ಯೋ! ಪ್ರಿಯೇ! ನನ್ನ ಸರ್ವಸ್ವಳೇ! ನನ್ನ ಪ್ರಾಣಧನಸ್ವರೂಪಳೇ! ವಿಧಿಯು ನಿನಗಿಂಥ ಅವಸ್ಥೆಯನ್ನು ಒದಗಿಸಿದನೇ! ಮತಿಯಾ, ನಿನ್ನ ಉಪಕಾರವನ್ನು ನಾನು ಈ ಜನ್ಮದಲ್ಲಿಯಂತೂ ತೀರಿಸಲಾರೆನು- ಮಗಳೇ, ಇನ್ನೊಮ್ಮೆ ಹೇಳು. ಆ ನನ್ನ ಕಮಲೆಯು ಎಲ್ಲಿರುವಳು?" ಎಂದು ಮಹಾಶೋಕಾವೇಗದಿಂದ ಪ್ರಲಾಪಿಸಿದನು.

**ಮತಿಯಾ** :— "ಮಹಾರಾಜ, ಮೇಲಕ್ಕೆ (ಕೈತೋರಿಸಿ) ಅವರು ಆ ಸ್ವರ್ಗಲೋಕದಲ್ಲಿರುವರು! ಅಲ್ಲಾವುದ್ದೀನ ಬಾದಷಹನು ಅವರನ್ನು ಬಲಾತ್ಕಾರದಿಂದ ಹಿಡಿದೊಯ್ಯುವ ವಿಚಾರದಲ್ಲಿರುವನೆಂಬುದು ಅವರಿಗೆ ತಿಳಿದ ಕೂಡಲೆ ಅವರು ವಿಷಪಾನ..." ಮುಂದೆ ಮಾತಾಡಲಿಲ್ಲ.

**ಕರಣರಾಯ** :—ಮತಿಯಾ, ಆ ನನ್ನ ಮುದ್ದುಮಗು ದೇವಲೆಯೇನಾದಳು? ಅವಳೂ ತಾಯಿಯ ಸಂಗಡಲೇ ಇಹಲೋಕವನ್ನು ಬಿಟ್ಟು ಹೋಗಿ ಬಿಟ್ಟಳೇ ?

**ಮತಿಯಾ** :—ಇಲ್ಲ. ಮಹರಾಜ, ದೇವಲೆಯು ಇನ್ನೂ ಬದುಕಿರುವಳು. ಅವಳು ದೇವಗಿರಿಯ ಅರಸನಾದ ರಾಮದೇವರಾಯನ ಪುತ್ರನಾದ ಶಂಕರದೇವನ ರಕ್ಷಣೆಯಲ್ಲಿ ಸುರಕ್ಷಿತವಾಗಿರುವಳು. ರಾಣಿಯವರ ಮರಣದ ತರುವಾಯ ಆ ಯೋಜನೆಯನ್ನು ನಾನೇ ಮಾಡಿದೆನು. ಬಾದಷಹನು ತಮ್ಮ ರಾಣೀವಾಸವನ್ನು ಮುತ್ತಿದಾಗ ರಾಣಿಯವರನ್ನು ದುಷ್ಟರ ಕೈಯೊಳಗಿಂದ ಉದ್ಧರಿಸುವದಕ್ಕಾಗಿ ನಾನೇ ರಾಣಿಯೆಂತಲೂ ರಾಣಿಯವರೇ ನನ್ನದಾಸಿಯೆಂತಲೂ ಹೇಳಿದೆವು. ಮುಂದೆ ಪಠಾಣರು ನನ್ನನ್ನು ಹಿಡಿದುಕೊಂಡು ಬಂದಬಳಿಕ ರಾಣಿಯವರೂ ನನ್ನ ಸಂಗಡಲೇ ಒಂದು ದಿವಸ ಇದ್ದು ಅದೇ ರಾತ್ರಿಯೇ ಸ್ವರ್ಗಲೋಕಕ್ಕೆ ಪ್ರಯಾಣ ಬೆಳೆಯಿಸಿದರು. ಆ ಬಳಿಕ ನಾನು ದೇವಲೆಯನ್ನು ಒಬ್ಬ ವಿಶ್ವಾಸಕ್ಕೆ ಪಾತ್ರನಾದ ದೂತನ ವಶಮಾಡಿ ದೇವಗಿರಿಗೆ ಕಳುಹಿಸಿಕೊಟ್ಟೆನು.

**ಕರಣರಾಯ** :—ಮತಿಯಾ, ನಾನಿನ್ನು ಹೊರಟೆನು. ಇಲ್ಲಿ ನಿಲ್ಲುವುದಿಲ್ಲ. ಬಹುದಿವಸಗಳಿಂದಲೂ ಉತ್ತಪ್ತವಾಗಿ ಕುದಿಯುತ್ತಿದ್ದ ನನ್ನ ಆತ್ಮವು ಇಂದು ಶಾಂತಿಯನ್ನು ಹೊಂದಿತು. ನಿನ್ನ ಉಪಕಾರವನ್ನು ನಾನು ಯಾವ ರೀತಿಯಿಂದಲೂ ತೀರಿಸಲಾರೆನು. ಇಷ್ಟೇ ಅಲ್ಲ, ಬಾಯಿಯಿಂದ ಆಡಿತೋರಿಸಲೂ ಕೂಡ ನನಗೆ ಸಾಧ್ಯವಿಲ್ಲ. ನಾನು ನಿರರ್ಥಕವಾಗಿ ಆ ನನ್ನ ಪ್ರಿಯ. ಸಖಿ ಕಮಲೆಯ ಮೇಲೆ ಅಪವಾದವನ್ನು ಹೊರಿಸಿದೆನು. ಅನ್ಯಾಯವಾಗಿ ಅವಳ ಮೇಲೆ ಕೋಪಗೊಂಡೆನು. ಇವೆಲ್ಲಕ್ಕಿಂತಲೂ ಹೆಚ್ಚಿನದೆಂದರೆ ನಾನೇ ಅವಳ ಧವಲ ಕೀರ್ತಿಗೆ ಕಲಂಕವನ್ನು ತಂದೆನು. ಚಿತ್ತೂರಿನ ಪದ್ಮಿನಿಯು ಹೇಳಿದಂತೆ

ನಾನೇ "ಅವಳು ಪಠಾಣನನ್ನು ಕೂಡಿದಳು" ಎಂದು ಜನರಲ್ಲಿ ಆಡಿಕೊಂಡ ಬಳಿಕ ಜನರು ಏನು ಆಡಬಹುದು ಏನು ಬಿಡಬಹುದು? ಮತಿಯೂ, ನನ್ನ ಈ ಅಪರಾಧಕ್ಕೆ ಪ್ರಾಯಶ್ಚಿತ್ತವೇನು ?

ಹೀಗೆಂದು ಕರಣರಾಯನು ಅಲ್ಲಿಂದ ಹೊರಗೆ ಬಂದು ತಡಮಾಡದೆ ದುರ್ಗದ ಮಹಾದ್ವಾರದ ಕಡೆಗೆ ಹೊರಟನು. ಆದರೆ ಹತ್ತು ಹೆಜ್ಜೆ ಮುಂದಕ್ಕೆ ಹೋಗುವಷ್ಟರಲ್ಲಿ ಭವ್ಯಾಕೃತಿಯ ಪುರುಷನೊಬ್ಬನು ದಾರಿಯಲ್ಲಿ ನಿಂತಿರುವುದನ್ನು ನೋಡಿದನು. ಆ ವ್ಯಕ್ತಿಯು—"ಯಾರು ನೀನು ?" ಎಂದು ಗರ್ಜಿಸಿದನು.

**ಕರಣ** :—ನೀನು ಯಾರು ? ನಾನು ಗುರ್ಜರೇಶ್ವರನಾದ ಕರಣರಾಯನು. ಅಲ್ಲಾವುದ್ದೀನ ಬಾದಷಹನನ್ನು ಕಂಡು ಮಾತಾಡತಕ್ಕ ಕೆಲಸವಿತ್ತು; ಅದಕ್ಕಾಗಿ ಬಂದಿದ್ದೆನು. ಅವನು ಇಲ್ಲವೆಂಬುದನ್ನು ಕೇಳಿ ತಿರುಗಿ ಹೊರಟಿರುವೆನು. ಇನ್ನೊಂದು ದಿನ ಬಂದು ಅವನಿಗೆ ಭೆಟ್ಟಿಯಾಗುವೆನು.

**ಆ ವ್ಯಕ್ತಿಯು** :—"ಇನ್ನೊಂದು ದಿವಸ ಬೇಕಾಗಿಲ್ಲ ! ಇಂದೇ ನಿನ್ನ ಆಯುಷ್ಯದ ಕೊನೆಯ ದಿನ. ಈಗಲೇ ನಿನ್ನ ತಲೆಯನ್ನು ಕಡಿದು ಈ ನನ್ನ ಖಡ್ಗದ ಬಯಕೆಯನ್ನು ತೃಪ್ತಿಪಡಿಸಬೇಕಾಗಿದೆ. ಬಾದಷಹನು ತಿರುಗಿ ಬಂದಿರುವನು." ಎಂದು ಹೇಳಿ ಒಂದು ಕರ್ಣಕಠೋರವಾದ ಸಿಳ್ಳಿನ ಧ್ವನಿಯನ್ನು ಮಾಡಿದನು. ಕೂಡಲೆ ನಾಲ್ವರು ದೂತರು ಶಸ್ತ್ರಪಾಣಿಗಳಾಗಿ ಬಂದು ಕರಣರಾಯನನ್ನು ಹಿಡಿದು ಅವನ ಕೈಗೆ ಸಂಕೋಲೆಗಳನ್ನು ತೊಡಿಸ ಹೋದರು.

ಆಗ **ಕರಣರಾಯನು**:—"ಇಷ್ಟೇಕೆ ಗೊಂದಲ ಮಾಡುವಿರಿ ? ನಾನಾಗಿಯೇ ಬರುವೆನು ನಡೆಯಿರಿ. ನನಗೆ ನಿಮ್ಮ ಬಾದಷಹನನ್ನು ತೋರಿಸಿರಿ. ಅವನ ಸಂಗಡ ಒಂದೆರಡು ಮಾತುಗಳನ್ನು ಆಡತಕ್ಕದ್ದಿರುವದು." ಎಂದು ಗಾಂಭೀರ್ಯದಿಂದಲೂ ಧೈರ್ಯದಿಂದಲೂ ನುಡಿದನು.

**ಆ ವ್ಯಕ್ತಿಯು** :—"ನಡೆ, ಇಲ್ಲಿಯೇ ಆ ಕೋಣೆಯೊಳಗೆ ಹೋಗೋಣ ನೀನು ಏನು ಹೇಳತಕ್ಕದ್ದಿರುದೋ ಹೇಳು ! ನಾನೇ ಆ ಬಾದಷಹನು !!"

ಹೀಗೆಂದು ಅಲ್ಲಾವುದೀನನು ಅಲ್ಲಿಯೇ ಇದ್ದ ಒಂದು ಕೋಣೆಗೆ ಅವನನ್ನು ಕರೆದುಕೊಂಡು ಹೋದನು. ದೂತನು ತಂದಿರಿಸಿದ ಆಸನದ ಮೇಲೆ

ಬಾದಷಹನು ಕುಳಿತುಕೊಂಡು,—"ಒಂದು ಗಳಿಗೆಯಲ್ಲಿ ನೀನು ಹೇಳಬೇಕಾಗಿರುವದನ್ನೆಲ್ಲ ಹೇಳಿಬಿಡು. ಎರಡನೆಯ ಗಳಿಗೆಯಲ್ಲಿ ನೀನು ಈ ಲೋಕವನ್ನು ಬಿಟ್ಟು ಹೋಗಬೇಕಾಗುವದು. ಮೊದಲು ನಿನ್ನನ್ನು ಕೊಂದು, ಬಳಿಕ ಮೊಗಲರ ಸೇನಾಪತಿಯ ಸಮಾಚಾರವನ್ನು ತೆಗೆದುಕೊಳ್ಳಬೇಕಾಗಿದೆ. ಹೆಚ್ಚಾಗಿ ಮಾತಾಡುವದಕ್ಕೆ ಅವಕಾಶವಿಲ್ಲ. ನೀನು ಯಾವರೀತಿಯಾಗಿ ನನ್ನ ರಾಣೀವಾಸವನ್ನು ಸೇರಿದೆ! ಅದರಲ್ಲಿ ನಿನ್ನ ಉದ್ದೇಶವೇನಿರುವುದು ?" ಎಂದು ಕೇಳಿದನು.

ಕರಣರಾಯನು ಅವನ ಉಳಿದ ಯಾದ ಪ್ರಶ್ನೆಗೂ ಉತ್ತರ ಕೊಡಲಿಲ್ಲ; ಇಷ್ಟೇ ಹೇಳಿದನು:—ಅಲ್ಲಾವುದ್ದೀನ ! ನೀನು ಮೂರ್ಖ ! ನೀನು ಗುರ್ಜರೇಶ್ವರನನ್ನು ಜಯಿಸಲಿಲ್ಲ. ನೀನು ನನ್ನ ಕಮಲೆಯನ್ನು ಅಪಹರಿಸಿಕೊಂಡು ಬಂದು ಬೇಗಮಳನ್ನು ಮಾಡಿಕೊಂಡಿರುವೆಯೆಂದು ತಿಳಿದಿರುವಿಯಷ್ಟೇ ! ಅದು ಕೇವಲ ಮೂರ್ಖತನದ ಮಾತೇ ಸರಿ. ನೀನು ಆ ನನ್ನ ಕಮಲೆಯ ಒಂದು ಕೂದಲವನ್ನು ಕೂಡ ನೋಡಿಲ್ಲ ! ಅವಳು ಸತ್ತು ಸ್ವರ್ಗವಾಸಿಯಾಗಿರುವಳು. ಪಾಪಾಣನ ಸ್ಪರ್ಶದ ನರಕಯಾತನೆಯನ್ನು ಅನುಭವಿಸಲಿಲ್ಲ ! ನೀನು ಮೂರ್ಖತನದಿಂದ ಅವಳ ದಾಸಿಯಾದ ಮತಿಯಳ ಚರಣತಲದಲ್ಲಿ ಬಿದ್ದು ಉರುಳಾಡಿದೆ ! ಇಂದು ದಿಲ್ಲಿಯ ಬಾದಷಹನೂ ಗುರ್ಜರೇಶ್ವರನ ದಾಸನೂ ಸಮಾನಯೋಗ್ಯತೆಯುಳ್ಳವರೆಂಬುದನ್ನು ನಿನಗೆ ಹೇಳಬೇಕಾಗಿತ್ತು. ಅದಕ್ಕಾಗಿಯೇ ನಾನು ಇಷ್ಟೊಂದು ಸಾಹಸ ಮಾಡಿ ಇಲ್ಲಿಗೆ ಬಂದೆನು. ಇನ್ನು ನನ್ನ ಕೆಲಸ ತೀರಿತು

ಹೀಗೆಂದು ಕರಣರಾಯನು ಸರ್ರನೆ ತನ್ನ ಕಳ್ಳಕಠಾರಿಯನ್ನು ಹೊರಗೆ ತೆಗೆದನು. ಕರಣರಾಯನ ಮಾತುಗಳನ್ನು ಕೇಳುತ್ತ ಅಚಲನಾಗಿ ಕುಳಿತಿದ್ದ ಅಲ್ಲಾವುದ್ದೀನನು, ಕರಣರಾಯನು ತನ್ನನ್ನು ಆ ಕಠಾರಿಯಿಂದ ಚುಚ್ಚಲು ಬರಬಹುದೆಂದು ಗಾಬರಿಯಾಗಿ ದೂರ ಸರಿದನು. ಕ್ಷಣಮಾತ್ರದಲ್ಲಿ ಕರಣರಾಯನು ಕಠಾರಿಯಿಂದ ತನ್ನ ಉದರವನ್ನು ಭೇದಿಸಿಕೊಂಡು ನೆಲದ ಮೇಲೆ ಬಿದ್ದುಬಿಟ್ಟನು.

ಪರಕ್ಷಣದಲ್ಲಿಯೇ ಶಿಬಿರದಲ್ಲಿ ನಿದ್ದೆಬಾರದೆ ಮಲಗಿರುವ ಮೊಗಲ್ ಸೇನಾಪತಿಯಾದ ತುರ್ಕೀಖಾನನ ಬಳಿಗೆ ಒಬ್ಬ ಸರದಾರನು ಬಂದು ತೇಕುತ್ತ:—

"ಮಹಾರಾಜ, ಘಾತವಾಯಿತು! ಅಲ್ಲಾವುದ್ದೀನನು ತಿರುಗಿ ಬಂದಿರುವನಂತೆ! ಕರಣರಾಯನು ಅವನ ಕೈಯಲ್ಲಿ ಸಿಕ್ಕಿಬಿದ್ದು ಆತ್ಮಹತ್ಯ ಮಾಡಿಕೊಂಡನಂತೆ! ಪಠಾಣರ ಮಹಾ ಸೇನೆಯು ನಾಳೆಯೇ ನಮ್ಮನ್ನು ಮುತ್ತಿ ನುಚ್ಚುನೂರಾಗಿ ಕಡಿದು ಹಾಕುವ ಯೋಚನೆಯಿಂದ ಸಮಯವನ್ನು ಸಾಧಿಸಲು ಹಿಂದುಳಿದಿರುವುದಂತೆ!" ಎಂದನು.

ತುರ್ಕೀಖಾನನು ಅತಿಶಯ ಗಾಬರಿಯಾದನು. ಅವನು ಕರಣರಾಯನ ಹೇಳಿಕೆಯಿಂದ, ಅವನ ಉತ್ತೇಜನದಿಂದ, ಈ ಅಜ್ಞಾತವಾದ, ಅಪರಿಚಿತವಾದ ಸ್ಥಳಕ್ಕೆ ಸಾವಿರಾರು ಮೊಗಲ್‌ಸೈನಿಕರೊಡನೆ ಬಂದಿದ್ದನು. ಆ ಕರಣರಾಯನೇ ಹೀಗಾಗಿ ಹೋದ ಮೇಲೆ ಅವನು ಪಠಾಣರ ಸಂಗಡ ಕಾದುವ ಬಗೆಯೆಂತು? ಏನಾದರೂ ಮಹಾ ಆಪತ್ತು ಸಂಭವಿಸುವ ಪ್ರಸಂಗವಿದ್ದ ಹೊರತು ಕರಣರಾಯನು ಆತ್ಮಹತ್ಯ ಮಾಡಿಕೊಳ್ಳಲು ಕಾರಣವೇನು! ಒಂದು ವೇಳೆ ಅಲ್ಲಾವುದ್ದೀನನು ಅವನನ್ನು ಕಡಿದು ಹಾಕಿದ್ದರೆ ಆ ಮಾತು ಬೇರೆಯಾಗಿತ್ತು. ಕರಣರಾಯನಿಗೆ ತಕ್ಕಷ್ಟು ಸಹಾಯಕರೂ ಇದ್ದರು. ಅದರಿಂದ ಅವನು ಆತ್ಮರಕ್ಷಣೆಗೆ ತಕ್ಕಷ್ಟು ಪ್ರಯತ್ನವನ್ನಾದರೂ ಮಾಡಬಹುದಾಗಿತ್ತು. ಅದನ್ನೂ ಮಾಡಲಿಲ್ಲವೇಕೆ? ಇದರಲ್ಲಿ ಏನೋ ಒಂದು ಮಹಾ ವಿಪತ್ತಿನ ಪ್ರಸಂಗವೇ ಇರುವುದು! ಎಂದು ಮುಂತಾಗಿ ಯೋಚಿಸಿಕೊಂಡು ತುರ್ಕೀಖಾನನು ತನ್ನ ಸರದಾರನಿಗೆ ಆಜ್ಞಾಪಿಸಿದ್ದೇನೆಂದರೆ:—ನಡೆ, ಈಗಲೇ ಹೋಗಿ ಎಲ್ಲ ಸೈನಿಕರಿಗೂ ತಿಳಿಸು. ಬೆಳಗಾಗುವುದರೊಳಗಾಗಿ ಎಲ್ಲರೂ ತಮ್ಮ ತಮ್ಮ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ಪ್ರಯಾಣಕ್ಕೆ ಅನುವಾಗಿರತಕ್ಕದ್ದು.

ಮರುದಿನ ಬೆಳಗಾಗುತ್ತಲೇ ದಿಲ್ಲೀನಗರದ ನಿವಾಸಿಗಳು ನೋಡುವಲ್ಲಿ ಕೋಟೆಯನ್ನು ಮುತ್ತಿದ ಮೊಗಲರ ಛಾವಣಿಯೇ ಕಾಣಿಸಲೊಲ್ಲದು. ರಾತ್ರಿಯು ತೀರಿ ಬೆಳಗಾಗುವಷ್ಟರಲ್ಲಿ ಅವರೆಲ್ಲರೂ ಎಲ್ಲಿ ಅದೃಶ್ಯರಾಗಿದ್ದರೋ ಯಾರಿಗೂ ತಿಳಿಯಲಿಲ್ಲ. ಕೆಲವರು "ಅಲ್ಲಾವುದ್ದೀನನು ಮಾಟವನ್ನು ಮಾಡಿ ಮೊಗಲರನ್ನು ಹೆಸರುಳಿಯದಂತೆ ಯಮುನೆಯ ಜಲದಲ್ಲಿ ಮುಳುಗಿಸಿ ಬಿಟ್ಟನಂತೆ" ಎಂದರು.!

# ಮೂರನೆಯ ಪರಿಚ್ಛೇದ

ಮೊಗಲರು ಅನಾಯಾಸವಾಗಿ ಓಡಿ ಹೋಗಿ ಬಿಟ್ಟರು ! ರಾಜ್ಯವು ನಿಷ್ಕಂಟಕವಾಯಿತು. ಅದರಿಂದ ಅಲ್ಲಾವುದ್ದೀನನ ಸೈನಿಕರೆಲ್ಲರೂ ಸುಖಸಮಾಧಾನಗಳಿಂದ ಇದ್ದರು. ಆದರೆ ಅಲ್ಲಾವುದ್ದೀನನಿಗೆ ಮಾತ್ರ ಮನಸ್ಸಿನಲ್ಲಿ ಎಳ್ಳಷ್ಟಾದರೂ ಸುಖವಿಲ್ಲ; ಶಾಂತಿಯಿಲ್ಲ, ಸಮಾಧಾನವಿಲ್ಲ. ಅವನಿಗೆ ಊಟಕ್ಕೆ ಕುಳಿತರೆ ಕೂಳು ಸವಿತೋರಲೊಲ್ಲದು, ಮಲಗಿದರೆ ನಿದ್ದೆಬರಲೊಲ್ಲದು. ಒಂದೆರಡು ತಿಂಗಳುಗಳಲ್ಲಿಯೇ ನಾಲ್ಕಾರು ಜನ ಅಡಿಗೆಯವರೂ ಅಂತಃಪುರದ ದಾಸದಾಸಿಯರೂ ನಿಷ್ಕಾರಣವಾಗಿ ಅಲ್ಲಾವುದ್ದೀನನ ಕೋಪಕ್ಕೆ ಗುರಿಯಾಗಿ ಜೀವಕ್ಕೆ ಎರವಾದರು! ಗುರ್ಜರೇಶ್ವರನು ಆತ್ಮಹತ್ಯ ಮಾಡಿಕೊಂಡ ದಿನವೇ ಮತಿಯಳೂ ಇಹಲೋಕವನ್ನು ಬಿಟ್ಟು ಹೋಗಿಬಿಟ್ಟಿದ್ದಳು.

ಚಿತ್ತೂರಿನಲ್ಲಾದ ಪರಾಜಯ, ಪದ್ಮಿನಿಯ ಮೇಲಿನ ಮೋಹ, ಇದರ ಮೇಲೆ ಗುಜರಾಥದಲ್ಲಿ ಮತಿಯಳು ತನಗೆ ಮಾಡಿದ ಮೋಸ ಇವುಗಳಿಂದ ಅಲ್ಲಾವುದ್ದೀನನ ಮನಸ್ಸು ಅಲ್ಲೋಲಕಲ್ಲೋಲವಾಗಿತ್ತು. ಇವುಗಳನ್ನು ಮರೆಯುವದು ಅವನಿಂದ ಕಡೆತನಕ ಆಗಲಿಲ್ಲ. ಅವನು ಮಹಾ ಲೋಭಕ್ಕೆ ಒಳಗಾಗಿ ದಿಲ್ಲಿಯ ಸಿಂಹಾಸನದಲ್ಲಿ ಕುಳಿತುಕೊಂಡೂ ಸುಖವನ್ನು ಅನುಭವಿಸಲಾರದಂತಾದನು ! ಎಲೈ ಲೋಭವೇ ನಿನ್ನ ಮಹಿಮೆಯು ಅಗಾಧವಾದ್ದು! ಅಲ್ಲಾವುದ್ದೀನನಿಗೆ ಪದ್ಮಿನಿಯು ದೊರೆಯದಿದ್ದರೆ ಈ ಸಕಲ ಸಾಮ್ರಾಜ್ಯವೂ ಕೇವಲ ಶೂನ್ಯವೆಂದು ತೋರಿತು. ಹೇಗೆ ಮಾಡಿದರೆ ನನಗೆ ಪದ್ಮಿನಿಯು ದೊರೆಯಬಹುದು, ಹೇಗೆ ಮಾಡಿದರೆ ಚಿತ್ತೂರಿನ ರಜಪೂತರು ಮಣ್ಣುಪಾಲಾದಾರು ? ಎಂಬದೊಂದೇ ಭಾವನೆಯು ಅವನ ಮನಸ್ಸನ್ನು ಸಂಪೂರ್ಣವಾಗಿ ಆಕ್ರಮಿಸಿಬಿಟ್ಟಿತು. ರಜಪೂತರು ಅಷ್ಟಿಷ್ಟು ಮಾತಿಗೆ ಹಣಿಯಲಾರರೆಂದೂ ಅವನಿಗೆ ಗೊತ್ತಾಗಿತ್ತು. ಅದರಿಂದ ಅವನು ಈ ಬಾರಿ ಬಹುಕಾಲ ಕಷ್ಟಪಟ್ಟು ಒಂದು ಮಹಾ ಸೇನೆಯನ್ನು ಸಿದ್ಧಪಡಿಸಿದನು !

ಒಂದು ದಿವಸವಲ್ಲ ಎರಡು ದಿವಸಗಳಲ್ಲ; ಒಂದೇ ಸವನೆ ಎರಡು ವರುಷಗಳ ವರೆಗೆ ಕಷ್ಟಪಟ್ಟು ಅಲ್ಲಾವುದ್ದೀನನು ಸಮರಸನ್ನಾಹವನ್ನು ನಡಿಸಿದನು. ಕೊನೆಗೆ ಒಂದು ದಿನ ಪಠಾಣಸೈನಿಕರು ಮಹಾಉತ್ಸಾಹದಿಂದ ರಣಭೇರಿಯನ್ನು ಬಾರಿಸುತ್ತ ಚಿತ್ತೂರಿನ ಬಾಗಿಲಿಗೆ ಬಂದು ನಿಂತರು.

ರಜಪೂತರು ನೋಡುತ್ತಾರೆ; ಪಠಾಣರು ಈ ಸಾರಿ ಮೂರು ದಿಕ್ಕುಗಳಲ್ಲಿಯೇ ಅಲ್ಲ, ನಾಲ್ಕೂ ದಿಕ್ಕುಗಳಲ್ಲಿ ಚಿತ್ತೂರು ದುರ್ಗವನ್ನು ಮುತ್ತಿರುವರು. ದುರ್ಗಮವಾದ ಆರಾವಲೀ ಪರ್ವತದ ಘೋರವಾದ ಅರಣ್ಯದ ಮಧ್ಯದಲ್ಲಿಯೂ ಪಠಾಣ ಸೈನಿಕರು ಮಹಾ ಕೋಲಾಹಲದಿಂದಲೂ ರಣೋಲ್ಲಾಸದಿಂದಲೂ ಒಂದೇಸವನೆ ಕುಣಿಯುತ್ತಿದ್ದರು! ರಜಪೂತರು ಒಮ್ಮೆ ಸಜಲನಯನದಿಂದ ಚಿತ್ತೂರು ದುರ್ಗವನ್ನು ನೋಡಿದರು!

ರಾಣಿಯಾದ ಪದ್ಮಿನಿಯೂ ಭೀಮಸಿಂಹನೂ ಅಂತಃಪುರದಲ್ಲಿ ಕುಳಿತುಕೊಂಡು ಯೋಚಿಸುತ್ತಲಿದ್ದರು, ಪದ್ಮಿನಿಯು ಹೇಳಿದಳೇನೆಂದರೆ:—ನನ್ನ ಸಲುವಾಗಿಯೇ ಚಿತ್ತೂರಿಗೆ ಇಂಥ ದುಃಖದಾಯಕವಾದ ಪ್ರಸಂಗವು ಒದಗಿತು. ಇಂಥ ಶತ್ರುವಾದ ನನ್ನನ್ನು ನೀವು ಯಾಕೆ ಇಟ್ಟುಕೊಂಡಿರುವಿರಿ ? ಸುಮ್ಮನೆ ನನ್ನನ್ನು ಪಠಾಣರ ಶಿಬಿರಕ್ಕೆ ಕಳುಹಿಸಿಬಿಡಿರಿ. ನಾನು ಮಾರ್ಗದಲ್ಲಿ ವಿಷತಿಂದು ಪ್ರಾಣಬಿಡುವೆನು.

**ಭೀಮಸಿಂಹ:**—ಪದ್ಮಿನೀ, ರಾಜಸ್ಥಾನದ ಪದ್ಮವೇ, ಆಮಾತು ಎಂದಿಗೂ ಆಗುವಂತಿಲ್ಲ. ಹಾಗಾಗುವಂತಿದ್ದರೆ ಅದನ್ನು ಎಂದೋ ಮಾಡಿಬಿಡುತ್ತಿದ್ದೆವು. ನಾನು ಈ ಮಾತನ್ನು ನಿನಗೆ ಮೊದಲು ಎಷ್ಟೋಸಾರಿ ಹೇಳಿರುವೆನು.

ಪದ್ಮಿನಿಯ ಕಣ್ಣುಗಳಲ್ಲಿ ನೀರು ತುಂಬಿತು. ಅವಳು—ಕ್ಷುಲ್ಲಕವಾದೀ ಜೀವನದ ಸಲುವಾಗಿ ಇಷ್ಟೆಲ್ಲ ಅನರ್ಥಗಳು ಸಂಭವಿಸುವವಲ್ಲವೇ ? ಒಬ್ಬ ಸ್ತ್ರೀಯುಳಿಗಾಗಿ ಇಡೀ ದೇಶವೇ ಈ ರೀತಿಯಾಗಿ ಧ್ವಂಸವಾಗಿ ಹೋಗುವುದಲ್ಲವೇ ? ಏನು ಮಾಡಲಿ ? ನಾನು ಪ್ರಾಣವನ್ನು ಕೊಟ್ಟರಾದರೂ ಪಠಾಣರು ತಿರುಗಿಹೋಗುವರೆಂಬ ನಿಶ್ಚಯವೇನು ? ದೇವರೇ, ನಿನ್ನ ಮನಸ್ಸಿನಲ್ಲಿದ್ದಂತಾಗಲಿ ! ಎಲ್ಲೆ

ವಿಧಿಯೇ, ನನಗೆ ನೀನು ಯಾಕೆ ಇಂಥ ಸುಸ್ವರೂಪವನ್ನು ಕೊಟ್ಟೆ ? ಎಂದು ಮರಮರನೆ ಮರುಗಿದಳು.

ಆ ಬಳಿಕ ಪದ್ಮಿನಿಯು ಚಿತ್ತೋರೇಶ್ವರಿಯ ಮಂದಿರಕ್ಕೆ ಹೋದಳು. ಭೈರವಿಯು ಪದ್ಮಿನಿಯ ಧೂಳಿದೂಸರಿತವಾದ ದೇಹವನ್ನೂ, ಬಾಡಿದ ಮುಖವನ್ನೂ ಅತ್ತು ಅತ್ತು ಕೆಂಪು ದಾಸಾಳದ ಹೂವಿನಂತಾದ ಕಣ್ಣುಗಳನ್ನೂ ನೋಡಿ,— "ಯಾಕಮ್ಮಾ, ಸುಮ್ಮನೆ ದುಃಖಪಡುವೆ ? ಸ್ವರ್ಗಲೋಕದಲ್ಲಿ ದೇವಿಯು ನಿಮ್ಮೆಲ್ಲರ ಹಾದಿಯನ್ನು ನೋಡುತ್ತ ಕುಳಿತಿರುವಳು. ಒಮ್ಮೆ ಈ ದೇವಿಯ ಪ್ರತಿಮೆಯನ್ನು ದಿಟ್ಟಿಸಿ ನೋಡು. ಏನು ಕಾಣಿಸುತ್ತದೆ? " ಎಂದಳು.

ಪದ್ಮಿನಿಯು ದೇವಿಯ ಪ್ರತಿಮೆಯನ್ನು ನೋಡುತ್ತ ನಿಂತುಕೊಂಡಳು- ಆದರೆ ಅವಳ ಬಾಯಿಯಿಂದ ಮಾತು ಹೊರಡಲಿಲ್ಲ. ಅವಳು ಕಣ್ಣುಗಳನ್ನು ಮುಚ್ಚಿದಳು; ಎಚ್ಚರದಪ್ಪಿ ಬಿದ್ದುಬಿಟ್ಟಳು. ಭೈರವಿಯು ಬಂದು ಅವಳನ್ನು ಹಿಡಿದುಕೊಂಡಳು. ಪದ್ಮಿನಿಯು ಅರಿವಿಲ್ಲದ ಸ್ಥಿತಿಯಲ್ಲಿ ಹೀಗೆ ಕನವರಿಸಿದಳು:—" ದೇವೀ, ಅಂಬಿಕೇ, ನೀನೆಲ್ಲಿ ? ಹಾ ! ಜನನೀ, ಇಷ್ಟು ಕಾಲದಮೇಲೆ ನಿನಗೆ ಈ ದಾಸಳ ಮೇಲೆ ದಯೆ ಹುಟ್ಟಿತೇ ! ಆ ನಿನ್ನ ಭುವನಮೋಹನ ಮೂರ್ತಿಯೆಲ್ಲಿ ? ಯಾವ ಮೂರ್ತಿಯನ್ನು ನೋಡಲು ನಾನು ಇಷ್ಟು ದಿನಗಳವರೆಗೆ ನಿನ್ನನ್ನು ಉಪಾಸನೆ ಮಾಡಿದೆನೋ ಆ ರೂಪವನ್ನು ಒಮ್ಮೆ ಸ್ಪಷ್ಟವಾಗಿ ತೋರಿಸು. ಈ ಘೋರಸಂಕಟದಲ್ಲಿ, ಈ ದಾನವ ಯುದ್ಧದಲ್ಲಿ, ಈ ಅಂಧಕಾರದಲ್ಲಿ ಒಮ್ಮೆ ನಿನ್ನ ದರ್ಶನಕೊಡು ! ದೇವೀ, ನಾನು ಈ ಅಂಧಕಾರದಲ್ಲಿ ಪ್ರಾಣತ್ಯಾಗ ಮಾಡುವೆನು. ನೀನು ನನಗೆ ಸ್ವರ್ಗದ ಮಾರ್ಗವನ್ನು ತೋರಿಸು."

ಬಹಳ ಹೊತ್ತಾದಮೇಲೆ ಪದ್ಮಿನಿಗೆ ಅರಿವು ಬಂದಿತು. ಭೈರವಿಯು ದೇವಿಯ ಪ್ರಸಾದವೆಂದು ಒಂದು ತೆಂಗಿನಕಾಯಿಯನ್ನೂ ಕುಂಕುಮವನ್ನೂ ಅವಳ ಸೆರಗಿನಲ್ಲಿ ಕಟ್ಟಿಕೊಟ್ಟಳು. ಆ ಸಮಯದಲ್ಲಿ ಪದ್ಮಿನಿಗೆ ಬಾಹ್ಯಜಗತ್ತು ಕೇವಲ ತುಚ್ಛವಾಗಿ ತೋರಿತು. ಅಂತರಂಗದಲ್ಲಿ ಯಾವುದೋ ಅಜ್ಞಾತವಾದ ಕಾರಣದಿಂದ ಅತ್ಯಂತ ಶಾಂತಿಯುಂಟಾಗಿತ್ತು. ಅವಳ ಮನಸ್ಸಿನಲ್ಲಿ ದುಃಖವಿಲ್ಲ, ಮುಖದಲ್ಲಿ ಅಳುವಿಲ್ಲ.

# ಆರನೆಯ ಖಂಡ

## ಪರಿಸಮಾಪ್ತಿಯು

## ಮೊದಲನೆಯ ಪರಿಚ್ಛೇದ

ಸಂಧ್ಯಾಕಾಲದ ಸಿಂಧೂರರಾಗದಿಂದೊಪ್ಪುವ ಆಕಾಶವು ಕ್ರಮವಾಗಿ ಕಪ್ಪೇರಿ ಬರುತ್ತಿತ್ತು, ಪ್ರದೋಷಕಾಲದ ಅಂಧಕಾರವು ನಾಲ್ಕೂ ಕಡೆಯಿಂದ ಭೂದೇವಿಯನ್ನು ಆಕ್ರಮಣಮಾಡಲೆಳಸುತ್ತಿತ್ತು. ಆರಾವಲೀ ಪರ್ವತದ ಪ್ರಸ್ತರಮಯವಾದ ಪಾಷಾಣವಕ್ಷದಲ್ಲಿ ಶ್ಯಾಮಲವರ್ಣವುಳ್ಳ ಪಲ್ಲವಪೂರ್ಣವಾದ ತರುಲತೆಗಳು ಇಷ್ಟು ಹೊತ್ತಿನವರೆಗೂ ನಗುತ್ತಲಿದ್ದುವು; ಈಗ ಅವುಗಳ ಮೋರೆಯು ಕಪ್ಪಿಟ್ಟಿತು. ಮೇಲೆ ಪಲ್ಲವರಾಶಿಯೊಳಗಿನ ಹಕ್ಕಿಗಳ ಲಲಿತವಾದ ಕಾಕಲಿಯ ಗೀತಧ್ವನಿಯು ನಿಂತುಹೋಯಿತು. ಕೆಳಗೆ ಪಾಷಾಣ ರಾಶಿಯನ್ನು ಸೀಳಿಕೊಂಡು ಚಿಕ್ಕದೊಂದು ಜಲಪ್ರವಾಹವು ಅಣಕಿಸುವಂತೆ "ಕುಲು ಕುಲು" ನಗುವ ನಗೆಯ ಧ್ವನಿಯೋ ಎಂಬಂತೆ "ಕುಳು ಕುಳು"ನಾದದೊಡನೆ ಪ್ರವಹಿಸುತ್ತಿತ್ತು. ಅದರ ದಂಡೆಯ ಮೇಲಿದ್ದ ದೊಡ್ಡದೊಂದು ಬಂಡೆಗಲ್ಲಿನ ಮೇಲೆ ಅರುಣಸಿಂಹನು ಆ ಶಿಲೆಯಂತೆಯೇ ಚಲನರಹಿತನಾಗಿ ಕುಳಿತಿದ್ದನು.

ರಾತ್ರಿಯು ಬಂದಿತು. ಈಗ ಅಲ್ಲಿ ಹಕ್ಕಿಗಳ ಕಲಕಲವಿಲ್ಲ. ನಾಲ್ಕೂ ಕಡೆಗೆ ನಿಃಶಬ್ದತೆಯುಂಟಾಯಿತು. ದಶದಿಕ್ಕುಗಳೂ ಭಯಂಕರವಾದ ಕತ್ತಲೆಯಲ್ಲಿ ಮುಳುಗಿಹೋದುವು. ಆಕಾಶದಲ್ಲಿ ಚಂದ್ರನಿಲ್ಲ; ಸುತ್ತಲೂ ಸಾಂದ್ರವಾದ ದುರ್ಭೇದ್ಯವಾದ ಕತ್ತಲೆ. ಅರುಣಸಿಂಹನ ಅಂತರಂಗದ ಚಿಂತಾಂಧಕಾರವು ಬಹಿರಂಗದ ಕತ್ತಲೆಯೊಡನೆ ಕೂಡಿಕೊಂಡಿತು. ಅವನ ಮನದೊಳಗಿನ ಚಿಂತೆಯು ಭೀತಿಯ ಸ್ವರೂಪವನ್ನು ತಾಳಿತು. ಅವನು ಕಣ್ಣುಗಳನ್ನು ಮುಚ್ಚಿ ಕಾತರಸ್ವರದಿಂದ:-- "ಹಾ! ಅರುಣಸಿಂಹ! ನೀನು ಈ ಲೋಕದಲ್ಲಿ ಹುಟ್ಟಿದ್ದು ವ್ಯರ್ಥ! ನಿಜವಾಗಿಯೂ ವ್ಯರ್ಥವೇ ಸರಿ" ಎಂದು ನುಡಿದನು.

ಅರುಣಸಿಂಹನು ಪುನಃ ಕಣ್ಣು ತೆರೆದನು. ಚಿತ್ತೂರು ದುರ್ಗದ ಕಡೆಗೆ ನೋಡಿದನು. ಆಗಲಂತೂ ಅವನ ಹೃದಯವು ವಿದೀರ್ಣವಾಗಿ ಹೋಯಿತು. ದೂರದಲ್ಲಿದ್ದ ಚಿತ್ತೂರು ದುರ್ಗದ ಮೇಲೆ ದಿನಾಲು ರಾತ್ರಿಯ ಅಂಧಕಾರವನ್ನು ಭೇದಿಸಿಕೊಂಡು ನೂರಾರು ದೀಪಗಳು 'ಮಿಣಮಿಣನೆ' ಮಿನುಗುತ್ತಿದ್ದುವು; ಆಕಾಶದೊಳಗಿನ ನಕ್ಷತ್ರಪುಂಜಗಳೊಡನೆ ಕೂಡಿಕೊಂಡು ಅರುಣಸಿಂಹನ ಅಂತರಂಗದ ಅಂಧಕಾರದಲ್ಲಿ ಅಲ್ಪ ಪ್ರಕಾಶವನ್ನುಂಟುಮಾಡುತ್ತಿದ್ದುವು. ಅರುಣಸಿಂಹನು ದಿನಾಲು ಸಾಯಂಕಾಲವಾಗುತ್ತಲೇ ಇಲ್ಲಿ ಬಂದು ಕುಳಿತುಕೊಂಡು ಆ ದೀಪರಾಜಿಯನ್ನು ನೋಡಿ ಇದ್ದದ್ದರಲ್ಲಿಯೇ ಅಲ್ಪ ಆನಂದಪಡುತ್ತಿದ್ದನು. ಆದರೆ ಇಂದು ಚಿತ್ತೂರು ದುರ್ಗದಲ್ಲಿ ಒಂದಾದರೂ ದೀಪವಿರಲಿಲ್ಲ. ಅರುಣಸಿಂಹನ ದುಃಖವು ಉಕ್ಕೇರಿ ಹೊರಚಲ್ಲಿತು.

ಈಗ ಎರಡು ತಿಂಗಳುಗಳಿಂದಲೂ ಪಠಾಣರು ಚಿತ್ತೂರನ್ನು ಮುತ್ತಿದ್ದರು. ಈ ಅವಧಿಯಲ್ಲಿ ಚಿತ್ತೂರಿನ ವೀರರಾದ ಹಲವು ಸರದಾರರೂ ಹಲವು ಸೈನಿಕರೂ ರಣಭೂಮಿಯಲ್ಲಿ ಮರಣಹೊಂದಿ ವೀರಸ್ವರ್ಗವನ್ನು ಹೊಂದಿದ್ದರು. ಅರುಣಸಿಂಹನು ಇದೇ ಝುರಿಯ ಬಳಿಯಲ್ಲಿಯೇ ಕುಳಿತುಕೊಂಡು ಭಿಲ್ಲರ ಮುಖದಿಂದ ಇವೆಲ್ಲ ಸಂಗತಿಗಳನ್ನು ಕೇಳಿದ್ದನು. ಆದರೆ ಇಂದಿನವರೆಗೂ ರಾಣನಾಗಲಿ ಇನ್ನಾರೇ ಆಗಲಿ ಅವನನ್ನು ಕರೆಯಲಿಲ್ಲ, ಕೇಳಲಿಲ್ಲ. ಅರುಣಸಿಂಹನಿಗೆ ಜೀವವು ಭಾರವೆನಿಸುತ್ತಿತ್ತು. ಇಂದಿನ ಸ್ಥಿತಿಯನ್ನು ನೋಡಿಯಂತೂ ಅವನ ಹೃದಯದ ದುಃಖಕ್ಕೆ ನೆಲೆಯಿಲ್ಲದಂತಾಯಿತು. ಸ್ವಲ್ಪ ಹೊತ್ತಿನ ಮೊದಲು ಒಬ್ಬ ಭಿಲ್ಲನು ಬಂದು ಅಂದಿನ ಸುಮರವಾರ್ತೆಯನ್ನೂ ಚಿತ್ತೂರಿನವರ ಪರಾಜಯವನ್ನೂ ಹೇಳಿ ಹೋಗಿದ್ದನು. ಆ ಮಾತಿಗೆ ಸರಿಯಾಗಿ ಇಂದು ಚಿತ್ತೂರು ದುರ್ಗದ ಮೇಲೆ ಒಂದೇ ಒಂದು ದೀಪವು ಕೂಡ ಇರಲಿಲ್ಲ.

ರಾಜ್ಯವನ್ನು ಬಿಟ್ಟು ವನವಾಸಿಯಾದೆನೆಂದು ಅರುಣಸಿಂಹನಿಗೆ ವ್ಯಸನವಿಲ್ಲ. ಎಲ್ಲಿ ಮುನ್ನಳು ಇರುವಳೋ ಅದೇ ಅವನಿಗೆ ಸ್ವರ್ಗ! ಅವನು ಮುನ್ನಳ ಮುಗುಳ್ನಗೆಗೂಡಿದ ಮುಖವನ್ನು ನೋಡಿ ಸ್ವರ್ಲೋಕವಾಸದಲ್ಲಿ ಇಂಥ ಮಾಧುರ್ಯವಿದ್ದೀತೆ ? ಎಂದಂದುಕೊಳ್ಳುವನು. ಆದರೆ ಚಿತ್ತೂರಿನ ದುರ

ವಸ್ಥೆಯು ಸ್ಮರಣೆಗೆ ಬಂದಕೂಡಲೆ ಅವನ ಎದೆಯೊಡೆದು ನೀರಾಗುವುದು. ಇಂಥ ಆಪತ್ಕಾಲದಲ್ಲಿಯೂ ಯಾರೂ ತನ್ನನ್ನು ಕರೆಯಿಸಲಿಲ್ಲವಲ್ಲ! ಎಂದು ಅವನ ಮನಸ್ಸು ಮರುಗುವದು.

ಅರುಣಸಿಂಹನ ಹೃದಯದ ಚಿಂತೆಯು ಉಕ್ಕಿ ಹೊರಚಲ್ಲಿತು. ಅವನು ಗಳಗಳನೆ ಅತ್ತುಬಿಟ್ಟನು. ಅವನು ಈಗ ಎಷ್ಟೋ ದಿನಗಳಿಂದಲೂ ಇದೇ ರೀತಿ ಯಾಗಿ ಕಣ್ಣೀರು ಸುರಿಸುವನು ಆದರೂ ಅವನ ಹೃದಯದ ಚಿಂತಾಭಾರವು ಕಡಿಮೆಯಾಗಿ ಅಲ್ಲಿ ಶಾಂತಿಯುಂಟಾಗಿರಲಿಲ್ಲ. ಅವನು ಒಮ್ಮೊಮ್ಮೆ:– "ಅವರು ನನ್ನನ್ನು ಕರೆಯದಿದ್ದರೂ ಅಡ್ಡಿಯಿಲ್ಲ. ನಾನೇ ಹೋಗಿ ನನ್ನ ಮಾತೃಭೂಮಿಯ ಉದ್ಧಾರಕ್ಕಾಗಿ ವೈರಿಗಳೊಡನೆ ಕಾದಕೂಡದೇಕೆ ?" ಎಂದು ಯೋಚಿಸುವನು. ಆದರೆ ಪರಕ್ಷಣದಲ್ಲಿಯೇ ಈಗಲೂ ರಾಣಾನು ತನ್ನನ್ನು ಮೊದಲಿನಂತೆಯೇ ತಿರ ಸ್ಕರಿಸಿದರೆ ಹೇಗೆ? ಎಂಬ ವಿಚಾರವು ಸ್ಮರಣೆಗೆ ಬಂದಕೂಡಲೆ ಅವನ ಧೈರ್ಯ ವೆಲ್ಲ ಅಡಗಿ ಹೋಗುವುದು ಕೇವಲ ಚಿಂತೆ ; ಚಿಂತೆಯೊಂದೇ ಅಂತರಂಗ ವನ್ನೆಲ್ಲ ವ್ಯಾಪಿಸಿ ಬಿಡುವುದು.

ಅರುಣಸಿಂಹನು ಅಳುತ್ತ ಕುಳಿತಿದ್ದ ಹಾಗೆ ಪಾರ್ಶ್ವದಿಂದ-- "ಇಲ್ಲಿಂದ ಹೊರಡು. ಈ ಅಂಧಕಾರದಲ್ಲಿ ಕುಳಿತು ಏನು ಮಾಡುವೆ ? ಕ್ಷತ್ರಿಯನಾಗಿ ಹುಟ್ಟಿ ಅಳುವುದಕ್ಕೆ ಕಲಿತಿರುವೆಯಾ? ಮೈಯಲ್ಲಿ ಬಲವಿಲ್ಲವೇ? ಕೈಯಲ್ಲಿ ಖಡ್ಗ ವಿಲ್ಲವೇ ?" ಎಂಬ ಆವೇಶದ ಶಬ್ದಗಳು ಕೇಳಿಬಂದವು.

ಅರುಣಸಿಂಹನು ಬೆಚ್ಚಿಬಿದ್ದನು. ಅವನು ತಿರುಗಿ ನೋಡುವಲ್ಲಿ ಅಂಧಕಾ ರದ ಮಧ್ಯದಲ್ಲಿ ನಿಂತಿದ್ದ ಸ್ತ್ರೀದೇಹವು ಅಸ್ಪಷ್ಟವಾಗಿ ತೋರಿತು. ಅರುಣ ಸಿಂಹನು ಅವಳ ಧ್ವನಿಯನ್ನು ಗುರುತಿಸಿದನು. ಅವಳು ಇನ್ನಾರೂ ಅಲ್ಲ; ಅವನ ಅಸ್ತ್ರವಿದ್ಯಾಗುರುವೂ ಇಹಲೋಕ ಪರಲೋಕಗಳ ಸಂಗಡಿಗಿತ್ತಿಯೂ ಆದ ಮುನ್ನಳು !

**ಅರುಣಸಿಂಹನು**— "ಮುನ್ನಾ! ಎಲ್ಲಿಗೆ ಹೋಗಲಿ? ನನಗೆ ಎಲ್ಲಿ ಆಶ್ರ ಯವಿದೆ? ಇನ್ನೆಷ್ಟು ದಿನಸಗಳವರೆಗೆ ಹಾದೀ ನೋಡಲಿ ಜಗತ್ತಿನಲ್ಲಿ ಇಷ್ಟೊಂದು ಅನಾದರವೂ ಅಪ್ರೀತಿಯೂ ಅಂಧಕಾರವೂ ಇರುವವೆಂದು ನಾನು ಭಾವಿಸಿರ ಲಿಲ್ಲ. ಕಂಡೆಯಾ!" ಎಂದು ಗದ್ಗದಕಂಠದಿಂದ ನುಡಿದನು.

ಮುನ್ನಳು ಅವನ ಕೈಯನ್ನು ಹಿಡಿದುಕೊಂಡು ತನ್ನ ಮನೆಯಕಡೆಗೆ ಹೊರಟಳು. ಹೋಗಹೋಗುತ್ತ:—"ಧೈರ್ಯವನ್ನು ಬಿಟ್ಟರೆ ಕೆಲಸವಾದೀತೇ? ನಿಶ್ಚಯವಾಗಿಯೂ ಕಾಲವು ಬದಲಾಗುವುದು. ಚಿಂತಿಸಿ ಪ್ರಯೋಜನವೇನು?" ಎಂದು ಸಮಾಧಾನ ಹೇಳಿದಳು.

ಅರುಣಸಿಂಹನು ಚಿತ್ತೂರುದುರ್ಗದ ಕಡೆಗೆ ಕೈತೋರಿಸಿ:- "ಮುನ್ನಾ, ನೋಡು. ಚಿತ್ತೂರು ದುರ್ಗದ ಮೇಲೆ ಪ್ರತಿನಿತ್ಯದಲ್ಲಿಯೂ ಬೆಳಗುತ್ತಿದ್ದ ದೀಪಗಳಲ್ಲಿ ಇಂದು ಒಂದಾದರೂ ಇರುವುದೇ ? ಇಂದು ಚಿತ್ತೂರಿನಲ್ಲಿ ಅಂಧಕಾರ! ಚಿತ್ತೂರಿನ ಕಾಲವು ತುಂಬಿಬಂದಿರುವುದು. ಇನ್ನೂ ಅವರಿಗೆ ನನ್ನ ಸ್ಮರಣೆಯು ಬರಲೊಲ್ಲದು. ಅವರು ನನ್ನನ್ನು ಕರೆಯುವಂತಿದ್ದರೆ ಇಷ್ಟರೊಳಗೆ ಯಾವಾಗಲೋ ಕರೆದು ಬಿಡುತ್ತಿದ್ದರು. ಇನ್ನು ಮೇಲೆ ಅವರಾಗಿ ನನ್ನನ್ನು ಕರೆಯುವ ಸಂಭವವಿಲ್ಲ." ಎಂದನು.

ಮುನ್ನಳು ದುರ್ಗದ ಕಡೆಗೆ ನೋಡಿ ಬೆಚ್ಚಿಬಿದ್ದಳು. ನಿಜವಾಗಿಯೂ ಇಂದು ಚಿತ್ತೂರಿನ ಸ್ಥಿತಿಯು ಬಹು ಭಯಾನಕವಾಗಿತ್ತು. ಅಲ್ಲಿ ಇಂದು ಒಂದಾದರೂ ಆಶಾಲೋಕವು ಇರಲಿಲ್ಲ. ಅವಳು ದಾರಿಯಲ್ಲಿ ತನ್ನ ತಂದೆಯ ಅನುಮತಿಯನ್ನು ಪಡೆದು ಯಾವತ್ತು ಭಿಲ್ಲ ಸೈನಿಕರನ್ನು ಕೂಡಿಸಿ ನಾಳೆ ಮುಂಜಾನೆ ಚಿತ್ತೂರಿಗೆ ಹೋಗಿ ಪಠಾಣರೊಡನೆ ಹೋರಾಡಿ ಶಕ್ಯವಿದ್ದಮಟ್ಟಿಗೆ ರಜಪೂತರಿಗೆ ಸಹಾಯ ಮಾಡುವೆನೆಂತಲೂ ಸಾಧ್ಯವಾದರೆ ನಿನ್ನ ಬಯಕೆಯನ್ನು ನೆರವೇರಿಸುವೆನೆಂತಲೂ ಅರುಣಸಿಂಹನಿಗೆ ಅಭಯವಿತ್ತಳು.

*　　*　　*　　*

ಮಾರನೆಯ ದಿನ ಮುನ್ನಳು ಪತಿಯ ಅಪ್ಪಣೆಯ ಮೇರೆಗೆ ತನ್ನ ಭಿಲ್ಲ ಸೇನೆಯನ್ನು ಕೂಡಿಕೊಂಡು ಚಿತ್ತೂರಿಗೆ ಹೋದಳು. ಮುನ್ನಳು ಪುರುಷವೇಷವನ್ನು ಧರಿಸಿದ್ದಳು. ಅವಳು ಹೆಂಗಸೆಂಬುದನ್ನು ಯಾರೂ ಅರಿಯರು. ಸಾಯಂಕಾಲದ ವರೆಗೆ ಭಯಂಕರವಾದ ಯುದ್ಧವು ನಡೆಯಿತು. ಅಸಂಖ್ಯ ಪಠಾಣ ಸೈನಿಕರನ್ನು ಭಿಲ್ಲರು ಕಡಿದೊಗೆದರು. ಬಹುಜನ ಭಿಲ್ಲರೂ ರಣರಂಗದಲ್ಲಿ ಮರಣಹೊಂದಿದರು. ಬಳಿಕ ಉಳಿದಿದ್ದ ರಜಪೂತ ಸೈನಿಕರು ತಿರುಗಿ ದುರ್ಗ

ದೊಳಗೆ ಹೋಗುವಾಗ ಅವರೊಡನೆ ಮುನ್ನಳು ಸಹಜವಾಗಿ ಒಳಗೆ ಹೋದಳು. ಉಳಿದಿದ್ದ ಭಿಲ್ಲರೂ ತಿರುಗಿ ತಮ್ಮ ತಮ್ಮ ಸ್ಥಳಗಳಿಗೆ ಹೋದರು.

ಗಂಭೀರವಾದ ರಾತ್ರಿಯಲ್ಲಿ ಚಿತೋರೇಶ್ವರಿಯ ಮಂದಿರದಲ್ಲಿ ಭೈರವಿಯ ಪದತಲದಲ್ಲಿ ಬಿದ್ದುಕೊಂಡು ಮುನ್ನಳು ಒಂದು ಭೀಷಣವಾದ ವರವನ್ನು ಯಾಚಿಸಿದಳು.

**ಭೈರವಿ:**—ಮುನ್ನಾ! ಏನು ಬೇಡುತ್ತೀ? ಯಾಕೆ ಇಂಥ ವರವನ್ನು ಬೇಡುವೆಯಮ್ಮಾ ?

**ಮುನ್ನಾ:**—ತಾಯಿ, ನೀವು ಅರಿಯದಿರುವುದು ಒಂದೂ ಇಲ್ಲ. ಯಾಕೆ ಸುಮ್ಮನೆ ನನ್ನನ್ನು ಏನೂ ಅರಿಯದವರಂತೆ ಕೇಳುವಿರಿ ? ನೀವು ನನ್ನ ಪತಿಯ ದುಃಖವನ್ನು ಕಳೆದರೆ ತೀರಿತು.

**ಭೈರವಿ:**—ನಿನ್ನ ಪತಿಯ ಚಿಂತೆಯನ್ನು ಕಳೆಯಬಹುದು. ಆದರೆ ಅದರಿಂದ ನಿನಗೆ ಮಂಗಲವಾಗಲಾರದಮ್ಮಾ! ಮುಂದಿನ ಪರಿಣಾಮವನ್ನು ಯೋಚಿಸಿರುವೆಯಾ ?

**ಮುನ್ನಾ:**—ಎಲ್ಲಾ ತಿಳಿದಿರುವೆನು, ತಾಯಿ ! ಆದರೆ ನನ್ನ ಪತಿಯ ದುಃಖದ ಮುಂದ ನನ್ನ ದುಃಖವಲ್ಲ. ನನ್ನ ಸರ್ವಸ್ವವೂ ನಾಶವಾದರೂ ಅಡ್ಡಿಯಿಲ್ಲ. ನನ್ನ ಸ್ವಾಮಿಯ ಬಯಕೆಯನ್ನು ಪೂರೈಸಬೇಕು.

**ಭೈರವಿ:**—( ಸಮಾಧಾನದಿಂದ ) ಆಗಲಿ, ಹಾಗೆಯೇ ಆಗಲಿ; ಏಳು. ಈ ತ್ರಿಶೂಲವನ್ನು ನೋಡು, ಏನು ಕಾಣುತ್ತದೆ ?

ಮುನ್ನಳು ಮಾತಾಡಲಿಲ್ಲ. ಅವಳು ಪ್ರಜ್ಞಾಶೂನ್ಯಳಾಗಿಬಿಟ್ಟಳು.

ಆಗ ಭೈರವಿಯು ಮುನ್ನಳ ತಲೆಯ ಮೇಲೆ ವರದ ಹಸ್ತವನ್ನಿಟ್ಟು ತ್ರಿಶೂಲವನ್ನು ತಿರುಗಿಸಿ ಮಂದಿರದ ಹೊರಗಡೆಗೆ ತೋರಿಸಿದಳು. ಮುನ್ನಳು ' ದಡ ದಡ ' ಮಂದಿರದಿಂದ ಹೊರಗೆ ಬಂದು ಮಾರ್ಗದಲ್ಲಿ ನಿಂತುಕೊಂಡು ಭೈರವಿಯನ್ನು ನೋಡಿದಳು.

ಭೈರವಿಯು ತ್ರಿಶೂಲವನ್ನು ಪುನಃ ಮೇಲಕ್ಕೆತ್ತಿ ರಾಣನ ಅರಮನೆಯ ಕಡೆಗೆ ತೋರಿಸಿದಳು. ಪ್ರಜ್ಞಾಶೂನ್ಯಳಾದ ಮುನ್ನಳು ಆ ಕಡೆಗೆ ನಡೆದಳು.

ಮಧ್ಯರಾತ್ರಿಯು ಮೀರಿಹೋಗಿತ್ತು. ರಾಣಾ ಲಕ್ಷ್ಮಣಸಿಂಗನು ಅರಮನೆಯಲ್ಲಿ ರತ್ನಖಚಿತವಾದ ಮಂಚದ ಮೇಲೆ ಮಲಗಿಕೊಂಡು ನಿದ್ರೆ ಹೋಗುತ್ತಿದ್ದನು. ಬಳಿಯಲ್ಲಿಯೇ ಬಂಗಾರದ ಸಮೆ (ದೀವಸ್ತಂಭದಲ್ಲಿ) ಯಲ್ಲಿ ದೀಪವು ಸಣ್ಣದಾಗಿ ಉರಿಯುತ್ತಿತ್ತು. ನಾಲ್ಕೂ ಕಡೆಗೆ ನಿಃಶಬ್ದ. ಇದ್ದಕ್ಕಿದ್ದ ಹಾಗೆ ರಾಣನ ಅಂತರಂಗದಲ್ಲಿ ಏನೋ ಒಂದು ಭಾವನೆಯು ಉದಯಹೊಂದಿತು. ಅವನಿಗೆ ತಾನು ಮಲಗಿದ್ದ ಕೋಣೆಯ ಬಾಗಿಲಲ್ಲಿ ಅಂಧಕಾರಮಯವಾದ ದೊಡ್ಡದೊಂದು ಪರದೆಯು ಕಾಣಿಸಿತು. ಅದೇನು ? ಆ ಪರದೆಯ ಮಧ್ಯದಲ್ಲಿರುವ ಮೂರ್ತಿಯು ಯಾರದು ?

ರಾಣನು ಎದ್ದು ಕುಳ್ಳಿರಲು ಹೋದನು; ಆಗಲಿಲ್ಲ ಕಣ್ಣುಗಳನ್ನು ತೆರೆಯಲಿಚ್ಛಿಸಿದನು; ಆದರೂ ಆಗಲಿಲ್ಲ. ಅವನ ಅಂತರಂಗದಲ್ಲಿ ಮಹಾಭೀತಿಯು ಸಂಚಾರವಾಯಿತು

ರಾಣನು ಕೊನೆಗೆ ಬಹು ಪ್ರಯಾಸದಿಂದ ಅರ್ಧಶಾಯಿತಾವಸ್ಥೆಯಲ್ಲಿದ್ದುಕೊಂಡು ಹೇಗೋ ಕಣ್ಣುಗಳನ್ನು ತೆರೆದು ಬಾಗಿಲದ ಕಡೆಗೆ ನೋಡಿದನು. ಆ ಅಂಧಕಾರಮಯವಾದ ಪರದೆಯ ಮೇಲಿನ ಅಸ್ಪಷ್ಟವಾದ ಮೂರ್ತಿಯ ಛಾಯೆಯು ಕ್ರಮವಾಗಿ ಸ್ಪಷ್ಟವಾಗುತ್ತ ಬಂದಿತು.

ರಾಣನು ಭಯಚಕಿತನಾಗಿ:—“ ತಾಯೀ, ನೀನಾರಮ್ಮಾ ! ದೇವಿಯೋ ಮಾನವಿಯೋ ? ಬೇಗನೆ ಹೇಳಮ್ಮಾ ! ಇಲ್ಲಿ ನಿನ್ನ ಕೆಲಸವೇನಿದೆ? ” ಎಂದು ಕೇಳಿದನು.

ಮೂರ್ತಿಯು ಸಾವಕಾಶವಾಗಿ:—“ ಮೈ ಭುಕಾ ಹುಂ ! ” ಎಂದಿತು.

ರಾಣನಿಗೆ ಸ್ಮೃತಿತಪ್ಪಿತು. ಅವನು ಆವೇಶದಿಂದ ಹೇಳಿದನೇನೆಂದರೆ:— ತಾಯಿ, ನೀನು ಈ ನಡುರಾತ್ರಿಯಲ್ಲಿ ಬಂದು ಕೇಳಿದರೆ ನಾನೇನು ಕೊಡಲಿ ? ನೀನು ಮಾನವಿಯಲ್ಲ, ಚಿತ್ತೂರಿನ ರಾಜ್ಯಲಕ್ಷ್ಮಿಯೆಂದು ತೋರುತ್ತದೆ. ತಾಯಿ, ಇಷ್ಟು ಜನ ರಜಪೂತರ ರಕ್ತಪಾನಮಾಡಿದರೂ ನಿನಗೆ ತೃಪ್ತಿಯಾಗಲಿಲ್ಲವೇನಮ್ಮಾ ! ಹೇಳಮ್ಮಾ, ತಾಯೀ ಹೇಳು! ಇನ್ನೆಷ್ಟು ಜನ ರಜಪೂತರ ರಕ್ತವನ್ನು ಕುಡಿಯಬೇಕೆಂದಿರುವೆ ?

**ದೇ–ಮೂ**·—ಮೈ ಭುಕಾ ಹುಂ ! ಸಾಮಾನ್ಯ ಸೈನಿಕರ ರಕ್ತದಿಂದ ನನಗೆ ತೃಪ್ತಿಯುಂಟಾಗಲಾರದು. ನನಗೆ ಉಚ್ಚತರದ ರಕ್ತವು ಬೇಕಾಗಿದೆ, ಹನ್ನೆರಡು ಜನ ರಾಜಕುಮಾರರ ರಕ್ತವು ಬೇಕು ! ಮೈ ಭುಕಾ ಹುಂ ! ಮೈ ಭುಕಾ ಹುಂ !

ಎಂಥ ಭಯಂಕರವಾದ ಕ್ಷುಧೆಯಿದು ! ರಾಣಾ ಲಕ್ಷ್ಮಣಸಿಂಗನಿಗೆ ತನ್ನ ಮೈಯೊಳಗಿನ ರಕ್ತವೆಲ್ಲ ಒಮ್ಮೆಂದೊಮ್ಮೆ ನೀರಾಗಿ ಹೋದಂತೆ ಭಾಸವಾಯಿತು ! ಹನ್ನೆರಡು ಜನ ರಾಜಕುಮಾರರು ಬೇಕು ! ಒಮ್ಮೆಯೇ ಚಿತ್ತೂರಿನ ರಾಜವಂಶವು ನಿರ್ಮೂಲವಾಗಿ ಹೋಗುವುದು. ನಿಜವಾಗಿಯೂ ಇವಳು ಚಿತ್ತೂರಿನ ರಾಜ್ಯಲಕ್ಷ್ಮಿಯೇ ?

ಮೂರ್ತಿಯು ಪುನಃ ಹೇಳಿತು: — ಅವಿಶ್ವಾಸ ಪಡಬೇಡ. ರಕ್ತವನ್ನು ಕೊಡು, ಹನ್ನೆರಡು ಜನ ರಾಜಕುಮಾರರನ್ನು ಕೊಡು; ದಿನಕ್ಕೊಬ್ಬರಂತೆ ನಿನ್ನ ಹನ್ನೆರಡು ಜನ ಮಕ್ಕಳನ್ನು ರಣರಂಗದಲ್ಲಿ ಬಲಿಗೊಡು. ಚಿತ್ತೂರನ್ನು ರಕ್ಷಿಸಬೇಕೆನ್ನುವಿಯೋ ? ವಂಶವನ್ನು ಕಾಯ್ದುಕೊಳ್ಳಬೇಕೆನ್ನುವಿಯೋ !

ಮಹಾರಾಣನು ಚೀತ್ಕಾರಸ್ವರದಿಂದ·—“ತಾಯಿ, ಸಮಾಧಾನ ತಾಳು! ಸಮಾಧಾನ ತಾಳು ! ನಿನ್ನ ಆ ಭೀಷಣವಾದ ಕ್ಷುದ್ಬಾಧೆಯನ್ನು ತುಸು ತಡೆದುಕೋ! ನಿನ್ನ ಅಪ್ಪಣೆಯು ನನಗೆ ಶಿರೋಧಾರ್ಯವೇ ಸರಿ. ಚಿತ್ತೂರಿನ ಮೇಲೆ ನಿನ್ನ ಕೃಪಾಕಟಾಕ್ಷವಿರಲಿ ! ಚಿತ್ತೂರಿನ ಉದ್ಧಾರಕ್ಕಾಗಿ ಸರ್ವಸ್ವವನ್ನೂ ಅರ್ಪಿಸಬಲ್ಲೆನು! ” ಎಂದು ಹೇಳಿದನು.

ರಾಣನ ಶರೀರವು ನಡುಗಿತು. ಕೈಕಾಲುಗಳು ನಿಶ್ಚೇತನವಾಗಿ ಹೋದುವು. ಅವನ ಕಣ್ಣುಗಳು ಮುಚ್ಚಿದುವು. ಅವನು ಎಚ್ಚರದಪ್ಪಿ ಬಿದ್ದುಬಿಟ್ಟನು.

ಆ ಮೂರ್ತಿಯೂ ಅಲ್ಲಿಂದ ಸಾವಕಾಶವಾಗಿ ಸರಿದುಹೋಯಿತು.

---

## ಎರಡನೆಯ ಪರಿಚ್ಛೇದ

ಮಾರನೆಯ ದಿನ ಮಧ್ಯಾಹ್ನದ ಮೇಲೆ ರಾಣಾ ಲಕ್ಷ್ಮಣಸಿಂಗನು ತನ್ನ ಯಾವತ್ತೂ ಸರದಾರರೊಂದಿಗೆ ಚಿತೋರೇಶ್ವರಿಯ ಮಂದಿರದ ಮುಂಗಡೆಯಲ್ಲಿ ಕುಳಿತುಕೊಂಡಿದ್ದನು. ಅನೇಕ ಮಾತುಕಥೆಗಳಾದ ಬಳಿಕ ರಾಣನು ಹೇಳಿದ್ದೇನೆಂದರೆ—"ಪ್ರಿಯಸರದಾರರೇ, ಮಂತ್ರಿಗಳೇ, ಶ್ರೀದೇವಿಯ ಆಜ್ಞೆಯು ಶಿರೋಧಾರ್ಯವೇ ಸರಿ. ಅರುಣಸಿಂಹನನ್ನು ತಿರುಗಿ ಕರೆಯಿಸಲೇ ಬೇಕು. ದೇವಿಯು ಆಜ್ಞಾಪಿಸಿದ ಮೇಲೆ ಉಳಿದ ಸಂಗತಿಗಳನ್ನು ವಿಚಾರ ಮಾಡುವಂತಿಲ್ಲ. ಅರುಣಸಿಂಹನು ನಾಳೆಯೇ ಯುದ್ಧಕ್ಕೆ ಹೊರಡತಕ್ಕದ್ದು. ಆ ಬಳಿಕ ಉಳಿಯುವ ಹನ್ನೊಂದು ಜನ ರಾಜಪುತ್ರರೂ ದಿನಕ್ಕೊಬ್ಬರಂತೆ ಸೇನಾಧಿಪತ್ಯವನ್ನು ವಹಿಸಿ ............"

ಹೇಳಹೇಳುತ್ತ ರಾಣನ ಧ್ವನಿಯು ಕುಗ್ಗಿತು; ಅವನ ಬಾಯಿಯಿಂದ ಮಾತೇ ಹೊರಡಲಿಲ್ಲ. ದೇವಿಯ ಮಂದಿರದ ಬಾಗಿಲಲ್ಲಿ ಪದ್ಮಿನಿಯು ಮುಖವನ್ನು ಮುಚ್ಚಿಕೊಂಡು ಅಳುತ್ತ ನಿಂತಿದ್ದಳು. ಚಿತ್ತೂರಿನ ರಾಣಿಯು ಅಪಾರವಾದ ಚಿಂತೆಯಲ್ಲಿ ಮುಳುಗಿಹೋಗಿದ್ದಳು. ದಾಸಿಯೊಬ್ಬಳು ಅವಳನ್ನು ಅಪ್ಪಿಕೊಂಡು ಸಮಾಧಾನಪಡಿಸುತ್ತಿದ್ದಳು. ರಾಣನು ಅವರ ಆ ಸ್ಥಿತಿಯನ್ನು ನೋಡಿದನು. ಕೆಲವು ಹೊತ್ತಿನವರೆಗೆ ಅವನಿಗೆ ಮೈಮೇಲೆ ಸ್ಮೃತಿಯೇ ಉಳಿಯಲಿಲ್ಲ.

ಮಂದಿರದ ಭೈರವಿಯು ಬಂದು ಅವರನ್ನು ಒಳಗೆ ಕರೆದುಕೊಂಡು ಹೋಗಿ ಅವರಿಗೆ ದೇವಿಯ ಮೂರುತಿಯನ್ನು ತೋರಿಸಿ ಹೇಳಿದಳು:—"ತಂಗೀ, ಯಾಕೆ ಸುಮ್ಮನೆ ಅಳುತ್ತೀರಿ ? ಅತ್ತರೆ ಆಗುವುದೇನು ? ಇತ್ತ ನೋಡಿರಿ ; ಈ ದೇವಿಯ ಶಾಂತಿಮಯವಾದ ಮೂರುತಿಯನ್ನು ನೋಡಿ ಸಮಾಧಾನ ಮಾಡಿಕೊಳ್ಳಿರಿ. ದೇವಿಯು ನಿಮ್ಮ ಕುಮಾರರನ್ನು ಈ ದುಃಖ ದುರಾಚಾರಮಯವಾದ ಜಗತ್ತಿನಿಂದ ಕರೆದೊಯ್ದು ಸುಖಶಾಂತಿಗಳಿಂದೊಪ್ಪುವ ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕೆಂದು ಯೋಚಿಸಿರುವಳು. ನೀವೂ ಅಲ್ಲಿಗೇ ಹೋಗುವಿರಿ. ಅವರು

ಎರಡು ಹೆಜ್ಜೆ ಮುಂದೆ ಹೋದರೆ ನೀವು ಎರಡು ಹೆಜ್ಜೆ ಹಿಂದಿನಿಂದ ಹೋಗು ವಿರಿ. ಕೊನೆಗೆ ನೀವೆಲ್ಲರೂ ಆ ದೇವಿಯ ಶಾಂತಿಮಯವಾದ ರಾಜ್ಯದಲ್ಲಿ ಕೂಡೇ ಕೂಡುವಿರಿ. ಅಂದಬಳಿಕ ಈ ಎರಡು ದಿನಗಳ ವಿಯೋಗಕ್ಕಾಗಿ ಚಿಂತಿಸುವು ದೇಕೆ? ಬಸ್ಸಿರಿ. ದೇವಿಯನ್ನು ಆರಾಧಿಸಿರಿ. ಅವಳು ನಿಮ್ಮನ್ನು ತೀವ್ರವಾಗಿಯೇ ಕರೆಯಿಸಿಕೊಳ್ಳುವಳು. ವೀರರ ಹೊಟ್ಟೆಯಲ್ಲಿ ಹುಟ್ಟಿ ವೀರಪತ್ನಿಯರಾಗಿ ಅಳು ವುದಕ್ಕೆ ಎಂದಿನಿಂದ ಕಲಿತಿರಿ! ಅಳುವುದು ನಿಮ್ಮಂಥ ಕ್ಷತ್ರಿಯರಿಗೆ ಒಪ್ಪುವುದಿಲ್ಲ.

ರಾಣಿಯೂ ಪದ್ಮಿನಿಯೂ ಶಾಂತಚಿತ್ತದಿಂದ ದೇವಿಯನ್ನು ಆರಾಧಿಸುತ್ತ ಕುಳಿತುಕೊಂಡರು. ಈಗ ರಾಣಿಯು ಅಳುತ್ತಿರಲಿಲ್ಲ. ಅವಳು ತನ್ನ ಮುಂದಿನ ಪ್ರಯಾಣದ ಸಿದ್ಧತೆಯನ್ನು ಮನಸ್ಸಿನಲ್ಲಿಯೇ ಮಾಡತೊಡಗಿದಳು.

ಹಿಂದೆ ಹೇಳಿದ ಮೇರೆಗೆ ರಾಣನು ಶೋಕಾಕುಲನಾಗಿ ಮಾತಾಡಲಾರದೆ ಕುಳಿತುಕೊಂಡುದನ್ನು ನೋಡಿ ಒಬ್ಬ ಸರದಾರನು ಸಾವಕಾಶವಾಗಿ ಮುಂದ ರಿದು ಬಂದು ಹೇಳಿದನು:—ರಾಣಾಜೀ,ನನ್ನದೊಂದು ವಿಜ್ಞಾಪನೆ ಯಿರುವದು. ಸ್ವಾಮಿ, ತಾವು ನಿನ್ನಿನ ರಾತ್ರಿಯಲ್ಲಿ ನೋಡಿದ ವಿಚಾರವು ಕೇವಲ ಸ್ವಪ್ನವಾಗಿ ದ್ದರೂ ಆಗಿರಬಹುದು. ಶೋಕಾಕುಲರಾದವರಿಗೆ ಕಾಣಿಸಿದ ಸ್ವಪ್ನವು ಫಲಿ ಸುವದಿಲ್ಲವಂತೆ! ಅದರಿಂದ ಆ ಸ್ವಪ್ನದ ವಿಚಾರಕ್ಕಾಗಿ ಇಷ್ಟೇಕೆ ವ್ಯಸನ ಪಡುವಿರಿ? ಒಂದುವೇಳೆ ಆ ಮಾತು ನಿಜವಾಗಿದ್ದರೆ ಅದನ್ನು ಇನ್ನೊಮ್ಮೆ ಪರೀ ಕ್ಷಿಸಲಿಕ್ಕೇಬೇಕು. ಯಾವುದೋ ಅನಿರ್ದಿಷ್ಟವಾದ ವಿಚಾರಕ್ಕಾಗಿ ಇಂಥ ರತ್ನ ದಂಥ ಹನ್ನೆರಡು ಜನ ರಾಜಕುಮಾರರನ್ನು ಬಲಿಗೊಡುವುದು ನನಗೆ ಸರಿ ದೋರುವುದಿಲ್ಲ."

**ರಾಣ** :— ನೀವು ಹೇಳುವುದರ ಅರ್ಥವೇನು? ಇನ್ನೊಮ್ಮೆ ಹೇಗೆ ಪರೀಕ್ಷಿಸಬೇಕು?

**ಸರದಾರ** :— ದೇವಿಯು ನಿನ್ನಿನ ರಾತ್ರಿಯಲ್ಲಿ ಅರಮನೆಗೆ ಬಂದು ರಾಜ ಕುಮಾರರನ್ನು ಬಲಿಗೊಡಬೇಕೆಂದು ಹೇಳಿದ್ದು ನಿಶ್ಚಯವಾಗಿದ್ದರೆ ಆ ಮಹಾ ಮಾಯೆಯು ಈಗ ನಮ್ಮ ಮುಂದೆಯೂ ಹೇಳಕೂಡದೇಕೆ? ದೇವಿಯು ಈಗ ನಮ್ಮೆಲ್ಲರ ಮುಂದೆ ಪ್ರತ್ಯಕ್ಷಳಾಗಿ ಬಂದು ಹೇಳಿದರೆ ಮಾತ್ರ ಆ ವಿಚಾರವು ಸರಿ.

ಇಲ್ಲದಿದ್ದರೆ ವ್ಯರ್ಥವಾಗಿ ರಾಜಕುಮಾರರನ್ನು ರಣದೇವತೆಗೆ ಬಲಿಗೊಡುವುದು ನನಗಂತೂ ಸರಿಯೆಂದು ತೋರುವುದಿಲ್ಲ. ಒಬ್ಬರ ಮುಂದೆ—ಅದೂ ಅರ್ಧ ನಿದ್ರಿತಾವಸ್ಥೆಯಲ್ಲಿ—ಹೇಳಿದ ವಿಚಾರವು ಅಷ್ಟೊಂದು ವಿಶ್ವಸನೀಯವಲ್ಲ. ನಿಜ ವಾಗಿಯೂ ತಮಗೆ ನಿನ್ನಿನ ರಾತ್ರಿಯಲ್ಲಿ ಕನಸೇ ಬಿದ್ದಿರಬೇಕು

**ರಾಣಾ**:—ಒಳ್ಳೇದು, ಹಾಗೆಯೇ ಆಗಲಿ! ನೀವೆಲ್ಲರೂ ಇಲ್ಲಿ ಬಂದು ಕುಳಿತು ಏಕಾಗ್ರಚಿತ್ತದಿಂದ ದೇವಿಯನ್ನು ಆರಾಧಿಸಿದರೆ ದೇವಿಯು ಪ್ರತ್ಯಕ್ಷಳಾ ದರೂ ಆಗಬಹುದು.

ಆ ಬಳಿಕ ಯಾವತ್ತೂ ಸರದಾರರೂ ಮಂತ್ರಿಗಳೂ ದೇವಿಯ ಮಂದಿರದ ಮುಂದಿನ ಅಂಗಣದಲ್ಲಿ ಬಂದು ಮೊಣಕಾಲೂರಿ ಕುಳಿತುಕೊಂಡರು. ಅವರೆ ಲ್ಲರೂ ಏಕಕಂಠದಿಂದ ದೇವಿಯ ಸ್ತುತಿಯನ್ನು ಆರಂಭಿಸಿದರು. ಮಂದಿರದ ಭೈರವಿಯು ಅವರೆಲ್ಲರ ಮೇಲೆ ತೀರ್ಥಜಲವನ್ನು ಪ್ರೋಕ್ಷಿಸಿದಳು. ತುಸುಹೊತ್ತಿನ ತರುವಾಯ ಮಂದಿರದ ಒಳಗಿನ ದೇವಿಯ ಮೂರುತಿಯ ಮುಂದಿನ ದೀಪವು ಒಮ್ಮೆಂದೊಮ್ಮೆ ಮಲಿನವಾಯಿತು. ಆ ಮಲಿನವಾದ ಪ್ರಕಾಶದಲ್ಲಿ ದೇವಿಯ ಪ್ರತಿಮೆಯ ಬಲಭಾಗದಿಂದ ಅತ್ಯಂತ ಸುಂದರಿಯಾದ ರಮಣಿಯ ಮೂರ್ತಿಯು ಸಾವಕಾಶವಾಗಿ ಸರಿಯುತ್ತ ಬಂದು ಮುಂದೆ ನಿಂತಿತು.

ಆಗ **ರಾಣನು**:— "ಇದೇ ಮೂರ್ತಿಯು ! ಇದೇ ಮೂರ್ತಿಯು !!" ಎಂದು ಚೀತ್ಕಾರಮಾಡಿದನು. ರಜಪೂತ ಸರದಾರರು:—" ಜಯ ! ಚಿತೋ ರೇಶ್ವರಿಗೆ ಜಯ ! " ಎಂದು ಜಯಧ್ವನಿಮಾಡಿ ಸಾಷ್ಟಾಂಗನಮಸ್ಕಾರ ಮಾಡಿ ದರು. ಅವರು ತಿರುಗಿ ಏಳುವಷ್ಟರಲ್ಲಿ ಆ ರಮಣಿಯ ಮೂರ್ತಿಯು ಅದೃಶ್ಯ ವಾಗಿ ಹೋಗಿತ್ತು.

ರಜಪೂತ ಸರದಾರರೆಲ್ಲರೂ ದೇವಿಯ ಆಜ್ಞೆಯನ್ನು ಪಾಲಿಸತಕ್ಕದ್ದೇ ಸರಿಯೆಂದು ಒಪ್ಪಿಕೊಂಡರು.

---

# ಮೂರನೆಯ ಪರಿಚ್ಛೇದ

ಇಷ್ಟಾದ ಬಳಿಕ ರಜಪೂತ ಸರದಾರರು ಒಳ್ಳೇ ಉತ್ಸಾಹದಿಂದ ಯುದ್ಧವನ್ನು ಆರಂಭಿಸಿದರು. ಅವರಿಗೆ ಈಗ ಮರಣದ ಭಯವಿಲ್ಲ. ಅವರೆಲ್ಲರೂ ರಣಭೂಮಿಯಲ್ಲಿ ವೀರರಂತೆ ಕಾದಿ ಮರಣಹೊಂದಿ ವೀರಸ್ವರ್ಗವನ್ನು ಪಡೆಯಲು ಉತ್ಸುಕರಾಗಿದ್ದರು. ರೋಗಪೀಡಿತರಾಗಿ ಹಾಸಿಗೆಯಲ್ಲಿ ನರಳುತ್ತ ಬಿದ್ದುಕೊಂಡು ಪ್ರಾಣಬಿಡುವುದಕ್ಕಿಂತಲೂ ರಣರಂಗದಲ್ಲಿ ಶೌರ್ಯದಿಂದ ಕಾದಾಡಿ ಸ್ವದೇಶದ ಸಲುವಾಗಿಯೂ ಸ್ವಜನರ ಸಲುವಾಗಿಯೂ ಮರಣಹೊಂದುವುದರಿಂದ ನಶ್ವರವಾದೀ ದೇಹದ ಸದುಪಯೋಗವಾಗುವುದೆಂತಲೂ ತಮಗೆ ವೀರಸ್ವರ್ಗವು ದೊರೆಯುವುದೆಂತಲೂ ದೇವಿಯು ಪ್ರತ್ಯಕ್ಷಳಾಗಿ ತಮಗೆ ಈ ವಿಚಾರವನ್ನೇ ಅನ್ಯೋಕ್ತಿಯಿಂದ ಬೋಧಿಸಿದಳೆಂತಲೂ ಅವರು ಭಾವಿಸಿದರು.

ಅದೇ ದಿನ ರಾಣನ ಅಪ್ಪಣೆಯ ಮೇರೆಗೆ ದೂತನು ಹೋಗಿ ಅರುಣಸಿಂಹನನ್ನು ಕರೆದುಕೊಂಡು ಬಂದನು. ಅರುಣಸಿಂಹನು ನಾಳೆಯೇ ಸೇನಾಪತಿಯಾಗಿ ಪಠಾಣರೊಡನೆ ಯುದ್ಧಕ್ಕೆ ಹೊರಡತಕ್ಕದ್ದೆಂದು ನಿರ್ಣಯವಾಯಿತು.

ಅರುಣಸಿಂಹನು ತನ್ನ ದಾನವದಮನವೆಂಬ ಪಂಚವರ್ಣದ ಕುದುರೆಯನ್ನೇರಿ ಆನಂದೋನ್ಮತ್ತನಾಗಿ ರಣರಂಗಕ್ಕೆ ಹೊರಟನು. ಕೆಲವು ಜನ ರಜಪೂತ ಸೈನಿಕರು ಒರೆಗಳೆದ ಖಡ್ಗಗಗಳನ್ನು ಧರಿಸಿ ಅವನನ್ನು ಹಿಂಬಾಲಿಸಿದರು.

ಇನ್ನು ಅರೆಗಳಿಗೆಯಲ್ಲಿ ಅರುಣಸಿಂಹನು ದುರ್ಗದ ಮಹಾದ್ವಾರವನ್ನು ದಾಟಿ ಪಠಾಣರ ಸೇನಾಸಮುದ್ರದಲ್ಲಿ ದುಮ್ಮಿಕ್ಕತಕ್ಕವನು; ಅಷ್ಟರಲ್ಲಿ ಅಶ್ವಾರೋಹಿಯಾದ ರಜಪೂತ ಸರದಾರನೊಬ್ಬನು ಧಾವಿಸಿ ಬಂದು ಅವನ ಪಾರ್ಶ್ವದಲ್ಲಿ ನಿಂತನು. ಅರುಣಸಿಂಹನು ಒಮ್ಮೆ ಚಕಿತ ದೃಷ್ಟಿಯಿಂದ ಆ ಸೈನಿಕನ ಮುಖವನ್ನು ನೋಡಿದನು.

ಅರುಣಸಿಂಹನು ಆ ವ್ಯಕ್ತಿಯನ್ನು ಗುರುತಿಸಿದನು. ಅವಳು ಅರುಣಸಿಂಹನ ಹೃದಯೇಶ್ವರಿಯಾದ ಮುನ್ನಳಾಗಿದ್ದಳು! ಅಂದು ಭಿಲ್ಲಸೈನಿಕರನ್ನು ಕೂಡಿಕೊಂಡು ಚಿತ್ತೂರಿಗೆ ಬರುವಾಗ ಧರಿಸಿಕೊಂಡಿದ್ದ ವೇಷಭೂಷಣಗಳೇ ಈಗಲೂ

ಅವಳ ಮೈಮೇಲೆ ಒಪ್ಪುತ್ತಿದ್ದುವು. ಅರುಣಸಿಂಹನು ಕಂಪಿತಸ್ವರದಿಂದ ಕೇಳಿದನು, "ಮುನ್ನಾ ! ಹಾಮಿರನ ಗತಿಯೇನು ? " ಹಾಮಿರನು ಮುನ್ನಳ ಎರಡು ವರುಷದ ಮಗುವು.

ಮುನ್ನಳು ತೋರ್ಬೆರಳನ್ನು ಆಕಾಶದ ಕಡೆಗೆ ತೋರಿ, "ಆತನು ಕಾಪಾಡಬೇಕು. ಅವನು ತನ್ನ ಅಜ್ಜನ ಮನೆಯಲ್ಲಿ ಸದ್ಯಕ್ಕಂತೂ ಸುಖದಿಂದ ಇರುವನು. ನಾವಿನ್ನು ಅವನ ವಿಷಯವಾಗಿ ಯೋಚಿಸುವಂತಿಲ್ಲ. " ಎಂದಳು. ಅರುಣಸಿಂಹನಿಗೆ ಮುನ್ನಳ ಯೋಗ್ಯತೆಯೂ ಅವಳ ಮನಸ್ಸಿನ ಸ್ಥಿತಿಯೂ ಚೆನ್ನಾಗಿ ಗೊತ್ತಿದ್ದುದರಿಂದ ಅವನು ಪುನಃ ಹೆಚ್ಚಾಗಿ ಮಾತು ಬೆಳಿಸಲಿಲ್ಲ.

ಪರಕ್ಷಣದಲ್ಲಿಯೇ ಕ್ರುದ್ಧವಾದ ರಜಪೂತ ಸೈನಿಕರ ಚಿಕ್ಕ ಪ್ರವಾಹವು ಪಠಾಣ ಸೇನಾಸಮುದ್ರವನ್ನು ಸೇರಿ ಅದೃಶ್ಯವಾಗಿ ಹೋಯಿತು. ಒಬ್ಬನೂ ತಿರುಗಿ ಬರಲಿಲ್ಲ.

ಮಾರನೆಯ ದಿನ ಇನ್ನೊಬ್ಬ, ಮೂರನೆಯ ದಿನ ಮತ್ತೊಬ್ಬ, ನಾಲ್ಕನೆಯ ದಿನ ನಾಲ್ಕನೆಯವ, ಇದೇ ರೀತಿಯಾಗಿ ಚಿತ್ತೂರಿನ ಹನ್ನೊಂದು ಜನರಾಜಕುಮಾರರು ಹನ್ನೊಂದು ದಿನಗಳವರೆಗೆ ಸೇನಾಧಿಪತ್ಯವನ್ನು ವಹಿಸಿ ರಣಭೂಮಿಯನ್ನು ಪ್ರವೇಶಿಸಿ ಕ್ಷತ್ರಿಯೋಚಿತವಾದ ರೀತಿಯಿಂದ ಕಾದಿ ವೀರಸ್ವರ್ಗವನ್ನು ಹೊಂದಿದರು.

ಹನ್ನೆರಡನೆಯ ದಿನ ಉಳಿದ ಇನ್ನೊಬ್ಬನ ಸರತಿಯು ಬಂದಿತು. ರಾಣಾ ಲಕ್ಷ್ಮಣಸಿಂಹನ ದ್ವಿತೀಯಪುತ್ರನಾದ ಅಜಯಸಿಂಹನೊಬ್ಬನು ಮಾತ್ರ ಉಳಿದಿದ್ದನು. ಅಜಯಸಿಂಹನು ರಾಣನ ಅತ್ಯಂತ ಪ್ರೀತಿಯ ಮಗನು. ಅದರಿಂದಲೇ ಅವನು ಇನ್ನೂ ಯುದ್ಧರಂಗಕ್ಕೆ ಹೊರಟಿರಲಿಲ್ಲ.

ಹನ್ನೆರಡನೆಯ ದಿನ ಮುಂಜಾನೆ ರಾಣಾ ಲಕ್ಷ್ಮಣಸಿಂಹನು ಅಜಯಸಿಂಹನನ್ನು ಕರೆದು,-"ಅಜಯ ! ಚಿತ್ತೂರಿನ ರಾಣನ ವಂಶದ ಆಧಾರಭೂತರಾದ ಹನ್ನೆರಡು ಜನ ರಾಜಕುಮಾರರಲ್ಲಿ ನೀನೊಬ್ಬನು ಮಾತ್ರ ಉಳಿದಿರುವೆ. ರಣದೇವತೆಗೆ ಬಲಿಯಾಗುವುದು ಇಂದು ನಿನ್ನ ಪಾಲಿಗೆ ಬಂದಿದೆ. ಆದರೆ ನಾನು ಈ ಮಾತನ್ನು ಹೇಗೆ ಸಮ್ಮತಿಸಲಿ? ನೀನು ನಿನ್ನ ಇಬ್ಬರು ಮಕ್ಕಳನ್ನೂ ಪತ್ನಿಯನ್ನೂ

ಸಂಗಡ ಕರೆದುಕೊಂಡು, ಕೈಲಿವಾರದ ದುರ್ಗಕ್ಕೆ ಹೋಗಿ ಅಲ್ಲಿ ಉಳಿದು ಕೊಂಡು ಮುಂದೆ ಸಮಯವನ್ನು ಸಾಧಿಸಿ ಚಿತ್ತೂರಿನ ಪುನರುದ್ಧಾರಕ್ಕಾಗಿ ಯತ್ನಿಸು. ನಾಳೆ ನಿನ್ನ ಬದಲಾಗಿ ನಾನೂ ಕಾಕಾಜಿಯುವರಾದ ರಾಣಾಭೀಮ ಸಿಂಹರೂ ರಣದೇವತೆಗೆ ಬಲಿಯಾಗುವೆವು. ಅದರಿಂದ ದೇವಿಯು ಸಹಜವಾಗಿ ಸಂತುಷ್ಟಳಾಗುವಳು. ” ಎಂದನು.

ಅಜಯಸಿಂಹನು ಕಂಪಿತ ಸ್ವರದಿಂದ,–“ರಾಣಾಜೀ, ನನ್ನ ಹನ್ನೊಂದು ಜನ ಬಂಧುಗಳೂ ಸ್ವದೇಶೋದ್ಧಾರಕ್ಕಾಗಿ ಪ್ರಾಣವನ್ನು ಕೊಟ್ಟು ವೀರಸ್ವರ್ಗ ವನ್ನು ಪಡೆದರು. ಆದರೆ ನನ್ನ ಅದೃಷ್ಟದಲ್ಲಿ ಆ ಸೌಭಾಗ್ಯವು ಇಲ್ಲವೆಂದು ತೋರುತ್ತದೆ. ನಾನೂ—”

ರಾಣನು ನಡುವೆಯೇ—“ ಮಗುವೇ, ಅಂತ್ಯಕಾಲವಲ್ಲಿಯು ಈ ನನ್ನ ಆಜ್ಞೆಯನ್ನು ಮೀರಿ ನನ್ನನ್ನು ಇನ್ನಷ್ಟು ದುಃಖಗೊಳಿಸದಿರು. ದೇವರು ನಿನಗೆ ಕಲ್ಯಾಣಮಾಡಲಿ, ಚಿತ್ತೂರಿನ ರಾಜವಂಶವು ಚಿರಂಜೀವಿಯಾಗಿರಲಿ! ”ಎಂದನು.

ಪಿತೃಭಕ್ತನಾದ ಅಜಯಸಿಂಹನು ಪುನಃ ಮಾತಾಡಲಿಲ್ಲ. ಅವನು ತಂದೆಯ ಅಜ್ಞೆಯನ್ನು ಶಿರದಲ್ಲಾಂತು ತನ್ನ ಇಬ್ಬರು ಮಕ್ಕಳನ್ನೂ ಪತ್ನಿಯನ್ನೂ ಸಂಗಡಕರೆದುಕೊಂಡು ಚಿತ್ತೂರಿನಿಂದ ಹೊರಟು ಕೈಲಿವಾರದ ದುರ್ಗವನ್ನು ಸೇರಿವನು. ಈಗ ರಾಣಿಗೆ ಅರಮನೆಯು ಬರಿದಾದಂತೆ ತೋರಿತು. ಅವಳು ಬಿದ್ದು ಬಿದ್ದು ಅಳತೊಡಗಿವಳು.

ಆಗ ಪದ್ಮಿನಿಯು ಅಲ್ಲಿಗೆ ಬಂದು ಅವಳನ್ನು ಹಿಡಿದೆತ್ತಿ,—“ತಂಗೀ, ಸುಮ್ಮನೆ ಅಳುವೆಯೇಕೆ ? ಅತ್ತರೇನಾಗುವುದು ? ನಿನಗೆ ಹೇಳಿದ್ದನ್ನೇ ತಿರು ತಿರುಗಿ ಹೇಳಬೇಕಾಗಿದೆ. ಎರಡು ದಿನಗಳ ವಿಯೋಗಕ್ಕಾಗಿ ಇಷ್ಟೊಂದು ವ್ಯಸ ನಪಡುವೆಯೇಕೆ ? ನಿನ್ನ ಹನ್ನೊಂದು ಜನ ಕುಮಾರರು ದೇವಿಯ ರಾಜ್ಯದಲ್ಲಿ ನಿನ್ನ ದಾರಿಯನ್ನು ನಿರೀಕ್ಷಿಸುತ್ತ ಕುಳಿತಿರುವರು. ನೀನು ನಾಳೆಯೇ ಆ ಸ್ಥಳಕ್ಕೆ ಹೋಗುವೆ. ಈ ವಿಚಾರವನ್ನು ಲಕ್ಷ್ಯಕ್ಕೆ ತಂದು ಸಮಾಧಾನತಾಳು. ಆ ಸ್ವರ್ಗದ ಮಾರ್ಗವು ಸುಗಮವಾಗುವದಕ್ಕಾಗಿ ತಕ್ಕ ಉಪಾಯಗಳನ್ನು ಯೋಚಿಸು. ಪ್ರಯಾಣದ ದಿವಸವು ಒದಗಿ ಬಂದಿರುವುದು. ನಡೆ, ದೇವಿಯ

ಮಂದಿರಕ್ಕೆ ಹೋಗೋಣ. ಮೇಲಾಗಿ ನೀನು ಚಿತ್ತೂರಿನ ಮಹಿಷಿಯು; ನಿನ್ನನ್ನು ನೋಡಿ ನಿನ್ನ ಸಾವಿರಾರು ಪ್ರಜೆಗಳು ಮನಸ್ಸಿನಲ್ಲಿ ಧೈರ್ಯವನ್ನು ತಾಳ ಬೇಕು; ಆ ನಿನ್ನ ಸಕಲ ಪ್ರಜೆಗಳೂ ನಿನ್ನನ್ನು ಅನುಸರಿಸಿ ನಡೆಯಬೇಕು; ಹೀಗಿದ್ದು ನೀನೇ ಹೀಗೆ ಅತ್ತು ರಂಭಾಟಮಾಡುತ್ತ ಕುಳಿತರೆ ಅವರೇನು ಮಾಡ ಬೇಕು? ಮಹಿಷಿಯಾದವಳು ಮಹಿಷಿಯಂತೆಯೇ ಇರಬೇಕು. ಅದರಿಂದ ಹೀಗೆ ದುಃಖಪಡುವುದು ನಿನಗೆ ಶೋಭಿಸುವುದಿಲ್ಲ." ಎಂದಳು. ಪದ್ಮಿನಿಯ ಮುಖ ದಲ್ಲಿ ಮುಗುಳ್ನಗೆಯು ವಿರಾಜಿಸುತ್ತಿತ್ತು. ಆಶ್ಚರ್ಯ! ಇಂಥವರೇ ಧೀರರು!

ರಾಣಿಯು ಪದ್ಮಿನಿಯ ಮಾತುಗಳನ್ನು ಕೇಳಿ ಅಳುವುದನ್ನು ಬಿಟ್ಟು ಎದ್ದು ನಿಂತಳು. ಅವಳ ಮುಖದಲ್ಲಿ ಆನಂದದ ಕಳೆಯು ಉಕ್ಕಿಬರತೊಡಗಿತು. ಪದ್ಮಿ ನಿಯು ಅವಳ ಕೈಯನ್ನು ಹಿಡಿದು,—"ತಂಗೀ, ಈ ಆತ್ಮವು ಅವಿನಾಶಿಯಾಗಿದೆ; ಕಾಲಗತಿಯಿಂದ, ಅರ್ಥಾತ್ ಕರ್ಮವಶದಿಂದ ಒದಗುವ ಸುಖದುಃಖಗಳು ನಮ್ಮವಲ್ಲ. ಅವುಗಳನ್ನು ಗಣಿಸಲಾಗದು. ಅವುಗಳಿಗಾಗಿ ಹಿಗ್ಗಿ ತಗ್ಗುವವರು ಕೇವಲ ಮೂಢರು. ಯಾವ ಆದಿಮಾಯೆಯು ಈ ಸಕಲ ಸೃಷ್ಟಿಯನ್ನು ಸೃಷ್ಟಿಸಿ ಪೊರೆಯುತ್ತಿರುವಳೋ ಯಾವ ಆದಿಮಾಯೆಯು ಈ ವಿಶ್ವಪ್ರಪಂಚದ ಸಕಲ ಸುಖದುಃಖಗಳ ನಿಯಾಮಕಳೋ ಆ ಆದಿಮಾಯೆಯನ್ನು ಮರೆಹೊಗುವು ದಿಷ್ಟೇ ನಮ್ಮ ಕರ್ತವ್ಯವು. ತಪ್ಪುಒಪ್ಪುಗಳೆಲ್ಲವೂ ಅವಳವೇ ಸರಿ "**त्वमेव माताच पिता त्वमेव**" ಎಂದು ಅನನ್ಯಭಾವದಿಂದ ಆ ಜಗದುದ್ಧಾರಕಳನ್ನು ಮರೆಹೊಕ್ಕರೆ ಅವಳು ಅರೆನಿಮಿಷದಲ್ಲಿ ನಮ್ಮ ಕಷ್ಟಗಳೆಲ್ಲವನ್ನೂ ಕಳೆದು ಸ್ಥಿರ ವಾದ ಸುಖಶಾಂತಿಗಳನ್ನು ದಯಪಾಲಿಸುವಳು. ಅಹಂಕಾರ ಮಮಕಾರಗಳೇ ಈ ಪ್ರಪಂಚದ ಸಕಲ ಸುಖದುಃಖಗಳ ಮೂಲವು. ಆ ಮೂಲವನ್ನೇ ಕಿತ್ತೊ ಗೆದರೆ ಇನ್ನೆಲ್ಲಿಯ ಸುಖ? ಇನ್ನೆಲ್ಲಿಯ ಪುತ್ರರು? ಇನ್ನೆಲ್ಲಿಯ ರಾಜ್ಯವೈಭವ ಗಳು? ಅವುಗಳ ವಿಯೋಗದಿಂದ ದುಃಖವೆಲ್ಲುಂಟಾಗುವುದು? ಆ ಆದಿಮಾ ಯೆಯ ಮಂದಿರಕ್ಕೆ ನಡೆ. ಆಕೆಯ ಅಪ್ಪಣೆಯನ್ನು ಪಡೆದುಕೊಂಡು "ಜೋ ಹಾರ" ವ್ರತವನ್ನು ಸ್ವೀಕರಿಸುವ. ನಮಗೆ ಇನ್ನು ಅನ್ಯಮಾರ್ಗಗಳೇ ಉಳಿದಿಲ್ಲ" ಎಂದಳು.

# ನಾಲ್ಕನೆಯ ಪರಿಚ್ಛೇದ

ಪದ್ಮಿನಿಯೂ ರಾಣಿಯೂ ದೇವಿಯ ಅಪ್ಪಣೆಯಂತೆ ಜೋಹಾರವ್ರತವನ್ನು ಸ್ವೀಕರಿಸುವರೆಂಬ ಸುದ್ದಿಯು ಅರೆಗಳಿಗೆಯಲ್ಲಿ ಊರಲ್ಲೆಲ್ಲ ಹಬ್ಬಿತು.

ಜೋಹಾರವು ರಜಪೂತರ ಕೊನೆಯ ವ್ರತವು. ರಜಪೂತರು ಶತ್ರುಗಳಿಂದ ಪರಾಜಿತರಾಗಿ, ಅವರ ಸ್ತ್ರೀಯರ ಶೀಲ-ಧರ್ಮ-ಮರ್ಯಾದೆಗಳು ಹಗೆಗಳ ಸ್ವಾಧೀನವಾಗಿ ಹೋಗುವ ಪ್ರಸಂಗವು ಬಂದರೆ, ಅವರು ಈ ವ್ರತವನ್ನು ಸ್ವೀಕರಿಸುವರು. ವ್ರತದ ಸಮಾಪ್ತಿಯ ದಿವಸ ರಜಪೂತ ಸೈನಿಕರು ಕೇಸರೀ ಬಣ್ಣದ ವಸ್ತ್ರಗಳನ್ನು ಧರಿಸಿ ಅಫೀಮು ಮುಂತಾದ ಮಾದಕದ್ರವ್ಯಗಳನ್ನು ಯಥೇಚ್ಛೆಯಾಗಿ ಸೇವಿಸಿ ಉನ್ಮತ್ತರಾಗಿ ಒರೆಗಳೆದ ಖಡ್ಗಗಳನ್ನೂ ಬಾಲೆ, ಬರ್ಚಿ ಮುಂತಾದ ಆಯುಧಗಳನ್ನೂ ಧರಿಸಿ ಒಮ್ಮಿಂದೊಮ್ಮೆ ದುರ್ಗದ ಬಾಗಿಲನ್ನು ತೆರೆದು ಶತ್ರುಗಳಮೇಲೆ ಬಿದ್ದು ಮೈಯಲ್ಲಿ ಪ್ರಾಣವಿರುವವರೆಗೂ ಶತ್ರುಗಳನ್ನು ತುಂಡುಗಡಿದು ಕೊನೆಗೆ ಆ ರಣರಂಗದಲ್ಲಿಯೇ ತಾವೂ ಮರಣ ಹೊಂದುವರು. ಅದೇ ಕಾಲಕ್ಕೆ ದುರ್ಗದ ಒಳಗಡೆಗೆ ಶ್ರೀಗಂಧ, ಚಂದನ ಮುಂತಾದ ಸುಗಂಧದ ಕಟ್ಟಿಗೆಗಳನ್ನು ರಾಶಿರಾಶಿಯಾಗಿ ಒಟ್ಟಿ, ಅದರಮೇಲೆ ಧೂಪ ಕರ್ಪೂರಗಳೇ ಮೊದಲಾದ ಸುಗಂಧದ್ರವ್ಯಗಳನ್ನು ಹರವಿ ಉರಿಯನ್ನು ಹೊತ್ತಿಸುವರು. ಬಳಿಕ ರಾಜಕುಲವಧುಗಳೂ ಇತರ ಸ್ತ್ರೀಯರೂ ಸ್ನಾನ ಮಾಡಿ ಕೆಂಪುಬಟ್ಟೆಗಳನ್ನುಟ್ಟುಕೊಂಡು ಬಿಡುಮುಡಿಯಿಂದ ಅರಿಸಿನ ಕುಂಕುಮಗಳೇ ಮೊದಲಾದ ಸೌಭಾಗ್ಯಾಲಂಕಾರಗಳನ್ನೂ ತರತರದ ಹೂವಿನ ಮಾಲೆಗಳನ್ನೂ ಧರಿಸಿ ಬ್ರಾಹ್ಮಣರಿಗೆ ದಾನಧರ್ಮಗಳನ್ನು ಯಥೇಚ್ಛೆಯಾಗಿ ಸೂರೆ ಮಾಡಿ ಆಪ್ತೇಷ್ಟರ ಅನುಜ್ಞೆಯನ್ನು ಪಡೆದು ಮಂಗಲವಾದ್ಯಗಳು ಭೋರ್ಗರೆಯುತ್ತಿರಲು ಆ ಅಗ್ನಿಕುಂಡಕ್ಕೆ ಮೂರು ಪ್ರದಕ್ಷಿಣೆ ಮಾಡುವರು. ಆಗ ಬ್ರಾಹ್ಮಣರು ವೇದಘೋಷ ಮಾಡುತ್ತ ಅಗ್ನಿಸಂಸ್ಕಾರವನ್ನು ಮಾಡುತ್ತಿರುವರು. ಕೊನೆಗೆ ಸತೀ ಧರ್ಮದಲ್ಲಿ ಅತ್ಯಂತ ಅಭಿಮಾನಿಗಳಾದ ರಜಪೂತ ರಮಣಿಯರು

ಆತ್ಮ ಸಂತೋಷದಿಂದ ಆ ಧಗಧಗಿಸಿ ಉರಿಯುವ ಚಿತೆಯೊಳಗೆ ಹಾರಿಕೊಂಡು ಇಹಲೋಕದ ಸಕಲ ಸಂಬಂಧಗಳನ್ನೂ ಹರಿದೊಗೆದು ನಶ್ವರವಾದೀ ನರದೇಹವನ್ನು ಅಗ್ನಿನಾರಾಯಣನಿಗೆ ಸಮರ್ಪಿಸಿ, ರಣರಂಗದಲ್ಲಿ ಮಡಿದು ವೀರಸ್ವರ್ಗವನ್ನೈದುವ ತಮ್ಮ ಪತಿಗಳ ಮಾರ್ಗವನ್ನು ಅನುಸರಿಸಿ ಹೋಗಿಬಿಡುವರು.

ಚಿತ್ತೂರಿನ ರಜಪೂತರು ನಾಳೆ ಬೆಳಗಾಗುತ್ತಲೇ ತಾವು ಕೈಕೊಂಡಿರುವ ಜೋಹಾರವ್ರತವನ್ನು ನೆರವೇರಿಸತಕ್ಕವರು. ಅದರಿಂದ ರಾತ್ರಿಯೆಲ್ಲ ಚಿತ್ತೂರಿನಲ್ಲಿ ಮಹಾ ಕೋಲಾಹಲವುಂಟಾಗಿತ್ತು.

ರಾತ್ರಿಯು ಬಹಳ ಹೊತ್ತಾಗಿತ್ತು ಹಿಟ್ಟು ಚಲ್ಲಿದಂತೆ ಬೆಳದಿಂಗಳು ಬಿದ್ದಿತ್ತು; ಆಕಾಶವಲ್ಲಿದ್ದ ರಜನೀಪತಿಯೂ ಆತನನ್ನು ಸುತ್ತರಿದಿರುವ ತಾರಕಾಪುಂಜಗಳೂ ಚಿತ್ತೂರಿನ ಭವಿತವ್ಯತೆಯನ್ನು ಭಾವಿಸುತ್ತ ಮೌನವನ್ನು ತಳೆದಂತೆ ತೋರುತ್ತಿದ್ದುವು. ರಾಜಮಹಿಷಿಯೂ ಪದ್ಮಿನಿಯೂ ತಮ್ಮ ಬಹುಕಾಲದ ಪ್ರೀತಿಯ ಸ್ಥಳಗಳಿಗೂ ತಮ್ಮ ಆಪ್ತೇಷ್ಟರಿಗೂ ದರ್ಶನ ಕೊಡುವುದಕ್ಕಾಗಿ ಪರಿಚಾರಿಕೆಯರೊಂದಿಗೆ ಬೀದಿಬೀದಿಗಳಲ್ಲಿ ಅಡ್ಡಾಡುತ್ತಿದ್ದರು.

ಆ ಹೊತ್ತು ರಾತ್ರಿಯಲ್ಲಿ ಚಿತ್ತೂರಿನಲ್ಲಿ ಯಾರೂ ಕಣ್ಣು ಮುಚ್ಚಿ ಮಲಗಲಿಲ್ಲ. ಅವರಿಗೆ ಮಲಗಲು ಅವಕಾಶವಿಲ್ಲ. ಬೆಳಗಾಗುತ್ತಲೇ ತಮ್ಮ ಇಹಲೋಕದ ಸಕಲ ಲೆಕ್ಕಪತ್ರಗಳನ್ನು ಒಪ್ಪಿಸಿ ಹೋಗಬೇಕಾಗಿರುವುದು. ಅದರಿಂದ ಅವರೆಲ್ಲರೂ ಶಾಂತಚಿತ್ತದಿಂದ ತಮ್ಮ ಆಯುಷ್ಯದ ಹಿಂದಿನ ಸಂಗತಿಗಳನ್ನೆಲ್ಲ ಸ್ಮರಿಸಿಕೊಳ್ಳುತ್ತಿದ್ದರು.

ಬರಬರುತ್ತ ಪದ್ಮಿನಿಯು ಒಂದು ವಿಶಾಲವಾದ ಸರೋವರದ ಬಳಿಗೆ ಬಂದಳು. ಆಗ ಅವಳಿಗೆ ತಾನು ತನ್ನ ಪ್ರಿಯನೊಡನೆ ಈ ಸರೋವರದ ತೀರದಲ್ಲಿ ವಿಹಾರಮಾಡುತ್ತಿದ್ದ ಹಿಂದಿನ ಸುಖದ ದಿನಗಳು ಸ್ಮರಣೆಗೆ ಬಂದುವು. ಎರಡು ಹನಿ ಕಣ್ಣೀರು ತಟ್ಟನೆ ಉದುರಿತು.

ಪದ್ಮಿನಿಯು ತಿರುಗಿ ಮನೆಗೆ ಬಂದು ತನ್ನ ಅಂತಃಪುರವನ್ನು ಪ್ರವೇಶಿಸಿದಳು. ಬಾಗಿಲಿನ ಎದುರಿಗೆ ದೊಡ್ಡದೊಂದು ಕನ್ನಡಿಯಲ್ಲಿ ಅವಳ ಭಾವಚಿತ್ರವು ಒಪ್ಪುತ್ತಿತ್ತು. ಪದ್ಮಿನಿಯು ತಟ್ಟನೆ ಹಾರಿ ಆ ಕನ್ನಡಿಯನ್ನು ಹಿಡಿದೆಳೆದಳು.

ಅದಕ್ಕೆ ಆಧಾರವಾಗಿದ್ದ ದಾರವು ಹರಿದುಹೋದದ್ದರಿಂದಲೂ ಪದ್ಮಿನಿಯು ಅದನ್ನು ಸರಯಾಗಿ ಹಿಡಿದಿರಲಿಲ್ಲವಾದ್ದರಿಂದಲೂ ಕನ್ನಡಿಯು ದೊಪ್ಪನೆ ಕೆಳಗೆ ಬಿದ್ದು ಹೋಳು ಹೋಳಾಗಿ ನಾಲ್ಕು ಕಡೆಗೆ ಸಿಡಿಯಿತು. ಪದ್ಮಿನಿಯು ಆ ಭಾವ ಚಿತ್ರವನ್ನು ಹಿರಿದುಕೊಂಡು ದೀಪದ ಮೇಲೆ ಹಿಡಿದು ಸುಡಹತ್ತಿದಳು. ಚಿತ್ರವು ಸುಡುತ್ತಿದ್ದಾಗ ಪದ್ಮಿನಿಯು:—" ಮೂರ್ಖ ! ನೀನು ಪದ್ಮಿನಿಯ ಒಂದು ಕೂದಲನ್ನಾದರೂ ನೋಡಲಾರೆ, ಇಷ್ಟೇ ಅಲ್ಲ; ಅವಳ ಕುರುಹುಗಳೂ ಕೂಡ ನಿನ್ನ ಕಣ್ಣಿಗೆ ಬೀಳಲಾರವು ! " ಎಂದಳು.

ಇಷ್ಟರಲ್ಲಿ ಮಂದಿರದ ಹೊರಗಡೆಗೆ ಸುವರ್ಣದ ಪಂಜರಗಳಲ್ಲಿದ್ದ ಪಂಚವರ್ಣದ ಗಿಳಿಯೂ ಮಾಯನಾ ಪಕ್ಷಿಯೂ—" ರಾಣಿಯವರೇ ಬನ್ನಿರಿ, ಬನ್ನಿರಿ, ಕುಳಿತುಕೊಳ್ಳಿರಿ. " ಎಂದವು. ಕೂಡಲೆ ಪದ್ಮಿನಿಯು ಅವುಗಳ ಬಳಿಗೆ ಹೋಗಿ ಪಂಜರಗಳ ಬಾಗಿಲನ್ನು ತೆರೆದು ಅವುಗಳನ್ನು ಹೊರಗೆ ಬಿಟ್ಟು ಬಿಟ್ಟಳು. ಆದರೆ ಅವು ಹಾರಿಹೋಗಲಿಲ್ಲ; ತಿರುತಿರುಗಿ ಬಂದು ಪದ್ಮಿನಿಯ ಭುಜದ ಮೇಲೆಯೂ ಮುಂಗೈಯ ಮೇಲೆಯೂ ಕುಳಿತುಕೊಳ್ಳುತ್ತಿದ್ದವು. ಇದನ್ನು ನೋಡಿ ಪದ್ಮಿನಿಯ ಕಣ್ಣುಗಳಿಂದ ಮುತ್ತೆರಡು ಹನಿಗಳು ಉದುರಿದುವು.

ಬಹಳ ಹೊತ್ತಾದ ಮೇಲೆ ರಾಣಾ ಭೀಮಸಿಂಹನು ಜೋಹಾರದ ಎಲ್ಲ ಸಿದ್ಧತೆಯನ್ನು ಮಾಡಿಸಿಟ್ಟು ಮನೆಗೆ ಬಂದನು. ಪದ್ಮಿನಿಯು ಹಾಸಿಗೆಯಿಲ್ಲದ ಮಂಚದ ಮೇಲೆ ಕುಳಿತುಕೊಂಡಿದ್ದಳು. ಪತಿಯು ಬಂದುದನ್ನು ನೋಡಿ ಎದ್ದು ಸಾಷ್ಟಾಂಗ ನಮಸ್ಕಾರ ಮಾಡಿದಳು. ಮನಸ್ಸಿನಲ್ಲಿ ಇದೇ ಕೊನೆಯ ದಿನವೆಂದಳು. ರಾಣನು ಅವಳನ್ನು ಎಬ್ಬಿಸಿ ತಬ್ಬಿಕೊಂಡನು. ಒಬ್ಬರ ಬಾಯಿಯಿಂದಲೂ ಮಾತು ಹೊರಡದು. ಅವರು ಹಿಂದೊಮ್ಮೆ ಇದೇ ರೀತಿಯಾಗಿ--ಆದರೆ ಇದೇ ತರದ ಭಾವನೆಯಿಂದಲ್ಲ—ಯಾರು ಏನೆಂದು ಮಾತಾಡಬೇಕೆಂಬುದನ್ನು ತಿಳಿಯದೆ ಬಹಳ ಹೊತ್ತಿನವರೆಗೆ ಆಲಿಂಗನ ಸುಖವನ್ನನುಭವಿಸುತ್ತ ನಿಂತುಕೊಂಡಿದ್ದರು. ಅಹಹಾ ! ಅಂದಿನ ಆ ನವದಂಪತಿಯರ ಪ್ರಥಮ ಸಂಕಲನದ ಸಮಯದ ಸುಖಮಯವಾದ ಭಾವನೆಗೂ ಇಂದಿನ ಈ ಕೊನೆಯ ದಿನದ ಮನಸ್ಸಿನ ಸ್ಥಿತಿಗೂ ಎಷ್ಟೊಂದು ಅಂತರವು !

ಕ್ರಮವಾಗಿ ರಾತ್ರಿಯು ಕಳೆಯಿತು. ಪ್ರಾತಃಕಾಲದ ಮಲಿನವಾದ ಛಾಯೆಯು ಒಡೆದು ಕಾಣಿಸುತ್ತಿತ್ತು. ಸೃಷ್ಟಿಚಕ್ರಕ್ಕೆ ಸುಖದುಃಖಗಳ ಕಲ್ಪನೆಯೆಲ್ಲಿರುವುದು? ಅದು ಸುಖದ ಕಾಲವೆಂದು ಬೇಗನೆ ತಿರುಗುವುದಿಲ್ಲ. ದುಃಖದ ಸಮಯವೆಂದು ಸಾವಕಾಶವಾಗಿ ಭ್ರಮಿಸುವುದಿಲ್ಲ.

ಪೂರ್ವದಿಕ್ಕಿನಲ್ಲಿ ಸೂರ್ಯನು ಉದಯನಾಗಿ ಮೇಲಕ್ಕೆ ಬಂದನೋ ಇಲ್ಲವೋ, ಚಿತ್ತೂರಿನೊಳಗಿನ ಯಾವತ್ತೂ ಸ್ತ್ರೀಯರು ಆಲಂಬಿತಕುಂತಲೆಯರಾಗಿ ರಕ್ತಾಂಬರಗಳನ್ನುಟ್ಟು ಕೊರಳಲ್ಲಿ ಹೂವಿನ ಹಾರಗಳನ್ನೂ ಅರಿಸಿನ ಕುಂಕುಮಾದಿ ಸೌಭಾಗ್ಯಾಲಂಕಾರಗಳನ್ನೂ ಧರಿಸಿಕೊಂಡು ತಂಡತಂಡವಾಗಿ ಹೊರಟು ಚಿತೋರೇಶ್ವರಿಯ ಮಂದಿರದಿಂದ ಹೊರಟು ನಡೆದರು.

ಎಲ್ಲರಿಗಿಂತ ಮುಂದೆ ಪದ್ಮಿನಿಯೂ ಚಿತ್ತೂರಿನ ರಾಣಿಯೂ ಜೋಡಾಗಿ ನಡೆಯುತ್ತಿದ್ದರು. ಅವರ ಹಿಂದೆ ಹೋಗುತ್ತಿದ್ದ ಭೈರವಿಯು ಉದ್ದಿಷ್ಟಸ್ಥಳಕ್ಕೆ ಮುಟ್ಟಿದ ಕೂಡಲೆ ಅವರಿಗೆ ಸಂಜ್ಞೆಮಾಡಿದಳು. ಎಲ್ಲರೂ ನಿಂತುಕೊಂಡರು. ತರತರದ ಮಂಗಲವಾದ್ಯಗಳು ಭೋರ್ಗರೆಯುತ್ತಿದ್ದುವು. ಬ್ರಾಹ್ಮಣರು ವೇದಘೋಷ ಮಾಡುತ್ತ ಅಗ್ನಿಸಂಸ್ಕಾರ ಮಾಡುತ್ತಿದ್ದರು. ಎದುರಿಗೆ ವಿಸ್ತಾರವಾದ ಕುಂಡದಲ್ಲಿ ಅಗ್ನಿಯು ಧಗಧಗಿಸಿ ಉರಿಯುತ್ತಿತ್ತು.

ಪುರೋಹಿತನ ಅಪ್ಪಣೆಯಾದ ಕೂಡಲೆ ಪದ್ಮಿನಿಯೂ ರಾಣಿಯೂ ಉಳಿದ ಯಾವತ್ತು ಸ್ತ್ರೀಯರೂ ಅಗ್ನಿನಾರಾಯಣನನ್ನು ಸ್ಮರಿಸುತ್ತ ನಿಂತಲ್ಲಿಯೇ ಮೂರು ಪ್ರದಕ್ಷಿಣೆಗಳನ್ನು ಮಾಡಿ, ಮೊದಲು ತಾವು ಧರಿಸಿದ್ದ ಹೂವಿನ ಮಾಲೆಗಳನ್ನು ಹರಿದು ಅಕ್ಷತೆಯನ್ನೂ ಆ ಮಾಲೆಗಳನ್ನೂ ಅಗ್ನಿನಾರಾಯಣನಿಗೆ ಅರ್ಪಿಸಿ ಬಳಿಕ ಕ್ರಮವಾಗಿ ತಮ್ಮ ದೇಹಗಳನ್ನು ಆ ಕುಂಡದಲ್ಲಿ ಈಡಾಡಿದರು. "ಜಯ ! ಮಹಾಮಾಯೆ !!" ಎಂಬ ಮಹಾಭೀಷಣವಾದ ಧ್ವನಿಯು ದಿಕ್ಕುದಿಕ್ಕುಗಳಲ್ಲಿ ಮಾರ್ದನಿಗೊಂಡಿತು !

ಅದೇ ಕಾಲಕ್ಕೆ ಅಗ್ನಿಕುಂಡದ ಇನ್ನೊಂದು ಭಾಗದಲ್ಲಿ ಸಾವಿರಾರು ರಜಪೂತ ಯೋದ್ಧರು ಕೇಸರೀ ವರ್ಣದ ಬಟ್ಟೆಗಳನ್ನು ಧರಿಸಿಕೊಂಡು ಸಶಸ್ತ್ರರಾಗಿ ಇದೇ ರೀತಿಯಾಗಿ ಅಗ್ನಿನಾರಾಯಣನನ್ನು ಅಭಿವಂದಿಸಿ ದುರ್ಗದ ಮಹಾದ್ವಾರದ ಕಡೆಗೆ ಭರದಿಂದ ನಡೆದರು.

# ಐದನೆಯ ಪರಿಚ್ಛೇದ

ದುರ್ಗದ ಮಹಾದ್ವಾರವು ತಟ್ಟನೆ ತೆರೆಯಲ್ಪಟ್ಟಿತು. ಕಟ್ಟಿ ನಿಂತಿದ್ದ ನದಿಯ ನೀರು ಕಟ್ಟು ಒಡೆದಕೂಡಲೆ ಮಹಾವೇಗದಿಂದ ಧಾವಿಸುವಂತೆ ದುರ್ಗದ ಮಹಾದ್ವಾರವನ್ನು ತೆರೆದಕೂಡಲೆ ಉನ್ಮತ್ತರಾದ ರಜಪೂತ ಸೈನಿಕರು ಪ್ರವಾಹಗೊಂಡು ಶತ್ರುದಳವೆಂಬ ಸಾಗರವನ್ನು ಪ್ರವೇಶಿಸಿದರು. ಪಠಾಣಸೇನಾ ಸಾಗರದ ನೀಲಜಲದಲ್ಲಿ ರಜಪೂತ ಸೈನಿಕಪ್ರವಾಹದ ಕೇಸರೀವರ್ಣವು ಎಷ್ಟೋ ದೂರದವರೆಗೆ ಒಡೆದು ಕಾಣಿಸುತ್ತಿತ್ತು. ಎಲ್ಲರ ಮುಂಗಡೆಗೆ ರಾಣಾ ಲಕ್ಷ್ಮಸಿಂಗನೂ ಭೀಮಸಿಂಹನೂ ಸೇನಾಪತಿ ಬಾದಲನೂ ಇದ್ದರು. ಬರ ಬರುತ್ತ ಕೇಸರೀ ಬಣ್ಣದ ಪ್ರವಾಹವು ಗುಪ್ತಗಾಮಿಯಾಗತೊಡಗಿತು. ಒಬ್ಬ ರಜಪೂತನೂ ರಣರಂಗದಿಂದ ತಿರುಗಿ ಬರಲಿಲ್ಲ; ಬದುಕಿ ಉಳಿಯಲಿಲ್ಲ!

ಯುದ್ಧವು ಮುಗಿಯಿತು. ಬಹು ದಿವಸಗಳವರೆಗೆ ಕಷ್ಟಪಟ್ಟು ಅಲ್ಲಾವುದ್ದೀನನು ಜಯವನ್ನು ಪಡೆದನು. ಅವನ ಬಹು ದಿನಗಳ ಬಯಕೆಯು ಇಂದು ಪೂರ್ಣವಾಯಿತು. ಅವನು ಆನಂದದಿಂದ ಉನ್ಮತ್ತನಾದನು.

ಅಲ್ಲಾವುದ್ದೀನನು ಒಳ್ಳೇ ವೈಭವದಿಂದ ದುರ್ಗವನ್ನು ಪ್ರವೇಶಿಸಿದನು. ದುರ್ಗವನ್ನು ಏರಿಬರುವಾಗ ಅವನು ತನ್ನ ಮನಸ್ಸಿನಲ್ಲಿ ಹಲವು ಸಂಗತಿಗಳನ್ನು ಭಾವಿಸಿಕೊಳ್ಳುತ್ತಲಿದ್ದನು ಪದ್ಮಿನಿಯ ಕೂದಲನ್ನು ಕೂಡ ತಾನು ನೋಡಲಾರೆನೆಂಬ ವಿಚಾರವು ಅವನಿಗೇನು ಗೊತ್ತು ? ಅವನು ಇನ್ನು ಪದ್ಮಿನಿಯು ಸುಲಭವಾಗಿ ತನ್ನವಳಾಗುವಳೆಂದು ನಂಬಿ ನೆಟ್ಟಗೆ ಅವಳ ಅರಮನೆಯ ಕಡೆಗೆ ನಡೆದನು. ದಾರಿಯಲ್ಲಿ ಎರಡೂ ಮಗ್ಗಲಿನ ಮನೆಗಳೆಲ್ಲ ಬರಿದಾಗಿದ್ದುವು. ಬಾಗಿಲಲ್ಲಿ ಅರಿಸಿನಕುಂಕುಮಗಳೂ ಅಕ್ಷತೆಗಳೂ ಹರಿದ ಹೂವಿನ ಮಾಲೆಗಳೂ ಸೂರೆಯಾಗಿ ಬಿದ್ದಿದ್ದುವು. ಅಲ್ಲಾವುದ್ದೀನನ ಅಂತರಂಗವು ಹೊಯಿದಾಡುತ್ತಿತ್ತು. ಆ ನಿರ್ಮಾನುಷವಾದ ದೊಡ್ಡ ದೊಡ್ಡ ಮಂದಿರಗಳನ್ನು ನೋಡಿ ಅವನ ಮನಸ್ಸಿನಲ್ಲಿ ಒಂದು ಪ್ರಕಾರದ ಭೀತಿಯುಂಟಾಯಿತು. ಅವನಿಗೆ ಆ ಮಂದಿರಗಳು ತನ್ನನ್ನು ನೋಡಿ ಹಾಸ್ಯ ಮಾಡುವಂತೆ ತೋರಿತು.

ಅಲಾವುದ್ದೀನನು ಪದ್ಮಿನಿಯ ಅರಮನೆಯ ಬಳಿಗೆ ಬಂದನು. ಕೂಡಲೆ ಅವನ ಮನಸ್ಸಿನಲ್ಲಿ ಹೇಗೆಹೇಗೋ ಆಗುತ್ತಿತ್ತು. ಅವನಿಗೆ ಆ ಮಂದಿರವನ್ನು ನೋಡಿ ಆಶ್ಚರ್ಯವೆನಿಸಿತು. ಒಮ್ಮೆಲೇ ಹಿಂದೆ ತಾನು ಪದ್ಮಿನಿಯ ಪ್ರತಿಬಿಂಬ ವನ್ನು ನೋಡಲು ಹೋಗಿದ್ದ ದಿವಸವು ಅವನ ನೆನಪಿಗೆ ಬಂದಿತು. ಅಂದಿನ ಆ ಆನಂದೋತ್ಸವಗಳೂ ಜನದಟ್ಟಣೆಯೂ ಅವನ ಕಣ್ಣಿನಮುಂದೆ ಕಟ್ಟಿದಂತಾ ದುವು. ಅವನು ಅಂದಿನ ಆ ಸ್ಥಿತಿಯನ್ನೂ ಇಂದಿನ ಈ ನಿರ್ಮಾನುಷಸ್ಥಿತಿಯ ನ್ನೂ ಮನಸ್ಸಿನಲ್ಲಿ ಹೋಲಿಸತೊಡಗಿದನು. ಅವನ ಮನಸ್ಸು ಭೀತಿಯಿಂದ ಚಂಚಲವಾಯಿತು. ಪದ್ಮಿನಿಯ ಮಂದಿರದ ಬಾಗಿಲುಗಳೂ ಕಿಟಕಿಗಳೂ ತೆರೆದಿ ದ್ದುವು. ಬಾಗಿಲಲ್ಲಿ ದ್ವಾರಪಾಲಕರಿಲ್ಲ; ಒಳಗೆ ಪರಿಚಾರಿಕೆಯರಿಲ್ಲ. ಮನೆ ಯಲ್ಲೆಲ್ಲ ಅರಿಸಿನ ಕುಂಕುಮಗಳೂ ಅಕ್ಷತೆಗಳೂ ಹರಿದ ಹೂಮಾಲೆಗಳೂ ಹರಡಿಕೊಂಡಿದ್ದುವು

ಅಲ್ಲಾವುದ್ದೀನನು ಇವನ್ನೆಲ್ಲ ನೋಡುತ್ತ ಸಾವಕಾಶವಾಗಿ ಒಳಗೆ ಹೋದನು. ಅವನ ಕೈಕಾಲುಗಳು ನಡುಗತೊಡಗಿದುವು. ಹೃದಯವು ಅಸ್ಥಿ ರವಾಗಿ ಹೋಯಿತು ಇದೇನು? ಎಲ್ಲಿಯೂ ಏನೂ ಕಾಣಲೊಲ್ಲದು ? ಮನು ಷ್ಯರೇ ಇಲ್ಲವಲ್ಲ !

ಅಲ್ಲಾವುದ್ದೀನನು—" ಪದ್ಮಿನೀ !"ಎಂದು ಕರೆದನು.

ಪದ್ಮಿನಿಯು ಎಲ್ಲಿರುವಳು ? ಎಡಬಲದ ಕೋಣೆಗಳೊಳಗಿಂದ ವಿಕಟ ವಾದ ಸ್ವರದಿಂದ—" ಪದ್ಮಿನೀ ! ಪದ್ಮಿನೀ! " ಎಂದು ಪ್ರತಿಧ್ವನಿಯಾಯಿತು.

ಈಗ ಅಲ್ಲಾವುದ್ದೀನನ ಎದೆಯೊಡೆದು ನೀರಾಯಿತು. ದಿಲ್ಲಿಯ ಬಾದಷ ಹನು ಆ ಹಾಳು ಮನೆಯ ಧೂಳಿಧೂಸರಿತವಾದ ನೆಲದಮೇಲೆ, ತಲೆಯ ಮೇಲೆ ಕೈಯಿಟ್ಟುಕೊಂಡು ಕುಳಿತುಬಿಟ್ಟನು!

ಹಠಾತ್ತಾಗಿ ಅಲ್ಲಾವುದ್ದೀನನು ಎದ್ದುನಿಂತು ವಿಸ್ಮಿತನೇತ್ರದಿಂದ ಕಿವಿ ಗೊಟ್ಟು ಕೇಳತೊಡಗಿದನು. " ಇಲ್ಲ ಪದ್ಮಿನಿಯು ಇಲ್ಲಿ ಇಲ್ಲ " ಎಂಬ ಮಾತು ಗಳು ಅವನಿಗೆ ಸ್ಪಷ್ಟವಾಗಿ ಕೇಳಿಸಿದುವು. ಅವುಗಳನ್ನು ಯಾರೋ ದೂರದಿಂದ ಒದರಿ ಹೇಳುತ್ತಿದ್ದರು. " ಬನ್ನಿರಿ; ಬನ್ನಿರಿ; ಬಾದಷಹರೇ, ಬನ್ನಿರಿ; ಕುಳಿತು

ಕೊಳ್ಳಿರಿ; ಅಲ್ಲಿ ಮಂಚವಿದೆ. ನೆಲದ ಮೇಲೆ ಯಾಕೆ ಕುಳಿತಿರಿ? ” ಎಂದು ಆ ವ್ಯಕ್ತಿಯು ಪುನಃ ಹೇಳಿತು.

ಅಲ್ಲಾವುದ್ದೀನನು ಸುತ್ತಲೂ ನೋಡಿದನು. ಮನುಷ್ಯರಿಲ್ಲ; ಎಲ್ಲಿಯೂ ಯಾರೂ ಕಾಣಿಸಲೊಲ್ಲರು. ಅವನು ಭೀತಿಯಿಂದಲೂ ವಿಸ್ಮಯದಿಂದಲೂ ಚಕಿತನಾಗಿ ಹೋದನು.

ಅಲ್ಲಾವುದ್ದೀನನ ಸಂಗಡ ಬಂದಿದ್ದ ದೂತರು ಮನೆಯ ಎಲ್ಲ ಭಾಗಗಳಲ್ಲಿ ಶೋಧಿಸಿ ನೋಡಿದರು. ಎಲ್ಲಿಯೂ ಮನುಷ್ಯರಿಲ್ಲ

ಪುನಃ ಶಬ್ದವಾಯಿತು:— ಬಾದಷಹರೇ, ಆಸನದಲ್ಲಿ ಕುಳಿತುಕೊಳ್ಳಿರಿ. ಆಸನದಲ್ಲಿ ಕುಳಿತುಕೊಳ್ಳಿರಿ.

ಆ ಮಾತುಗಳನ್ನು ಮನುಷ್ಯರು ಆಡಿದ್ದಿಲ್ಲ. ಅಲ್ಲಾವುದ್ದೀನನ ಎದುರಿಗೆ ಸೂರಿನ ಮೇಲೆ ಕುಳಿತಿದ್ದ ಒಂದು “ ಮೈನಾ ” ಪಕ್ಷಿಯು ತಿರುತಿರುಗಿ ಹೇಳುತ್ತಿತ್ತು! ಆ ಮಾತುಗಳನ್ನು ಅದಕ್ಕೆ ಯಾರೋ ಕಲಿಸಿ ಇಟ್ಟಿದ್ದರು

ಅಲ್ಲಾವುದ್ದೀನನಿಗೆ ತನ್ನನ್ನು ನೋಡಿ ಜಗತ್ತೇ ಹಾಸ್ಯಮಾಡುವಂತೆ ಭಾಸವಾಯಿತು. ಅಲ್ಲಾವುದ್ದೀನನು ಆ ಪಕ್ಷಿಯನ್ನು “ ಪದ್ಮಿನಿಯು ಎಲ್ಲಿಗೆ ಹೋದಳು? ” ಎಂದು ಕೇಳಿದನು. ಪಕ್ಷಿಯು ಪುನಃ—“ಬಾದಷಹರೇ, ಕುಳಿತುಕೊಳ್ಳಿರಿ. ಆಸನದ ಮೇಲೆ ಕುಳಿತುಕೊಳ್ಳಿರಿ. ” ಎಂದಿತು.

ಬಾದಷಹನಿಗೆ ಮಹಾ ಕೋಪವುಂಟಾಯಿತು. ಆದರೆ ಮಾಡುವುದೇನು? ಅವನು ಕೋಪಸಂತಾಪಗಳಿಂದ ಉರಿದುಹೋದನು. ಅವನು ತನ್ನ ಅನುಚರರಿಗೆ—“ಊರೊಳಗಿನ ಪ್ರತಿಯೊಂದು ಮನೆಯಲ್ಲಿಯೂ ಹುಡುಕಿ ಪದ್ಮಿನಿಯನ್ನು ಗೊತ್ತುಹಚ್ಚಿಕೊಂಡು ಬನ್ನಿರಿ ” ಎಂದು ಆಜ್ಞಾಪಿಸಿದನು.

ಪಠಾಣ ಸೈನಿಕರು ನಾಲ್ಕೂಕಡೆಗೆ ಭರದಿಂದ ನಡೆದರು. ದುರ್ಗದಲ್ಲಿ ಬಲವಳಿದ ಮುದುಕರೂ ಹಸುಳರೂ ಮಾತ್ರ ಅಲ್ಲೊಬ್ಬ ಇಲ್ಲೊಬ್ಬನಂತೆ ಕಂಡು ಬರುತ್ತಿದ್ದರು. ಪಠಾಣರು ಅವರನ್ನು ನಿಷ್ಕರುಣೆಯಿಂದ ಕಡಿದು ಚಲ್ಲಿದರು. ಆದರೆ ಪದ್ಮಿನಿಯು ಮಾತ್ರ ಎಲ್ಲಿಯೂ ದೊರೆಯಲಿಲ್ಲ. ಪದ್ಮಿನಿಯು ದೊರೆಯುವುದು ಹಾಗಿರಲಿ, ಒಬ್ಬ ಮಧ್ಯಮ ವಯಸ್ಸಿನ ಸ್ತ್ರೀಯಾಗಲಿ, ಪುರುಷನಾಗಲಿ ಅವರ

ಕಣ್ಣಿಗೆ ಬೀಳಲಿಲ್ಲ. ಸೈನಿಕರೆಲ್ಲರೂ ಹಾಗೆಯೇ ತಿರುಗಿ ಬಂದು ಒಡೆಯನ ಬಳಿಯಲ್ಲಿ ಸುಮ್ಮನೆ ನಿಂತುಕೊಂಡರು.

ಬಳಿಕ ಅಲ್ಲಾವುದ್ದೀನನು ತಾನೇ ಪದ್ಮಿನಿಯನ್ನು ಹುಡುಕಲು ಹೊರಟನು. ಪ್ರತಿಯೊಂದು ಸ್ಥಳವನ್ನೂ ಉದ್ಯಾನವನ್ನೂ ಮಂದಿರವನ್ನೂ ಮಠವನ್ನೂ ಹುಡುಕಿನೋಡಿದನು. ಎಲ್ಲಿಯೂ ಯಾರೂ ಸಿಕ್ಕಲಿಲ್ಲ. ಆಗ ಅವನು ಹತಾಶನಾಗಿ ಒಂದು ಸರೋವರದ ಬಳಿಗೆ ಬಂದು ಅದರ ಪಾವಟಿಗೆಯಲ್ಲಿ ತಲೆಯ ಮೇಲೆ ಕೈಯಿಟ್ಟುಕೊಂಡು ಕುಳಿತುಬಿಟ್ಟನು. ಆ ಸರೋವರದ ಒಂದು ಭಾಗದಲ್ಲಿ ಅಮೃತ ಶಿಲೆಯಿಂದ ಮಾಡಿದ ಗೋಮುಖಾಕೃತಿಯ ಬಾಯಿಯೊಳಗಿಂದ ನೀರು ಸುರಿಯುತ್ತಿತ್ತು.

ದೂರದಲ್ಲಿ ಪರ್ವತದ ಒಂದು ಭಾಗದಲ್ಲಿ ಮಹಾಧೂಮ್ರರಾಶಿಯು ಎದ್ದು ಆಕಾಶವನ್ನು ಮುಸುಕುತ್ತಿತ್ತು. ಅತ್ತ ಕಡೆಯ ಗಾಳಿಯು ಬಂದ ಕೂಡಲೆ ಒಂದು ಬಗೆಯ ಸುವಾಸನೆಯು ಬರುತ್ತಿತ್ತು. ಅಲ್ಲಾವುದ್ದೀನನು ಆ ಕಡೆಗೆ ಕಣ್ಣಿಟ್ಟು ನೋಡಿದನು. "ಅದೇನು?" ಎಂದು ಅವನು ಉದ್ವೇಗದಿಂದ ಆ ಕಡೆಗೆ ಕೈತೋರಿಸಿ ಕೇಳಿದನು.

ಪರಕ್ಷಣದಲ್ಲಿಯೇ ನೂರಾರು ಪಠಾಣ ಸೈನಿಕರು ಆ ಕಡೆಗೆ ಮಹಾವೇಗದಿಂದ ನಡೆದರು. ಅಲಾವುದೀನನೂ ಅವರ ಹಿಂದೆ ನಡೆದನು. ಹೋಗಿ ನೋಡುತ್ತಾರೆ, ಮಹಾ ಭಯಂಕರವಾದ ನೋಟವು!

ಆಳವಾದೊಂದು ಪರ್ವತದ ಕಂದರ; ಅದರಲ್ಲಿಯ ಬಹು ವಿಶಾಲವಾದ ಗಹ್ವರದ ಮುಖದಿಂದ ಚಂದನಾಗರುಗಳೇ ಮೊದಲಾದ ಸುಗಂಧ ದ್ರವ್ಯಗಳನ್ನು ಸುಡುವ ವಾಸನೆಯು ಬರುತ್ತಿತ್ತು. ಧಗಧಗಿಸಿ ಉರಿಯುವ ಜ್ವಾಲೆಯು ಮೃತ್ಯುವಿನ ನಾಲಿಗೆಯಂತೆ ಆಕಾಶದ ಕಡೆಗೆ ಏಳುತ್ತಲಿತ್ತು. ಅಲ್ಲಲ್ಲಿಗೆ ಧೂಮರಾಶಿಯು ಆ ಜ್ವಾಲೆಯನ್ನು ಮುಸುಕಿಕೊಂಡಿತ್ತು. ಗಹ್ವರದ ಬಾಗಿಲಲ್ಲಿ ಅರಿಸಿನ ಕುಂಕುಮಗಳೂ ಅಕ್ಷತೆಯೂ ಹರಿದು ಚಲ್ಲಿದ ಹೂವಿನ ಮಾಲೆಗಳೂ ಗುಂಪು ಗುಂಪಾಗಿ ಬಿದ್ದಿದ್ದುವು.

ಇವನ್ನೆಲ್ಲ ನೋಡಿ ಅಲ್ಲಾವುದ್ದೀನನ ಅಂತರಂಗಕ್ಕೆ ಕೆಂಡದಂತೆ ಕೆಂಪಗಾದ ಕಬ್ಬಿಣದ ಸಲಾಖೆಯಿಂದ ಬರೆಯಿಟ್ಟಂತಾಯಿತು. ಅವನು ದೊಪ್ಪನೆ

ನೆಲದ ಮೇಲೆ ಬಿದ್ದುಬಿಟ್ಟನು. ಮತ್ತೊಂದು ಕ್ಷಣದ ತರುವಾಯ ಎದ್ದು ಆ ಅಗ್ನಿ ಕುಂಡದ ಕಡೆಗೆ ಉನ್ಮತ್ತನ ಹಾಗೆ ಧಾವಿಸಿ ಹೋದನು. ಅವನ ಸರದಾರನೊಬ್ಬನು ಅವನನ್ನು ತಡೆದು ನಿಲ್ಲಿಸಿದನು. ಆಗ ಬಾದಷಹನು ಹೇಳಿದನು:— "ಬೆಂಕಿಯನ್ನು ಆರಿಸಿರಿ. ಪದ್ಮಿನಿಯನ್ನು ಬದುಕಿಸಿದವರಿಗೆ ಲಕ್ಷ ಲಕ್ಷ ಮೊಹರುಗಳು ಇನಾಮಾಗಿ ದೊರೆಯುವುವು."

ಹಾಯ್! ಪದ್ಮಿನಿಯು ಈಗೆಲ್ಲಿರುವಳು? ಅವಳು ಸ್ವರ್ಗದ ಮಾರ್ಗದಲ್ಲಿದ್ದುಕೊಂಡು ನೀಚಪಠಾಣನ ಮೂರ್ಖತೆಯನ್ನು ನೋಡಿ ಹಾಸ್ಯ ಮಾಡುತ್ತಲಿರುವಳು. ಅಲ್ಲಾವುದ್ದೀನನ ಲಕ್ಷ ಲಕ್ಷ ಮೊಹರುಗಳೂ ಲಕ್ಷ ಲಕ್ಷ ಸೈನಿಕರೂ ಅವಳ ಒಂದು ಕೂದಲಿನಷ್ಟು ಕೂಡ ಬೆಲೆಬಾಳಲಿಲ್ಲ. ಆ ಸತೀಶಿರೋಮಣಿಯು ಪಠಾಣನ ಸಿಂಹಾಸನಾರ್ಧಕ್ಕೆ ಪ್ರತಿಯಾಗಿ ತನ್ನ ಒಂದು ಕೂದಲನ್ನಾದರೂ ಕೊಡಲು ಸಮ್ಮತಿಸಲಿಲ್ಲ. ಸತ್ವಶಾಲಿಗಳಾದವರ ರೀತಿಯೇ ಹೀಗೆ.

ಈ ಮೂರು ದಿನಗಳಲ್ಲಿ ಪಠಾಣರು ನಿರ್ಜನವಾದ ಆ ಹಾಳು ನಗರದಲ್ಲಿ ಸಂಚರಿಸಿ ಅಲ್ಲಿಯ ಯಾವತ್ತೂ ಸಂಪತ್ತನ್ನು ಕೂಡಿಸಿಕೊಂಡರು. ರಜಪೂತರು ಮೊದಲೇ ದೊಡ್ಡ ದೊಡ್ಡ ಕಟ್ಟಡಗಳನ್ನೂ ಉಪವನಗಳನ್ನೂ ಅರ್ಧರ್ಧ ಹಾಳುಮಾಡಿಬಿಟ್ಟಿದ್ದರು. ಉಳಿದದ್ದನ್ನು ಪಠಾಣರು ನಾಶಮಾಡಿದರು ಅಂತೂ ಎರಡು ದಿನಗಳ ಕೆಳಗೆ ಮಹಾವೈಭವದಿಂದ ಒಪ್ಪುತ್ತಿದ್ದ ನಗರವು ಈಗ ಶ್ಮಶಾನವಾಗಿ ಹೋಯಿತು! ವಿಧಿಯ ಮಹಿಮೆಯು ಅಗಾಧವಾದದ್ದು!

ಸೈ! ಇಲ್ಲಿಗೆ ಪತಿವ್ರಗ್ರೇಸರಳಾದ ಪದ್ಮಿನೀ ರಾಣಿಯ ಚರಿತ್ರವು ಮುಗಿಯಿತು. ಪದ್ಮಿನೀದೇವಿಯು ಸತೀಧರ್ಮದ ಮುಂದೆ ದಿಲ್ಲಿಯ ಪಠಾಣ ಬಾದಷಹನ ಸಾಮ್ರಾಜ್ಯವೂ ಅತುಲವಾದ ಸುಖಸಂಪತ್ತುಗಳೂ ಕೇವಲ ಕಸದ ಕಡ್ಡಿಗಳೆಂಬುದನ್ನು ತಮ್ಮ ಹಿಂದೂ ಭಗಿನಿಯರಿಗೆ ಇಂದಿಗೂ ಸಾರಿ ಉಪದೇಶಿಸುತ್ತಲಿರುವಳು

ಶುಭಂ ಭವತು

# ಆತ್ಮಸಮರ್ಪಣೆ.

**ಭಾ. ಷ.** ತಂದೆತಾಯ್ಗಳು ನೀನೆ; ಮಮತೆಯ ।
ಬಂಧು ಬಳಗವು ನೀನೆ; ನೀನೇ- ।
ಸಂದ ಧನಕನಕಗಳು ಸಕಲವು ಲೋಕನಾಯಕನೆ ॥
ಬೆಂದುದೆನ್ನಯ ಹೃದಯ, ಬಹುವಿಧ- ।
ದಿಂದ ಬಳಲಿದೆನೀ ಪ್ರಪಂಚದಿ ।
ಬಂಧನವ ಪರಿಹರಿಸಿ ರಕ್ಷಿಸೊ! ಜನನಮರಣಗಳ ॥ ೧ ॥
ಅರಿಯೆನೆ ಸತಿಸುತರ ಬಾಂಧವ ।
ರರಿಯೆನ್ನೆ ಗೃಹವಾಸ ಸೌಖ್ಯವ ।
ನರಿಯೆನ್ನೆ ವನವಾಸ ಜಪತಪಹೋಮಹವನಗಳ ॥
ಹರಿಯೆ! ನಾನಲ್ಲಯ್ಯೊ! ಭೋಗಿಯು ।
ಪರಿಯನರಿಯೆನು ಯೋಗಿವರ್ಯರ ।
ಅರಿಯದೆಯೆ ನುರಿಹೊಕ್ಕೆ ಮಾರ್ಗವತೋರು! ಉದ್ಧರಿಸು ॥ ೨ ॥
ಉಪ್ಪರಿಗೆಯನು ಮಾಳ್ಪೆ ತಿಪ್ಪೆಯ ।
ತಿಪ್ಪೆಯುಪ್ಪರಿಗೆಯನು ಗೈಯುವೆ ।
ಬೊಪ್ಪ! ನಿನ್ನಯ ಸೃಷ್ಟಿ ಚೇಷ್ಟೆಯನೆಂತು ಬಣ್ಣಿಪೆನು ॥
ತಪ್ಪು ತಪ್ಪೆನಿಸದದು, ನಿಜವೇ ।
ತಪ್ಪೆನಿಸುವುದು ದೃಷ್ಟಿಭೇದದೆ ।
ತಪ್ಪನೆಣಿಸದಲೊಪ್ಪಿಕೋ ಶ್ರೀಹರಿಯೆ ಸೇವಕನ ॥ ೩ ॥
ಹರಿಯೆ ನಿನ್ನೊಳು ಭಕ್ತಿಮುಕ್ತಿಗೆ ।
ಸರಳಮಾರ್ಗವಿದೆಂಬುದರಿಯದೆ ।
ತಿರುತಿರುಗಿ ಮಾಯಾಪ್ರಪಂಚದಿ ಸುತ್ತಿ ಬೇಸತ್ತೆ ॥
ಪರಮ ಭಕ್ತಿಯೊಳೀಗ ನಿನ್ನಯ ।
ಚರಣತಲದಲಿ ಬಿದ್ದು ಬೇಡುವೆ ।
ಪರಿಹರಿಸೊ ನರಜನ್ಮವನು ಕೊಂಡೀ ಸುಮಾಂಜಲಿಯ ॥ ೪ ॥

ಶ್ರೀಸರಸ್ವತೀ ಮಂದಿರಮ್

**ನಾರಾಯಣ.**